
ಲಂಕೇಶ್

ಅಕ್ಟೋಬರ್ 31, 2012 ಪುಟ 20 ರೂ. 14/-




ಎದ್ದ ಗೆದ್ದ ಕದ್ದ ಬಿದ್ದ!





3000 ಮಠಕ್ಕ KLE ಪಂಗನಾಮ



ಯಡ್ಡಿ ಹಿಂದೆ ಯಾರ್‍ಯಾರು?

ಮೊಳಕಾಲ್ಮೂರು ಶಾಸಕ ಎನ್‌ವೈಗೆ ನಡುಕ ಶುರು





ಕದ್ದ ಚಿನ್ನದ ಮೂಲವೇನು?

ಪೈ ರಾಶಿಗೆ ಹೆಬ್ಬೆಟ್ಟು ಯಮ!





ಕರ್ನಾಟಕದಲ್ಲೇ ಅತ್ಯಂತ ಹೆಚ್ಚು ಹೆಣ್ಣು ಭ್ರೂಣ ಹತ್ಯೆಗಳು ಆಗುವ ಜಿಲ್ಲೆ ಎಂಬ ಕುಖ್ಯಾತಿಯ[ನ್ನು] ಹೊಂದಿರುವ ಬೆಳಗಾವಿಯಲ್ಲಿ ಹೆಣ್ಣು ಮಕ್ಕಳ ಅಭಿವೃದ್ಧಿಗೆ ಸುವರ್ಣಸೌಧ ಏನು ಮಾಡಬಲ್ಲದು[?] ದೇವದಾಸಿಯರಲ್ಲಿ ಹೆಚ್ಚಿನವರು ಮಾದಿಗ ಸಮುದಾಯದವರು. ಆ ಸಮುದಾಯದ ಅಭಿವೃದ್ಧಿಯ[ನ್ನು] ಸುವರ್ಣಸೌಧ ಯಾವ ರೀತಿ ಮಾಡಬಲ್ಲದು? 2009ರಲ್ಲಿ ಬಂದ ಪ್ರವಾಹದಲ್ಲಿ ಮನೆ-ಬದು[ಕು] ಕಳೆದುಕೊಂಡವರಿಗೆ ಸುವರ್ಣಸೌಧದಲ್ಲಿ ಜಾಗವಿದೆಯೇ? ಬೆಳಗಾವಿ ನಗರದ ವಡಗಾವಿಯ[ಲ್ಲಿ] ಅತ್ಯಂತ ಹೆಚ್ಚಿನ ಸಂಖ್ಯೆಯಲ್ಲಿ ಕನ್ನಡ ಮಾತನಾಡುವ ನೇಕಾರರಿದ್ದಾರೆ. ಅವರ ಬದುಕನ್ನು ಸುವರ್ಣಸೌ[ಧ] ಬಂಗಾರ ಮಾಡುತ್ತದೆಯೇ? ಇದ್ಯಾವುದೂ ಸಾಧ್ಯವಿಲ್ಲ. ಏಕೆಂದರೆ ಬೆಂಗಳೂರಿನ ವಿಧಾನಸೌ[ಧ] ಸಂಕೇತಿಸುವ ಅದೇ ಅಭಿವೃದ್ಧಿಯ ಮಾದರಿಯನ್ನೇ ಬೆಳಗಾವಿಯ ಸುವರ್ಣಸೌಧ[ವೂ] ಅನುಸರಿಸಿಕೊಂಡು ಹೋಗುತ್ತದೆ. ಅದರ ಲಾಭ ಪಡೆಯಲು ಹೊಸದೊಂದು ಅಧಿಕಾರಶಾ[ಹಿ] ಬಂಡವಾಳಶಾಹಿ ವರ್ಗ ಸರ್ವಸನ್ನದ್ಧವಾಗಿ ನಿಂತಿದೆ.

ಸುವರ್ಣ ಸೌಧ - ಯಾರ ಪಾಲಿನ ಬಂಗಾರ?

ಬೆಳಗಾವಿಯಲ್ಲಿ ವಿಧಾನಸೌಧದ ಪ್ರತಿರೂಪ ಉದ್ಘಾಟನೆಯಾಗಿದೆ. ಸುವರ್ಣಸೌಧ ಎಂದು ಅದನ್ನು ಕರೆದಿದ್ದಾರೆ. ಕಟ್ಟಡದ ವಾಸ್ತುಶಿಲ್ಪ, ಅದಕ್ಕೆ ತಗುಲಿದ ಖರ್ಚು, ಕಾಮಗಾರಿಯಲ್ಲಿನ ಅವ್ಯವಹಾರಗಳು, ಉದ್ಘಾಟನಾ ಸಮಾರಂಭದಲ್ಲಿ ಊಟ ಬಡಿಸಿದ ಮುಂಬೈನ ಹುಡುಗಿಯರು ಇತ್ಯಾದಿ ವಿಷಯಗಳ ಕುರಿತು ಪತ್ರಿಕೆಗಳಲ್ಲಿ ಸುದ್ದಿಯಾಗಿದೆ. ಬೆಳಗಾವಿಯನ್ನು ಮಹಾರಾಷ್ಟ್ರಕ್ಕೆ ಸೇರಿಸಬೇಕು ಎಂಬ ಮರಾಠಿ ಭಾಷಿಕರ ಒತ್ತಾಯವನ್ನು ಹಿಂದೆ ಸರಿಸುವ ಉದ್ದೇಶದಿಂದಲೇ ಬೆಳಗಾವಿ ಕೇಂದ್ರಿತ ಯೋಜನೆಗಳು ಜಾರಿಗೆ ಬಂದದ್ದು. ವಿಶ್ವ ಕನ್ನಡ ಸಮ್ಮೇಳನ ಇಲ್ಲೇ ನಡೆದದ್ದು ಮತ್ತು ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯವನ್ನು ಇಲ್ಲೇ ಸ್ಥಾಪಿಸಿದ್ದಕ್ಕೂ ಅದೇ ಕಾರಣ.

ಆದರೆ ಈಗ ಉತ್ತರ ಕರ್ನಾಟಕದ ಪ್ರಾದೇಶಿಕ ಅಸಮಾನತೆಯನ್ನು ಕಡಿಮೆ ಮಾಡುವ ಉದ್ದೇಶ ಇದಕ್ಕಿದೆಯೆಂತಲೂ, ಸುವರ್ಣ ಸೌಧ ಉತ್ತರ ಕರ್ನಾಟಕದ ಪಾಲಿಗೆ ಅಭಿವೃದ್ಧಿಯನ್ನು ತರುತ್ತದೆಂತಲೂ ಹೇಳಲಾಗುತ್ತಿದೆ. ಬೆಂಗಳೂರಿನ ವಿಧಾನಸೌಧಕ್ಕಿಂತಲೂ ಭವ್ಯವಾಗಿ, ವಿಸ್ತಾರವಾಗಿ ಎದ್ದು ನಿಂತಿರುವ ಸುವರ್ಣ ವಿಧಾನಸೌಧವು ಉತ್ತರ ಕರ್ನಾಟಕದ ಅನಭಿವೃದ್ಧಿಯನ್ನು ನೀಗಿಸುತ್ತದೆಯೇ?


ಉತ್ತರ ಕರ್ನಾಟಕದ ಅನಭಿವೃದ್ಧಿ ಎಂದು ಸಾರಾಸಗಟಾಗಿ ಹೇಳಿಬಿಟ್ಟರೆ, ಹೈದ್ರಾಬಾದ್ ಕರ್ನಾಟಕಕ್ಕೆ ಅನ್ಯಾಯ ಮಾಡಿದಂತಾಗುತ್ತದೆ. ಅಭಿವೃದ್ಧಿಯ ವಿವಿಧ ಮಾನದಂಡಗಳನ್ನಿಟ್ಟುಕೊಂಡು ರಾಜ್ಯದ ವಿವಿಧ ಜಿಲ್ಲೆಗಳ ಪಟ್ಟಿ ಮಾಡಿದರೆ 1970ರಲ್ಲಿ 11ನೇ ಸ್ಥಾನದಲ್ಲಿದ್ದ ಗುಲ್ಬರ್ಗ ಜಿಲ್ಲೆ 1997ರಲ್ಲಿ 17ನೇ ಸ್ಥಾನಕ್ಕೆ ಇಳಿದಿತ್ತು. 7ನೇ ಸ್ಥಾನದಲ್ಲಿದ್ದ ರಾಯಚೂರು 19ನೇ ಸ್ಥಾನಕ್ಕಿಳಿದಿತ್ತು. ಅದೇ ಸಂದರ್ಭದಲ್ಲಿ ಮುಂಬೈ ಕರ್ನಾಟಕವೆಂದು ಹೇಳಲಾಗುವ ಬೆಳಗಾವಿ ಕಂದಾಯ ವಿಭಾಗದಲ್ಲಿ ಅತ್ಯಂತ ಮುಂದುವರೆದ ಜಿಲ್ಲೆಯೆಂದರೆ ಬೆಳಗಾವಿ ಜಿಲ್ಲೆಯೇ ಆಗಿದೆ. 1970ರಲ್ಲಿ 15ನೇ ಸ್ಥಾನದಲ್ಲಿದ್ದ ಬೆಳಗಾವಿ 1997ರಲ್ಲಿ 7ನೇ ಸ್ಥಾನಕ್ಕೇರಿತ್ತು (ಆಧಾರ: ಡಿ.ಎಂ.ನಂಜುಂಡಪ್ಪ ವರದಿ). ಅಂದರೆ ವಿವಿಧ ಕಾರಣಗಳಿಂದ ಬೆಳಗಾವಿ ನಿರಂತರವಾಗಿ ಮೇಲೇರುತ್ತಾ ಬಂದಿದೆ.

ಕೃಷಿಯಲ್ಲಿ ನೀರಾವರಿಯ ವಿಸ್ತರಣೆ, ವಾಣಿಜ್ಯ ಬೆಳೆಗಳ ಹೆಚ್ಚಳ ಮತ್ತು ಕೈಗಾರಿಕಾಭಿವೃದ್ಧಿ ಈ ಮೂರೂ ವಿಚಾರದಲ್ಲೂ ಉಳಿದ ಜಿಲ್ಲೆಗಳಿಗಿಂತ ಬೆಳಗಾವಿ ಮುಂದಿದೆ. ಕಳೆದ 15 ವರ್ಷಗಳಲ್ಲಿ ಈ ನಿಟ್ಟಿನಲ್ಲಿ ಸ್ವಲ್ಪ ಮಟ್ಟಿಗಿನ ಬೆಳವಣಿಗೆ ಸಾಧಿಸಿದ ಇನ್ನೊಂದು ಜಿಲ್ಲೆಯೆಂದರೆ ಪಕ್ಕದ ಬಾಗಲಕೋಟೆ ಜಿಲ್ಲೆಯಾಗಿದೆ. ಹಾಗಾಗಿಯೇ ಅದು 1997ರಲ್ಲಿ ಪ್ರತ್ಯೇಕ ಜಿಲ್ಲೆಯ ಸ್ಥಾನಮಾನವನ್ನೂ ಗಳಿಸಿಕೊಂಡಿತು. ಅದೇ ವರ್ಷದಲ್ಲಿ ಪ್ರತ್ಯೇಕ ಜಿಲ್ಲಾ ಕೇಂದ್ರಗಳಾದ ಉಳಿದ 5 ಜಿಲ್ಲೆಗಳಿಗಿಂತ (ಅಭಿವೃದ್ಧಿಯಾಗಿರುವ ಮತ್ತೊಂದು ಹೊಸ ಜಿಲ್ಲೆ ಉಡುಪಿ), ಬಾಗಲಕೋಟೆಯೇ ಹೆಚ್ಚು ಅಭಿವೃದ್ಧಿಯನ್ನು ಸಾಧಿಸಿದೆ. ಆಲಮಟ್ಟಿ ಅಣೆಕಟ್ಟಿನ ಕಾರಣಕ್ಕೆ ಅರ್ಧ ಮುಳುಗಡೆಯಾಗಿ ನವನಗರವಾಗಿ ತಲೆಎತ್ತಿರುವ ಬಾಗಲಕೋಟೆಯು ದೊಡ್ಡದಾಗಿಯೇ ಬೆಳೆಯುತ್ತಿದೆ.

ಬಾಗಲಕೋಟೆ ನವನಗರದ ನಿರ್ಮಾಣವಾದಾಗ ಮತ್ತು ಭಾರೀ ಬೃಹತ್ತಾಗಿ ಅಲ್ಲಿನ ಜಿಲ್ಲಾಧಿಕಾರಿ ಕಚೇರಿಗಳನ್ನು ನಿರ್ಮಿಸಿದಾಗ ಇದು ಭೂತಬಂಗಲೆಯಂತೆ ಉಳಿದುಬಿಡುತ್ತದೆ ಎಂದು ಭಾವಿಸಿದವರೇ ಹೆಚ್ಚು. ಹಳೆಯ ಬಾಗಲಕೋಟೆ ನಿರೀಕ್ಷೆಯಂತೆ ಮುಳುಗದೇ, ಅಲ್ಲಿಂದ ಹೆಚ್ಚಿನ ಜನರು ಇಲ್ಲಿಗೆ ಬರದೇ ಇದ್ದುದರಿಂದ ಈ ಭಾವನೆಗೆ ಮತ್ತಷ್ಟು ಪುಷ್ಟಿ ಸಿಕ್ಕಿತ್ತು. ಆದರೆ ಅದು ಹಾಗಾಗಲಿಲ್ಲ. ಬದಲಿಗೆ ನವನಗರವೂ ಇಂದು ಗಿಜಿಗುಡಲು ಶುರುವಾಗಿದೆ. ಸುವರ್ಣ ವಿಧಾನಸೌಧವೂ ಅದೇರೀತಿ ಭೂತಬಂಗಲೆಯಾಗುತ್ತದೆ ಎಂದು ಹೇಳುತ್ತಿರುವವರು ಇದನ್ನು ಗಮನಿಸಬೇಕು. ಅದು ಭೂತಬಂಗಲೆಯಾಗುವುದಿಲ್ಲ.

ಮೇಲಿನ ತೀರ್ಮಾನಗಳಿಗೆ ಬರಲು ಕಾರಣಗಳಿವೆ. ಬೆಳಗಾವಿ ಹಾಗೂ ಬಾಗಲಕೋಟೆ ಜಿಲ್ಲೆಗಳು ಕರ್ನಾಟಕದ ಅಭಿವೃದ್ಧಿ ಹೊಂದುತ್ತಿರುವ ಜಿಲ್ಲೆಗಳಾಗಿವೆ. ವಿಶೇಷವಾಗಿ ಇಲ್ಲಿನ ಕೃಷಿ ಅಭಿವೃದ್ಧಿಯು ಮಹಾರಾಷ್ಟ್ರದ ಸಕ್ಕರೆ ಪ್ರದೇಶದ ಸ್ಥಿತಿಯನ್ನು ಹೋಲುತ್ತದೆ. ಅದರ ಜೊತೆಜೊತೆಗೇ (ಮಹಾರಾಷ್ಟ್ರದ ಸಕ್ಕರೆ ಲಾಬಿಯು ಬೆಳೆಸಿದ ಶರದ್ ಪವಾರ್ ಹಾಗೂ ಇನ್ನಿತರ ರಾಜಕಾರಣಿಗಳಂತೆಯೇ) ಶ್ರೀಮಂತ, ಬಲಾಢ್ಯ ಜಾತಿ ಬಲವಿರುವ ಹೊಸ ರಾಜಕಾರಣಿಗಳೂ ಇಲ್ಲಿ ಪ್ರವರ್ಧಮಾನಕ್ಕೆ ಬರುತ್ತಿದ್ದಾರೆ. ಅವರಲ್ಲಿ ಯಾರೂ 500 ಕೋಟಿ ರೂ.ಗಳಿಗಿಂತ ಕಡಿಮೆ ಸಂಪತ್ತನ್ನು ಹೊಂದಿಲ್ಲ. ಕನಿಷ್ಠ 5,000 ಕೋಟಿಗಳನ್ನು ಮುಟ್ಟುವ ಹವಣಿಕೆಯಲ್ಲಿರುವವರೂ ಈ ಪಟ್ಟಿಯಲ್ಲಿ ಇದ್ದಾರೆ ಮತ್ತು ಅವರಲ್ಲಿ ಬಹುತೇಕರು ಈ ರಾಜ್ಯದಲ್ಲಿ ಹೊಸದಾಗಿ ಉದಯವಾಗಲಿರುವ ಯಡಿಯೂರಪ್ಪನವರ ರಾಜಕೀಯ ಪಕ್ಷದ ಪ್ರಮುಖ ಆಧಾರಸ್ತಂಭಗಳಾಗಿದ್ದಾರೆ. ಈ ಪಟ್ಟಿಯಲ್ಲಿ ಮುರುಗೇಶ್ ನಿರಾಣಿ, ಪ್ರಭಾಕರ್ ಕೋರೆ, ಉಮೇಶ್ ಕತ್ತಿ, ಲಕ್ಷ್ಮಣ್ ಸವದಿ, ಜಾರಕಿಹೊಳಿ ಸಹೋದರರು ಹಾಗೂ ಇನ್ನೂ ಸುಮಾರು 30 ದೊಡ್ಡ ಮಂದಿ ಇದ್ದಾರೆ.


ಈ ಭಾಗದ ಬೇರೆ ಬೇರೆ ಸಕ್ಕರೆ ಕಾರ್ಖಾನೆಗಳ ಮಾಲೀಕರ ಪಟ್ಟಿಯನ್ನು ನೋಡೋಣ. ಜಮಖಂಡಿ ಷುಗರ್ಸ್ - ಸಿದ್ದು ನ್ಯಾಮಗೌಡ, ಬದಾಮಿ ಷುಗರ್ಸ್ (ಈಗ ಮುಚ್ಚಿದೆ) - ಚಿಮ್ಮನಕಟ್ಟಿ, ಬೀಳಗಿ ಷುಗರ್ಸ್ - ಎಸ್.ಆರ್.ಪಾಟೀಲ್, (ಈ ಮೂರೂ ಮಾಜಿ ಕಾಂಗ್ರೆಸ್ ಶಾಸಕರ ಸಕ್ಕರೆ ಕಾರ್ಖಾನೆಗಳಲ್ಲಿ ಬಿಜೆಪಿ ನಾಯಕ ನಿರಾಣಿಯ ಕುಟುಂಬದ ಪಾಲಿದೆ), ಪ್ರಭುಲಿಂಗೇಶ್ವರ ಷುಗರ್ಸ್- ಜಗದೀಶ ಗುಡಗುಂಟಿ (ಕಾಂಗ್ರೆಸ್), ಕೃಷ್ಣ ಸಕ್ಕರೆ ಕಾರ್ಖಾನೆ - ಲಕ್ಷ್ಮಣ ಸವದಿ (ಸಹಕಾರಿ ವಲಯದಲ್ಲಿದ್ದರೂ ಇವರದ್ದೇ ಪಾರುಪತ್ಯ ಜೊತೆಗೆ




ಲಕ್ಷ್ಮಣ ಸವದಿ | ಮುರುಗೇಶ್ ನಿರಾಣಿ | ಪ್ರಭಾಕರ್ ಕೋರೆ | ಉಮೇಶ್ ಕತ್ತಿ

ಕೃಷ್ಣಾ ಮಿಲ್ಸ್‌ನ ಒಡೆತನವೂ ಇವರದ್ದೇ), ಸತೀಶ್ ಷುಗರ್ಸ್ - ಜಾರಕಿಹೊಳಿ, ಬೋರಗಾಂವ್ ಹತ್ತಿರದ ಸಕ್ಕರೆ ಕಾರ್ಖಾನೆ- ಪ್ರಭಾಕರ ಕೋರೆ (ಇದರ ಜೊತೆಗೆ ಚಿಕ್ಕೋಡಿ ಹತ್ತಿರ ದೂದಗಂಗಾ ಸಹಕಾರಿ ಸಕ್ಕರೆ ಕಾರ್ಖಾನೆಯ ಹಿಡಿತವಲ್ಲದೇ, ಬೆಳಗಾವಿಯ ಪ್ರತಿಷ್ಠಿತ ಕೆ.ಎಲ್.ಇ ಸಂಸ್ಥೆಯ ಹಿಡಿತ ಕೋರೆಯದ್ದು), ಬೆಲ್ಲದ ಬಾಗೇವಾಡಿಯ ವಿಶ್ವನಾಥ ಷುಗರ್ಸ್ - ಉಮೇಶ್ ಕತ್ತಿ (ಸಂಕೇಶ್ವರದ ಹತ್ತಿರ ಹಿರಣ್ಯಕೇಶಿ ಸಹಕಾರಿ ಕಾರ್ಖಾನೆಯ ಹಿಡಿತ ಇವರ ಕೈಲೇ), ರಾಯಭಾಗ ಷುಗರ್ಸ್ ಒಡೆತನ ಹೊಂದಿದ್ದವರು ವಿ.ಎಲ್.ಪಾಟೀಲ್ (ಈಗ ರೇಣುಕಾ ಷುಗರ್ಸ್‌ಗೆ ಮಾರಿದ್ದಾರೆ).

ಬಹುತೇಕರು ಲಿಂಗಾಯತ ಜಾತಿಗೆ ಸೇರಿದವರಾಗಿದ್ದಾರೆ. ಅದರಲ್ಲಿ ಪ್ರಬಲರಾದ ಪಂಚಮಸಾಲಿ ಮತ್ತು ರೆಡ್ಡಿ ಲಿಂಗಾಯತರು ಹೆಚ್ಚಿನವರಾಗಿದ್ದಾರೆ. ಈ ಭಾಗದ ಉಳಿದ ಪ್ರಬಲ ಕೋಮುಗಳಾದ ಕುರುಬ ಮತ್ತು ವಾಲ್ಮೀಕಿ






ಸಮುದಾಯಗಳಿಗೂ ಸಣ್ಣ ಪ್ರಮಾಣದ ಪ್ರಾತಿನಿಧ್ಯವನ್ನು ಕಾಣಬಹುದು. ರಾಜ್ಯ ಮಟ್ಟದಲ್ಲಿ ಒಂದು ಟಿವಿ ಚಾನೆಲ್‌ನ ಒಡೆತನವೂ ಇವರಲ್ಲೇ ಒಬ್ಬರು ಶುರು ಮಾಡಿ, ಈಗ ಇದೇ ಗುಂಪಿನ ಮತ್ತೊಬ್ಬರಿಗೆ ಮಾರಾಟ ಮಾಡಿದ್ದಾರೆ.

ರಾಜಕಾರಣಿಗಳಲ್ಲದ ಉದ್ದಿಮೆದಾರರು ಕಡಿಮೆಯಿದ್ದಾರೆ ಎಂಬುದೂ, ಬೇರೆ ಬೇರೆ ಪಕ್ಷಗಳಲ್ಲಿದ್ದರೂ ಪರಸ್ಪರ ವ್ಯಾವಹಾರಿಕ ಸಂಬಂಧಗಳನ್ನು ಹೊಂದಿದ್ದಾರೆ ಎಂಬುದೂ, ಜಾತಿವಾರು ಕಾಂಗ್ರೆಸ್ ಹಾಗೂ ಬಿಜೆಪಿ (ಅಂದರೆ ಯಡಿಯೂರಪ್ಪಗಳ ಜೊತೆ ನಿಷ್ಠೆ ಹಂಚಿಕೆಯಾಗಿದೆ ಎಂಬುದೂ ಇಲ್ಲಿ ಎದ್ದು ಕಾಣುತ್ತಿರುವ ಸಂಗತಿಯಾಗಿದೆ.

ಈ ಎಲ್ಲಾ ರಾಜಕಾರಣಿ-ಉದ್ದಿಮೆದಾರರು ದೊಡ್ಡ ಬಂಡವಾಳಶಾಹಿಗಳಾಗಿ ಬೆಳವಣಿಗೆಯಾಗುತ್ತಿರುವುದು ಮತ್ತು ಅವರುಗಳು ರಾಜ್ಯದ ರಾಜಕೀಯದಲ್ಲಿ ಪ್ರಮುಖ ಸ್ಥಾನ ವಹಿಸುತ್ತಿರುವುದರ ಸಂಕೇತವಾಗಿಯೇ ಸುವರ್ಣ ವಿಧಾನ ಸೌಧ ತಲೆಯೆತ್ತಿದೆ. ಬೆಳಗಾವಿಯನ್ನು ಮಹಾರಾಷ್ಟ್ರಕ್ಕೆ ಸೇರಿಸಬೇಕೆಂಬ ಬೇಡಿಕೆಯನ್ನು ಅಪ್ರಸ್ತುತಗೊಳಿಸಬೇಕೆಂಬ ಕಾರಣದಿಂದ ಇಂತಹ ಯೋಜನೆಗಳು ಬಂದಿರಬಹುದಾದರೂ, ಅವು ಈ ದಿನಗಳಲ್ಲಿ ಬೆಳವಣಿಗೆಯಾಗುತ್ತಿರುವ ರಾಜಕೀಯಾರ್ಥಿಕ ವಿದ್ಯಮಾನಕ್ಕೆ ಪೂರಕವಾಗಿದ್ದರಿಂದಲೇ ಇಷ್ಟು ಬೇಗ ಅನುಷ್ಠಾನಗೊಂಡಿವೆ ಹಾಗೂ ಅವು ಇಂತಹವರ ಭವಿಷ್ಯವನ್ನು ಬಂಗಾರ ಮಾಡುವ ಕಾರಣಕ್ಕೇ ಬಳಕೆಯಾಗಲಿವೆ. ಸುವರ್ಣ ವಿಧಾನಸೌಧವನ್ನು ಕಟ್ಟುವ ಮುಂಚೆ, ಆಗ ಕಾಂಗ್ರೆಸ್‌ನಲ್ಲಿದ್ದ ಪ್ರಭಾಕರ ಕೋರೆಯ ಕೆ.ಎಲ್.ಇ. ಕಾಲೇಜಿನ ಕಟ್ಟಡದಲ್ಲಿ ವಿಧಾನಸಭೆಯ ಅಧಿವೇಶನವನ್ನು ನಡೆಸಿದ್ದನ್ನು ಇಲ್ಲಿ ಸ್ಮರಿಸಬಹುದು. ಈ ಕೋರೆಯ ಜೊತೆ ಆಗ ಜನತಾದಳದ ಕುಮಾರಸ್ವಾಮಿಗೂ ಒಳ್ಳೆಯ ಸಂಬಂಧವಿತ್ತು! ಈಗ ಇದೇ ಕೋರೆಯ ಕೆ.ಎಲ್.ಇ. ಸಂಸ್ಥೆಯ ಕಟ್ಟಡದಲ್ಲಿ ಯಡಿಯೂರಪ್ಪನವರ ಹೊಸ ಪಕ್ಷದ ಸಭೆಗಳು ನಡೆಯುತ್ತಿವೆ.

ಇವ್ಯಾವುವೂ ಕೇವಲ ಆಕಸ್ಮಿಕಗಳಲ್ಲ. ಮುಂಬೈ ಕರ್ನಾಟಕದ ಭಾಗವು ಸ್ವಾತಂತ್ರ್ಯ ಹೋರಾಟ ಕಾಲದಲ್ಲಿ ತೀವ್ರವಾದ ರಾಜಕೀಯ ಚಟುವಟಿಕೆಗಳಿಂದ ಕೂಡಿತ್ತು. ಆದರೆ ಸ್ವಾತಂತ್ರ್ಯಾನಂತರ ಕಾಂಗ್ರೆಸ್ಸಿನ ದೊಡ್ಡ ನಾಯಕರಾದವರಲ್ಲಿ ಹೆಚ್ಚಿನವರು ಹಳೆಯ ದೇಸಾಯಿಗಳು, ನಾಡಗೌಡರು, ದೇಶಮುಖರು, ಜಹಗೀರ್‌ದಾರರು, ಪಾಟೀಲರೇ ಆಗಿದ್ದರು. ನಂತರ 70ರ ದಶಕದಲ್ಲಿ 2ನೆಯ ಹಂತದ ಭೂಸುಧಾರಣೆಯ ಸಂದರ್ಭದಲ್ಲಿ ಇಂತಹವರಲ್ಲಿ ಕೆಲವರು ಒಂದಷ್ಟು ಪ್ರಮಾಣದ ಭೂಮಿಯನ್ನು ಕಳೆದುಕೊಳ್ಳಬೇಕಾಗಿ ಬಂದಿತು. ಆಗ ಅವರುಗಳು ಜನತಾಪಕ್ಷದಲ್ಲಿ ತಮ್ಮ ಪ್ರಾತಿನಿಧ್ಯವನ್ನು ಕಂಡುಕೊಂಡರು.

ಇದೇ ಬೆಳಗಾವಿ ಜಿಲ್ಲೆಯ ರಾಜಕಾರಣದ ಮೇಲೆ ಗಾಢ ಪ್ರಭಾವ ಹೊಂದಿದ್ದ ವಿ.ಎಲ್.ಪಾಟೀಲ್‌ರಂತಹ ಹಲವರು ಜನತಾಪಕ್ಷ (ನಂತರ ಜನತಾದಳ)ದಲ್ಲಿದ್ದದ್ದು ಅದೇ ಕಾರಣಕ್ಕೆ. 80 ಮತ್ತು 90ರ ದಶಕದಲ್ಲಿ ಸಿದ್ದು ನ್ಯಾಮಗೌಡ, ಎಸ್.ಆರ್.ಪಾಟೀಲ್, ಪ್ರಭಾಕರ ಕೋರೆಯಂತಹ ಒಂದಷ್ಟು



ಜನ ಕಾಂಗ್ರೆಸ್ಸಿನಲ್ಲಿ ಬೆಳೆದರಾದರೂ, ಕಳೆದ 15 ವರ್ಷಗಳ[ಲ್ಲಿ] ಇನ್ನೂ ದೊಡ್ಡ ಬಂಡವಾಳಿಗರಾಗಿ ಬೆಳೆದ ಎಲ್ಲಾ ಹಳೆಯ ಭೂಮಾಲೀಕ ವರ್ಗದ ಪ್ರತಿನಿಧಿಗಳಿಗೂ ಬಿಜೆಪಿಯಂತಹ ಅತ್ಯಂತ ಪ್ರತಿಗಾಮಿ ಪಕ್ಷವೇ ಪ್ರಿಯವಾಯಿತು.

ಅಂದರೆ ಕಳೆದ 60 ವರ್ಷಗಳಲ್ಲಿ, ಹಳೆಯ ಪಾಳೇಗಾ[ರಿ] ಮನೆತನಗಳಲ್ಲಿ ಹೊಸ ಬಂಡವಾಳಶಾಹಿಗಳಾಗಿ ಬೆಳವಣಿ[ಗೆ] ಹೊಂದಿದವರು ಇಂದು ತಮ್ಮದೊಂದು ರಾಜಕೀಯ ನೆಲೆಯನ್ನು ಕಂಡುಕೊಂಡಿದ್ದಾರೆ. ಸುವರ್ಣ ವಿಧಾನಸೌಧ[ವು] ಅವರು ಸ್ಥಾಪಿಸಿಕೊಳ್ಳುತ್ತಿರುವ ಭದ್ರ ರಾಜಕೀಯ ಲಾಬಿಯ ಸಂಕೇತವೂ ಆಗಿದೆ. ಇದು ಸದೃಢೀಕರಣಗೊಂಡ ಹೊ[ಸ] ಪ್ರತಿಗಾಮಿ ಲಾಬಿಯಾಗಿದೆ. ಕರ್ನಾಟಕದ ರಾಜಕೀಯದ[ಲ್ಲಿ] ಅವರಿಗೊಂದು ಸ್ಥಾನವಿರುತ್ತದೆ. ಅಗತ್ಯಬಿದ್ದರೆ ಅವರ[ು] ಬಿಜೆಪಿ, ಕೆಜೆಪಿಯಿಂದ ಕಾಂಗ್ರೆಸ್ಸಿಗೋ, ಜನತಾದಳಕ್ಕೋ ಜಿಗಿಯುತ್ತಾರೆ. ಜೊತೆಗೆ ಕರ್ನಾಟಕ ಮತ್ತು ಕನ್ನಡ ಪ್ರೇಮ ಇವರ ಒಟ್ಟು ರಾಜಕೀಯ ಗುಣಸ್ವಭಾವದಲ್ಲಿ ಯಾ[ವ] ಸ್ಥಾನವನ್ನೂ ಪಡೆದಿರುವುದಿಲ್ಲ. ಸುವರ್ಣಸೌಧವನ್ನು ಕಟ್ಟಿ[ದ] ಕಂಟ್ರಾಕ್ಟರ್ ಶಿರ್ಕೆ ಮಹಾರಾಷ್ಟ್ರದವನಾಗಿದ್ದ. ಅದ[ರ] ಉದ್ಘಾಟನಾ ಸಮಾರಂಭದಲ್ಲಿ ಊಟ ಬಡಿಸಲೂ ಸ[ಹ] ಮುಂಬಯಿಯ ಹುಡುಗಿಯರು ಏಕೆ ಬಂದಿದ್ದರೆಂದ[ರೆ] ಊಟದ ವ್ಯವಸ್ಥೆಯ ಗುತ್ತಿಗೆಯನ್ನು ಪಡೆದಿದ್ದವ ಕರ್ನಾಟಕ[ದ] ನೆಲದ ಜೊತೆಗೆ ಸಂಬಂಧವನ್ನು ಹೊಂದಿರಲಿಲ್ಲ.

ಹೀಗಾಗಿ ಮುಂಬೈ ಕರ್ನಾಟಕದಲ್ಲಿ ಗರಿಕಟ್ಟಿಕೊಳ್ಳು[ತ್ತಿ]ತ್ತಿರುವ ಪಾಳೇಗಾರಿ-ಬಂಡವಾಳಶಾಹಿಯು ಕರ್ನಾಟಕತ್ವವನ್ನು ಬೆಳೆಸಲು ಸಹಾಯಕವಾಗುವಂಥದ್ದಲ್ಲ. ಮುಂದೊಂದು ದಿನ ತಮ್ಮ ಹಿತಾಸಕ್ತಿಗಳಿಗೆ ಅಡ್ಡಿ ಬರುತ್ತದೆಂದಾದ[ರೆ] ಇದೇ ಜನ 'ನಾವು ಮಹಾರಾಷ್ಟ್ರಕ್ಕೆ ಸೇರಿಬಿಡುತ್ತೇವೆ' ಎಂದು ಗುಟುರು ಹಾಕುತ್ತಾರೆ. ಇನ್‌ಫೋಸಿಸ್ ನಾರಾಯಣಮೂರ್ತಿ ಹೈದ್ರಾಬಾದ್‌ಗೆ ತನ್ನ ಸಾಫ್ಟ್‌ವೇರ್ ಅಡ್ಡಾಗಳನ್ನು ಎತ್ತಿಕೊಂಡು ಹೋಗಿಬಿಡುತ್ತೇನೆ ಎಂದು ಧಮಕಿ ಹಾಕಿದ ಹಾಗೆ. ತಾವ[ು] ಹೇಳಲು ಸಾಧ್ಯವಾಗದು ಎನಿಸಿದರೆ ತಮ್ಮ ಪರವಾ[ಗಿ] ಗುಟುರು ಹಾಕಲಿ ಎಂದು ಮಹಾರಾಷ್ಟ್ರ ಏಕೀಕರಣ ಸಮಿತಿಗೆ ಬಿಸ್ಕತ್ತು ಹಾಕುತ್ತಾ ಸಾಕಿಕೊಂಡಿರುತ್ತಾರೆ. ಎಂಇಎಸ್‌ನ ಭಗವಾಧ್ವಜವನ್ನು ಇಟ್ಟುಕೊಂಡು ಮೆರವಣಿ[ಗೆ] ಮಾಡಿದ್ದ ಸಂಸದ ಸುರೇಶ್ ಅಂಗಡಿ ಇದೇ ಗುಂಪಿ[ಗೆ] ಸೇರಿದವ. ಹಾಗೆಂದು ಇವರು ಮಹಾರಾಷ್ಟ್ರದ ಪರವ[ಾಗಿ] ಇರುವವರೆಂದೂ ಅಲ್ಲ. ಇವರೇ ಕರವೇಯಂತಹವಕ್ಕೂ ಕಾಸು ಕೊಡುತ್ತಾರೆ. ಕನ್ನಡ ರಾಜ್ಯೋತ್ಸವಕ್ಕೆ ಕಾಸು ಕೊಟ್ಟ ಮೇಲೆ ಅವರ ಕನ್ನಡ ಪ್ರೇಮದ ಬಗ್ಗೆ ಯಾರ[ೂ] ಮಾತಾಡುವಂತಿಲ್ಲ ಅಲ್ಲವೇ?

ಮೇಲೆ ಹೆಸರಿಸಲಾದ ಅಧಿಕಾರಶಾಹಿ ಬಂಡವಾಳಶಾಹಿಗಳು (ಇದು ಒಂದು ಬಗೆಯ ಕಮ್ಯುನಿಸ್ಟರು ಈ ಬಗೆಯ ರೊಕ್ಕಸ್ಥ ಅಧಿಕಾರಸ್ಥರನ್ನು ಕರೆಯಲು ಬಳಸುವ ರಾಜಕೀಯ ಪಾರಿಭಾಷಿಕ ಪದ) ತಮ್ಮ ಪಾಳೇಗಾರಿಕೆಯ ಗುಣಗಳಿಂದ ಸಂಪೂರ್ಣವಾಗಿ ಮುಕ್ತರಾಗಿಲ್ಲ. ಅದು ಇವರುಗಳಿಗಿರುವ ಪ್ರಬಲ ಜಾತಿ ಬಲದಿಂದ ಮಾತ್ರ ವ್ಯಕ್ತಗೊಳ್ಳುವುದಿಲ್ಲ; ವಿವಿಧ ಮಠಗಳ ಜೊತೆಗಿನ ಸಂಬಂಧ, ನಂಬಿಕೆಗಳು, ಹಳ್ಳಿ ಮಟ್ಟದಲ್ಲಿ ಇವರು ಪೋಷಿಸುವ ವರ್ಗಗಳು ಎಲ್ಲದರಲ್ಲೂ ಊಳಿಗಮಾನ್ಯ ಪಾಳೇಗಾರಿಕೆಯ ಗುಣಗಳನ್ನು ನೋಡಬಹುದು. ಸ್ವಾತಂತ್ರ್ಯ ಹೋರಾ[ಟ] ಗಾರರನ್ನು ಹಿಡಿದುಕೊಟ್ಟ ಖ್ಯಾತಿಯಿರುವ ಜಮಖಂ[ಡಿ]

→ 9

ಲಿಂಗ ತಾರತಮ್ಯ ಕುರಿತು ಜೂಲಿಯಾ ಉವಾಚ


ಕಂಡಹಾಗೆ



editorlankesh@gmail.com • ಗೌರಿ ಲಂಕೇಶ್

ಜೂಲಿಯಾ ಗಿಲ್ಲಾರ್ಡ್ ಆಸ್ಟ್ರೇಲಿಯಾ ದೇಶದ ಪ್ರಥಮ ಮಹಿಳಾ ಪ್ರಧಾನಿ. ವಿದ್ಯಾರ್ಥಿನಿ ಆಗಿದ್ದಾಗಲೇ ರಾಜಕೀಯದಲ್ಲಿ ಆಸಕ್ತಿ ಹೊಂದಿದ್ದ ಜೂಲಿಯಾ ಸಮಾಜವಾದದಲ್ಲಿ ನಂಬಿಕೆ ಇಟ್ಟವರು. ಆ ಕಾರಣಕ್ಕೆ ಆಸ್ಟ್ರೇಲಿಯಾದ ಎಡಪಂಥೀಯ ಒಲವನ್ನು ಹೊಂದಿರುವ ಲೇಬರ್ ಪಾರ್ಟಿಯನ್ನು ಸೇರಿಕೊಂಡು ಒಂದೊಂದೇ ಮೆಟ್ಟಿಲುಗಳನ್ನು ಏರುತ್ತಾ ಹೋದರು. ಹಿಂದಿನ ಪ್ರಧಾನಿ ಕೆವಿನ್ ರುಡ್ ಅವರು ತಮ್ಮ ಲೇಬರ್ ಪಕ್ಷದ ಸದಸ್ಯರ ಬೆಂಬಲವನ್ನು ಕಳೆದುಕೊಂಡಾಗ ಜೂಲಿಯಾ ಅವರನ್ನು ಪ್ರಧಾನಿಯಾಗಿ ಆ ಪಕ್ಷದ ಸಂಸದರು ಮನಸ್ಸಿಲ್ಲದ ಮನಸ್ಸಿನೊಂದಿಗೆ ಆಯ್ಕೆ ಮಾಡಿದ್ದರು. ಅವರ ಹಿಂಜರಿಕೆಗೆ ಕಾರಣ ಜೂಲಿಯಾ ಆ ಸ್ಥಾನಕ್ಕೆ ಬೇಕಾದ ಅರ್ಹತೆಗಳನ್ನು ಹೊಂದಿದ್ದಾರೋ ಇಲ್ಲವೋ ಎಂಬುದಾಗಿರಲಿಲ್ಲ, ಬದಲಾಗಿ ಸ್ತ್ರೀ ಮಹಿಳೆಗಿಂತ ಸೂಕ್ತವಾದ ಪುರುಷ ತಮ್ಮ ಮುಂದೆ ಇಲ್ಲವಲ್ಲ ಎಂಬ ಲಿಂಗ ತಾರತಮ್ಯ.

ಜೂಲಿಯಾ ಅವರಿಗೆ ಈಗ 51 ವರ್ಷ ವಯಸ್ಸು. ಮದುವೆ ಆಗಿರದ ಆಕೆ ಯಾವ ಮುಚ್ಚುಮರೆ ಇಲ್ಲದೆ ಹಲವಾರು ವರ್ಷಗಳ ಪುರುಷ ಸಂಗಾತಿಯೊಂದಿಗೆ ವಾಸಿಸುತ್ತಿದ್ದಾರೆ. ಇತರೆ ದೇಶಗಳ ಮಹಿಳೆಯರಂತೆ ಜೂಲಿಯಾ ಕೂಡ ತನ್ನ ವೃತ್ತಿ ಬದುಕಿನಲ್ಲಿ ಲಿಂಗಭೇದವನ್ನು ಎದುರಿಸುತ್ತಲೇ ಮುಂದೆ ಬಂದವರು. ಈಗ ಅವರು ಪ್ರಧಾನಿ ಆಗಿದ್ದರೂ ಆಕೆ ಮಹಿಳೆ ಆಗಿರುವುದರಿಂದಲೇ ಆಕೆಯನ್ನು ಟೀಕೆ ಮಾಡುವವರಿಗೆ ಲೆಕ್ಕವಿಲ್ಲ. ಜೂಲಿಯಾ ಅವರ ಆತ್ಮಸ್ಥೈರ್ಯವನ್ನು ಮುರಿದುಹಾಕಲು ಆಕೆಯ ವಿರೋಧಿ ರಾಜಕಾರಣಿಗಳು ಮಾಡಿರುವ ಪ್ರಯತ್ನಗಳಲ್ಲಿ ಹಲವು ಅಸಹ್ಯ ಹುಟ್ಟಿಸುವಂತಹವು. ಉದಾಹರಣೆಗೆ ಜೂಲಿಯಾ ಅವರು ಮಕ್ಕಳನ್ನು ಹೆತ್ತಿಲ್ಲ. ಅದನ್ನೇ ಅಸ್ತ್ರವನ್ನಾಗಿಸಿಕೊಂಡು ಕೆಲವರು ಅವರನ್ನು "ಬೇಕಂತಲೇ ಬಂಜೆ ಆಗಿರುವವಳು" ಎಂದು ಜರಿಯುವ ಮಟ್ಟಕ್ಕೆ ಹೋಗಿದ್ದೂ ಉಂಟು. ಜೊತೆಗೆ "Ditch the Witch" (ಈ ಹಾದರಗಿತ್ತಿಯನ್ನು ತೊಲಗಿಸಿ), ಎಂಬ ಘೋಷಣೆಯನ್ನು ಕೊಟ್ಟು ಆಕೆಯ ವಿರುದ್ಧ ಚುನಾವಣಾ ಪ್ರಚಾರವನ್ನೂ ಮಾಡಲಾಗಿತ್ತು.



ಇದೆಲ್ಲವನ್ನೂ ಎದುರಿಸುತ್ತಲೇ ಬಂದಿರುವ ಜೂಲಿಯಾ ಶ್ರೇಷ್ಠ ವ್ಯಕ್ತಿ ಎಂದೇನಲ್ಲ. ಆಕೆ ಕೂಡ ಚಾಣಾಕ್ಷ ರಾಜಕಾರಣಿ ಮತ್ತು ತನ್ನ ಸ್ಥಾನವನ್ನು ಉಳಿಸಿಕೊಳ್ಳಲು ಅವಕಾಶವಾದಿ ರಾಜಕೀಯ ಮಾಡಲು ಹಿಂಜರಿಯದವರು. ಉದಾಹರಣೆಗೆ 2010ರಲ್ಲಿ ಆಸ್ಟ್ರೇಲಿಯಾ ಸಂಸತ್ತಿಗೆ ಚುನಾವಣೆ ನಡೆದಾಗ ಆಕೆಯ ಲೇಬರ್ ಪಕ್ಷ ಮತ್ತು ಪ್ರಮುಖ ವಿರೋಧಿ ಲಿಬರಲ್ ಪಾರ್ಟಿಯ ನೇತೃತ್ವದ ಒಕ್ಕೂಟ ಎರಡೂ ಸಮನಾಗಿ 72 ಸ್ಥಾನಗಳನ್ನು ಗೆದ್ದವು. ಆಗ ಆರು ಸ್ವತಂತ್ರ ಅಭ್ಯರ್ಥಿಗಳಲ್ಲಿ ನಾಲ್ವರು ಶರತ್ತುಬದ್ಧವಾಗಿ ಜೂಲಿಯಾ ಪಕ್ಷಕ್ಕೆ ಬೆಂಬಲ ನೀಡಿದ್ದರಿಂದ ಆಕೆ ಅಲ್ಪಸಂಖ್ಯಾತ ಸರ್ಕಾರದ ಪ್ರಧಾನಿ ಆದರು. ಆದರೂ ಮತ್ತೋರ್ವ ಸ್ವತಂತ್ರ ಅಭ್ಯರ್ಥಿ ಆಗಿದ್ದ ಪೀಟರ್ ಸ್ಲಿಪ್ಪರ್ ಎಂಬಾತ ಮುಂದೊಂದು ದಿನ ತನ್ನ ಸರ್ಕಾರದ ಸ್ಥಿರತೆಗೆ ಸಮಸ್ಯೆ ಆಗಬಹುದೆಂಬ ಕಾರಣಕ್ಕೆ ಆತನನ್ನು ಸಂಸತ್ತಿನ ಸ್ಪೀಕರ್ ಹುದ್ದೆಗೆ ಏರಿಸಿ, ಗೂಟದ ಕಾರನ್ನು ಕೊಟ್ಟು, ಆತ ತನ್ನ ಸರ್ಕಾರ ಪರ ನಿಲ್ಲುವಂತೆ ಜೂಲಿಯಾ ನೋಡಿಕೊಂಡಿದ್ದರು.

ಕೆಲ ತಿಂಗಳ ಹಿಂದೆ ಈ ಸ್ಪೀಕರ್ ಪೀಟರ್ ಸ್ಲಿಪ್ಪರ್ ಯಾರಿಗೋ ಕೆಟ್ಟ ಕೊಳಕು ಎಸ್‌ಎಂಎಸ್‌ಗಳನ್ನು ಕಳುಹಿಸಿ ಸಿಕ್ಕಿಬಿದ್ದ. ಆಗ ಆತನ ಬೆಂಬಲಕ್ಕೆ ಜೂಲಿಯಾ ಸರ್ಕಾರ ನಿಂತಿತು. ಆದರೆ ಸ್ಲಿಪ್ಪರ್ ವಿರುದ್ಧ ವ್ಯಾಪಕ ಟೀಕೆಗಳು ಕೇಳಿಬಂದಾಗ ಆತನ ವಿರುದ್ಧ ನ್ಯಾಯಾಲಯದಲ್ಲಿ ವಿಚಾರಣೆ ಪ್ರಾರಂಭವಾಯಿತು. ಆಗ ವಿಧಿ ಇಲ್ಲದೆ ಸ್ಲಿಪ್ಪರ್ ಸ್ಪೀಕರ್ ಸ್ಥಾನಕ್ಕೆ ರಾಜೀನಾಮೆ ಕೊಟ್ಟ. ಈ ಹಗರಣದಿಂದಾಗಿ ಜೂಲಿಯಾ ಸರ್ಕಾರವೂ ಜನಪ್ರಿಯತೆ ಕಳೆದುಕೊಂಡಿತು. ಇದೇ ಆಕೆಯ ಸರ್ಕಾರವನ್ನು ಉರುಳಿಸಲು ಸೂಕ್ತ ಸಮಯವೆಂದು ಭಾವಿಸಿದ ವಿರೋಧ ಪಕ್ಷದ ನಾಯಕ ಟೋನಿ ಅಬ್ಬಾಟ್ ಸಂಸತ್ತಿನಲ್ಲಿ ಕಳೆದವಾರ ಅವಿಶ್ವಾಸ ನಿರ್ಣಯವನ್ನು ಮಂಡಿಸಿದ. ಅದಕ್ಕೆ ಆತ ಕೊಟ್ಟ ಕಾರಣ ಮಹಿಳಾ ದ್ವೇಷಿ ಮತ್ತು ಲಿಂಗಭೇದಿ ಎಸ್‌ಎಂಎಸ್‌ಗಳನ್ನು ಕಳುಹಿಸಿದ್ದ ಸ್ಲಿಪ್ಪರ್ ಪರವಾಗಿ ಜೂಲಿಯಾ ಸರ್ಕಾರ ನಿಂತಿದ್ದರಿಂದ ಆಸ್ಟ್ರೇಲಿಯಾ ಸಂಸತ್ತಿಗೆ ಅವಮಾನವಾಗಿದೆ ಎಂಬುದಾಗಿತ್ತು.

ಅಬ್ಬಾಟ್ ಮಂಡಿಸಿದ ಅವಿಶ್ವಾಸ ನಿರ್ಣಯದ ವಿರುದ್ಧ ಜೂಲಿಯಾ ಆಸ್ಟ್ರೇಲಿಯಾದ ಸಂಸತ್ತಿನಲ್ಲಿ ಮಾಡಿದ 15 ನಿಮಿಷಗಳ ಭಾಷಣ ಮಿಂಚಿನಂತೆ ಜಗತ್ತಿನಾದ್ಯಂತ ಯೂಟ್ಯೂಬ್ ಮೂಲಕ ಸಂಚರಿಸಿತು. ಒಂದು ಅಂದಾಜಿನ ಪ್ರಕಾರ ಲಕ್ಷಾಂತರ ಜನ ಅದನ್ನು ವೀಕ್ಷಿಸಿದರು. ವಿವಿಧ ದೇಶಗಳ ಮಾಧ್ಯಮಗಳು ಆಕೆಯ ಭಾಷಣದ ಬಗ್ಗೆ ಬರೆದವು, ವಿಶ್ಲೇಷಿಸಿದವು.

ಜೂಲಿಯಾ ಮಾಡಿದ ಭಾಷಣ ಎಲ್ಲಾ ಪುರುಷ ಪ್ರಧಾನ ಸಮಾಜಗಳಲ್ಲಿ ಲಿಂಗಭೇದ ಮತ್ತು ಸ್ತ್ರೀದ್ವೇಷಿ ಚಿಂತನೆಗಳು ಹೇಗೆ ಹಾಸುಹೊಕ್ಕಿದೆ ಎಂದು ತೋರುವುದರಿಂದ ಅದರ ಸಾರಾಂಶವನ್ನು ಇಲ್ಲಿ ನೀಡುತ್ತಿದ್ದೇನೆ.

"ವಿರೋಧ ಪಕ್ಷದ ನಾಯಕರು ಮಂಡಿಸಿರುವ ಅವಿಶ್ವಾಸ ನಿರ್ಣಯವನ್ನು ನಾನು ವಿರೋಧಿಸುತ್ತೇನೆ. ಮಾತ್ರವಲ್ಲ, ಲಿಂಗಭೇದ ಮತ್ತು ಸ್ತ್ರೀದ್ವೇಷದ ಬಗ್ಗೆ ಅವರ ಭಾಷಣವನ್ನು ಕೇಳಲು ನಾನು ತಯಾರಿಲ್ಲ. ಅಷ್ಟೇ ಅಲ್ಲ, ಆ ಕುರಿತು ಈ ಸರ್ಕಾರಕ್ಕೆ ಭಾಷಣ ಕುಟ್ಟುವ ನೈತಿಕತೆ ಅವರಿಗಿಲ್ಲ."

ಲಿಂಗಭೇದ ಮಾಡುವವರು ಮತ್ತು ಸ್ತ್ರೀ ದ್ವೇಷಿಗಳಾಗಿರುವವರು ಅಧಿಕಾರದ ಉನ್ನತ ಹುದ್ದೆಗಳನ್ನು ಅಲಂಕರಿಸಲು ನಾಲಾಯಕ್ ಎಂದು ಅವರು ಹೇಳಿದ್ದಾರೆ. ಅದು ನಿಜವೇ ಆಗಿದ್ದರೆ ಅವರು ಈ ಕ್ಷಣವೇ ಈ ಸಂಸತ್ತಿಗೆ ತಮ್ಮ ರಾಜೀನಾಮೆ ಪತ್ರವನ್ನು ಬರೆಯುತ್ತಿದ್ದಾರೆಂದು ಆಶಿಸುತ್ತಿದ್ದೇನೆ. ಯಾಕೆಂದರೆ ಆಧುನಿಕ ಆಸ್ಟ್ರೇಲಿಯಾದಲ್ಲಿ ಸ್ತ್ರೀ ದ್ವೇಷ ಯಾವ ರೂಪದಲ್ಲಿದೆ ಎಂದು ನೋಡಲು ಅವರು ಬಹಳ ದೂರ ಹೋಗಬೇಕಿಲ್ಲ. ಕನ್ನಡಿಯಲ್ಲಿ ತಮ್ಮ ಮುಖ ನೋಡಿದರೆ ಸಾಕು ಅವರಿಗೆ ಅರ್ಥವಾಗುತ್ತದೆ.

ಸ್ತ್ರೀದ್ವೇಷ ಮತ್ತು ಲಿಂಗ ತಾರತಮ್ಯದ ಬಗ್ಗೆ ವಿರೋಧ ಪಕ್ಷದ ನಾಯಕರು ಇಬ್ಬಗೆಯ ನೀತಿಯನ್ನು ಹೊಂದಿದ್ದಾರೆ. ಉದಾಹರಣೆಗೆ ಅವರು ಒಂದು ಚರ್ಚೆಯಲ್ಲಿ ಭಾಗವಹಿಸುತ್ತಾ "ಮಹಿಳೆಯರಿಗಿಂತ ಪುರುಷರೇ ಹೆಚ್ಚಾಗಿ ಅಧಿಕಾರದ ಸ್ಥಾನಗಳಲ್ಲಿರುವುದನ್ನು ಯಾಕೆ ತಾರತಮ್ಯ ಎಂದು ಪರಿಗಣಿಸಬೇಕು?" ಎಂದು ಪ್ರಶ್ನಿಸಿದ್ದರು. ಈ ಮಾತನ್ನು ಅವರು ಹೇಳಿದ್ದು ಆತ ವಿದ್ಯಾರ್ಥಿಯಾಗಿದ್ದಾಗಲ್ಲ, ಬದಲಾಗಿ ಹೋದ ಸರ್ಕಾರದಲ್ಲಿ ಮಂತ್ರಿ ಆಗಿದ್ದಾಗ. ಅದೇ ಚರ್ಚೆಯಲ್ಲಿ ಅವರು "ದೈಹಿಕವಾಗಿ ಮತ್ತು ಪ್ರಾಕೃತಿಕವಾಗಿ ಮಹಿಳೆಯರಿಗಿಂತ ಪುರುಷರು ಅಧಿಕಾರವನ್ನು ಚಲಾಯಿಸಲು ಮತ್ತು ಆದೇಶಗಳನ್ನು ನೀಡಲು ಶಕ್ತರಾಗಿದ್ದರೆ ಅದು ತಪ್ಪಾ?" ಎಂದೂ ಹೇಳಿದ್ದರು. ಆಧುನಿಕ ಸಮಾಜದಲ್ಲಿ ಮಹಿಳೆಯರ ಪಾತ್ರದ ಬಗೆಗಿನ ಚರ್ಚೆಯಲ್ಲಿ ಅವರು "ಉನ್ನತ ಹುದ್ದೆಗಳಲ್ಲಿ ಮಹಿಳೆಯರ ಪ್ರಾತಿನಿಧ್ಯ ಕಡಿಮೆ ಇರುವುದು ಸಹಜ" ಎಂದಿದ್ದರು. ಲಿಂಗಭೇದದ ಬಗ್ಗೆ ಇಂತಹ ನಿಲುವುಗಳನ್ನು ಹೊಂದಿರುವ ಇಂತಹ ಮನುಷ್ಯನಿಂದ ನಾವು ಇವತ್ತು ಭಾಷಣ ಕೇಳಲು ಸಿದ್ಧರಿಲ್ಲ.

ಇದೇ ವ್ಯಕ್ತಿ ಆರೋಗ್ಯ ಸಚಿವರಾಗಿದ್ದಾಗ "ಗರ್ಭಪಾತ ಮಾಡಿಸಿಕೊಳ್ಳುವುದು ಮಕ್ಕಳನ್ನು ಹಡಿಯುವುದಕ್ಕೆ ಬದಲಾಗಿ ಸುಲಭವಾದ ಪರ್ಯಾಯ ಮಾರ್ಗ" ಎಂದಿದ್ದರು. ಅದು ಆತ ಮಹಿಳೆಯರಿಗೆ ಮಾಡಿದ ಅಪಚಾರ ಎಂದು ನಾನು ವೈಯಕ್ತಿಕವಾಗಿ ಭಾವಿಸಿದ್ದೇನೆ. ಪರಿಸರ ಮಾಲಿನ್ಯದ ಬಗ್ಗೆ ಮಾತನಾಡುತ್ತಾ ಈತ "ಬಟ್ಟೆಗಳನ್ನು ಇಸ್ತ್ರಿ ಮಾಡುವಾಗ ಆಸ್ಟ್ರೇಲಿಯಾದ ಗೃಹಿಣಿಯರು ನೆನಪಿಡಬೇಕಾದ್ದು..." ಎಂದು ಹೇಳಿದ್ದರು. ಆಧುನಿಕ ಆಸ್ಟ್ರೇಲಿಯಾದಲ್ಲಿ ಮಹಿಳೆಯರ ಪಾತ್ರದ ಬಗ್ಗೆ ಇಂತಹ ಚಿತ್ರಣವನ್ನು ನೀಡಿದ್ದೂ ಅಪಚಾರವಲ್ಲದೆ ಇನ್ನೇನು?

ನಾನು ಪ್ರಧಾನಿಯಾಗಿ ಈ ಕುರ್ಚಿಯಲ್ಲಿ ಕೂರುವ ನನ್ನ ಎದುರು ವಿರೋಧ ಪಕ್ಷದ ನಾಯಕರಾಗಿ ಕೂರುವ ಈ ಮನುಷ್ಯ ಮೊದಲಿನಿಂದಲೂ ಸ್ತ್ರೀದ್ವೇಷ ನೀತಿಯನ್ನೇ ಪ್ರದರ್ಶಿಸುತ್ತಾ ಬಂದಿದ್ದಾರೆ. ಉದಾಹರಣೆಗೆ ಒಮ್ಮೆ ಈ ಸಂಸತ್ತಿನಲ್ಲಿ ಮಾತನಾಡುತ್ತಾ ನಾನು 'ಗೌರವಾರ್ಹ ಮಹಿಳೆ'ಯಂತೆ ವರ್ತಿಸಬೇಕು ಎಂದಿದ್ದರು. ನನ್ನ ಜಾಗದಲ್ಲಿ ಪುರುಷನೊಬ್ಬ ಕೂತಿದ್ದರೆ ಆತನ ಬಗ್ಗೆ ಇಂತಹ ಪದಗಳನ್ನು ಉಪಯೋಗಿಸುತ್ತಿದ್ದರೆ? ಇಲ್ಲ. ವಿರೋಧ ಪಕ್ಷದ ನಾಯಕರು ಒಮ್ಮೆ ಸಂಸತ್ತಿನ ಹೊರಗಡೆ ನನ್ನ ವಿರುದ್ಧ 'Ditch the Witch' ಎಂದು ಬರೆಯಲಾಗಿದ್ದ ಪೋಸ್ಟರ್ ಪಕ್ಕ ನಿಂತರು. ಹಾಗೆಯೇ ಇನ್ನೊಮ್ಮೆ ನನ್ನನ್ನು ಯಾವುದೋ ಪುರುಷನ ಹಾದರಗಿತ್ತಿ ಎಂದು ಬಣ್ಣಿಸಿದ್ದ ಪೋಸ್ಟರ್ ಪಕ್ಕ ನಿಂತರು. ಅದು ಮಹಿಳಾ ದ್ವೇಷ ನಿಲುವಲ್ಲದೆ ಇನ್ನೇನು? ಪ್ರತಿದಿನ, ಪ್ರತಿಹಂತದಲ್ಲಿ, ವಿವಿಧ ತರಹದಲ್ಲಿ ನಾನು ಈ ವ್ಯಕ್ತಿಯಿಂದ ಸ್ತ್ರೀದ್ವೇಷಿ ನಿಲುವನ್ನು, ಲಿಂಗಭೇದ ತಾರತಮ್ಯವನ್ನು ಎದುರಿಸುತ್ತಿದ್ದೇನೆ.

ಇಂತಹ ಮನುಷ್ಯ ಈ ಸಂಸತ್ತನ್ನು ಪ್ರವೇಶಿಸಿ ಆಸ್ಟ್ರೇಲಿಯಾದ ಮಹಿಳೆಯರಲ್ಲಿ ಕ್ಷಮೆ ಕೇಳಿಲ್ಲ, ನನ್ನನ್ನು ಪದೇಪದೇ ಅವಮಾನಿಸಿದ್ದಕ್ಕೆ ನನಗೆ ಸಾರಿ ಹೇಳಿಲ್ಲ. ಆದರೆ ಇವತ್ತು ರಾಜಕೀಯ ದುರುದ್ದೇಶದಿಂದ ಮಹಿಳೆಯರ ಪರ ನಿಂತಿರುವುದಾಗಿ ಪೋಸು ಕೊಡುತ್ತಿದ್ದಾರೆ. ಇಂತಹ ಇಬ್ಬಂದಿ ನೀತಿಯನ್ನು ಯಾರೂ ಸಹಿಸಕೂಡದು.

ನನ್ನ ಸರ್ಕಾರದಲ್ಲಿ ನಡೆಯುವುದಕ್ಕೆಲ್ಲ ನಾನು ಹೊಣೆ ಆಗಬೇಕೆಂದು ವಿರೋಧ ಪಕ್ಷದ ನಾಯಕರು ನನಗೆ ಮೌಲ್ಯ ಪಾಠವನ್ನು ಬಿಗಿಯುತ್ತಾರೆ. ಆದರೆ ಆತ ಎಷ್ಟರ ಮಟ್ಟಿಗೆ ತನ್ನ ಪಕ್ಷದ ಸದಸ್ಯರ ನಡವಳಿಕೆಗೆ ಹೊಣೆ ಹೊತ್ತಿದ್ದಾರೆ? ನನ್ನ ಬಗ್ಗೆ, ನನ್ನ ಸಂಸಾರದ ಬಗ್ಗೆ ಆತನ ಪಕ್ಷದ ಸದಸ್ಯರು ಇದೇ ಸಂಸತ್ತಿನಲ್ಲಿ ಅವಹೇಳನಕಾರಿಯಾಗಿ ಮಾತನಾಡುತ್ತಿದ್ದಾಗ ಅವರನ್ನು ಈತ ತಡೆದರೆ? ಅಷ್ಟೇ ಅಲ್ಲ, ಇವತ್ತು ವಿರೋಧ ಪಕ್ಷದ ನಾಯಕರ ಬೆಂಬಲಕ್ಕೆ ನಿಂತಿರುವವರಲ್ಲಿ ಅದೆಷ್ಟು ಜನ ಇಂತಹ ನಡವಳಿಕೆ ಸರಿಯಲ್ಲ ಎಂದು ಸಭಾತ್ಯಾಗ ಮಾಡಿದರು? ಅದೆಷ್ಟು ಜನ ಮಧ್ಯ ಪ್ರವೇಶಿಸಿ ಇದು ಸರಿಯಲ್ಲ ಎಂದು ತಡೆದರು? ಅದನ್ನು ಯಾರೂ ಮಾಡಲಿಲ್ಲ. ಬದಲಾಗಿ ನನ್ನ ವಿರುದ್ಧ ಈ ಸಂಸತ್ತಿನಲ್ಲಿ ವ್ಯಕ್ತವಾಗುತ್ತಿದ್ದ ತುಚ್ಛ ಮಾತು ಗಳನ್ನು ತಮಾಷೆ ಎಂಬಂತೆ ಆನಂದಿಸುತ್ತಿದ್ದರು.


ಅವರ ಇಂತಹ ವರ್ತನೆಯಿಂದ ನನಗೆ ನಾಚಿಕೆ ಆಗಲಿಲ್ಲ, ನನ್ನ ಸಂಸಾರದವರಿಗೂ ನಾಚಿಕೆ ಆಗಲಿಲ್ಲ. ಯಾಕೆಂದರೆ ಇದರಿಂದ ನಾಚಿಕೆ ಆಗಬೇಕಿದ್ದದ್ದು ವಿರೋಧ ಪಕ್ಷದವರಿಗೆ.

ಸ್ಲಿಪ್ಪರ್ ಅವರು ಕಳುಹಿಸಿದ್ದ ಅಸಭ್ಯ ಎಸ್‌ಎಂಎಸ್‌ಗಳನ್ನು ನಾನು ಸಮರ್ಥಿಸುತ್ತಿಲ್ಲ. ಹಾಗೆಯೇ ಸ್ಲಿಪ್ಪರ್ ಅವರಿಗೊಂದು ನೀತಿ, ತನಗೆ ಮಾತ್ರ ಇನ್ನೊಂದು ನೀತಿ ಎಂಬ ವಿರೋಧ ಪಕ್ಷದ ನಾಯಕರ ಸಿದ್ಧಾಂತವನ್ನೂ ನಾನು ಒಪ್ಪುವುದಿಲ್ಲ. ಅವರ ಇಂತಹ ಇಬ್ಬಂದಿ ನಿಲುವನ್ನು ಸಂಸತ್ತು ವಿರೋಧಿಸಬೇಕು. ಅವರು ಹೇಳುವಂತೆ ನಮ್ಮ ಸಮಾಜದಲ್ಲಿ, ನಮ್ಮ ಸಂಸತ್ತಿನಲ್ಲಿ ಲಿಂಗತಾರತಮ್ಯ ಮತ್ತು ಸ್ತ್ರೀದ್ವೇಷ ಅಂತ್ಯಗೊಳ್ಳಬೇಕಿದ್ದರೆ ಮೊದಲು ಅವರೇ ಬದಲಾಗಬೇಕು. ಅವರು ತಮ್ಮ ವರ್ತನೆಗೆ, ಹಿಂದೆ ಕೊಟ್ಟಿರುವ ಹೇಳಿಕೆಗಳಿಗೆ, ನನ್ನನ್ನು ಹಾದರಗಿತ್ತಿ ಎಂದೂ, ಮುದಿಗೂಬೆ ಎಂದೂ ಬಣ್ಣಿಸಿದ ಪೋಸ್ಟರ್‌ಗಳ ಪಕ್ಕ ನಿಂತಿದ್ದಕ್ಕೆ ಅವರು ನಮ್ಮ ದೇಶದ ಮಹಿಳೆಯರ ಮತ್ತು ನನ್ನ ಕ್ಷಮೆ ಕೇಳಬೇಕು.

ಅದನ್ನೆಲ್ಲ ಮಾಡದಿರುವ ಈ ಮನುಷ್ಯ ತನ್ನ ಇಬ್ಬಂದಿನೀತಿಯನ್ನು ಈ ಸಂಸತ್ತಿನ ಮೇಲೆ ಹೇರಲು ಪ್ರಯತ್ನಿಸುತ್ತಿರುವುದನ್ನು ಎಲ್ಲರೂ ವಿರೋಧಿಸಬೇಕು. ಮಾತ್ರವಲ್ಲ ಅವರು ಆಧುನಿಕ ಸಮಾಜದಲ್ಲಿ ಮಹಿಳೆಯರ ಪಾತ್ರ ಕುರಿತು ಆತ್ಮಾವಲೋಕನ ಮಾಡಿಕೊಳ್ಳಬೇಕು. ಯಾಕೆಂದರೆ ನಾವು ಮಹಿಳೆಯರು ಇಂತಹ ಲಿಂಗತಾರತಮ್ಯ ಮತ್ತು ಸ್ತ್ರೀ ದ್ವೇಷಕ್ಕಿಂತ ಹೆಚ್ಚಿನ ದರ್ಜೆಯ ಹಕ್ಕುಗಳಿಗೆ ಅರ್ಹರು."

ಆಕೆಯ ಭಾಷಣ ನನಗೆ ಇಷ್ಟವಾಗಿದ್ದರಿಂದ ಅದರ ಮುಖ್ಯ ಭಾಗಗಳನ್ನು ನಿಮ್ಮೊಂದಿಗೆ ಹಂಚಿಕೊಂಡಿದ್ದೇನೆ...

'ಅಂಚಿನಿಂದ' ಬರೆಯುತ್ತಿರುವ ವಾಸು



'ಚಾರ್ವಾಕ' ಅಂಕಣವನ್ನು ಬರೆಯುತ್ತಿದ್ದ ಶಿವಸುಂದರ್ ಅವರ ಬದಲಾಗಿ ಡಾ.ವಾಸು ಎಚ್.ವಿ ಅವರ 'ಅಂಚಿನಿಂದ' ಅಂಕಣವನ್ನು ಕಳೆದ ವಾರದಿಂದ ಪ್ರಾರಂಭಿಸಿರುವುದು ಈಗಾಗಲೇ ನಮ್ಮ ಓದುಗರ ಗಮನಕ್ಕೆ ಬಂದಿದೆ.

ನಮ್ಮ ಸಮಾಜದಲ್ಲಿ ಸಮಾನತೆ ಮತ್ತು ಸಾಮಾಜಿಕ ನ್ಯಾಯ ಇರಬೇಕೆಂದು ಬಯಸುವ ವಾಸು ಪ್ರತಿಭಾವಂತ ಮತ್ತು ಪ್ರಾಮಾಣಿಕ ಯುವಕ. ವಾಸು ಬೆಂಗಳೂರು ಮೆಡಿಕಲ್ ಕಾಲೇಜಿನಲ್ಲಿ ಓದಿ ವೈದ್ಯರಾಗಿದ್ದರೂ ಆ ವೃತ್ತಿಗೆ ತಿಲಾಂಜಲಿ ಇಟ್ಟು ತಾನು ನಂಬಿರುವ ಸಿದ್ಧಾಂತದ ಪರವಾಗಿ ಹಲವಾರು ವರ್ಷಗಳಿಂದ ಹೋರಾಟ ಮಾಡುತ್ತಾ ಬಂದಿದ್ದಾರೆ. ಈಗ ಅವರು 'ಕರ್ನಾಟಕ ಜನಶಕ್ತಿ' ಎಂಬ ಸಂಘಟನೆಯ ಪ್ರಧಾನ ಸಂಚಾಲಕರಾಗಿದ್ದು ಹಲವಾರು ಸಾಮಾಜಿಕ ಹೋರಾಟಗಳಲ್ಲಿ ಸಕ್ರಿಯರಾಗಿದ್ದಾರೆ.

ನಾನು ಕಳೆದ ಹಲವಾರು ವರ್ಷಗಳಿಂದ ಬಲ್ಲ ವಾಸು ಉತ್ತಮ ಬರಹಗಾರ ಮಾತ್ರವಲ್ಲ, ಜನಪರವಾಗಿ ಯೋಚಿಸುವ ಚಿಂತಕ. ಅವರ ಅಂಕಣವನ್ನು ನಮ್ಮ ಓದುಗರು ಇಷ್ಟಪಡುತ್ತಾರೆ ಎಂಬ ಆಶಯ ನಮ್ಮದು.

• ಜೆ.ಎಲ್

ಯಡ್ಡಿಯ ಹಿಂ'ಬಾಲ'ಕರು ಯಾರ್‍ಯಾರು?





ಯಡಿಯೂರಪ್ಪ ಬಿಜೆಪಿಗೆ ವಿದಾಯ ಹೇಳುವುದು ಖಚಿತವಾಗಿದೆ. ಈಗ ಅವರನ್ನು ಹಿಂಬಾಲಿಸಿಕೊಂಡು ಎಷ್ಟು ಜನ ಶಾಸಕರು ಅಥವಾ ಅವರ ಅನುಯಾಯಿಗಳು ಬಿಜೆಪಿಯಿಂದ ನಿರ್ಗಮಿಸುತ್ತಾರೆ ಎಂಬ ಬಗ್ಗೆ ರಾಜಕೀಯ ವಲಯದಲ್ಲಿ ಚರ್ಚೆಯಾಗುತ್ತಿದೆ. ಕೆಲವರ ಪ್ರಕಾರ ಬಿಜೆಪಿಯ ಸುಮಾರು 46 ಜನ ಲಿಂಗಾಯತ ಶಾಸಕರಲ್ಲಿ ಕನಿಷ್ಠವೆಂದರೂ 30 ಜನ ಯಡ್ಡಿಯನ್ನು ಹಿಂಬಾಲಿಸುತ್ತಾರೆ. ಈಗ ಈ 30 ಜನ ಶಾಸಕರು ಯಾರಿರಬಹುದು ಎಂದು ಯಡ್ಡಿ ವಲಯದಲ್ಲೂ ಬಿಜೆಪಿ ವಲಯದಲ್ಲೂ ಚರ್ಚೆಯಾಗುತ್ತಿದೆ. ಮೋಜಿನ ವಿಷಯ ಯಾವುದೆಂದರೆ, ಒಂದು ದಿನ ಒಬ್ಬರ ಹೆಸರು ಯಡ್ಡಿ ಪಟ್ಟಿಯಲ್ಲಿ ಪ್ರತ್ಯಕ್ಷವಾದರೆ ಮರುದಿನ ಆದೇ ಹೆಸರು ಬಿಜೆಪಿ ಪಟ್ಟಿಯಲ್ಲೂ ಕಾಣಿಸಿಕೊಳ್ಳುತ್ತಿದೆ.


ಇಂತಹ ಲೆಕ್ಕಾಚಾರಗಳ ಮಧ್ಯೆಯೇ ಯಡ್ಡಿ ತನ್ನ ಹಿಂಬಾಲಕರಿಗೆ "ಈಗಲೇ ನೀವ್ಯಾರೂ ಬಿಜೆಪಿ ಬಿಟ್ಟು ನನ್ನ ಜೊತೆ ಬರುವುದು ಬೇಡ. ಮುಂದಿನ ಚುನಾವಣೆಯ ದಿನಾಂಕ ಘೋಷಣೆಯಾಗುವತನಕ ಅಲ್ಲೇ ಇದ್ದು ಬಿಡಿ" ಎಂದು ಬಹಿರಂಗವಾಗಿ ಸೂಚಿಸಿದ್ದಾರೆ. ಅಂದರೆ, ಕನಿಷ್ಟ ಇನ್ನೆರಡು ತಿಂಗಳುಗಳ ಕಾಲವಾದರೂ ಅವರೆಲ್ಲ ಅಧಿಕಾರವನ್ನು ಮತ್ತು ಅದರೊಂದಿಗೆ ಬರುವ ಅಕ್ರಮ ಆಮದನಿಯನ್ನೂ ಎಂಜಾಯ್ ಮಾಡಿ ಎಂದು ಯಡ್ಡಿ ಆದೇಶಿಸಿದ್ದಾರೆ. ಇದು ಬಿಜೆಪಿಯವರಿಗೂ ಗೊತ್ತು, ಆದ್ದರಿಂದಲೇ ಅವರು "ಯಡ್ಡಿಯ ಹಿಂಬಾಲಕ ಶಾಸಕರು ಮತ್ತು ಮಂತ್ರಿಗಳು ಪ್ರತಿ ತಿಂಗಳು ಅವರಿಗೆ 'ಗುರುದಕ್ಷಿಣೆ'ಯನ್ನು ನೀಡುತ್ತಿರುವುದರಿಂದ ಅಂತಹ ಅವಕಾಶವನ್ನು ಯಾಕೆ ಕಳೆದುಕೊಳ್ಳಬೇಕು ಎಂಬುದು ಯಡ್ಡಿಯ ಲೆಕ್ಕಾಚಾರ" ಎಂದು ಲಟಿಕೆ ಮುರಿಯುತ್ತಿದ್ದಾರೆ.

ಹೊಸ ಪಕ್ಷವನ್ನು ಸ್ಥಾಪಿಸುವ ಉಮೇದಿನಲ್ಲಿರುವ ಯಡ್ಡಿಯ ಕೆಲವು ಹಿಂಬಾಲಕರೇ ಈಗ ಅವರಿಗೆ ಬಿಜೆಪಿಯನ್ನು ಬಿಡಬೇಡಿ ಎಂದು ಹೇಳುತ್ತಿದ್ದಾರಂತೆ. ಇತ್ತೀಚೆಗೆ ಬಂದಿರುವ ಸುದ್ದಿಯ ಪ್ರಕಾರ ವಸತಿ ಸಚಿವ ಸೋಮಣ್ಣ ತನ್ನ ಗಾಡ್‌ಫಾದರ್ ಯಡ್ಡಿಗೆ ಇಂತಹದ್ದೇ ಸಲಹೆಯನ್ನು ಕೊಟ್ಟರಂತೆ. ಆಗ ಸೋಮಣ್ಣನನ್ನು ತರಾಟೆಗೆ ತೆಗೆದುಕೊಂಡ ಯಡ್ಡಿ "ನೀನು ನನ್ನ ಜೊತೆ ಬರೋದಿಲ್ವಾ. ಹಾಗಾದರೆ ಮುಂದಿನ ಚುನಾವಣೆಯಲ್ಲಿ ನೀನು ಗೆಲ್ಲೋದಿಲ್ಲ, ನನ್ನ ಎದುರಿಗೆ ನಿಲ್ಲಬೇಡ, ಹೊರಟುಹೋಗು" ಎಂದು ಅಬ್ಬರಿಸಿದರು ಎಂದು ಯಡ್ಡಿಯ ಹಿಂಬಾಲಕರೇ ಹೇಳುತ್ತಿದ್ದಾರೆ.

ಅದೇ ರೀತಿ ಯಡ್ಡಿಯ ಮತ್ತೊಬ್ಬ ಪರಮಾಪ್ತ ಕೈಗಾರಿಕಾ ಸಚಿವ ಮುರುಗೇಶ್ ನಿರಾಣಿಯನ್ನೂ ಯಡ್ಡಿ ತಾರಕದ ಧ್ವನಿಯಲ್ಲಿ ಗದರಿಸಿದರಂತೆ. ಯಡ್ಡಿಯ ಈ ವಿರಾಟರೂಪವನ್ನು ನೋಡಿ ನಿರಾಣಿ ಮೌನವಾಗಿ ಹೊರಟುಹೋದರಂತೆ. ಯಡ್ಡಿಯ ಮತ್ತೊಬ್ಬ ಕಟ್ಟಾ ಅನುಯಾಯಿ ಬಸವರಾಜ್ ಬೊಮ್ಮಾಯಿಯ ನಿಲುವಿನ ಬಗ್ಗೆ ಯಾರೂ ತುಟಿಕ್‌ಪಿಟಿಕ್ ಎನ್ನುತ್ತಿಲ್ಲ. ಬಸು ಬೊಮ್ಮಾಯಿಯನ್ನು ಹತ್ತಿರದಿಂದ ಬಲ್ಲವರು ಹೇಳುವುದೇನೆಂದರೆ "ಬಸು ಬಿಜೆಪಿ ಬಿಡುವುದು ಮತ್ತು ಯಡ್ಡಿಯ ಹೊಸ ಪಕ್ಷ ಸೇರುವ ಸಾಧ್ಯತೆ ಸದ್ಯಕ್ಕೆ ಫಿಫ್ಟಿ-ಫಿಫ್ಟಿ." ಅಂದರೆ ಬಸು ಯಡ್ಡಿಯ ಜೊತೆ ಬಿಜೆಪಿಯಿಂದ ಹೊರನಡೆಯಲು ಇನ್ನೂ ಮಾನಸಿಕವಾಗಿ ಸಿದ್ಧರಾಗಿಲ್ಲ ಎಂದೇ ಅರ್ಥ.









ಯಡ್ಡಿಯ ಈ ಮೂವರು ಆಪ್ತರು ಆತನೊಂದಿಗೆ ಹೋಗಲು ಹಿಂದೇಟು ಹಾಕುತ್ತಿದ್ದಾರೆಂದರೆ ಆತನ ಬೆಂಬಲಿಗರ ಸಂಖ್ಯೆ ಕಡಿಮೆ ಇದೆ ಎಂದೂ, ಜೊತೆಗೆ ಯಡ್ಡಿಯ ಆರ್ಥಿಕ ಶಕ್ತಿಯೂ ಕುಗ್ಗಿದೆ ಎಂದೂ ರಾಜಕೀಯ ವಲಯದಲ್ಲಿ ಕೇಳಿಬರುತ್ತಿದೆ. ಈ ತರ್ಕದ ಹಿಂದಿರುವ ಅಂಶ ಯಾವುದೆಂದರೆ ಯಡ್ಡಿಯ ಬೆಂಬಲಿಗರಲ್ಲಿ ಈ ಮೂವರು ಅತ್ಯಂತ ಶ್ರೀಮಂತ ಮಂತ್ರಿಗಳು. ಅಷ್ಟೇ ಅಲ್ಲ, ಲಿಂಗಾಯತರಾದ ಇವರ ಬಳಿ ಯಡ್ಡಿ ತನ್ನ ಅಕ್ರಮ ಸಂಪತ್ತನ್ನೂ ಇರಿಸಿದ್ದಾರೆ ಎಂಬ ಸುದ್ದಿಯೂ ಇದೆ. ಇದಕ್ಕಿಂತಲೂ ಮುಖ್ಯವಾಗಿ ಈ ಮೂವರು ಲಿಂಗಾಯತ ಮಂತ್ರಿಗಳಿಗೆ ಒಬ್ಬೊಬ್ಬ ಲಿಂಗಾಯತ ಮಠಾಧೀಶರ ಆಶೀರ್ವಾದ ಮತ್ತು ಬೆಂಬಲವಿದೆ. ಇಂತಹ ಪ್ರಮುಖರೇ ತನ್ನ ಹಿಂದೆ ಬಾರದಿದ್ದರೆ ತಾನು ಲಿಂಗಾಯತರ ಮತಗಳನ್ನು ಪಡೆಯುವುದು ಕಷ್ಟ ಸಾಧ್ಯ ಎಂಬ ಆಂಜಿಕೆ ಯಡ್ಡಿಯನ್ನು ಕಾಡುತ್ತಿದೆಯಂತೆ.

ಆದರೂ ಹೊಸ ಪಕ್ಷದ ಸಿದ್ಧತೆಯಲ್ಲಿರುವ ಯಡ್ಡಿ ಈಗಾಗಲೇ ಸುಮಾರು 150 ವಿಧಾನಸಭಾ ಕ್ಷೇತ್ರಗಳಲ್ಲಿ ತನ್ನ ಭಾವೀ ಪಕ್ಷದ ಭಾವೀ ಅಭ್ಯರ್ಥಿಗಳ ಪಟ್ಟಿಯನ್ನು ತಯಾರಿಸುತ್ತಿದ್ದಾರೆ. ಆದರೆ ಯಡ್ಡಿಗೆ ಸಮಸ್ಯೆ ಎದುರಾಗಿರುವುದೇ ಬೆಂಗಳೂರು ನಗರ ಮತ್ತು ಬೆಂಗಳೂರು ಗ್ರಾಮಾಂತರ ಪ್ರದೇಶದಲ್ಲಿ. ಬೆಂಗಳೂರು ನಗರದ ಶಾಸಕರಲ್ಲಿ ಶೋಭಾ ಕರಂದ್ಲಾಜೆ ಮತ್ತು ಹೇಮಚಂದ್ರ ಸಾಗರ್ ಮಾತ್ರ ಈವರೆಗೆ ತಮ್ಮ ರಾಜಕೀಯ ಗುರು ಯಡ್ಡಿಯ ಜೊತೆಗೆ ಹೋಗುವುದಾಗಿ ಪ್ರಾಮಿಸ್ ಮಾಡಿದ್ದಾರೆ. ಉಳಿದ ಬಹುತೇಕ ಶಾಸಕರು ಅಡ್ಡಗೋಡೆಯ ಮೇಲೆ ದೀಪ ಇಟ್ಟಂತೆ ಮಾತನಾಡುತ್ತಿದ್ದಾರೆಯೇ ವಿನಃ ಎಲ್ಲೂ, ಯಾರೂ ಖಚಿತವಾಗಿ ಏನನ್ನೂ ಹೇಳುತ್ತಿಲ್ಲ.

ಅದೇರೀತಿ ಬೆಂಗಳೂರು ಗ್ರಾಮಾಂತರ ಪ್ರದೇಶದಲ್ಲಿ ಕಾಂಗ್ರೆಸ್ ನಾಯಕ ಜಾಲಪ್ಪನವರ ಮಗ ನರಸಿಂಹಸ್ವಾಮಿ ಮಾತ್ರ ಯಡ್ಡಿಯ ಹಿಂದೆ ಮೆರವಣಿಗೆಯಲ್ಲಿ ಬರಲು ಒಪ್ಪಿಗೆ ನೀಡಿದ್ದಾರೆ. ಉಳಿದವರು ಕೈ ಎತ್ತಿದ್ದಾರೆ. ಇನ್ನು ಬೆಂಗಳೂರಿನ ಸುತ್ತಮುತ್ತಲಿನ ಜಿಲ್ಲೆಗಳಾದ ರಾಮನಗರ, ಮಂಡ್ಯ, ಕೋಲಾರ ಮತ್ತು ಚಿಕ್ಕಬಳ್ಳಾಪುರದಲ್ಲಿ ಯಡ್ಡಿಗೆ ಇನ್ನೂ ಯೋಗ್ಯವಾದ ಅಭ್ಯರ್ಥಿಗಳು ಸಿಕ್ಕಿಲ್ಲವಂತೆ.

ಅಂದರೆ, ಈ ನಾಲ್ಕು ಜಿಲ್ಲೆಗಳಲ್ಲಿ ಯಡ್ಡಿ ತನ್ನ ಪಕ್ಷದ ಖಾತೆ ಆರಂಭಿಸುವ ಮಾತು ಬದಿಗಿರಲಿ, ಎಲ್ಲ ವಿಧಾನಸಭಾ ಕ್ಷೇತ್ರಗಳಿಂದ ಚುನಾವಣೆಯಲ್ಲಿ ಸ್ಪರ್ಧಿಸಲು ಅವರಿಗೆ ಅಭ್ಯರ್ಥಿಗಳು ಸಿಗಲಾರರು. ಅದರಲ್ಲೂ ಒಂದು ಕಾಲದಲ್ಲಿ ಯಡ್ಡಿಯ ಆಸ್ಥಾನದ ಜೋಕರ್‌ನಂತಿದ್ದ ಕೋಲಾರದ ಕೃಷ್ಣಯ್ಯ ಶೆಟ್ಟಿ ಗಟ್ಟಿಯಾಗಿ ಬಿಜೆಪಿಯಲ್ಲೇ ಉಳಿದುಕೊಳ್ಳಲು ಮನಸ್ಸು ಮಾಡಿರುವುದು ಎಲ್ಲರನ್ನೂ ಅಚ್ಚರಿಪಡಿಸಿದೆ.

ಬೆಂಗಳೂರು ಸುತ್ತಮುತ್ತಲ ಜಿಲ್ಲೆಗಳಲ್ಲಿ ಯಡ್ಡಿಗೆ ನಿರಾಶಾದಾಯಕ ಪರಿಸ್ಥಿತಿ ಎದುರಾಗಿದ್ದರೆ, ಕರಾವಳಿ ಪ್ರದೇಶವಾದ ಉಡುಪಿ, ಮಂಗಳೂರು, ಕೊಡಗು ಮತ್ತು ಉತ್ತರ ಕನ್ನಡ ಜಿಲ್ಲೆಗಳಲ್ಲಿ ಇನ್ನೂ ಗಾಢವಾದ ನಿರಾಶೆ ಕಾದಿದೆ. ಏಕೆಂದರೆ ಅಲ್ಲಿ ಬಿಜೆಪಿ ನಾಯಕರಿಗಿಂತ ಆರೆಸ್ಸೆಸ್ ಪ್ರಭಾವವೇ ಹೆಚ್ಚು, ಆ ಜಿಲ್ಲೆಗಳ 'ಬುದ್ಧಿವಂತರು' ಬಿಜೆಪಿಗೆ ಟಾಟಾ ಹೇಳಿ ಯಡ್ಡಿಯನ್ನು ಹಿಂಬಾಲಿಸುವ ಸಾಧ್ಯತೆ ಬಹಳ ಕಡಿಮೆ. ಪರಿಸ್ಥಿತಿ ಹೀಗಿದ್ದರೂ ಉತ್ತರ ಕನ್ನಡ ಜಿಲ್ಲೆಯಲ್ಲಿ ಶಿವಾನಂದ ನಾಯಕ್ ಮತ್ತು ಶಶಿಭೂಷಣ್ ಹೆಗ್ಡೆ ಎಂಬ ಇಬ್ಬರು ಅಭ್ಯರ್ಥಿಗಳನ್ನು ಯಡ್ಡಿ ತಯಾರು ಮಾಡಿದ್ದಾರೆ. ಈ ಶಶಿಭೂಷಣ್ ಹೆಗಡೆ ಮಾಜಿ ಮುಖ್ಯಮಂತ್ರಿ ರಾಮಕೃಷ್ಣ ಹೆಗಡೆಯವರ ಅಣ್ಣನ ಮಗ. ಈ ನಾಯಕ್ ಮತ್ತು ಹೆಗಡೆ ಇವರಿಬ್ಬರೂ ನಾಮಕಾವಸ್ಥೆ ಅಭ್ಯರ್ಥಿಯಾಗುತ್ತಾರೆಯೇ ವಿನಃ ಯಾವುದೇ ಕಾರಣಕ್ಕೂ ಗೆಲ್ಲುವ ಕುದುರೆಗಳು ಎಂದೆನಿಸಿಕೊಳ್ಳಲಾರರು.

ಉತ್ತರ ಕರ್ನಾಟಕದ ಕೆಲವು ಜಿಲ್ಲೆಗಳಲ್ಲಿ ಇಡೀ ಜಿಲ್ಲೆಗೆ ಜಿಲ್ಲೆಯೇ ಯಡ್ಡಿಯನ್ನು ಹಿಂಬಾಲಿಸುವ ಮಾತು ಕೇಳಿಬರುತ್ತಿದೆ. ಉದಾಹರಣೆಗೆ ಹಾವೇರಿಯಲ್ಲಿ ಹಾಲಿ ಮಂತ್ರಿ ಉದಾಸಿಯವರ ಫುಲ್ ಟೀಮ್ ಯಡ್ಡಿ ಜೊತೆ ಹೊಸ ಪಕ್ಷಕ್ಕೆ ಹೋಗಲು ತುದಿಗಾಲಲ್ಲಿ ನಿಂತಿದೆ. ಈ ಜಿಲ್ಲೆಯ ಆರೂ ಶಾಸಕರು ಯಡ್ಡಿ ಪರ ಜೈ ಅನ್ನಲಿದ್ದಾರೆ. ಅದೇ ರೀತಿ ಗುಲ್ಬರ್ಗಾದಲ್ಲಿ ರೇವೂ ನಾಯಕ್, ಸುಶೀಲ್ ಒಲ್ಲೇಪುರ, ದೊಡ್ಡನಗೌಡ, ಸುಶೀಲ್ ನಮೋಶಿ ಮೊದಲಾದವರು ಖಂಡಿತವಾಗಿಯೂ ಯಡ್ಡಿಯ ಜೊತೆ ಹೆಜ್ಜೆ ಹಾಕಲಿದ್ದಾರೆ. ಬಿಜಾಪುರದಲ್ಲಿ ಕೂಡ ಯಡ್ಡಿ ಹಿಂಬಾಲಕರಿಗೆ ಕೊರತೆಯೇನೂ ಇಲ್ಲ. ವಿಠಲ್ ಕಾಟಕದೊಂಡ, ರಮೇಶ್ ಬೂಸನೂರು ಹಾಗೂ ಬಾಗಲಕೋಟೆಯಲ್ಲಿ ಸಿದ್ದು ಸವದಿ ಖಂಡಿತವಾಗಿಯೂ ಯಡ್ಡಿ ಪಕ್ಷವನ್ನು ಸೇರಲಿದ್ದಾರೆ.


ಬೆಳಗಾವಿಯಲ್ಲಿ ಯಡ್ಡಿ ವಿಶ್ವ ಕನ್ನಡ ಸಮ್ಮೇಳನವನ್ನು ಏರ್ಪಡಿಸಿದ ದಿನದಿಂದ ಆ ಜಿಲ್ಲೆಯ ಮೇಲೆ ಕಣ್ಣಿಟ್ಟಿದ್ದಾರೆ. ಪ್ರಭಾಕರ್ ಕೋರೆ ಮತ್ತು ಲಕ್ಷ್ಮಣ್ ಸವದಿ ಯಡ್ಡಿಯೊಂದಿಗೆ ಕೈ ಜೋಡಿಸಲಿದ್ದಾರೆ. ರಾಯಚೂರು ಜಿಲ್ಲೆಯ ಶಂಕರಪ್ಪ ಮತ್ತು ಶಿವನಗೌಡ ನಾಯಕ್ ಯಡ್ಡಿ ಹಿಂದೆ ಹೆಜ್ಜೆ ಹಾಕಲು ತಯಾರಾಗಿದ್ದಾರೆ. ಇವರಿಬ್ಬರು ಈಗಾಗಲೇ ರಾಯಚೂರು ಜಿಲ್ಲೆಯಲ್ಲಿರುವ ತಮ್ಮತಮ್ಮ ಕ್ಷೇತ್ರಗಳಲ್ಲಿ ಮಾತ್ರವಲ್ಲ, ಪಕ್ಕದ ಕ್ಷೇತ್ರಗಳಲ್ಲೂ ಯಡ್ಡಿ ಪರ ಪ್ರಚಾರ ಕೆಲಸವನ್ನು ಆರಂಭಿಸಿದ್ದಾರೆ. ಯಡ್ಡಿಯ ಫೇವರೆಟ್ ಎಂದೆನಿಸಿಕೊಂಡಿರುವ ಯಾದಗಿರಿ ಜಿಲ್ಲೆಯ ರಾಜುಗೌಡ ಬಹಿರಂಗವಾಗಿಯೇ ಯಡ್ಡಿ ಜೊತೆ ತನ್ನನ್ನು ಗುರುತಿಸಿಕೊಂಡಿದ್ದಾರೆ. ಕೊಪ್ಪಳ ಜಿಲ್ಲೆಯಲ್ಲಿ ಕರಡಿ ಸಂಗಣ್ಣ ಮತ್ತು ಪರಣ್ಣ ಮನವಳ್ಳಿ "ಏನೇ ಆದರೂ ಯಡಿಯೂರಪ್ಪನವರೇ ನಮ್ಮ ಭವಿಷ್ಯ" ಎಂದು ಬಹಳ ಹಿಂದೆಯೇ ಹೇಳಿಕೊಂಡಿದ್ದಾರೆ.

ಧಾರವಾಡ ಜಿಲ್ಲೆಯಲ್ಲಿ ಯಡ್ಡಿಗೆ ಅಷ್ಟೊಂದು ಬೆಂಬಲ ಸಿಗಲಾರದು. ಸದ್ಯಕ್ಕೆ ಅಲ್ಲಿ ಚಿಕ್ಕನಗೌಡರವರ ಹೆಸರನ್ನು ಬಿಟ್ಟರೆ ಬೇರೆ ಯಾರ ಹೆಸರೂ ಕೇಳಿಬರುತ್ತಿಲ್ಲ. ಇದಕ್ಕೆ ಮುಖ್ಯ ಕಾರಣ, ಆ ಪ್ರದೇಶದ ಜಗದೀಶ್ ಶೆಟ್ಟರ್ ಮುಖ್ಯಮಂತ್ರಿಯಾಗಿರುವುದು.

ದಾವಣಗೆರೆ ಜಿಲ್ಲೆಯಿಂದ ಯಡ್ಡಿಗೆ ಸಿಹಿ ಸುದ್ದಿ ಬಂದಿದೆ. ಹಾಲಿ ಲೋಕಸಭಾ ಸದಸ್ಯ ಸಿದ್ದೇಶ್ ಅವರ ಸಂಪೂರ್ಣ ಬೆಟಾಲಿಯನ್ ಯಡ್ಡಿಗೆ ಶರಣಾಗಿದೆ. ಹಾಗೆಯೇ ಯಡ್ಡಿಯ ಅತ್ಯಂತ ನಂಬಿಗಸ್ತ ಮತ್ತು ಬಲಗೈ ಬಂಟ ಎಂದು ಗುರುತಿಸಿಕೊಂಡಿರುವ ರೇಣುಕಾಚಾರ್ಯ ಯಡ್ಡಿಗೆ ಜಿಲ್ಲೆಯಲ್ಲಿ ಸಂಪೂರ್ಣ ಜಯ ತಂದುಕೊಡುತ್ತೇನೆ ಎಂದು ಶಪಥ ಮಾಡಿದ್ದಾರಂತೆ. ಶಿವಮೊಗ್ಗ ಜಿಲ್ಲೆಯಲ್ಲಿ ಹಾಲಪ್ಪ ಯಡ್ಡಿಯ ಹಿಂದೆ ಹೋಗುವುದು ಖಚಿತವಾಗಿದೆ.

ತುಮಕೂರು ಜಿಲ್ಲೆಯಲ್ಲಿ ಸಿದ್ಧಗಂಗಾ ಮಠಾಧೀಶರ ಕೃಪೆಯಿಂದಾಗಿ ಯಡ್ಡಿಗೆ ಹೆಚ್ಚು ಬೆಂಬಲ ದೊರೆತರೂ ಆಶ್ಚರ್ಯವಿಲ್ಲ, ಮುಖ್ಯವಾಗಿ ಲೋಕಸಭಾ ಸದಸ್ಯ ಬಸವರಾಜ್, ಸುರೇಶ್ ಗೌಡ ಇವರೆಲ್ಲ ಯಡ್ಡಿಯ ಹಾರ್ಡ್‌ಕೋರ್ ಫಾಲೋಯರ್ಸ್ ಆಗಿದ್ದಾರೆ. ಆದರೆ ಸೊಗಡು ಶಿವಣ್ಣ ಮಾತ್ರ ಬಿಜೆಪಿಯಲ್ಲಿ ಉಳಿಯಲಿದ್ದಾರೆ.

ಚಿತ್ರದುರ್ಗ ಜಿಲ್ಲೆಯಲ್ಲಿ ತಿಪ್ಪಾರೆಡ್ಡಿ ಮತ್ತು ತಿಪ್ಪೇಸ್ವಾಮಿ ಎಂಬಿಬ್ಬರು 'ತಿಪ್ಪೆ'ಗಳನ್ನು ಯಡ್ಡಿ ಈಗಾಗಲೇ ತಮ್ಮ ಬುಟ್ಟಿಗೆ ಹಾಕಿಕೊಂಡಿದ್ದಾರೆ.



ಚಿಕ್ಕಮಗಳೂರು ಜಿಲ್ಲೆಯಲ್ಲಿ ಡಾ.ವಿಶ್ವನಾಥ್, ಕುಮಾರಸ್ವಾಮಿ ಮತ್ತು ಸುರೇಶ್ ಹೀಗೆ ಮೂವರು ಶಾಸಕರನ್ನು ಈಗಾಗಲೇ ಯಡ್ಡಿ ತಮ್ಮ ಜೊತೆಗೆ ಸೇರಿಸಿಕೊಂಡಿದ್ದಾರೆ.

ಮೈಸೂರು ಜಿಲ್ಲೆಯಲ್ಲಿ ಯಡ್ಡಿ ಜೊತೆಗಿರುವ ಏಕೈಕ ವ್ಯಕ್ತಿಯೆಂದರೆ ಅವರ ಪಟ್ಟದ ಶಿಷ್ಯ ಸಿದ್ದಲಿಂಗಸ್ವಾಮಿ ಮಾತ್ರ. ಸದ್ಯಕ್ಕೆ ಯಡಿಯೂರಪ್ಪನವರ ಆಪ್ತ ಸಹಾಯಕನಾಗಿ ಕೆಲಸ ಮಾಡುತ್ತಿರುವ ಈ ಸಿದ್ದಲಿಂಗಸ್ವಾಮಿ ಮೈಸೂರಿನಿಂದ ಶಾಸಕನಾಗುವ ಕನಸನ್ನು ಬಹಳ ದಿನಗಳಿಂದ ಕಾಣುತ್ತಿದ್ದಾನೆ.

ಮಂಡ್ಯದಲ್ಲಿ ಒಬ್ಬನೇ ಒಬ್ಬ 'ಮಂಡ್ಯದ ಗಂಡು' ಯಡ್ಡಿ ಪಕ್ಷಕ್ಕೆ ಅಭ್ಯರ್ಥಿಯಾಗಿ ಸಿಗಲಾರರು. ಹಾಗೆಯೇ, ಕುಮಾರಸ್ವಾಮಿಯವರ ಭದ್ರಕೋಟೆಯಾದ ರಾಮನಗರದಲ್ಲಿಯೂ ಅಭ್ಯರ್ಥಿಯನ್ನು ಹುಡುಕಲು ಯಡ್ಡಿಗೆ ಕಷ್ಟಸಾಧ್ಯ.

ಹೀಗೆ ಒಂದೊಂದು ಜಿಲ್ಲೆಯನ್ನೂ ಅಧ್ಯಯನ ಮಾಡಿ ತನ್ನ ಭಾವಿ ಪಕ್ಷದ ಭಾವೀ ಅಭ್ಯರ್ಥಿಗಳ ಪಟ್ಟಿಯನ್ನು ಯಡ್ಡಿ ತಯಾರಿಸುತ್ತಿದ್ದಾರಂತೆ. ಆ ಪಟ್ಟಿಯಲ್ಲಿ ಇರುವವರು ಹೆಚ್ಚಾಗಿ ಹಾಲಿ ಮಂತ್ರಿಗಳು, ಶಾಸಕರು ಮತ್ತು ಲೋಕಸಭಾ ಸದಸ್ಯರು ಎಂಬುದೆ ವಿಶೇಷ. ಇಷ್ಟೇ ಅಲ್ಲದೇ, ಅನೇಕ ಹಾಲಿ ಎಂ.ಎಲ್.ಸಿಗಳನ್ನೂ ಚುನಾವಣಾ ಸಂದರ್ಭದಲ್ಲಿ ಯಡ್ಡಿ ತಮ್ಮ ಪಕ್ಷದ ವತಿಯಿಂದ ನಿಲ್ಲಿಸುತ್ತಾರಂತೆ. ಯಡ್ಡಿಯ ಕೃಪಾಕಟಾಕ್ಷದಿಂದ ಎಂ.ಎಲ್.ಸಿ ಸ್ಥಾನ ಗಿಟ್ಟಿಸಿದವರೆಲ್ಲ ಅವರ ಪಕ್ಷದ ಅಭ್ಯರ್ಥಿಯಾಗುವ ಮುಖಾಂತರ ತಮ್ಮ ರಾಜಕೀಯ ಗಾಡ್‌ಫಾದರ್ ನೆರವಿನ ಸಹಾಯಹಸ್ತವನ್ನು ಚಾಚಲು ತಯಾರಾಗಿದ್ದಾರೆ. ಇದರ ಹೊರತಾಗಿ ಚುನಾವಣಾ ಸಂದರ್ಭದಲ್ಲಿ ಕಾಂಗ್ರೆಸ್ ಅಥವಾ ಬಿಜೆಪಿ ಟಿಕೆಟ್ ಸಿಗದ ಕೆಲವು ಅತೃಪ್ತ ಆತ್ಮಗಳನ್ನು ತಮ್ಮ ಕಡೆಗೆ ಸೆಳೆಯಲು ಯಡ್ಡಿ ಸಿದ್ಧತೆ ಮಾಡಿಕೊಳ್ಳುತ್ತಿದ್ದಾರೆ.


ಒಂದು ಮಾತಂತೂ ಸತ್ಯ. ಮುಂದಿನ ಚುನಾವಣೆಯಲ್ಲಿ ರಾಜ್ಯದ ಎಲ್ಲಾ 224 ಅಸೆಂಬ್ಲಿ ಕ್ಷೇತ್ರಗಳಲ್ಲಿ ತಮ್ಮ ಪಕ್ಷದ ಅಭ್ಯರ್ಥಿಗಳನ್ನು ನಿಲ್ಲಿಸಿ ತನ್ನ ಮಾನವನ್ನು ತಾನೇ ಕಳೆದುಕೊಳ್ಳುವುದು, ಜೊತೆಗೆ ತನ್ನ ಕಪ್ಪು ಹಣವನ್ನು ತಾನೇ ಕರಗಿಸುವ ಬದಲಿಗೆ ಕೆಲವೇ ಕೆಲವು ಆಯ್ದ ಕ್ಷೇತ್ರಗಳಲ್ಲಿ ತವ... ಅಭ್ಯರ್ಥಿಗಳನ್ನು ಅವರ ಗೆಲುವಿಗೆ ಹೆಚ್ಚಿನ ಪ್ರಾಮುಖ್ಯತೆಯನ್ನು ಕೊಡಲು ಯಡ್ಡಿ ನಿರ್ಧರಿಸಿದ್ದಾರೆ. ಅವರ ಆಪ್ತರು ಹೇಳುವಂತೆ "ಕನಿಷ್ಠವೆಂದರೂ 3... ರಿಂದ 35 ಕ್ಷೇತ್ರಗಳಲ್ಲಿ ನಮ್ಮ ಪಕ್ಷದ ಅಭ್ಯರ್ಥಿಗಳು ಗೆದ್ದರೆ ಮುಂದಿನ ಸರ್ಕಾರ ನಿರ್ಮಾಣ ಮಾಡುವಲ್ಲಿ ಯಡಿಯೂರಪ್ಪ ಮಹತ್ತರವಾದ ಪಾ... ನಿರ್ವಹಿಸುವುದು ಖಂಡಿತ."

ಯಡ್ಡಿಯ ಲೆಕ್ಕಾಚಾರಕ್ಕೆ ತದ್ವಿರುದ್ಧವಾಗಿ ಬಿಜೆಪಿ ಕೂಡ ಆರೆಸ್ಸೆಸ್ ಕಾರ್ಯಕರ್ತರ ನೆರವಿನೊಂದಿಗೆ ತನ್ನದೇ ಆದ ರೀತಿಯಲ್ಲಿ ರಾಜಕೀಯ ತಂತ್ರಗಾರಿಕೆಯನ್ನು ಹೆಣೆಯುತ್ತಿದೆ. ಸಂಘ ಪರಿವಾರದ ಥಿಂಕ್‌ಟ್ಯಾಂಕ್ ಸದಸ್ಯರು ಯಾವುದೇ ಕಾರಣಕ್ಕೂ ಯಡ್ಡಿಯ ಅಭ್ಯರ್ಥಿಗಳನ್ನು ಗೆಲ್ಲಲು ಬಿಡಬಾರದೆಂದು ತೀರ್ಮಾನಿಸಿದ್ದಾರೆ. ಇಂತಹ ಸನ್ನಿವೇಶದಲ್ಲಿ ಚೆಡ್ಡಿಗಳು ಹೆಚ್ಚಿನ ಸಂಖ್ಯೆಯಲ್ಲಿ ಗೆಲ್ಲುತ್ತಾರೋ ಅಥವಾ ಯಡ್ಡಿಯ ಪಕ್ಷದವರು ಗೆಲ್ಲುತ್ತಾರೋ ನೋಡಬೇಕು.

ಹಿಂದೊಮ್ಮೆ ಒಂದಾಗಿದ್ದು ಅಕ್ರಮ, ಅನೈತಿಕ, ಅವ್ಯವಹಾರ ಮಾ... ಅಧಿಕಾರವನ್ನು ಹಿಡಿದಿದ್ದ ಚೆಡ್ಡಿ, ಯಡ್ಡಿ ಮತ್ತು ರೆಡ್ಡಿ ಗ್ಯಾಂಗುಗಳು ಈ... ಚೆಂದಿ ಚೆಂದಿಯಾಗಿ ಪರಸ್ಪರ ಗುದ್ದಾಡುತ್ತಿರುವುದು ಮಾತ್ರ ಮಜಬೂತಾಗಿ...

● ಶ್ರೇ...

ಭೂಕಂಟಕ ಪೈ ರಾಶಿಗೆ ಹೆಬ್ಬೆಟ್ಟು ಯಮ


ದಯಾನಂದ ಪೈ

ಶಬನಮ್ ಡೆವಲಪರ್ಸ್ ಅಡ್ಡೆಗೇ ನುಗ್ಗಿ ಒಂದಲ್ಲ ...ದು ಹೆಣ ಕೆಡವಿದ್ದು ಅಂತರರಾಷ್ಟ್ರೀಯ ಘಾತಕ ರವಿ ...ಜಾರಿ. ನಂತರ ಅರಸಯ್ಯನ ಶಿಷ್ಯ ಗುಂಡನನ್ನು ಛೂಬಿಟ್ಟು ...ತ್ರಿ ಬಿಲ್ಡರ್ಸ್ ಅಡ್ಡೆಗೂ ಆತನೇ ಗುಂಡಿನ ರುಚಿ ಕಾಣಿಸಿದ್ದ ...ಟೀವಿಯ ಧಣಿ ರೋನ್ನಿ ಸ್ಕ್ರೂವಾಲಾ ಎಂಬ ...ಂಬಯಿ ರೊಕ್ಕಸ್ಥನ ಇಂದಿರಾ ನಗರದ ಛೇಂಬರಿನ ...ಲೂ ರವಿ ಪೂಜಾರಿಯೇ ಶಿಷ್ಯರನ್ನು ಬಿಟ್ಟು ಫೈರ್ ...ಡಿಸಿದ್ದ.

ಈಗ ಹೆಬ್ಬೆಟ್ಟು ಮಂಜನ ಸರದಿ.

ಆತ ಕೈಯಿಟ್ಟಿದ್ದು ಪೂರ್ವಂಕರ, ಮಂತ್ರಿ, ಎಂಬೆಸ್ಸಿ ...ತ್ಯಾದಿ ಮುಂಬಯಿಯ ಬಿಲ್ಡರ್‌ಗಳ ಅಡ್ಡೆಗೋ ಅಥವಾ ...ಥದ್ದಾದ ರಿಯಲ್ ಎಸ್ಟೇಟ್ ಧಣಿಗಳ ಬುಡಕ್ಕೋ ...ದ್ದರೆ ಅದನ್ನೊಂದು ಹುಡುಗಾಟಿಕೆಯೆನ್ನಬಹುದಿತ್ತು. ...ವರೆ ಹೆಬ್ಬೆಟ್ಟು ಮಂಜನ ಕೈ ಈಗ ತಡವಿರುವುದು ...ರ್ನಾಟಕದ ದೈತ್ಯ ಲ್ಯಾಂಡ್ ಡೀಲರ್ ಕಮ್ ಬಿಲ್ಡರ್ ...ಯಾನಂದ ಪೈಯನ್ನು.

ಸೆಂಚುರಿ ಡೆವಲಪರ್ಸ್ ಧಣಿ, ಬೆಂಗಳೂರು ಸುತ್ತಮುತ್ತ ...ಮ್ಮಯೆಂದರೂ ಐದು ಸಾವಿರ ಎಕರೆಗಳಷ್ಟು ಭೂಮಿ ...ಖರೀದಿಸಿಟ್ಟುಕೊಂಡ ದೈತ್ಯ ಆ ಕಾಲದಿಂದಲೂ ಕರ್ನಾಟ... ...ದ ಪ್ರಮುಖ ರಾಜಕಾರಣಿಗಳಿಂದ ಹಿಡಿದು ಪುಡಿ ...ಚಾಯ್ತಿ ಸದಸ್ಯನ ತನಕ ಸಂಭಾಳಿಸಿಕೊಂಡೇ ಬಂದ ...ಲರ್, ಮಣಿಪಾಲ ವೀವಿಯ ಸಿಂಡಿಕೇಟ್ ಸದಸ್ಯ ...ತಿಷ್ಠಿತ ಬಿಎಂಎಸ್ ಕಾಲೇಜಿನ ಟ್ರಸ್ಟಿ ಮತ್ತು ಅನೇಕಾನೇಕ ...ಟೇಜ್‌ಗಳ, ಹೋಟೆಲುಗಳ ಪೈ ಸಾಮ್ರಾಜ್ಯವೆಂದರೆ ...ಮ ಕಮ್ಮಿಯೆಂದರೂ 10 ಸಾವಿರ ಕೋಟಿಗಳ ದೈತ್ಯ ...ಬಿಲ.

ಆ ಕಾಲಕ್ಕೇ ರಾಜಕೀಯ ವಲಯದಲ್ಲಿ ಕಲ್ಲೋಲ ...ಬ್ಬಿಸಿದವನು ದಯಾನಂದ ಪೈ. ಹೆಗಡೆ ಮುಖ್ಯ...ಮಂತ್ರಿಯಾಗಿದ್ದಾಗ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ಮೂಲಕ ಪೈ ನಡೆಸಿದ ಲ್ಯಾಂಡ್ ಗೋಲ್ ಮಾಲ್, ಪೈ ...ರ್ಜಿಗೆ ಬಿದ್ದು ಹೆಗಡೆ ಕೆಎಸ್‌ಎಸ್‌ಐಡಿಸಿ ಭೂಹಗರಣಕ್ಕೆ ...ರಣರಾದದ್ದು, ತದನಂತರ ಗ್ರೀನ್ ಬೆಲ್ಟ್ ಹಗರಣದ ಮೂಲಕ ಪೈ ಕೋಟಿಗಟ್ಟಲೇ ಬೆಲೆಬಾಳುವ ಭೂಮಿ ...ಚಿದ್ದು ಇತಿಹಾಸ. ಸದ್ಯ ಯಡ್ಡಿಯಿಂದ ಹಿಡಿದು ...ಂಗ್ರೆಸ್ ನಾಯಕ ದೇಶಪಾಂಡೆಯ ತನಕ, ಮಾಜಿ ಮುಖ್ಯಮಂತ್ರಿ ಮತ್ತು ಹಾಲಿ ವಿದೇಶಾಂಗ ಮಂತ್ರಿ ...ಸ್.ಎಂ. ಕೃಷ್ಣರಿಂದ ಮೊದಲಾಗಿ ಕೇಂದ್ರ ರೈಲ್ವೇ ಮಂತ್ರಿ ...ಎಚ್. ಮುನಿಯಪ್ಪರವರೆಗೂ ದಯಾನಂದ ಪೈಗೆ ...ಟಸ್ಥಿಕೆಯಿದೆ ಮತ್ತು ಬಹುತೇಕ ಪ್ರಭಾವಿ ರಾಜಕಾರಣಿಗಳ ...ಪದ ದುಡ್ಡು ದಯಾನಂದ ಪೈನ ರಿಯಲ್ ಎಸ್ಟೇಟ್ ...ವಹಾರದಲ್ಲಿ ಸೊತ್ತಾಗಿ ಹೆಪ್ಪುಗಟ್ಟಿದೆ. ದೇವನಹಳ್ಳಿ, ...ದೊಡ್ಡಬಳ್ಳಾಪುರ, ಏರ್‌ಪೋರ್ಟ್ ಸುತ್ತಮುತ್ತ ಹೊಸೂರು ...ಸ್ತೆ ಸರ್ಜಾಪುರ, ಯಲಹಂಕ ಇತ್ಯಾದಿ ಏರಿಯಾಗಳಲ್ಲಿ ...ದಯಾನಂದ್ ಪೈ ಗ್ಯಾಂಗ್ ಬಡರೈತರ ಮೇಲೆ ನಡೆಸುತ್ತಿರುವ ...ದೌರ್ಜನ್ಯ ಅಟ್ಟಹಾಸಗಳ ಬಗ್ಗೆ ತನಿಖೆಯಾದರೆ ಅದಕ್ಕೊಂದೇ ...ಪ್ರತ್ಯೇಕ ಆಯೋಗವೊಂದನ್ನು ರಚಿಸಬೇಕಾಗುತ್ತದೆ. ಮಾಜಿ ...ಮಂತ್ರಿಯೊಬ್ಬರ ಜೊತೆ ಸೇರಿ ಜಿಯಾವುಲ್ಲಾ ಷರೀಫ್ ...ಎಂಬ ಬಿಲ್ಡರ್‌ಗೆ ಟೋಪಿ ಹಾಕಿದ್ದು, ಬಂಡಿಕೊಡಿಗೇನಹಳ್ಳಿ ...ಯಲ್ಲಿ ಬಡದಲಿತರ ಭೂಮಿ ಕಬಳಿಸಿ ಇವತ್ತಿಗೂ ಆ ...ದಲಿತರೆಲ್ಲ ಕೋರ್ಟಿಗೆ ಅಲೆಯುವಂತೆ ಮಾಡಿದ್ದು, ...ಂಕಟಾಲದ ನೂರಾರು ಬಡದಲಿತರ ಬದುಕಿಗೆ ಬೆಂಕಿಯಿ... ...ಲ್ಲಿ ರೈಲ್ವೇ ಮಂತ್ರಿ ಕೆ.ಎಚ್. ಮುನಿಯಪ್ಪನ ಜೊತೆ ...ಸೇರಿ ಇವತ್ತಿಗೂ ಹಾವಳಿಯಿಡುತ್ತಿರುವುದು-ಹೀಗೆ ಪಟ್ಟಿ ...ಮಾಡುತ್ತಾ ಹೋದರೆ ದಯಾನಂದ ಪೈ ಮತ್ತಾತನ ಸೆಂಚುರಿ ...ಡೆವಲಪರ್ಸ್ ಮೂಲಕ ನಡೆದ ನೆಲಗಳ್ಳತನದ್ದೇ ಪ್ರತ್ಯೇಕ ...ಕೋಟಿ ಕಾಂಡವಾಗುತ್ತದೆ.

...ಮಂತ್ರಿ, ಪೂರ್ವಂಕರ, ರಹೇಜಾ, ರಂಕಾ, ಗೋಪಾಲನ್ ...ತ್ಯಾದಿ ಹೊರರಾಜ್ಯದ ಡೆವಲಪರ್‌ಗಳನ್ನು, ಲೋಕಲ್ ...ದಾರಿಗಳೋ ಸಂಘಟನೆಗಳೋ ಸರೀಸಾಗಿ ಎದುರಿಸ ...ದುದು. ಆದರೆ ಪೈ, ಸ್ಕೈಲು ಹಾಗಲ್ಲ, ಶುರುವಿನಲ್ಲಿ

ರೈತರಿಗೆ ಪುಡಿಕಾಸು ಕೊಟ್ಟು ಮಾರಾಟದ ಅಗ್ರಿಮೆಂಟ್ ಹಾಕಿಕೊಳ್ಳುತ್ತಾನೆ. ಕ್ರಮೇಣ ಅದನ್ನೇ ಮುಂದಿಟ್ಟುಕೊಂಡು ಅಕ್ಕಪಕ್ಕದ ಜಮೀನುಗಳನ್ನು ಸುತ್ತುವರಿಯುತ್ತಾನೆ. ಇನ್ನೂ ಕೆಲವೆಡೆ ಯಾವುದೋ ಕಾಲಕ್ಕೆ ಸತ್ತ ತಂದೆ, ತಾಯಂದಿರ ಸಹಿಯನ್ನೇ ಫೋರ್ಜರಿ ಮಾಡಿ ನೆಲದೋಚುತ್ತಾನೆ.


ರವಿ ಪೂಜಾರಿ

ಪೈ ವಿಷಯದಲ್ಲಿ ರೌಡಿಗಳಿಗಿಂತಲೂ ಪೊಲೀಸರೇ ರೈತರ ವಿರುದ್ಧ ಹೆಚ್ಚು ದೌರ್ಜನ್ಯಕ್ಕಿಳಿಯುತ್ತಾರೆ. ಯಾವ ಸರ್ಕಾರ ಬಂದರೂ ಯಾರೇ ಮುಖ್ಯಮಂತ್ರಿಯಾದರೂ ತನ್ನ ರಿಯಲ್ ಎಸ್ಟೇಟ್ ಲೂಟಿಗೆ ಯಾವುದೇ ಕುಂದುಂಟಾಗದ ಹಾಗೆ ಚಾಣಾಕ್ಷ ತಂತ್ರಗಾರಿಕೆಯಿಂದಲೇ ದೋಚುತ್ತ ಬಂದವನು ಪೈ. ಮೊನ್ನೆ ಅಂದರೆ ಅಕ್ಟೋಬರ್ 16 ರ ಮಂಗಳವಾರ ಸಂಜೆ ವಸಂತನಗರದ ಮೌಂಟ್ ಕಾರ್ಮೆಲ್ ಕಾಲೇಜ್ ಎದುರಿಗಿರುವ ತನ್ನ ಸೆಂಚುರಿ ಡೆವಲಪರ್ಸ್ ಅಡ್ಡೆಯಿಂದ ಬಸವನಗುಡಿಯ ಬಿಎಂಎಸ್ ಕಾಲೇಜಿನತ್ತ ಬಂದ ದಯಾನಂದ ಪೈಗೆ ಮಾರ್ಗಮಧ್ಯೆಯೇ ಹೆಬ್ಬೆಟ್ಟು ಮಂಜನ ಫೋನ್ ಬಂದಿದೆ.

ದೇವನಹಳ್ಳಿ ಏರ್‌ಪೋರ್ಟ್ ಪಕ್ಕದ ಜಮೀನೊಂದರ ವಿಷಯ ಎತ್ತಿದ ಹೆಬ್ಬೆಟ್ಟು ತನ್ನ ಹೆಸರನ್ನು ಹೇಳಿಕೊಂಡಿದ್ದಾನೆ. ಇತ್ತ ಪೈ ಏನೂ ಗೊತ್ತಿಲ್ಲದವನಂತೆ ಆ ಜಮೀನು ತನ್ನದಲ್ಲವೇ ಅಲ್ಲ ಎಂದಿದ್ದಾನೆ. ಅದಕ್ಕೆ ಪ್ರತಿಯಾಗಿ ಮಂಜ 'ಎಲ್ಲಾ ನಾಟಕ ಆಡ್ತೀಯಾ? ಒಳ್ಳೇ ಮಾತಿಗೆ ನೀನು ಜಗ್ಗೋ ನನ್ಮಗ ಅಲ್ಲ' ಎಂದಿದ್ದೇ ತನ್ನ ಫೋನ್ ಕಟ್ ಮಾಡಿದ್ದಾನೆ. ಆ ಹೊತ್ತಿಗಾಗಲೇ ಲಾಲ್‌ಬಾಗ್ ವೆಸ್ಟ್‌ಗೇಟಿನತ್ತ


ದಾಳಿ ನಡೆದ ಕಾರು

ಬರುತ್ತಿದ್ದ ಪೈನ ಐಷಾರಾಮಿ ಬೆಂಟ್ಲೇ ಕಾರಿನ ಹಿಂಭಾಗಕ್ಕೆ ಏನೋ ಬಡಿದು ಸದ್ದಾದಂತಾಗಿದೆ. ತಕ್ಷಣವೇ ಕಾರನ್ನು ಬದಿಗೆ ನಿಲ್ಲಿಸಿ ಇಳಿದು ನೋಡಿದರೆ ಹಿಂಭಾಗದ ಗಾಜೇ ತೂತಾಗಿತ್ತು!

ಎರಡು ಬೈಕುಗಳಲ್ಲಿ ಹೆಲ್ಮೆಟ್ ಧರಿಸಿ ಬಂದಿದ್ದ ನಾಲ್ವರು ಹಂತಕರು ಪೈ ನೋಡನೋಡುತ್ತಿದ್ದಂತೆಯೇ ರಿವಾಲ್ವರ್‌ನಿಂದ ಫೈರ್ ಮಾಡಿದ್ದರು!


ಇಷ್ಟಾಗಿದ್ದೇ ಪೈ ತನ್ನ ಪಾಡಿಗೆ ತಾನಿದ್ದುಬಿಟ್ಟಿದ್ದ. ಆದರೆ ಹೆಬ್ಬೆಟ್ಟು ಮಂಜು ಸುಮ್ಮನಾಗಲಿಲ್ಲ. ತಕ್ಷಣವೇ ಟೀವಿಯೊಂದರ ಕ್ರೈಮ್ ವರದಿಗಾರನಿಗೆ ಫೋನ್ ಮಾಡಿದ್ದಾನೆ. "ಹೌದು ದಯಾನಂದ ಪೈ ಕಾರಿನ ಮೇಲೆ ಫೈರ್ ಮಾಡಿಸಿದ್ದೇ ನಾನು. ಅವನು ನೂರಾರು ಬಡವರಿಗೆ ಮೋಸ ಮಾಡಿದ್ದಾನೆ. ನನ್ನ ಜಮೀನನ್ನೂ ಕಬಳಿಸಿದ್ದಾನೆ. ಇದು ಆತನಿಗೆ ಎಚ್ಚರಿಕೆ ಮಾತ್ರ. ಈಗಲೂ ಬುದ್ಧಿ ಕಲಿಯದೇ ಹೋದರೆ ಅವನನ್ನು ಮುಗಿಸೋದು ಗ್ಯಾರಂಟಿ....!" ಎಂದೆಲ್ಲ ಡೈಲಾಗ್ ಹೊಡೆದದ್ದೇ ಫೋನಿಟ್ಟಿದ್ದಾನೆ.

ಅಲ್ಲಿಗೆ ಇದು ಹೆಬ್ಬೆಟ್ಟು ಮಂಜನದ್ದೇ ಕೃತ್ಯ ಎಂಬ ಬಗ್ಗೆ ಯಾರಿಗೂ ಅನುಮಾನಗಳುಳಿಯಲಿಲ್ಲ. ಆದರ ಉದ್ದೇಶ ಮಾತ್ರ ಯಾರಿಗೂ ಅರ್ಥವಾಗಲಿಲ್ಲ. ಹಾಗೊಮ್ಮೆ ಪೈಯನ್ನು ಮುಗಿಸಲೇಬೇಕು ಎಂದಿದ್ದರೆ ಮಂಜನಿಗದು ದೊಡ್ಡ ಸಂಗತಿಯೇನಲ್ಲ. ಕೊಲ್ಲುವುದೇ ಉದ್ದೇಶವಾಗಿದ್ದರೆ ಟೀವಿ ಚಾನಲ್ಲುಗಳಿಗೆ ಫೋನ್ ಮಾಡಿ ಇದು ತನ್ನದೇ ಕೃತ್ಯವೆಂದು ಹೇಳುತ್ತಲೂ ಇರಲಿಲ್ಲ. ಇದರರ್ಥ ಮಂಜನ ಉದ್ದೇಶ ಪೈನಂಥ ದೈತ್ಯನನ್ನು ಬೆದರಿಸಿ ಇತರೇ ಖದೀಮರಿಂದ ರೊಕ್ಕ ಸುಲಿಯುವುದು!

ಹಾಗೊಮ್ಮೆ ಪೈ ಬಗ್ಗಲಿಲ್ಲ ಎಂದರೆ ಯಾವುದೇ ಮುಲಾಜಿಲ್ಲದೆ ಮುಗಿಸುವುದಕ್ಕೂ ಆತ ಅಣಿಯಾಗಿದ್ದ ಎಂಬುದು ಪೊಲೀಸರ ಲೆಕ್ಕಾಚಾರ. ಅಂಥದ್ದೊಂದು ಏರ್ಪಾಡು ಮಾಡಿಕೊಂಡೇ ದೇಶ ಬಿಟ್ಟವನು ಹೆಬ್ಬೆಟ್ಟು ಮಂಜ.

ಚಿತ್ರದುರ್ಗದ ಹಿರಿಯೂರು ಸಮೀಪದ ಜವಗೊಂಡನಹಳ್ಳಿಯ ಡಾಬಾಕ್ಕೆ ನುಗ್ಗಿದ್ದೇ ಪಾತಕಿ ಕೊರಂಗುನನ್ನು ಅರೆಜೀವ ಮಾಡಿದ ಹೆಬ್ಬೆಟ್ಟು ಆ ಕಾಲಕ್ಕೆ ಮುಲಾಮನ ಶಿಷ್ಯ. ಮುಂದೆ ಜೈಲು ಸೇರಿದ ಮಂಜನನ್ನೇ ಮುಗಿಸಲು ಕೊರಂಗು ಏನೆಲ್ಲಾ ಬಾಧೆ ಬಿದ್ದನಾದರೂ ಅದು ಫಲ ಕೊಡಲಿಲ್ಲ. ತನ್ನ ವಿರುದ್ಧದ ಒಂದೊಂದೇ ಕೇಸನ್ನು ಖುಲಾಸೆ ಮಾಡಿಸಿಕೊಂಡು ಜಾಮೀನಿನ ಮೇಲೆ ಹೊರಬಿದ್ದವನು ಈ ಬಾರಿ ದೊಡ್ಡ ಪ್ಲಾನ್ ಇಟ್ಟುಕೊಂಡೇ ಮುಂಬಯಿ ಸೇರಿಕೊಂಡ. ಅಲ್ಲಿಂದ ಉಪಾಯವಾಗಿ ನೇಪಾಳಕ್ಕೆ ಹೋಗಿದ್ದಾನೆ. ಅಲ್ಲಿಂದ ನೇರವಾಗಿ ಥೈಲ್ಯಾಂಡ್ ಸೇರಿಕೊಂಡಿದ್ದಾನೆ. ಬಹುಶಃ ಅಲ್ಲೇ ಆತನಿಗೆ ರವಿ ಪೂಜಾರಿ ಜೊತೆ ಲಿಂಕ್ ಕುದುರಿದೆ.

ರವಿ ಪೂಜಾರಿಯ ಕರ್ನಾಟಕದ ಅನುಯಾಯಿಗಳ ಪೈಕಿ ಒಂದಿಬ್ಬರು ಈ ಹಿಂದೆಯೇ ಜೈಲಲ್ಲಿ ಮಂಜನಿಗೆ ಪರಿಚಯವಾಗಿರಬೇಕು. ಈ ಪೈಕಿ ಒಂದಿಬ್ಬರು ಸದ್ಯ


ಹೆಬ್ಬೆಟ್ಟು ಮಂಜ

ಮಂಜನಿಗೆ ಥೈಲ್ಯಾಂಡ್‌ನ ಬ್ಯಾಂಕಾಕ್‌ನಲ್ಲಿ ಆಶ್ರಯ ಕಲ್ಪಿಸಿರಲಿಕ್ಕೂ ಸಾಕು. ಆದರೆ ರವಿ ಪೂಜಾರಿಯಂತೆ ಮಂಜ ಹಿಮ್ಮತ್ತುದಾರನಲ್ಲ. ಪೊಲೀಸರಿಂದ ಎನ್‌ಕೌಂಟರಾಗದೆ ಬದುಕುಳಿದರೇನೇ ಆತನ ಅದೃಷ್ಟ. ಪೈನಂಥ ದೈತ್ಯನ ಮೇಲೆ ಕೈಯಿಟ್ಟರೆ ಆಗುವ ಪರಿಣಾಮವೂ ಆತನಿಗೆ ಗೊತ್ತಿದೆ. ಗೊತ್ತಿದ್ದೂ ಇಂಥದೊಂದು ದುಸ್ಸಾಹಸಕ್ಕೆ ಮಂಜ ಕೈ ಹಾಕುತ್ತಾನೆಂದರೆ ಅದರ ಹಿಂದಿರುವವನೂ ರವಿ ಪೂಜಾರಿಯೇ. ಇಲ್ಲಿಗೆ ಮೂರು ತಿಂಗಳ ಹಿಂದೆಯೇ ರವಿ ಪೂಜಾರಿಯಿಂದ ಪೈ ತಮ್ಮ ಸತೀಶ್ ಪೈಗೆ ಬೆದರಿಕೆ ಕರೆ ಬಂದಿತ್ತಂತೆ. ರವಿ ಪೂಜಾರಿ ಬಗ್ಗೆ, ಆತ ಬೆಂಗಳೂರಿನ ಬಿಲ್ಡರುಗಳನ್ನು ಬೆದರಿಸುತ್ತಿರುವುದರ ಬಗ್ಗೆ ಮೊದಲೇ ಅರಿತಿದ್ದ ಪೈ ಈ ಬಗ್ಗೆ ಬಾಯೇನಾದರೂ ಬಿಟ್ಟರೆ ಎಲ್ಲಿ ತನ್ನ ಹೆಸರು ಕೆಡುತ್ತೋ ಎಂದು ಅದನ್ನು ಯಾರಲ್ಲೂ ಹೇಳಿಕೊಳ್ಳಲಿಲ್ಲ.

ತಮ್ಮ ಸತೀಶ್ ಪೈ ಮೂಲಕ ಸದ್ದಿಲ್ಲದೇ ರವಿ ಪೂಜಾರಿಯ ಲೋಕಲ್ ಏಜೆಂಟನಿಗೆ ಎರಡು ಕೋಟಿ ಮುಟ್ಟಿಸಿದ ದಯಾನಂದ ಪೈ ಪೀಡೆ ತಪ್ಪಿದರೆ ಸಾಕಪ್ಪಾ ಎಂಬಂತೆ ಮೌನ ವಹಿಸಿದ್ದ. ಇದಾದ ತಿಂಗಳ ನಂತರ ತನ್ನ ಪರಮಾಪ್ತ ಪೊಲೀಸ್ ಅಧಿಕಾರಿಯೊಬ್ಬರ ಬಳಿ ನಡೆದ ಸುಲಿಗೆಯ ಬಗ್ಗೆ ಬಾಯಿಬಿಟ್ಟಾಗಲೇ ಬೆಂಗಳೂರು ಪೊಲೀಸರಿಗೆ ರವಿ ಪೂಜಾರಿಯ ರಹಸ್ಯ ಕಾರ್ಯಾಚರಣೆ ಗೊತ್ತಾಗಿದ್ದು. ಹಾಗೇ ಸದ್ದಿಲ್ಲದೆ 2 ಕೋಟಿ ಕಿತ್ತ ರವಿ ಪೂಜಾರಿ ರುಚಿ ಹತ್ತಿದ ಹುಲಿಯಂತೆ ಈಗ ತನ್ನ ಬಂಟನನ್ನು ಛೂಬಿಟ್ಟಿದ್ದಾನೆ.

ರವಿ ಪೂಜಾರಿಯಿಂದಲೇ ಪೈನ ನಂಬರ್, ವಿಳಾಸ ಇತ್ಯಾದಿ ವಿವರಗಳನ್ನು ಪಡೆದ ಹೆಬ್ಬೆಟ್ಟು ಮಂಜ ಹಿಂದೆ ಒಂದೆರಡು ಬಾರಿ ಸೂಕ್ಷ್ಮವಾಗಿ ವಾರ್ನ್ ಮಾಡಿದ್ದ. ಅದಕ್ಕೂ ಜಗದೇ ಹೋದಾಗ ಕಳೆದ ಮಂಗಳವಾರ ಶಾಕ್ ಟ್ರೀಟ್‌ಮೆಂಟ್ ಒಂದಕ್ಕೆ ಕೈಯಿಟ್ಟಿದ್ದಾನೆ. ಮೊದಲೇ ಫೋನ್ ಮಾಡಿ ಎಚ್ಚರಿಸಿದ್ದಾನೆ. ಅದಕ್ಕೆ ಪ್ರತಿಯಾಗಿ ಏನೂ ಗೊತ್ತಿಲ್ಲದವನಂತೆ ಪೈ ಅದು ನಂದಲ್ಲ, ನಂದಲ್ಲ ಎಂದು ನುಣುಚಿಕೊಳ್ಳಲು ಯತ್ನಿಸಿದ್ದಾನೆ. ಇನ್ನು ಆಸಾಮಿ ಜಗ್ಗಲಾರ ಎಂಬುದು ಮೊದಲೇ ಗೊತ್ತಿತ್ತೇನೊ, ಹಿಂಬಾಲಿಸಿ ಬರುತ್ತಿದ್ದ ಬೈಕ್ ಗ್ಯಾಂಗಿಗೆ ಇಷಾರೆ ಕೊಟ್ಟಿದ್ದೇ ಪೈ ಕಾರಿನ ಮೇಲೆಯೇ ಫೈರ್ ಮಾಡಿಸಿದ್ದಾನೆ. ನಂತರ ತಾನೇ ಟೀವಿ ವರದಿಗಾರನಿಗೆ ಫೋನ್ ಮಾಡಿ ವಿಷಯ ಮುಟ್ಟಿಸಿದ್ದಾನೆ.

ಸದ್ಯ ಮಂಜನ ಉದ್ದೇಶವಂತೂ ಈಡೇರಿದೆ. ಬಾಕಿ ಪ್ರಶ್ನೆಯೆಂದರೆ ಪೈ ಮಂಜನಿಗೆಂದು ಎಷ್ಟು ಮೊತ್ತ ಕೊಡುತ್ತಾನೆ ಎಂಬುದು. ಕನಿಷ್ಠ ಐವತ್ತು ಲಕ್ಷವಾದರೂ ಗೆಬರದೇ ಬಿಡಲಾರ ಎಂಬುದು ಪೊಲೀಸರ ಲೆಕ್ಕಾಚಾರ. ಆದರೆ ಪೈ ಅಷ್ಟು ಕೊಡುತ್ತಾನಾ? ಅಥವಾ ಪೊಲೀಸರೇ ಮಂಜನಿಗಾಗಿ ಇಂಟರ್‌ಪೋಲ್‌ನ ಮೊರೆ ಹೋಗುತ್ತಾರಾ? ಹೆಬ್ಬೆಟ್ಟು ಮಂಜನ ದುಸ್ಸಾಹಸಕ್ಕೆ ಪೊಲೀಸರ ಉತ್ತರ ಏನಿದ್ದೀತು? ಇನ್ನು ಬೆಂಗಳೂರು ಬಿಲ್ಡರ್‌ಗಳಿಗೆ ನೆಮ್ಮದಿಯಂತೂ ಇಲ್ಲ.

● ರಾ.ಸೋ.

ಫೈರ್ ಮಾಡಿದ್ದು ಬುಲೆಟ್ ರವಿಯ ಹುಡುಗರೆ?

ಬೆಂಗಳೂರಿನ ಮಟ್ಟಿಗೆ ರವಿ ಪೂಜಾರಿಗೆ ಎಂಥ ನೆಟ್‌ವರ್ಕ್ ಇದೆಯೋ ನಿಖರವಾಗಿ ಬಲ್ಲವರಿಲ್ಲ. ಆದರೆ ಹೆಬ್ಬೆಟ್ಟು ಮಂಜ ಹಾಗಲ್ಲ. ಆತನಿಗೆ ಕಾಮಾಕ್ಷಿಪಾಳ್ಯದಿಂದ ಹಿಡಿದು ನಾಗರಬಾವಿ ತನಕ, ಕೆಂಗೇರಿಯಿಂದ ಹಿಡಿದು ಯಲಹಂಕದವರೆಗೂ ತನ್ನದೇ ಹುಡುಗರದೊಂದು ನೆಟ್‌ವರ್ಕ್ ಇದೆ. ಅದಕ್ಕೆ ಕಾರಣನಾದವನು ಹತ ಬುಲೆಟ್ ರವಿ.



ಬುಲೆಟ್ ರವಿ

ಕೊಲೆಯಾಗುವುದಕ್ಕೂ ಮುನ್ನ ಬುಲೆಟ್ ರವಿ ಪಾಲಿಗೆ ಬಲಗೈಯಂತಿದ್ದದ್ದು ಹೆಬ್ಬೆಟ್ಟು ಮಂಜನೆ. ಬದುಕಿದ್ದಷ್ಟೂ ದಿನ ದಯಾನಂದ ಪೈನ ರಿಯಲ್ ಎಸ್ಟೇಟ್ ದಾಹಕ್ಕೆ ಸೆಡ್ಡು ಹೊಡೆಯುತ್ತಲೇ ಬಂದ ಬುಲೆಟ್ ರವಿಯ ಹೆಸ್ನರಘಟ್ಟದ ಸೊತ್ತೊಂದು ದೇವನಹಳ್ಳಿ ಏರ್‌ಪೋರ್ಟ್ ಬಳಿಯಿತ್ತು. ಯಾವುದೋ ಕಾಲಕ್ಕೆ ರೈತರಿಂದ ಅಗ್ರಿಮೆಂಟ್ ಮಾಡಿಸಿಕೊಂಡಿದ್ದ ಪೈ ಅದನ್ನು ಪುಡಿಕಾಸಿಗೆ ದೋಚಲು ಹವಣಿಸುತ್ತಿದ್ದಾಗಲೇ ಪೈ ವಿರುದ್ಧ ಬುಲೆಟ್ ರವಿ ಎಂಟ್ರಿ ಕೊಟ್ಟು ರೈತರ ಪರ ನಿಂತಿದ್ದ. ಅಂಥ ರೈತರ ಕೆಲಮಕ್ಕಳೇ ಕ್ರಮೇಣ ಬುಲೆಟ್ ರವಿ ಗ್ಯಾಂಗಿನಲ್ಲಿ ಕಾಣಿಸಿಕೊಂಡರು.

ಬುಲೆಟ್ ರವಿ ಕೊಲೆಯಾದ ನಂತರ ಆತನ ಇಡೀ ಗ್ಯಾಂಗ್ ಹೆಬ್ಬೆಟ್ಟು ಮಂಜನ ಬೆನ್ನಿಗೆ ನಿಂತಿದೆ. ಯಲಹಂಕದಿಂದ ಹಿಡಿದು ದೇವನಹಳ್ಳಿತನಕ ದೊಡ್ಡಬಳ್ಳಾಪುರದಿಂದ ಶುರುವಾಗಿ ನಂದಿಬೆಟ್ಟದ ತನಕ ವ್ಯಾಪಿಸಿದ್ದ ಬುಲೆಟ್ ರವಿಯ ನೆಟ್‌ವರ್ಕ್ ಅನ್ನು ಜೈಲೊಳಗಿದ್ದುಕೊಂಡೇ ಹೆಬ್ಬೆಟ್ಟು ಮಂಜ ತನ್ನ ನಿಯಂತ್ರಣಕ್ಕೆ ತಂದುಕೊಂಡಿದ್ದ. ಈಗ ಅದೇ ಹುಡುಗರನ್ನು ಛೂಬಿಟ್ಟು ಪೈ ಕಾರಿನ ಮೇಲೆ ಫೈರ್ ಮಾಡಿಸಿದ್ದಾನೆ. ಮುಂದೆ ಇದೇ ನೆಟ್‌ವರ್ಕನ್ನು ಬಳಸಿಕೊಂಡು ಬೇರೆ ಯಾವ್ಯಾವ ಬಿಲ್ಡರುಗಳು-ಲ್ಯಾಂಡ್ ಡೀಲರುಗಳನ್ನು ಬೆದರಿಸುತ್ತಾನೋ ಫೈರ್ ಮಾಡಿಸುತ್ತಾನೋ ಗೊತ್ತಿಲ್ಲ.

ರವಿ ಪೂಜಾರಿಯ ನೆಟ್‌ವರ್ಕ್‌ಗಿಂತಲೂ ಮಂಜನ ನೆಟ್‌ವರ್ಕ್ ಹೆಚ್ಚು ಅಪಾಯಕಾರಿ ಮತ್ತು ಪರಿಣಾಮಕಾರಿ ಎಂಬುದು ಪೊಲೀಸರಿಗೂ ಗೊತ್ತಿದೆ. ಬೆಂಗಳೂರು ಪೊಲೀಸರ ಪಾಲಿಗೆ ಹಿಂದೆ ರೈ ಮುಟ್ಟಿಸಿದ್ದು ಕೊಟ್ಟ ಕಾಟದಷ್ಟೇ ತಲೆನೋವು ಈಗ ಶುರುವಾಗಿದೆ.

ಆದಿಕೇಶವುಲು ಕದ್ದ ಚಿನ್ನದ ಮೂಲವೇನು?



ಆದಿಕೇಶವುಲು ನಾಯ್ಡು

ಬೆಂಗಳೂರಿನಲ್ಲಿ ಕಳ್ಳತನಗಳು ಮಾಮೂಲಿ ವಿಷಯ. ಆದರೆ ಕಳೆದವಾರ ಪತ್ತೆಯಾದ ಕಳ್ಳತನದ ಪ್ರಕರಣ ಬೆಂಗಳೂರಿನ ಚರಿತ್ರೆಯಲ್ಲೇ ವಿನೂತನವಾದದ್ದು!

ಒಡವೆಗಳನ್ನು ಮಾರಾಟ ಮಾಡುತ್ತಿದ್ದ ಅನುಮಾನಾಸ್ಪದ ವ್ಯಕ್ತಿಯೊಬ್ಬನನ್ನು ಕೋಲಾರ ಪೊಲೀಸರು ಬಂಧಿಸಿದರು. ಟ್ರೀಟ್‌ಮೆಂಟ್ ನೀಡಿದಾಗ ಹೊರಬಿದ್ದ ಸಂಗತಿಯೇನೆಂದರೆ ಬೆಂಗಳೂರಿನ ಸದಾಶಿವನಗರದ ಶ್ರೀಮಂತ ರೊಬ್ಬರ ಮನೆಯಲ್ಲಿ ಮನೆಗೆಲಸ ಮಾಡುತ್ತಿರುವ ಬಂಧಿತನ ಮಂಗಳಮುಖಿ ಸೋದರಿ ಕದ್ದು ತಂದ ಒಡವೆಗಳಾಗಿದ್ದವು. ಆ ಇಬ್ಬರನ್ನೂ ಮತ್ತಷ್ಟು ವಿಚಾರಣೆಗೆ ಒಳಪಡಿಸಿದಾಗ ಕಳೆದ ಮೂರು ವರ್ಷಗಳಿಂದ ಸುಮಾರು 2-3 ಕೋಟಿ ಮೌಲ್ಯದ ಭಾರೀ ಒಡವೆಗಳನ್ನು ಕದ್ದಿರುವುದು ಕಂಡುಬಂತು. ಆ ಮಾಹಿತಿ ಮೇರೆಗೆ ಪೊಲೀಸರು ಒಂದೂವರೆ ಕೋಟಿ ಮೌಲ್ಯದ ಒಡವೆಗಳನ್ನು ವಶಪಡಿಸಿಕೊಂಡರು. ಇದೆಲ್ಲಾ ಮಾಮೂಲಿ ಬಿಡಿ.

ಆದರೆ ಈ ಕೇಸಿನ ವಿಶೇಷವೇ ಬೇರೆ. ಆ ಒಡವೆಗಳ ಮಾಲಿಕರೆನಿಸಿಕೊಂಡವರ ಮನೆಗೆ ಭೇಟಿಕೊಟ್ಟ ಪೊಲೀಸರಿಗೆ ಆಶ್ಚರ್ಯವೋ ಆಶ್ಚರ್ಯ. ಎರಡು ವರ್ಷಗಳಿಂದ ತಮ್ಮ ಒಡವೆಗಳು ಕಳೆದಿರುವ ವಿಷಯ ಮಾಲಿಕರ ಗಮನಕ್ಕೇ ಬಂದಿರಲಿಲ್ಲ, ಅದೂ ಸಣ್ಣಪುಟ್ಟ ಒಡವೆಗಳಲ್ಲ, ಕೋಟಿಗಟ್ಟಲೆ ಬೆಲೆಬಾಳುವ ಒಡವೆಗಳು! ಕೋಟಿ ಮೌಲ್ಯದ ಒಡವೆಗಳಿಗೇ ಲೆಕ್ಕವಿಟ್ಟಿಲ್ಲವೆಂದರೆ ಆ ಮನೆಯಲ್ಲಿ ಎಷ್ಟು ಒಡವೆಗಳು ಇದ್ದಿರಬಹುದು? ಆ ಒಡವೆಗಳ ಹಿನ್ನೆಲೆ ಏನಿರಬಹುದು?

ಪೊಲೀಸರ ಕೋರಿಕೆಯಂತೆ ಮನೆಯೊಡತಿ ಶ್ರೀಮತಿ ಸತ್ಯಪ್ರಭ ಕೊನೆಗೊಂದು ಕಂಪ್ಲೈಂಟ್ ನೀಡಿದಳು. ಅದರ ಪ್ರಕಾರ "ತಲಾ 35 ಲಕ್ಷ ಬೆಲೆಯ ವಜ್ರದ ಹರಳಿರುವ ಮೂರು ಬಳೆಗಳು, ಒಂದೂವರೆ ಕೆಜಿ ತೂಕದ ಬಂಗಾರದ ಒಡವೆಗಳು, 6 ಕೆಜಿ ಬೆಳ್ಳಿಯ ಒಡವೆಗಳು ಇದ್ದವು. ಎಲ್ಲಕ್ಕಿಂತ ಮುಖ್ಯವಾಗಿ ಒಂದು ಬಂಗಾರದ ಕಿರೀಟವೂ" ಕಳವಾಗಿತ್ತು. ಏನು? ಬಂಗಾರದ ಕಿರೀಟವೇ? ಎಂದು ಆಶ್ಚರ್ಯದಿಂದ ಯಾರಾದರೂ ಪ್ರಶ್ನಿಸಬಹುದು. "ತನ್ನ ಗಂಡನಿಗೆ ಯಾರೋ ಸನ್ಮಾನ ಮಾಡಿ ಈ ಕಿರೀಟ ತೊಡಿಸಿದ್ದರು" ಎಂಬುದು ಆಕೆಯ ವಿವರಣೆ. ಅದು ಒತ್ತಟ್ಟಿಗಿರಲಿ.

ನಮ್ಮ ಮನೆಗಳಲ್ಲಿ ಹಳೆಯ ಚಪ್ಪಲಿ ಕಳೆದರೂ ಹುಡುಕಾಡಲು ಶುರುಮಾಡುತ್ತೇವೆ. ಹೀಗಿರುವಾಗ ಕೋಟ್ಯಾಂತರ ರೂಪಾಯಿ ಬೆಲೆಬಾಳುವ ಒಡವೆಗಳು ಕಳವಾಗಿ ವರ್ಷಗಟ್ಟಲೆ ಆದರೂ ಮನೆಯವರಾರಿಗೂ ಅದರ ಬಗ್ಗೆ ಗಮನವೇ ಇಲ್ಲ ಎಂದರೆ ಏನೆನ್ನಬೇಕು? ಅದರಲ್ಲೂ ಚಿನ್ನದ ಕಿರೀಟ ಕಳೆದುಕೊಂಡರೂ ಡೋಂಟ್ ಕೇರ್ ಅಂದರೆ ಏನರ್ಥ?!!

ಇಂಥಾ ಮಹಾನುಭಾವ ಒಬ್ಬ ಸಾರಾಯಿ ದೊರೆ, ಹಲವು ಡಿಸ್ಟಿಲರಿಗಳ ಮಾಲಿಕ, ರಿಯಲ್ ಎಸ್ಟೇಟ್ ಟೈಕೂನ್, ಮೆಡಿಕಲ್, ಇಂಜಿನಿಯರಿಂಗ್ ಕಾಲೇಜುಗಳ ಒಡೆಯ, ತೆಲುಗುದೇಶಂ ಪಕ್ಷದಿಂದ ಗೆದ್ದು ಲೋಕಸಭಾ ಎಂ.ಪಿ.ಯಾಗಿದ್ದವರು. ಹಾಲಿ ಕಾಂಗ್ರೆಸ್‌ನ ತೆಕ್ಕೆಯಲ್ಲಿರುವ ರಾಜಕಾರಣಿ. ಬೆಂಗಳೂರಿನ ಪ್ರತಿಷ್ಠಿತ ಮಲ್ಯ ಆಸ್ಪತ್ರೆಯ ಹೊಸ ಮಾಲಿಕ ಇತ್ಯಾದಿ ಇತ್ಯಾದಿ. ಆತನ ನಾಮಾಂಕಿತ ಶ್ರೀಮಾನ್ ಡಿ.ಕೆ.ಆದಿಕೇಶವುಲು ನಾಯ್ಡು. ಹಾಂ... ಒಂದು ಮುಖ್ಯವಾದ ವಿಷಯ ಮರೆತುಹೋಗಿತ್ತು, ಅದೇ ಕಿರೀಟದ ವಿಷಯ. ಈತನಿಗೆ ಬಂಗಾರದ ಕಿರೀಟ ತೊಡಿಸಲು ಈತ ತಿರುಪತಿ ವೆಂಕಟರಮಣ ಸ್ವಾಮಿಯೇನಲ್ಲ; ಆದರೂ ಇಲ್ಲೊಂದು ಮುಖ್ಯ ಲಿಂಕ್ ಇದೆ. ಈತ ಜಗತ್ತಿನಲ್ಲೇ ಅತಿ ಶ್ರೀಮಂತ ದೇವರಾದ ತಿರುಪತಿ ವೆಂಕಟೇಶ್ವರ ದೇವಸ್ಥಾನದ ಆಡಳಿತ ಮಂಡಳಿಗೆ ಕಳೆದ ಅವಧಿಯಲ್ಲಿ ಚೇರ್ಮನ್ ಆಗಿದ್ದ. ತಿರುಪತಿಯ ಭಕ್ತರು ಅರ್ಪಿಸುವ ಕೋಟಿಗಟ್ಟಲೆ ಹಣಕ್ಕೂ, ಟನ್‌ಗಟ್ಟಳೆ ಒಡವೆಗಳಿಗೂ ಈತನೇ ಉಸ್ತುವಾರಿಯಾಗಿದ್ದ ಎಂಬ ವಿಷಯವನ್ನು ನಾವು ನೆನಪಿಟ್ಟುಕೊಂಡರೆ ಒಳ್ಳೆಯದು.

ಈ ಆದಿಕೇಶವುಲು ತಿರುಪತಿಗೆ ಯಾವ ಘಳಿಗೆಯಲ್ಲಿ ಕಾಲಿಟ್ಟನೋ ಗೊತ್ತಿಲ್ಲ, ಆತ ಅಲ್ಲಿದ್ದಷ್ಟೂ ಕಾಲ ದೇವಸ್ಥಾನ ನಾನಾ ಹಗರಣಗಳ ಕೊಂಪೆಯಾಗಿ ಹೋಗಿತ್ತು. ತಿಮ್ಮಪ್ಪನ ಮರ್ಯಾದೆಯನ್ನು ಬೀದಿಪಾಲು ಮಾಡಿದ ಈ ಘನಂದಾರಿ ಮನುಷ್ಯ ಟಿಟಿಡಿ (ತಿರುಮಲ ತಿರುಪತಿ ದೇವಸ್ಥಾನಮ್) ಟ್ರಸ್ಟ್‌ನ ಅಧಿಪತಿಯಾಗಿದ್ದೇ ಒಂದು ದಗಲ್ಬಾಜಿ ಕತೆ. ಈ ಐನಾತಿ ಆಸಾಮಿಯ ಹುಟ್ಟು ಪೂರ್ವೋತ್ತರಗಳನ್ನು ಕೆದಕುತ್ತಾ ಹೋದಂತೆಲ್ಲಾ ಈತನ ನಾನಾ ಪಂಚರಂಗಿ ಮುಖಗಳ ಪರಿಚಯವಾಗುತ್ತದೆ.





ಶ್ರೀಕೃಷ್ಣದೇವರಾಯನ 500ನೇ ಜಯಂತಿ ಸಮಾರಂಭದಲ್ಲಿ ಆದಿಕೇಶವುಲು ನಾಯ್ಡು.....

ಆಳಾಗಿದ್ದವನು ಅರಸಾಗಿದ್ದು ಹೇಗೆ?

ಆದಿಕೇಶವುಲು ಮೂಲತಃ ಚಿತ್ತೂರು ಜಿಲ್ಲೆಯ ಬಡ ರೈತನ ಮಗ. ಪ್ರಾರಂಭದಲ್ಲಿ ಈತ ಚಿತ್ತೂರಿನ ಡಿಸ್ಟಿಲರಿಯೊಂದರಲ್ಲಿ ಮೆಷಿನ್ ಆಪರೇಟರ್ ಆಗಿ ಕೆಲಸಕ್ಕೆ ಸೇರಿಕೊಂಡ. ಸಾರಾಯಿ ಮತ್ತು ಸೆಕೆಂಡ್ಸ್ ದಂಧೆಗಳು ಅಬ್ಬರಿಸುತ್ತಿದ್ದ ಕಾಲವದು. ಹೀಗಾಗಿ ಸಂಬಳದ ಕೆಲಸಕ್ಕೆ ಗುಡ್‌ಬೈ ಹೇಳಿ ಸೀದಾ ಬೆಂಗಳೂರಿಗೆ ಬಂದು ಸಾರಾಯಿ ಮಾರಾಟ ದಂಧೆ ಶುರುಮಾಡಿ ಮೊದಲನೇ ಮೆಟ್ಟಲಿಗೆ ಕಾಲಿಟ್ಟ. ನಂತರ ಯುಬಿ ಕಂಪನಿಯ ಬಾಟಲ್‌ಗಳನ್ನು ಸರಬರಾಜು ಮಾಡುವ ಡಿಸ್ಟ್ರಿಬ್ಯೂಷನ್ ಪಡೆದುಕೊಂಡು ಮತ್ತೊಂದು ಮೆಟ್ಟಿಲು ಮೇಲೇರಿದ್ದ.

ಎರಡು ಮೂರು ದಶಕಗಳ ಹಿಂದೆ ರಿಯಲ್ ಎಸ್ಟೇಟ್ ದಂಧೆಯಾಗಲಿ, ಗಣಿಧಣಿಗಳ ಲೂಟಿಯಾಗಲಿ ಇರಲಿಲ್ಲ ನೋಡಿ. ಆಗಿನ ಕರ್ನಾಟಕದ ರಾಜಕಾರಣವನ್ನು ನಿಯಂತ್ರಿಸುತ್ತಿದ್ದದ್ದು ಅಬ್ಕಾರಿ ಲಾಬಿ. ಅಂಥಾ ಕಾಲದಲ್ಲಿ ಆದಿಕೇಶವುಲು ಕರ್ನಾಟಕದಲ್ಲಿ ಸಾರಾಯಿ ಗುತ್ತಿಗೆಯನ್ನು ಗಿಟ್ಟಿಸಿಕೊಂಡು ಕೋಟಿಕೋಟಿಗಳನ್ನು ಬಾಚಿದ.

ಹಲವಾರು ಹಗರಣಗಳಲ್ಲೂ ಈತನ ಕೈವಾಡ ಬೆಳಕಿಗೆ ಬಂದಿತ್ತು. ರಾಮಕೃಷ್ಣ ಹೆಗಡೆ ಕಾಲದಲ್ಲಿ 1986ರಲ್ಲಿ ನಡೆದ ಬಾಟ್ಲಿಂಗ್ ಹಗರಣದಲ್ಲಿ ಈ ಆಸಾಮಿಯ ಕೈವಾಡವಿತ್ತು. ಪಿ.ವಿ.ನರಸಿಂಹರಾವ್ ಪ್ರಧಾನಿಯಾಗಿದ್ದ ಕಾಲದಲ್ಲಿ 1993ರಲ್ಲಿ ನಡೆದ ಜೆಎಂಎಂ ಲಂಚ ಹಗರಣದಲ್ಲಿ ಈತನ ಮೇಲೂ ಸಿಬಿಐನವರು ಚಾರ್ಜ್‌ಶೀಟ್ ಜಡಿದಿದ್ದರು. ಹೀಗೆ ಕಾಂಗ್ರೆಸ್ ಪಕ್ಷಕ್ಕೆ ಹತ್ತಿರವಾಗಿದ್ದ ಈತ ಆಂಧ್ರ ಪ್ರದೇಶ್ ಕಾಂಗ್ರೆಸ್ ಸಮಿತಿಯ ಖಜಾಂಚಿಯ ಹುದ್ದೆ ಅಲಂಕರಿಸಿದ್ದ. ಈತನ ರಾಜಕೀಯ ರಂಗಿನಾಟಕ್ಕೆ ಬಲಿಷ್ಠ ಕಮ್ಮ ಜಾತಿಯ ಬೆಂಬಲವೂ ಇತ್ತು. ಜೊತೆಗೆ ದಾನಧರ್ಮಗಳ ಸೋಗು ಹಾಕಿದ.

2004ರ ಲೋಕಸಭಾ ಚುನಾವಣೆಯಲ್ಲಿ ಕಾಂಗ್ರೆಸ್ ಸೋಲುತ್ತದೆ ಎಂದು ತಪ್ಪು ಲೆಕ್ಕಾಚಾರ ಹಾಕಿದ ಆದಿ ತೆಲುಗುದೇಶಂಗೆ ವಲಸೆಹೋದ. ಟಿಡಿಪಿ ಟಿಕೆಟ್ ಮೇಲೆ ಚಿತ್ತೂರಿನಿಂದ ಸ್ಪರ್ಧಿಸಿ ಲೋಕಸಭಾ ಸದಸ್ಯನೂ ಆಗಿಬಿಟ್ಟ. ಆದರೆ ಪಂಚರಂಗಿ ಆದಿಯ ಲೆಕ್ಕಾಚಾರ ತಪ್ಪಾಗಿತ್ತು. ಕೇಂದ್ರದಲ್ಲಿ ಯುಪಿಎ ಅಧಿಕಾರಕ್ಕೆ ಬಂದಿತಲ್ಲದೆ, ಆಂಧ್ರದಲ್ಲೂ ಕಾಂಗ್ರೆಸ್ ಸರ್ಕಾರ ಗದ್ದುಗೆ ಹಿಡಿಯಿತು. ಎಂಪಿಯಾದರೂ ಏನೂ ಗಿಟ್ಟದೆ ಹತಾಶನಾಗಿದ್ದ ಆದಿ ರಿಯಲ್‌ಎಸ್ಟೇಟ್ ಹಾಗೂ ಲಿಕ್ಕರ್ ದಂಧೆಗಳಲ್ಲಿ ಸಂಪೂರ್ಣ ಲೀನವಾದ. 2008ರಲ್ಲಿ ಕೇಂದ್ರ ಸರ್ಕಾರದ ವಿರುದ್ಧ ಚಂದ್ರಬಾಬು ಅವಿಶ್ವಾಸ ಗೊತ್ತುವಳಿ ಮಂಡಿಸಿದರು. ಇದು ಈ ಊಸರವಳ್ಳಿಯ ಪಾಲಿಗೆ ಸುವರ್ಣಾವಕಾಶವಾಗಿ ಹೋಯಿತು. ಕೂಡಲೇ ಬಣ್ಣ ಬದಲಿಸಿದ ಈ ಸಾರಾಯಿ ದೊರೆ ಪಕ್ಷದ ಆದೇಶ ಉಲ್ಲಂಘಿಸಿ, ಯುಪಿಎಗೆ ಮತ ಚಲಾಯಿಸಿ ಕಾಂಗ್ರೆಸ್ ಪಾಳಯಕ್ಕೆ ಜಿಗಿದುಬಿಟ್ಟ. ಈ ಪಕ್ಷದ್ರೋಹಿ ಕೃತ್ಯಕ್ಕೆ ಶಾಸ್ತಿಯಾಗಿ ಚಂದ್ರಬಾಬು ನಾಯ್ಡು ಈತನನ್ನು ಟಿಡಿಪಿಯಿಂದ ಹೊರಗಟ್ಟಿದರು.

ಆದರೆ ಈತನ ಇದೇ ಪಕ್ಷದ್ರೋಹಿ ಕೃತ್ಯಕ್ಕೆ ಕಾಂಗ್ರೆಸ್ಸಿಗರು ಯಾವ ಭಕ್ಷೀಸು ಕೊಡಬೇಕೆಂಬುದು ಮೊದಲೇ ನಿಗದಿಯಾಗಿತ್ತು. ಅದರಂತೆ ಆಂಧ್ರದ ಅಂದಿನ ಮುಖ್ಯಮಂತ್ರಿ ವೈಎಸ್‌ಆರ್ ಈತನನ್ನು ವಜ್ರವೈಢೂರ್ಯ ನಗ ನಾಣ್ಯಗಳು ಝುಣಝುಣಗುಟ್ಟುವ ಜಾಗವೊಂದರ ಅಧಿಪತಿಯಾಗಿ ನೇಮಿಸಿದರು. ಅದೇ ತಿರುಮಲ ತಿರುಪತಿ ದೇವಸ್ಥಾನದ ಚೇರ್ಮನ್ ಹುದ್ದೆ!

ಸಾರಾಯಿ ಗಡಂಗಿನಂತಾದ ತಿರುಪತಿ

ಹೇಳಿಕೇಳಿ ಈ ಪ್ರಭೃತಿ ತಿರುಪತಿ ಸೀಟು ಹಿಡಿದದ್ದು ತಿಮ್ಮಪ್ಪನ ಮೇಲಿನ ಭಕ್ತಿಯಿಂದಲೂ ಅಲ್ಲ; ಅಲ್ಲಿನ ಆಡಳಿತ ಸುಧಾರಣೆ ಮಾಡಿ ಭಕ್ತರಿಗೆ ಅನುಕೂಲ ಮಾಡುವ ಸೇವಾಸಕ್ತಿಯಂತೂ ಮೊದಲೇ ಇರಲಿಲ್ಲ, ಆತನ ಆಸಕ್ತಿ ಏನಿದ್ದರೂ ಎಲ್ಲೆಡೆ ಝುಣಗುಡುತ್ತಿದ್ದ ಕಾಂಚಾಣದ ಮೇಲೆ ಮತ್ತು ಕಣ್ಣುಕುಕ್ಕುತ್ತಿದ್ದ ರಾಶಿರಾಶಿ ಒಡವೆಗಳ ಮೇಲೆ ಎಂಬುದು ಭಕ್ತರ ನೇರ ಆರೋಪ. ಹೀಗಾಗಿ ಈತನ ಕುರುಡು ದರ್ಬಾರಿನಲ್ಲಿ ತಿರುಪತಿ ನಾನಾ ಅವಾಂತರಗಳಿಗೆ ಈಡಾಯಿತು.

ದುಡ್ಡು ಕೊಟ್ಟೋರಿಗೆ ನೇರವಾದ ದರ್ಶನದ ವ್ಯವಸ್ಥೆ ಮಾಡಿಸುವ ವಿಭಿನ್ನ ಸೇವೆಗಳು ಇಲ್ಲಿ ಲಭ್ಯ. ಆ ಟಿಕೆಟ್ ಬೆಲೆ ಸಾವಿರದಿಂದ ಲಕ್ಷಗಳವರೆಗೂ ಇದೆ. ಆದಿಕೇಶವುಲು ಅವಧಿಯಲ್ಲಿ ಇಂಥಾ ಟಿಕೆಟ್‌ಗಳಿಗೆ ಯಾವುದೇ ಲೆಕ್ಕಬುಕ್ಕೂ ಇಲ್ಲದೇ ಸಾರಾಯಿ ಮಾರುವಂತೆ ಕಾಳಸಂತೆಯಲ್ಲಿ ಮಾರಾಟ ಮಾಡಲಾಗುತ್ತಿತ್ತೆಂದು ತನಿಖೆಯಿಂದ ಬಯಲಾಯಿತು.

ದುಡ್ಡು ಸುರಿಯುವ ವಿವಿಐಪಿಗಳೆಂದರೆ ಆದಿಗೆ ಅಚ್ಚುಮೆಚ್ಚು, ಎಲ್ಲಾ ನಿಯಮಾವಳಿಗಳನ್ನು ಗಾಳಿಗೆ ತೂರಿ ವಿಶೇಷ ರಾಜಾತಿಥ್ಯದ ವ್ಯವಸ್ಥೆ ಮಾಡಲೆಂದು ತಾನೇ ಖುದ್ದಾಗಿ ನಿಲ್ಲುತ್ತಿದ್ದ. ಉದಾ:- ಮುಖೇಶ್ ಅಂಬಾನಿಗೆ ದೇವರ ದರ್ಶನ ಮಾಡಿಸಲಿಕ್ಕಾಗಿ ಸಾವಿರಾರು ಬಡಪಾಯಿ ಭಕ್ತಾದಿಗಳನ್ನು ಹತ್ತಾರು ಗಂಟೆಗಳ ಕಾಲ ಕ್ಯೂನಲ್ಲಿ ಕಾಯಿಸಿದ ಕೀರ್ತಿ ಈತನದು.

ಅಧಿಕಾರ ಮದದಲ್ಲಿದ್ದ ಆದಿಕೇಶವುಲುಗೆ ಹುಚ್ಚು ದಿನೇದಿನೇ ಕೆರಳಿ ತಲೆಕೆಟ್ಟ ನಿಯಮಗಳನ್ನು ಜಾರಿಗೆತಂದ. ಭಕ್ತಾದಿಗಳು ಸಣ್ಣ ಮಕ್ಕಳನ್ನು ದೇವಸ್ಥಾನಕ್ಕೆ ಕರೆತರಬಾರದು ಎಂದು ಆದೇಶ ಹೊರಡಿಸಿದ. ಆದರೆ ಈ ಅಮಾಯಕ


ಸಾರಾಯಿ ದೊರೆ ಸಾಮ್ರಾಜ್ಯ

ಈ ಸಾರಾಯಿ ದೊರೆ ನಾನಾ ಉದ್ಯಮಗಳ ಒಡೆಯ. ದಶಕಗಳಿಂದ ಕೆಲಸ ಮಾಡುತ್ತಿರುವ ಹಲವು ಶುಗರ್ ಫ್ಯಾಕ್ಟರಿಗಳು, ಡಿಸ್ಟಿಲರಿಗಳ ಜೊತೆಗೆ ಈ ಬದೀಮನ ಸಾಮ್ರಾಜ್ಯ ವಿಸ್ತರಿಸುತ್ತಲೇ ಇದೆ.

- ಇತ್ತೀಚೆಗೆ ಬೆಂಗಳೂರಿನ ಪ್ರತಿಷ್ಠಿತ ಮಲ್ಯ ಆಸ್ಪತ್ರೆಯನ್ನು 180 ಕೋಟಿಗಳಿಗೆ ಕೊಂಡುಕೊಂಡಿದ್ದಾನೆ. ಈತನ ಗೆಳೆಯ ಮಲ್ಯನ ಜೊತೆ ಕೆಲವು ಜಂಟಿ ವ್ಯವಹಾರಗಳೂ ಇವೆ.
- ಕೇಂದ್ರ ಸರ್ಕಾರದ ಸಹಭಾಗಿತ್ವದೊಂದಿಗೆ ಚಿತ್ತೂರಿನಲ್ಲಿ 600 ಕೋಟಿ ವೆಚ್ಚದ ಒಂದು ಮೆಗಾ ಫುಡ್ ಪಾರ್ಕ್ ಯೋಜನೆ.
- ಚೈತನ್ಯ ಪ್ರಾಪರ್ಟೀಸ್ ಲಿ. ಹೆಸರಿನಲ್ಲಿ ಬೆಂಗಳೂರು, ಚೆನ್ನೈಗಳಲ್ಲಿ ನೂರಾರು ಕೋಟಿಗಳ ರಿಯಲ್ ಎಸ್ಟೇಟ್ ದಂಧೆ.
- ಬೆಂಗಳೂರಿನ ವೈಟ್‌ಫೀಲ್ಡ್‌ನಲ್ಲಿ ಸರ್ಕಾರಿ ಭೂಮಿಯನ್ನು ಒತ್ತುವರಿ ಮಾಡಿ ವೈದೇಹಿ ಮೆಡಿಕಲ್ ಕಾಲೇಜು ಮತ್ತು ಆಸ್ಪತ್ರೆ ಕಟ್ಟಿಕೊಂಡಿದ್ದಾನೆ.
- ಚಿತ್ತೂರಿನಲ್ಲಿ ಶ್ರೀನಿವಾಸ ಇಂಜಿನಿಯರಿಂಗ್ ಕಾಲೇಜು ನಡೆಸುತ್ತಿದ್ದಾನೆ.
- ತಿರುಚಿಯಲ್ಲಿ ಸ್ಟೀಲ್ ಕಾರ್ಖಾನೆಯಿದೆ.
- ಇದರ ಜೊತೆಗೆ ಹಾಸನದಲ್ಲಿ ಅರಣ್ಯನಾಶಕ ವಿದ್ಯುತ್ ಯೋಜನೆಯೊಂದಕ್ಕೆ ಕೈಹಾಕಿ ಜನರ ವಿರೋಧದಿಂದ ನನೆಗುದಿಗೆ ಬದ್ದಿದೆ. (ಈ ಪಟ್ಟಿ ಅಪೂರ್ಣ)

ತಿಮ್ಮಪ್ಪನಿಗೇ ಪಂಗನಾಮ!

ತಿಮ್ಮಪ್ಪನ ಪರಮಭಕ್ತನಾಗಿದ್ದ ಶ್ರೀಕೃಷ್ಣದೇವರಾಯ 1513ರಿಂದ 1521ರ ನಡುವೆ ಒಟ್ಟು ಏಳು ಬಾರಿ ತಿರುಮಲಕ್ಕೆ ಭೇಟಿ ನೀಡಿ ಅಪಾರವಾದ ಉಡುಗೊರೆ ನೀಡಿದ್ದ. ಅದರಲ್ಲಿ ವಜ್ರಖಚಿತ ಹಾರಗಳು, ಕಿರೀಟಗಳು, ಮುತ್ತುರತ್ನಗಳು, ಬಂಗಾರದ ಪೂಜಾಸಾಮಗ್ರಿಗಳು ಏನೆಲ್ಲಾ ಇದ್ದವು. ಆ ಬಗ್ಗೆ ನಾನಾ ಶಾಸನಗಳಲ್ಲಿ, ಗ್ರಂಥಗಳಲ್ಲಿ ದಾಖಲೆಗಳೂ ಇವೆ. ಇವುಗಳ ಇಂದಿನ ಮಾರುಕಟ್ಟೆ ಮೌಲ್ಯ ಸಾವಿರಾರು ಕೋಟಿಗಳು!



2010ರಲ್ಲಿ ಆಂಧ್ರ ಸರ್ಕಾರ ಶ್ರೀಕೃಷ್ಣದೇವರಾಯನ 500ನೇ ಜಯಂತಿಯನ್ನು ಅದ್ದೂರಿಯಾಗಿ ಆಚರಿಸಲು ಮುಂದಾಯಿತು. ಈ 500ನೇ ಉತ್ಸವದ ಸಂದರ್ಭದಲ್ಲಿ ರಾಯರ ಒಡವೆಗಳನ್ನು ಮೆರವಣಿಗೆಯಲ್ಲಿ ಕೊಂಡೊಯ್ದು ಸಾರ್ವಜನಿಕ ಪ್ರದರ್ಶನಕ್ಕಿಟ್ಟು ಅವರ ಧರ್ಮಶ್ರದ್ಧೆಯನ್ನು ಜಗತ್ತಿಗೆ ತಿಳಿಸಬೇಕೆಂದು ಜಿಲ್ಲಾ ಮಂತ್ರಿಯ ನಾಯಕತ್ವದಲ್ಲಿದ್ದ ಉತ್ಸವ ಸಮಿತಿ ತೀರ್ಮಾನಿಸಿತು. ಆದರೆ ಎಲ್ಲರಿಗೂ ಆಘಾತ ಕಾದಿತ್ತು, ಒಡವೆಗಳನ್ನು ತರಲು ಹೋದರೆ ಆ ಅಮೂಲ್ಯ ಒಡವೆಗಳೇ ಮಂಗಮಾಯ! ಟಿಟಿಡಿ ಆಡಳಿತ ಮಂಡಳಿಯನ್ನು ವಿಚಾರಿಸಲಾಗಿ ಅವೆಲ್ಲವನ್ನು ಕರಗಿಸಿ ದೇವರಿಗೆ ಏನೋ ಮಾಡಿಸಿದ್ದೇವೆಂಬ ಸಲೀಸಾದ ಉತ್ತರ!

5 ಶತಮಾನಗಳಿಂದಲೂ ಜತನದಿಂದ ಕಾಪಾಡಿಕೊಂಡು ಬಂದಿದ್ದ, ಚಾರಿತ್ರಿಕ ಮಹತ್ವವಿದ್ದ ಅಮೂಲ್ಯವಾದ ಒಡವೆಗಳು ಹೀಗೆ ಮಂಗಮಾಯವಾಗಿ ಹೋಗಿದ್ದವು.

ಇದರಿಂದ ಆತಂಕಗೊಂಡ ಭಕ್ತರು ಹೈಕೋರ್ಟ್ ಮೆಟ್ಟಲೇರಿದರು. ಉಳಿದಿರುವ ಎಲ್ಲಾ ಒಡವೆಗಳ ನಿಖರವಾದ ತೂಕ ಮತ್ತು ಮೌಲ್ಯಮಾಪನ ಮಾಡಿ, ಸೂಕ್ತ ಬಂದೋಬಸ್ತಿನಲ್ಲಿ ಇಡಬೇಕೆಂದು ಕೋರ್ಟ್ ಆದೇಶಿಸಿತು. ಅದರಂತೆ ಮೌಲ್ಯಮಾಪನ ಮಾಡಿದಾಗಲೂ ಸಂಬಂಧಪಟ್ಟ ಸಮಿತಿ ತನ್ನ ಕೈಚಳಕ ತೋರಿಸಿತ್ತು. ಸಮಿತಿ ನಿಗದಿಪಡಿಸಿದ ಮೌಲ್ಯ 32,000 ಕೋಟಿ. ಆದರೆ ಅದಾದ ಸ್ವಲ್ಪ ದಿನಗಳಲ್ಲೇ ಈ ಒಡವೆಗಳಿಗೆ ವಿಮೆ ಮಾಡಿಸಿದಾಗ ವಿಮಾ ಕಂಪನಿಯವರು ನಿಗದಿಮಾಡಿದ ಮೊತ್ತ 52,000 ಕೋಟಿಗಳು! ಅಂದರೆ ಬರೋಬ್ಬರಿ 20 ಸಾವಿರ ಕೋಟಿಗಳ ವ್ಯತ್ಯಾಸ. ಈ ಧರ್ಮೋದ್ಧಾರಕರು ತಿಮ್ಮಪ್ಪನಿಗೆ ಎಂಥಾ ಭಾರೀ ಪಂಗನಾಮ ಹಾಕುತ್ತಿದ್ದಾರೆ ಎಂಬುದಕ್ಕೆ ಇದಕ್ಕಿಂತ ಬೇರೆ ಸಾಕ್ಷಿ ಬೇಕೆ? ಕಳೆದುಹೋದ ದೇವರ ಒಡವೆಗಳ ಬಗ್ಗೆ ಪ್ರಾಮಾಣಿಕ ತನಿಖೆ ಮಾಡುವ ಅಧಿಕಾರಿ ಯಾರಿದ್ದಾರೆ?

ಭಕ್ತರು ತಮ್ಮ ಕೂಸುಗಳು ಹುಟ್ಟುವ ಮೊದಲೇ ದೇವರಿಗೆ ಮುಡಿ ಕೊಡುತ್ತೇವೆಂದು ಹರಸಿಕೊಂಡು ಮಕ್ಕಳೊಂದಿಗೆ ಬೆಟ್ಟಕ್ಕೆ ಬಂದು ಮುಂಡೆ ಬೋಳಿಸಿಕೊಳ್ಳುವುದು ವಾಡಿಕೆ. ಇದು ನೂರಾರು ವರ್ಷಗಳಿಂದಲೂ ನಡೆದು ಬಂದಿರುವ ಆಚರಣೆ.

ಆದರೆ ಈ ಸಾರಾಯಿ ದೊರೆಯ ವರಸೆಯೇ ಬೇರೆ. "ಮಕ್ಕಳ ಪರವಾಗಿ ನೀವೇ ಕೈಮುಗಿದು ಹೋದ್ರೆ ಆಗಲ್ವೆ? ಇನ್ನು ಮುಂದೆ ಮಕ್ಕಳನ್ನು ಕರೆತಂದರೆ ಪ್ರವೇಶ ದ್ವಾರದಲ್ಲೇ ತಡೆದು, ವಾಪಸ್ ಕಳಿಸಬೇಕಾಗುತ್ತೆ" ಎಂದು ಬಡಪಾಯಿ ಭಕ್ತರಿಗೆ ಧಮಕಿ ಹಾಕಿದ್ದ. ಇದರ ಅಸಲಿಯತ್ತು ಏನೆಂದರೆ ಮಕ್ಕಳ ಕೈಯಲ್ಲಿ ಹಣ ಇರೋದಿಲ್ಲ; ಮಕ್ಕಳು ದೇವಸ್ಥಾನಕ್ಕೆ ಬಂದರೆ ಯಾವ ಆದಾಯವೂ ಇಲ್ಲ; ಆದ್ದರಿಂದ ಮಕ್ಕಳು ಬಾರದಂತೆ ತಡೆಗಟ್ಟುವುದೇ ಲೇಸೆಂಬುದು ಈತನ ಲೆಕ್ಕಾಚಾರವಾಗಿರಬಹುದು.


ಈತನ ಅವಧಿಯಲ್ಲಿ ಏಳು ಬೆಟ್ಟಗಳಲ್ಲಿ ಅಕ್ರಮ ದಂಧೆಗಳು ಮೇರೆಮೀರಿದವು. ಕೆಲವು ಸಿಬ್ಬಂದಿಗಳ ವಸತಿಗೃಹಗಳು ಮದ್ಯದಂಗಡಿಗಳಾಗಿ ಮಾರ್ಪಟ್ಟಿದ್ದು ದೃಶ್ಯ ಮಾಧ್ಯಮಗಳಲ್ಲೇ ಪ್ರಸಾರವಾಯಿತು. ಇದು ಹಾಗಿರಲಿ. ಬೆಟ್ಟದ ಮೇಲೆ ವೇಶ್ಯಾವಾಟಿಕೆ ಕೂಡ ಬಿರುಸು ಪಡೆದುಕೊಂಡಿತು. ತಿರುಮಲ ಬೆಟ್ಟದಲ್ಲಿ ಸುಮಾರು 200ರಿಂದ 300 ಏಡ್ಸ್ ರೋಗಿಗಳಿದ್ದಾರೆಂದು ರಾಜ್ಯ ಏಡ್ಸ್ ನಿಯಂತ್ರಣಾ ಮಂಡಲಿಯವರೇ ಅಂಕಿ-ಅಂಶ ನೀಡಿದ್ದಾರೆಂದ ಮೇಲೆ ಪರಿಸ್ಥಿತಿ ಯಾವ ಹಂತ ತಲುಪಿತ್ತು ಎಂಬುದನ್ನು ಯಾರಾದರೂ ಊಹಿಸಬಹುದು.

ಇಷ್ಟೆಲ್ಲಾ ನಡೆಯುತ್ತಿದ್ದ ಮೇಲೆ ಪೂಜಾರಿಗಳು ಸುಮ್ಮನಿರುತ್ತಾರಾ? ಅವರು ದೇವರ ಗಂಟಿನ ಮೇಲೆ ಕಣ್ಣುಹಾಕಿದರು. ದೇವರ ಒಡವೆಗಳನ್ನು ಕದ್ದು ಅಡವಿಟ್ಟಿದ್ದ ಮುಖ್ಯ ಅರ್ಚಕನೊಬ್ಬ ಭಕ್ತಾದಿಗಳು ನೀಡಿದ ಸುಳಿವಿನ ಮೇರೆಗೆ ಪೊಲೀಸರ ಅತಿಥಿಯಾದ.

ಗೋಲ್ಡನ್ ಗೋಲ್‌ಮಾಲ್ ಯೋಜನೆ

ತಿರುಪತಿ ದೇವಸ್ಥಾನದ ವಾರ್ಷಿಕ ಆದಾಯ ಹೆಚ್ಚುಕಮ್ಮಿ ಸಾವಿರ ಕೋಟಿಗಳನ್ನು ದಾಟುತ್ತದೆ. ತಲೆಕೂದಲು ಹರಾಜಿನಿಂದಲೇ ಬರೋಬ್ಬರಿ 200 ಕೋಟಿಗಳಷ್ಟು ಹಣ ಬರುತ್ತದೆ. ನಿತ್ಯವೂ ಭಕ್ತಾದಿಗಳು ಅರ್ಪಿಸುವ ಧನಕನಕಗಳಿಗೆ ಲೆಕ್ಕವಿಲ್ಲ. ಇದುವರೆಗೆ ಸುಮಾರು 20,000 ಕಿಲೋದಷ್ಟು ಚಿನ್ನದ ಒಡವೆಗಳ ದಾಸ್ತಾನು ಇಲ್ಲಿದೆ. ಇಷ್ಟೊಂದು ಬಂಗಾರ ಸಾರಾಯಿ ದೊರೆಯ ಕಣ್ಣುಕುಕ್ಕುತ್ತಿತ್ತು. ಏನಾದರೂ ಮಾಡಲೇಬೇಕೆಂದು ತೀರ್ಮಾನಿಸಿ ಒಂದು ಗೋಲ್‌ಮಾಲ್ ಯೋಜನೆ ರೆಡಿಮಾಡಿದ.

ಅದೇನೆಂದರೆ ದೇವಸ್ಥಾನಕ್ಕೆ ಬಂಗಾರದ ಪ್ಲೇಟಿಂಗ್ ಮಾಡಿಸುವುದು.



ಇದಕ್ಕಾಗಿ ಭಕ್ತಾದಿಗಳಿಂದ ದೇಣಿಗೆ ಸಂಗ್ರಹಿಸುವುದು ಮತ್ತು ಇರೋ ಬಂಗಾರ "ಕರಗಿಸುವುದು". ಆದರೆ ನೂರಾರು ವರ್ಷಗಳ ಇತಿಹಾಸವಿರುವ ಈ ಆಲಯದ ಗೋಡೆಗಳ ಮೇಲೆ ಅಪರೂಪದ ಕೆತ್ತನೆ ಚಿತ್ರಗಳು, ತೆಲುಗು, ಕನ್ನಡ ಹಾಗೂ ತಮಿಳು ಭಾಷೆಗಳ ಬರಹಗಳು ಇವೆ. ಪ್ರಾಚ್ಯವಸ್ತು ಸಂರಕ್ಷಣೆಯ ದೃಷ್ಟಿಯಿಂದ ಇವುಗಳನ್ನು ಹಾಗೆ ಕಾಪಾಡಬೇಕೆಂದು ಭಕ್ತಾದಿಯೊಬ್ಬರು ಪಿಐಎಲ್ ದಾಖಲಿಸಿದರು. ಕೋರ್ಟ್ ಆದೇಶದ ಮೇರೆಗೆ ಈ ಗೋಲ್ಡನ್ ಗೋಲ್‌ಮಾಲ್ ಯೋಜನೆ ನಿಲುಗಡೆಯಾಗಿದೆ.

ಒಂದುವೇಳೆ ಈ ಯೋಜನೆ ಕಾರ್ಯರೂಪಕ್ಕೆ ಬಂದಿದ್ದರೆ? ದೇವಸ್ಥಾನ ವಿರೂಪಗೊಂಡರೇನಂತೆ? ಧರ್ಮದರ್ಶಿಗಳಿಗೆ ಸಾವಿರಾರು ಕೋಟಿ ಹಣ ಹರಿದು ಬರುತ್ತಿತ್ತು. ಮುಖೇಶ್ ಅಂಬಾನಿ ಆಗಲೇ 5 ಕೋಟಿ ಚೆಕ್ ಕೊಟ್ಟಿದ್ದ. ಇನ್ನು ಭೂಗತ ಪಾತಕಿಗಳು, ಕಪ್ಪುಹಣದ ಖದೀಮರಿಂದ ಬರುವ ಹಣಕ್ಕೆ ಲೆಕ್ಕ ಕೇಳೋರು ಯಾರಿದ್ದಾರೆ? ಭೂಗತ ಭಕ್ತರು ಗೋಲ್ಡನ್ ಪ್ಲೇಟಿಂಗ್ ಯೋಜನೆಗಾಗಿ ಕಳಿಸಿಕೊಟ್ಟಿದ್ದ ನೂರು ಕೆಜಿ ಚಿನ್ನ ವಾಪಸ್ ಮಾಡಲು ಸರಿಯಾದ ವಿಳಾಸ ಪತ್ತೆಯಾಗದೆ ಟ್ರೆಜರಿಯಲ್ಲೇ ಬಿದ್ದಿದೆಯೆಂದರೆ ಆದಿಕೇಶವನ ಹಕೀಕತ್ತು ಎಂಥಾದ್ದೆಂದು ನೀವೇ ಊಹಿಸಿ.

ಈ ಸಾರಾಯಿ ದೊರೆಯ ಅಧಿಕಾರ 2010ರ ಆಗಸ್ಟ್‌ನಲ್ಲಿ ಕೊನೆಯಾಯಿತು. ಅಷ್ಟರಲ್ಲಿ ಈ ಗಂಟುಕಳ್ಳ ತಿರುಪತಿ ತಿಮ್ಮಪ್ಪನಿಗೆ ಚೆನ್ನಾಗಿ ಉಂಡೆನಾಮ ತಿಕ್ಕಿಬಿಟ್ಟಿದ್ದ. ತಿರುಪತಿಯಿಂದ ಹೊರಬಂದ ಆದಿ ಪುಟ್ಟಪರ್ತಿಯಲ್ಲಿ ಠಿಕಾಣಿ ಹೂಡಲು ಹವಣಿಸಿದ. ಸಾಯಿಬಾಬಾ ತೀವ್ರ ಅಸ್ವಸ್ಥನಾಗಿ ಆಸ್ಪತ್ರೆ ಸೇರಿದ್ದರಿಂದ ವಾರಸುದಾರರಿಲ್ಲದ ಬಾಬಾನ ಲಕ್ಷಾಂತರ ಕೋಟಿ ಆಸ್ತಿ ಈ ಗಂಟುಕಳ್ಳನನ್ನು ಸೂಜಿಗಲ್ಲಿನಂತೆ ಸೆಳೆದುಬಿಟ್ಟಿತ್ತು. ಇದಕ್ಕಾಗಿ ಬಾಬಾನ ರಕ್ತಸಂಬಂಧಿ ಹಾಗೂ ಟ್ರಸ್ಟಿ ರತ್ನಾಕರ ಎಂಬುವವನನ್ನು ಬುಟ್ಟಿಗೆ ಹಾಕಿಕೊಂಡ. ಇಬ್ಬರೂ ಸೇರಿ ಆಸ್ತಿಯೆಲ್ಲಾ ರತ್ನಾಕರನ ಹೆಸರಿಗೆ ವಿಲ್ ಆಗಿದೆಯೆಂದು ಕ್ಯಾತೆ ತೆಗೆದರು. ಬಾಬಾನ ಸಾವಿಗೆ ಇತರ ಟ್ರಸ್ಟಿಗಳೇ ಕಾರಣ ಎಂದು ಗದ್ದಲವೆಬ್ಬಿಸಿದರು.

ಈ ಗಂಟುಕಳ್ಳನನ್ನು ಯಾವ ಕಾರಣಕ್ಕೂ ಟ್ರಸ್ಟ್‌ನಲ್ಲಿ ಸೇರಿಸಿಕೊಳ್ಳಬಾರದೆಂದು ಟ್ರಸ್ಟಿಗಳು ತೀರ್ಮಾನಿಸಿ, ಈತನನ್ನು ದೂರ ಇಟ್ಟರು. ಕೊನೆಗೆ ಸಾವಿರಾರು ಕೋಟಿ ಮೌಲ್ಯದ ಬೆಂಗಳೂರಿನ ಸಾಯಿಬಾಬಾ ಆಸ್ಪತ್ರೆಯ ಉಸ್ತುವಾರಿ ಚೆನ್ನಾಗಿ ಮಾಡುತ್ತೇನೆ, ಕೊಡಿ ಎಂದ. ಆದರೆ ಈತನ ಯಾವ ನಾಟಕವೂ ವರ್ಕೌಟ್ ಆಗದೇ ಬರಿಗೈಯಲ್ಲಿ ವಾಪಸ್ಸಾಗಬೇಕಾಯ್ತು. ಹೀಗೆ ಲಾಭ ಕಂಡಕಡೆಯೆಲ್ಲಾ ನುಗ್ಗುವುದು ಈತನ ಹುಟ್ಟುಗುಣ.

ಈತನ ಸಂಪತ್ತು ಲೆಕ್ಕಕ್ಕೆ ಸಿಗದಂತೆ ಬೆಳೆದಿದೆ. ಹೀಗಿರುವಾಗ ಮನೆಯಲ್ಲಿ ಕಳುವಾದ ಒಂದೆರಡು ಕೋಟಿಯ ಒಡವೆಗಳ ಬಗ್ಗೆ ಲೆಕ್ಕ ಇಡೋದು ಹೇಗೆ? ಈ ಸಾರಾಯಿ ದೊರೆಯ ಸಾಮ್ರಾಜ್ಯ ಹಲವು ಕ್ಷೇತ್ರಗಳಿಗೆ ವಿಸ್ತರಿಸಿದ್ದು ಆ ವಜ್ರದ ಒಡವೆ, ಕಿರೀಟಗಳೆಲ್ಲಾ ಯಾವ ರೂಟ್‌ನಿಂದ ಮನೆಗೆ ಬಂದವೆಂಬುದು ಅವರಿಗೇ ಖಚಿತವಾಗಿ ಗೊತ್ತಿಲ್ಲ. ಹೀಗಿರುವಾಗ ನಮಗೆ ಹೇಗೆ ಗೊತ್ತಾಗಬೇಕು ಹೇಳಿ? ಈ ಕತೆ ಓದಿದ ಮೇಲೆ ಆ ಮನೆಗಳ್ಳರ ಕಳ್ಳರಿಗಿಂತ ಆದಿಕೇಶವುಲು ಭಾರಿ ದೊಡ್ಡ ಕಳ್ಳ ಎಂಬ ಅಭಿಪ್ರಾಯ ನಿಮಗೆ ಬಂದರೇ ಅದಕ್ಕೆ ನಾವು ಜವಾಬ್ದಾರರಲ್ಲ...


● ದೊಡ್ಡಿಪಾಳ್ಯ ನರಸಿಂಹಮೂರ್ತಿ

ಗ್ರಂಥಾಲಯ ಇಲಾಖೆಯ ಮಲಮಕ್ಕಳು



ಕರ್ನಾಟಕದಲ್ಲಿ ಗ್ರಂಥಾಲಯ ಇಲಾಖೆಯ ಕಾರ್ಯಕ್ರಮಗಳು ಅನೇಕ. ಸಾವಿರಾರು ಗ್ರಂಥಾಲಯಗಳ ನಿರ್ಮಾಣ ಹಾಗೂ ಗ್ರಾಮೀಣ ಭಾಗಕ್ಕೂ ಗ್ರಂಥಾಲಯ ಸೌಕರ್ಯಗಳನ್ನು ವಿಸ್ತರಿಸಿರುವ ಕೆಲಸ ಅನನ್ಯ. ವಾಚನಾಭಿರುಚಿಯನ್ನು ಪ್ರೋತ್ಸಾಹಿಸಿ, ಪೋಷಿಸಿ ಲಕ್ಷಾಂತರ ಓದುಗರನ್ನು ಬೆಳೆಸಿರುವ ಗ್ರಂಥಾಲಯ ಇಲಾಖೆಯ ಕಾರ್ಯವೈಖರಿಗಳು ಶ್ಲಾಘನೀಯ. ಹಳ್ಳಿ ಹಳ್ಳಿಯ ಬಡ ಓದುಗರಿಗೂ ದಿನಪತ್ರಿಕೆ-ವಾರಪತ್ರಿಕೆಗಳಿಂದ ರಾಷ್ಟ್ರೀಯ/ಅಂತಾರಾಷ್ಟ್ರೀಯ ಮಟ್ಟದ ಪತ್ರಿಕೆಗಳನ್ನು ಪರಿಚಯಿಸಿರುವ ಇಲಾಖೆ, ಕಸ್ತೂರಿ ಕನ್ನಡ ಸಾಹಿತ್ಯದ ಕಂಪನ್ನೂ ಸಮರ್ಥವಾಗಿ ಪಸರಿಸುತ್ತಿದೆ. ಇಲಾಖೆಯ ಇಷ್ಟೆಲ್ಲಾ ಅಮೂಲ್ಯ ಸೇವೆಗಳ ಹಿಂದೆ ಅದರ ನೌಕರರ ಕಾರ್ಯದಕ್ಷತೆ ಮತ್ತು ಸೇವಾ ಮನೋಭಾವಕ್ಕೆ ಕನ್ನಡ ಸಮಾಜ ಆಭಾರಿ.

ಆದರೆ, ಇದೇ ಇಲಾಖೆ ತನ್ನ ವ್ಯಾಪ್ತಿಗೆ ಬರುವ ಸರ್ಕಾರಿ ಗ್ರಾಮಪಂಚಾಯತಿ ಗ್ರಂಥಾಲಯದ ಮೇಲ್ವಿಚಾರಕರನ್ನು ಮಲಮಕ್ಕಳಂತೆ ಕಾಣುತ್ತಿರುವುದು ವಿಷಾದನೀಯ. ರಾಜ್ಯದಲ್ಲಿ 5766 ಗ್ರಾಮ ಪಂಚಾಯತಿ ಗ್ರಂಥಾಲಯಗಳಿದ್ದು, ಪ್ರತಿ ಗ್ರಾಮಪಂಚಾಯತಿ ಗ್ರಂಥಾಲಯಕ್ಕೆ ಒಬ್ಬ ಮೇಲ್ವಿಚಾರಕನನ್ನು/ಳನ್ನು ನೇಮಿಸಿಕೊಳ್ಳಲಾಗಿದೆ. ಈ ಮೇಲ್ವಿಚಾರಕರನ್ನು ಗೌರವಧನದ ಆಧಾರದ ಮೇಲೆ ನೇಮಿಸಿಕೊಳ್ಳಲಾಗಿದ್ದು, ಕಳೆದ 23-24 ವರ್ಷಗಳಿಂದಲೂ ಈ ವ್ಯವಸ್ಥೆ ಹಾಗೇ ಇದೆ. ಆಗಿನಿಂದ ಮಾಹೆಯಾನ ರೂ. 300/- ರಿಂದ ಪ್ರಾರಂಭವಾಗಿ ಈಗಿನ ರೂ. 2500/- ಗಳವರೆಗಿನ ಸಂಬಳಕ್ಕೆ ಗ್ರಂಥಾಲಯ ಮೇಲ್ವಿಚಾರಕರು ಸೇವೆ ಸಲ್ಲಿಸುತ್ತಿದ್ದಾರೆ. ಇವರಿಗೆ ನೀಡಲಾಗುತ್ತಿರುವ ವೇತನದೊಂದಿಗೆ ಯಾವುದೇ ರೀತಿಯ ಭತ್ಯೆಗಳನ್ನು ನೀಡಲಾಗುತ್ತಿಲ್ಲ. ಬೇರಾವುದೇ ರೀತಿಯ ಸರ್ಕಾರಿ ಸೌಲಭ್ಯಗಳನ್ನೂ ಕಲ್ಪಿಸಲಾಗಿಲ್ಲ. 1987-88 ರಲ್ಲಿ ಪ್ರಾರಂಭಗೊಂಡ ಈ ಯೋಜನೆಯಿಂದಾಗಿ ಗ್ರಾಮೀಣ ಭಾಗದ ಹಲವಾರು ಜನ ಸ್ಥಳೀಯ ನಿರುದ್ಯೋಗಿ ಯುವಕಯುವತಿಯರಿಗೆ ಸರ್ಕಾರಿ (?) ಕೆಲಸ ಸಿಕ್ಕಂತಾಯಿತು. ಆದರೆ, ಸರ್ಕಾರದ ಪರವಾಗಿ ಕೆಲಸ ಮಾಡುತ್ತಿರುವ ಇವರನ್ನು ನಡೆಸಿಕೊಂಡು ಬಂದಿರುವ ರೀತಿ ಮಾತ್ರ ನಮ್ಮ ಘನ ಸರ್ಕಾರಗಳ ಸಣ್ಣತನಗಳಿಗೆ ಸಾಕ್ಷಿಯೊದಗಿಸುತ್ತದೆ. ಗೌರವಧನದ ಆಧಾರದ ಮೇಲೇ ನೇಮಿಸಲ್ಪಟ್ಟಿರುವುದರಿಂದ ಇವರನ್ನು ಸರ್ಕಾರ ಕಾಯಂ ಮಾಡಿಕೊಳ್ಳುವ ಮಾತೇ ಇಲ್ಲ.



1987-88 ರಿಂದ ಸರ್ಕಾರ ಈ ಯೋಜನೆಯನ್ನು ಪ್ರಾರಂಭಿಸಿತು. ಸದರಿ ಮೇಲ್ವಿಚಾರಕ ಹುದ್ದೆ ಆಯ್ಕೆ ಮಾಡುವಾಗ ಎಸ್‌ಎಸ್‌ಎಲ್‌ಸಿಯ ವಿದ್ಯಾರ್ಹತೆ ಮತ್ತು ಮೀಸಲಾತಿ ಕಾನೂನು (ರೋಸ್ಟರ್) ನಿಯಮಗಳನ್ನು ಅನುಸರಿಸಲಾಗಿದೆ. ಸರ್ಕಾರೀ ಕೆಲಸವೊಂದಕ್ಕೆ ನೇಮಕ ಮಾಡಿಕೊಳ್ಳುವಂತೆಯೇ ಇವರನ್ನು ನೇಮಿಸಿಕೊಳ್ಳಲಾಗಿದೆ. ಆದರೆ ಕಾಯಂ ನೌಕರರನ್ನಾಗಿ ಅಲ್ಲ; ಗೌರವಧನದ ಆಧಾರದ ಮೇಲೆ. ಇಲ್ಲಿ ಯಾವುದೇ ರೀತಿಯ ಗ್ಯಾರಂಟಿಯಿರುವುದಿಲ್ಲ. ಇಷ್ಟಾಗ್ಯೂ ಗ್ರಾಮ ಪಂಚಾಯತಿ ಗ್ರಂಥಾಲಯಗಳ ಮೇಲ್ವಿಚಾರಕರು ಗ್ರಾಮೀಣ ಪ್ರದೇಶದ ಓದುಗರಿಗೆ ಬೆಳಗ್ಗೆ 8.00 ರಿಂದ 12.00 ಮತ್ತು ಸಂಜೆ 4.00 ರಿಂದ 8.00 ಗಂಟೆಯವರೆಗೆ ಸೇವೆಯೊದಗಿಸುತ್ತಿದ್ದಾರೆ. ಇದನ್ನೂ ಇಲಾಖೆ ಪಾರ್ಟ್ ಟೈಮ್ ತರಹದ ವ್ಯವಸ್ಥೆ ಎಂದು ಹೇಳುತ್ತದೆಯಾದರೂ ಉಳಿದ ಕೆಲವೇ ತಾಸುಗಳಲ್ಲಿ ಅವರು ದುಡಿಮೆಯ ಮತ್ಯಾವ ಮಾರ್ಗ ಹಿಡಿಯಲು ಸಾಧ್ಯವಾಗುತ್ತದೆ?! ನೀಡಲಾಗುತ್ತಿರುವ ಕನಿಷ್ಠ ವೇತನಕ್ಕೆ ಗರಿಷ್ಠ ಮಟ್ಟದ ಸೇವೆಯನ್ನು ನೀಡುತ್ತಿರುವ ಗ್ರಂಥಾಲಯ ಮೇಲ್ವಿಚಾರಕರ ಕಷ್ಟಕಾರ್ಪಣ್ಯಗಳು ಒಂದೊಂದಲ್ಲ. ಇಂಥಲ್ಲಿ, ಕಡೇಪಕ್ಷ ವೇತನವನ್ನಾದರೂ ಹೆಚ್ಚಿಸಿ ನಮ್ಮ ಜೀವನಮಟ್ಟ ಸುಧಾರಿಸಿ ಎಂದು ಸರ್ಕಾರಕ್ಕೆ ಹಲವು ಬಾರಿ ಮೊರೆಯಿಟ್ಟರೂ ಕೇಳದ ದೊರೆಗಳು ಒಬ್ಬೊಬ್ಬರಾಗಿ ಹೊರಟುಹೋದರು. ಅದು ಹೇಗೋ ಏನೋ ಸದಾನಂದಗೌಡರೇ ಒಮ್ಮೆ ಶಿವಮೊಗ್ಗದಲ್ಲಿ ಗ್ರಂಥಾಲಯಗಳ ಮೇಲ್ವಿಚಾರಕರ ಸಭೆಯ ಉದ್ಘಾಟನೆಗೆ ಆಗಮಿಸಿದ್ದರು. ಆಗ ಮೇಲ್ವಿಚಾರಕರ ಸ್ಥಿತಿಗತಿಗಳನ್ನು ಖುದ್ದಾಗಿ ಕಂಡ ಅವರು ವೇತನವನ್ನು ಹೆಚ್ಚಿಸುವ ಭರಪೂರ ಭರವಸೆ ನೀಡಿ ಹೋಗಿದ್ದರು. ನಂತರ, ಅವರೇ ಮಂಡಿಸಿದ ಜನಪರ ಬಜೆಟ್‌ನಲ್ಲಿ ಇತರೆ ಎಲ್ಲಾ ಇಲಾಖೆಗಳ ನೌಕರರ ಸಂಬಳವನ್ನು ಹೆಚ್ಚಿಸಿದ್ದರು. ಆದರೆ, ಗ್ರಾಮೀಣ ಭಾಗದ ಗ್ರಾಮಪಂಚಾಯತಿ ಗ್ರಂಥಾಲಯ ಮೇಲ್ವಿಚಾರಕರ ವೇತನವನ್ನು ಮಾತ್ರ ಹೆಚ್ಚಿಸಿರಲಿಲ್ಲ. ಹಿಂದಿನ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪನವರು 1000/- ರೂ.ಗಳಷ್ಟು ವೇತನ ಹೆಚ್ಚಿಸಿ, ಕೇವಲ 1100/- ದಷ್ಟಿದ್ದ ಮೇಲ್ವಿಚಾರಕರ ವೇತನವನ್ನು 2,500/- ರೂ.ಗಳಿಗೆ ಹೆಚ್ಚಿಸಿದರು. ನಂತರ, ಸದಾನಂದಗೌಡರ ಬಳಿ ಮತ್ತೆ ಅಹವಾಲು ಕೊಂಡೊಯ್ದಾಗ ಅವರು ಮತ್ತೆ 1,000/- ರೂ.ಗಳನ್ನು ಹೆಚ್ಚಿಸುವಂತೆ ಹಣಕಾಸು ಇಲಾಖೆಗೆ ಸೂಚಿಸಿದ್ದಾರೆ. ಆದರೆ, ಯಡಿಯೂರಪ್ಪನವರ ಪೀರಿಯಡ್‌ನಲ್ಲಿ ವೇತನ ಹೆಚ್ಚಿಸಿರುವುದರಿಂದ ಮುಂದಿನ ಮೂರು ವರ್ಷಗಳ ತನಕ ಮತ್ತೆ ವೇತನ ಹೆಚ್ಚಿಸಲು ಸಾಧ್ಯವಿಲ್ಲ ಎಂದು ಹಣಕಾಸು ಇಲಾಖೆ ಹಟ ಹಿಡಿದು ಕೂತಿದೆ.

ಗ್ರಾಮ ಪಂಚಾಯತಿ ವ್ಯಾಪ್ತಿಯ ಗ್ರಾಮ-ಕುಗ್ರಾಮಗಳೂ ನವ ಆಧುನಿಕತೆಗೆ ತೆರೆದುಕೊಂಡಿರುವ, ಬೆಲೆಗಳು ಗಗನಕ್ಕೇರಿರುವ ತುಟ್ಟಿಯ ಈ ಸಂದರ್ಭದಲ್ಲಿ ಗ್ರಂಥಾಲಯ ಮೇಲ್ವಿಚಾರಕರು ಮತ್ತವರ ಕುಟುಂಬ ನಿರ್ವಹಣೆ ಮಾಹೆಯಾನ 2,500/- ರೂ.ಗಳಲ್ಲಿ ಸಾಧ್ಯವೇ?!

ಗ್ರಾಮಪಂಚಾಯತಿ ಗ್ರಂಥಾಲಯಗಳ ಮೇಲ್ವಿಚಾರಕರ ಜೀವನಮಟ್ಟ ಸುಧಾರಿಸಲು ಕನಿಷ್ಠ ರೂ. 6,000/- ದಷ್ಟು ವೇತನ ನೀಡಬೇಕಾಗಿರುವುದು ಸರ್ಕಾರದ ಕೆಲಸ. ಇದು ಮೇಲ್ವಿಚಾರಕರ ಬೇಡಿಕೆಯೂ ಹೌದು.

ಕುಂದು/ಕೊರತೆಗಳು

ಗ್ರಾಮಪಂಚಾಯತಿಯ ಅಧ್ಯಕ್ಷ ಹಾಗೂ ಜಿಲ್ಲಾ ಪ್ರಧಾನ ಗ್ರಂಥಾಲಯಾಧಿಕಾರಿಗಳ ಸಮನ್ವಯದೊಂದಿಗೆ ಮೇಲ್ವಿಚಾರಕರನ್ನು ಆಯ್ಕೆ ಮಾಡಿಕೊಳ್ಳಲಾಗುತ್ತದೆ. ಇಲ್ಲಿ ಗ್ರಾಮಪಂಚಾಯತಿ ಶಿಫಾರಸ್ಸು ಮಾಡಿದ ವ್ಯಕ್ತಿಯನ್ನೇ ಗ್ರಂಥಾಲಯಾಧಿಕಾರಿಗಳು ಅನುಮೋದಿಸಿರುತ್ತಾರೆ. ಹಾಗಾಗಿ ಸಹಜವಾಗೇ ಗ್ರಾಮಪಂಚಾಯತಿ ಅಧ್ಯಕ್ಷ-ಸದಸ್ಯರುಗಳ ಮರ್ಜಿಗೆ ಈ ಗ್ರಂಥಾಲಯ ಮೇಲ್ವಿಚಾರಕರು ತಗ್ಗಿಬಗ್ಗಿ ಸಹಕರಿಸಬೇಕಾಗಿರುತ್ತದೆ.

ಬಹಳಷ್ಟು ಕಡೆ, ಗ್ರಂಥಾಲಯಕ್ಕೆ ಗ್ರಾಮಪಂಚಾಯತಿಯಲ್ಲಿ ಸೂಕ್ತ ಕಟ್ಟಡಗಳೇ, ಲಭ್ಯವಿರುವುದಿಲ್ಲ. ಅಧ್ಯಕ್ಷ ತೋರಿಸಿದ ಜಾಗದಲ್ಲಿ ಟೇಬಲ್ಲು ಕುರ್ಚಿ ಹಾಕಿಕೊಂಡು, ಪತ್ರಿಕೆಗಳನ್ನು ಹರವಿಕೊಂಡು ಕೂರಬೇಕು. ಮಹಿಳಾ ಸಿಬ್ಬಂದಿ ಇಂಥ ಕಡೆಗಳಲ್ಲಿ ಕೆಲಸ ಮಾಡುವುದು ದುಸ್ತರ.

ಕೆಲವು ಗ್ರಾ.ಪಂ. ಅಧ್ಯಕ್ಷರಂತೂ ಮೇಲ್ವಿಚಾರಕ ಮಹಿಳಾ ಸಿಬ್ಬಂದಿಯನ್ನು ತಮ್ಮ ಪಕ್ಕದಲ್ಲೇ ಕುರ್ಚಿ ಹಾಕಿಕೊಂಡು ಕೂಡುವಂತೆ ಆದೇಶಿಸಿರುವ ಮತ್ತು ತಾವು ಹೇಳಿದ ಸಮಯಕ್ಕೆ ಗ್ರಂಥಾಲಯಕ್ಕೆ ಬಾಗಿಲು ತೆಗೆಯಬೇಕು ಎಂದು ಒತ್ತಾಯಿಸಿರುವ ನಿದರ್ಶನಗಳೂ ಇವೆ.

ಗೌರವಧನದ ಆಧಾರದ ಮೇಲೆ ಇತರೇ ಕೆಲಸಗಳಿಗೆ ನೌಕರರಿಗೆ ನೀಡಲಾಗುತ್ತಿರುವ ವೇತನವೇ 5,000/- ರಿಂದ 6,000/- ಗಳವರೆಗಿದೆ. (ಉದಾಹರಣೆಗೆ ಜೇನು ಕೃಷಿ ತರಬೇತುದಾರರಿಗೆ ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆಯಲ್ಲಿ ಮಾಹೆಯಾನ 5,190/- ರೂ.ಗಳಷ್ಟು ವೇತನ ನೀಡಲಾಗುತ್ತಿದೆ. ಇವರನ್ನು ಗೌರವಧನದ ಆಧಾರದಡಿಯಲ್ಲೇ ನೇಮಿಸಿಕೊಳ್ಳಲಾಗಿದೆ.)


ಹೀಗಿದ್ದಾಗ, ಗ್ರಂಥಾಲಯ ಇಲಾಖೆ, ತನ್ನ ಸೇವೆಯನ್ನು ಗ್ರಾಮಪಂಚಾಯತ್ ಮಟ್ಟದಲ್ಲಿ ವಿಸ್ತರಿಸುತ್ತಿರುವ ಗ್ರಾಮಪಂಚಾಯತ್ ಗ್ರಂಥಾಲಯಗಳ ಮೇಲ್ವಿಚಾರಕರಿಗೆ ಅನ್ಯಾಯವೆಸಗುತ್ತಿರುವುದು ಅಕ್ಷಮ್ಯವಲ್ಲವೆ?!

ಗ್ರಂಥಾಲಯಗಳಿಗೆ ಪೀಠೋಪಕರಣಗಳ ಖರೀದಿಗೆಂದೇ ಕೋಟ್ಯಾಂತರ ರೂಪಾಯಿ ವ್ಯಯಿಸುವ ಇಲಾಖೆ, ಕೆಲವು ಲಕ್ಷಗಳನ್ನಾದರೂ ನಿಧಿಯಂತೆ ಇಟ್ಟು ಈ ಸಿಬ್ಬಂದಿಯ ಸ್ಥಿತಿಗತಿಗಳನ್ನು ಸುಧಾರಿಸಬೇಕಿದೆ.

ಬಹಳಷ್ಟನ್ನು ಸಹಿಸಿಕೊಂಡು ಸಾಕಾಗಿ ಈಗೀಗ ಸಂಘಟಿತರಾಗಿರುವ ಕರ್ನಾಟಕ ರಾಜ್ಯದ ಗ್ರಾಮಪಂಚಾಯತ್ ಗ್ರಂಥಾಲಯಗಳ ಮೇಲ್ವಿಚಾರಕರು ತಮ್ಮ ಸಂಘದವತಿಯಿಂದ ಸಚಿವರುಗಳಿಗೆ, ಅಧಿಕಾರಿಗಳಿಗೆ ಅಹವಾಲು ನೀಡುತ್ತಾ ಬಂದಿದ್ದಾರೆ. ಪಶುವೈದ್ಯರು ಸಾಮೂಹಿಕವಾಗಿ ರಾಜೀನಾಮೆ ನೀಡಿ ಸರ್ಕಾರಕ್ಕೆ ದೊಡ್ಡ ಮಟ್ಟದ ಹೆದರಿಕೆಯನ್ನೇ ಸೃಷ್ಟಿಸಿದ್ದರು.

ಸಚಿವ ರೇವು ಬೆಳಮಗಿಗೆ ಆಗ ಬೆವರು ಕಿತ್ತುಕೊಂಡು ಬಂದಿತ್ತು. ಈಗ ಗ್ರಂಥಾಲಯ ಮೇಲ್ವಿಚಾರಕರುಗಳ ಮುನಿಸಿನಿಂದ ಗ್ರಂಥಾಲಯ ಇಲಾಖೆಗೂ ಸಚಿವರಾಗಿರುವ ಬೆಳಮಗಿಗೆ ಜ್ವರವೇ ಬರುವ ಸಾಧ್ಯತೆಗಳಿವೆ. ●

ಆಡಳಿತಾರೂಢ ಬಿಜೆಪಿ ಸಂಘ ಪರಿವಾರದ ಸೈತಾನರ-ಭೂಬಿಟ್ಟು ಮಾಡಿಸಿದ ಕರ್ಮಾಚಾರವೇ ಅದಕ್ಕೀಗ ಗಂಡಾಂತರಕಾರಿಯಾಗಿ ಪರಿಣಮಿಸಿದೆ. ಹಿಂದೂ ಹೆಣ್ಣಿನ ಮಾನ ಮತ್ತು ಗೋಪ್ರಾಣ ಬಂಡವಾಳ ಮಾಡಿಕೊಂಡು ಬಿಸಿನೆಸ್ ಮಾಡಿದ ಬಿಜೆಪಿ ಭಂಡರ ಅಸಲಿ ಬಣ್ಣ ಜಿಲ್ಲೆಯ ದಶದಿಕ್ಕಿನಲ್ಲಿ ಬಹಿರಂಗವಾಗಿಹೋಗಿದೆ! ಈ ಸ್ವಯಂಘೋಷಿತ ದೇಶ ಭಕ್ತರ ದಗಾ-ದೋಖಾ ದಂಧೆ ಬಿಜೆಪಿಯನ್ನು ಪತನದ ಅಂಚಿಗೆ ತಂದು ನಿಲ್ಲಿಸಿದೆ. ಕಳೆದ ಒಂದೂವರೆ ದಶಕದಿಂದ ಸಂಘಟನಾತ್ಮಕ ಶಕ್ತಿಯೇ ಇಲ್ಲದ ಕಾಂಗ್ರೆಸ್ ಕಾಲಿಲ್ಲದ ಹೆಳವನಂತೆ ತೆವಳುತ್ತಿದೆ. ಸಂಘ ಪರಿವಾರದ ಅನೈತಿಕ ಪೊಲೀಸ್‌ಗಿರಿ, ಅಕ್ರಮ ವ್ಯವಹಾರ, ಸಂಸ್ಕೃತಿ ಹೆಸರಲ್ಲಿ ಹೆಂಗಸರ ಮೇಲೆ ಬಿದ್ದು ಚಟ ತೀರಿಸಿಕೊಳ್ಳೋದು, ಅಮಾಯಕ ಅಲ್ಪಸಂಖ್ಯಾತರನ್ನು ಸತಾಯಿಸಿ ಪಾಲಿಟಿಕಲ್ ಮೈಲೇಜಿಗೆ ಹವಣಿಸೋದು, ರಕ್ತ ರಾಜಕಾರಣ, ಅಧರ್ಮಕಾರಣವನ್ನೆಲ್ಲಾ ಬಳಸಿಕೊಂಡು ಎದುರಾಳಿಯನ್ನು ಹಣಿಯಲು ಕಾಂಗ್ರೆಸಿಗರು ವ್ಯವಸ್ಥಿತ ಸ್ಟ್ರಟಜಿ ಹೆಣೆದದ್ದೇ ಇಲ್ಲ.



ಗೋಪಾಲ್ ಭಂಡಾರಿ · ಗೋಪಾಲ್ ಪೂಜಾರಿ · ಆಸ್ಕರ್ ಫರ್ನಾಂಡಿಸ್ · ಪ್ರಮೋದ್‌ಮಧ್ವರಾಜ್ · ಪ್ರತಾಪ್‌ಚಂದ್ರ ಶೆಟ್ಟಿ · ವಸಂತ್ ಸಾಲಿಯಾನ್ · ವೀರಪ್ಪ ಮೊಯ್ಲಿ · ವಿನಯಕುಮಾರ್ ಸೊರಕೆ


ಉಡುಪಿ:

ಭಸ್ಮವಾಗುತ್ತಿದೆ ಬಿಜೆಪಿ; ಬರ್ಕತ್ತಾಗುತ್ತಿಲ್ಲ ಕಾಂಗ್ರೆಸ್

"ಮತ್ಸ್ಯಗಂಧಿ" ಉಡುಪಿ ಜಿಲ್ಲೆ ಹೇಳಿಕೇಳಿ ಸಂಘ ಪರಿವಾರದ 'ಕರ್ಮ'ಭೂಮಿ. ಚೆಡ್ಡಿ-ಕಾವಿ-ಭಜರಂಗಿ ಭೂತಗಳು ಅದೆಷ್ಟೇ ಅಬ್ಬರಿಸಿದರೂ ಈ ಕರಾವಳಿ ತೀರದಲ್ಲಿ ಮತಾಂಧರಿಗಿಂತ ಮಾನವತಾವಾದಿಗಳೇ ಹೆಚ್ಚಿದ್ದಾರೆ. ಆದರೆ ರಕ್ಕಸರ ಅಟ್ಟಹಾಸವೇ ಯಾವಾಗಲೂ ಜೋರಲ್ಲವಾ? ಇಂಥ "ಚೆಡ್ಡಿ ರಿಪಬ್ಲಿಕ್" ನಲ್ಲಿ ನಿಧಾನಕ್ಕೆ ಅಸೆಂಬ್ಲಿ ಇಲೆಕ್ಷನ್ ಗುಂಗು ರಂಗೇರುತ್ತಿದೆ.

ಆಡಳಿತಾರೂಢ ಬಿಜೆಪಿ ಸಂಘ ಪರಿವಾರದ ಸೈತಾನರ-ಭೂಬಿಟ್ಟು ಮಾಡಿಸಿದ ಕರ್ಮಾಚಾರವೇ ಅದಕ್ಕೀಗ ಗಂಡಾಂತರಕಾರಿಯಾಗಿ ಪರಿಣಮಿಸಿದೆ. ಹಿಂದೂ ಹೆಣ್ಣಿನ ಮಾನ ಮತ್ತು ಗೋಪ್ರಾಣ ಬಂಡವಾಳ ಮಾಡಿಕೊಂಡು ಬಿಸಿನೆಸ್ ಮಾಡಿದ ಬಿಜೆಪಿ ಭಂಡರ ಅಸಲಿ ಬಣ್ಣ ಜಿಲ್ಲೆಯ ದಶ ದಿಕ್ಕಿನಲ್ಲಿ ಬಹಿರಂಗವಾಗಿಹೋಗಿದೆ! ಈ ಸ್ವಯಂ ಘೋಷಿತ ದೇಶ ಭಕ್ತರ ದಗಾ-ದೋಖಾ ದಂಧೆ ಬಿಜೆಪಿಯನ್ನು ಪತನದ ಅಂಚಿಗೆ ತಂದು ನಿಲ್ಲಿಸಿದೆ. ಕರಾವಳಿ ಬಿಜೆಪಿಯ ಅಧಿಕಾರ ರಾಜಕಾರಣದ ಸೂತ್ರಧಾರರಾದ ಆರೆಸ್ಸೆಸ್ ಡಾನ್ ಕಲ್ಲಡ್ಕ ಪ್ರಭಾಕರ್ ಭಟ್ಟ ಮತ್ತು ಬ್ರಾಹ್ಮಣಶಾಹಿ ಹಿಕಮತ್ತಿನ ಅಮ್ಯೂಸೆಬೈಲ್ ಗೋಪಾಲಕೃಷ್ಣ ಕೊಡ್ಗಿ (ಹಣಕಾಸು ಆಯೋಗದ ಗೂಟದ ಕಾರಿನ ದಂಡಪಿಂಡ)ಗಳ ಬತ್ತಳಿಕೆಯಲ್ಲಿದ್ದ ಕೋಮು ಕಿತಾಪತಿಯ ಬಾಣಗಳೆಲ್ಲ ಖಾಲಿಯಾಗಿಹೋಗಿವೆ.

ಈ ಇಬ್ಬರು ಧರ್ಮಕಾರಣಿಗಳ ಚಿಂತನ-ಮಂಥನ ಟೀಮಿನ ಪಾಲಿಟಿಕಲ್ ಫೇಸ್ ಆಗಿದ್ದ ಡಾ. ವಿ.ಎಸ್. ಆಚಾರ್ಯನೆಂಬ ನಾಜೂಕಯ್ಯನ ನಿರ್ಗಮನ ಉಡುಪಿ ಬಿಜೆಪಿಯಲ್ಲಿ ವಿಚಿತ್ರ ತಳಮಳ ಮೂಡಿಸಿದೆ. ಬಿಜೆಪಿಯಲ್ಲಿ ಒಂದಲ್ಲ, ಎರಡಲ್ಲ ನಾಲ್ಕು ನಾಲ್ಕು ಗ್ಯಾಂಗ್ ತಯಾರಾಗಿದೆ. ಒರಿಜಿನಲ್ ಬಿಜೆಪಿಗಳದು ಒಂದು ಬಣವಾದರೆ, ಕಲ್ಲಡ್ಕನ ಖತರ್ನಾಕ್ ಆರೆಸ್ಸೆಸ್ ಕೇಡರ್ ಇನ್ನೊಂದು. ಮಗದೊಂದೆಡೆ ಹಗರಣ ಪುರುಷ ಯಡ್ಡಿ ಮಹಾತ್ಮನ ಅಭಿಮಾನಿಗಳು. ಬಿಜೆಪಿಯ ಅನೈತಿಕತೆ, ಅಶ್ಲೀಲತೆ, ಅಕ್ರಮ ಕಂಡು ಕ್ಯಾಕರಿಸಿ ಉಗಿಯುತ್ತಿರುವ ಕುಂದಾಪುರದ ಮಾಜಿ ಶಾಸಕ ಹಾಲಾಡಿ ಶ್ರೀನಿವಾಸ್ ಶೆಟ್ಟಿಯಂಥವರದೇ ಪ್ರತ್ಯೇಕ ಮಂಡಳಿ. ಈ ಗುಂಪುಗಾರಿಕೆ-ಗೊಂದಲದಲ್ಲೇ ಜಿಲ್ಲೆಯ ಎರಡು ಬಲಾಢ್ಯ ಜಾತಿಗಳಾದ ಭಂಟ ಮತ್ತು ಬಿಲ್ಲವರನ್ನು ಎತ್ತಿಕಟ್ಟುವ



ಎ.ಜಿ.ಕೊಡ್ಗಿ · ಹಾಲಾಡಿ ಶ್ರೀನಿವಾಸಶೆಟ್ಟಿ · ಕಲ್ಲಡ್ಕ ಪ್ರಭಾಕರ್ · ಲಕ್ಷ್ಮಿ ನಾರಾಯಣ · ಲಾಲಾಜಿ ಮೆಂಡನ್ · ರಘುಪತಿ ಭಟ್ · ಶ್ರೀನಿವಾಸ ಪೂಜಾರಿ · ಸುನೀಲ್ ಕುಮಾರ್

ಜಾತಿರಾಜಕೀಯ ಮಾಡಿ ಮುಖಭಂಗಿತರಾಗಿರುವ ಕಲ್ಲಡ್ಕ-ಕೊಡ್ಗಿಗಳಿಗೆ ಬಿಜೆಪಿಯ ಲಗಾಮೇ ಸರಿಯಾಗಿ ಸಿಗುತ್ತಿಲ್ಲ. ಭಂಟರ ಹಾಲಾಡಿ ಶ್ರೀನಿವಾಸನಿಗೆ ವಂಚನೆ ಮಾಡಿ ಬಿಲ್ಲವರ ಮೊದ್ಮಣಿ ಕೋಟ ಶ್ರೀನಿವಾಸನಿಗೆ ಮಂತ್ರಿ ಮಾಡಿದ ಕಲ್ಲಡ್ಕ ಭಟ್ಟನಿಗೆ ಆ ಬಳಿಕ ಬಿಜೆಪಿಯಲ್ಲಿ ಆದ ಬಂಡಾಯ-ಬೊಬ್ಬೆಗಳು ಜಿಲ್ಲೆಯ ಐದು ಕ್ಷೇತ್ರದಲ್ಲಿ ಒಂದರಲ್ಲೂ ತಮ್ಮ ಎಮ್ಮೆಲ್ಲೆ ತಯಾರಾಗುವುದಿಲ್ಲ ಎಂಬುದನ್ನು ಖಾತ್ರಿಪಡಿಸಿಬಿಟ್ಟಿದೆ!

ಸಿಡಿಮಿಡಿ ಮುದುಕ ಮನೆಗೆ

ಗುಡ್ಡಗಾಡು ಪ್ರದೇಶದಿಂದ ತುಂಬಿರುವ ಬೈಂದೂರು ವಿಧಾನಸಭಾ ಕ್ಷೇತ್ರ ಹಣ ಹೆಣಾಹಣಿಯ ಅಖಾಡ ಎಂದೇ ಜನಜನಿತ. ಇಲ್ಲಿ ಬೆಂಗಳೂರು-ಮುಂಬೈ' ಮತ್ತಿತರೆಡೆ ನಿಗೂಢ ದಂಧೆ ನಡೆಸಿದವರು ಹಠಾತ್ ಪ್ರತ್ಯಕ್ಷರಾಗಿ 'ಸೇನಾಪತಿ' ಶಾಸಕರಾಗುತ್ತಿದ್ದಾರೆ. ಬೆಂಗಳೂರಿನ 'ಸುಖಸಾಗರ್ ಗ್ರೂಪ್ ಆಫ್ ಹೋಟೇಲ್ಸ್'ನ ಕಾರ್ಮಿಕ ಶೋಷಕ ಗೋಪಾಲ ಪೂಜಾರಿ ಕಾಂಗ್ರೆಸ್‌ನಿಂದ ಮೂರು ಸಲ ಇಲ್ಲಿಂದ ಎಮ್ಮೆಲ್ಲೆ ಆಗಿದ್ದರು. ಕಳೆದ ಚುನಾವಣೆಯಲ್ಲಿ ಈ ಬಿಲ್ಲವರ ಭೂಪನನ್ನು ಬೆಂಗಳೂರಲ್ಲಿ ಬಿಲ್ಡರ್ ಆಗಿದ್ದ ಲಕ್ಷ್ಮೀನಾರಾಯಣನೆಂಬ 'ಶೇರೇಗಾರ' ಜಾತಿಯ ಧೀರ ಗೋಣಿ ಚೀಲಗಟ್ಟಲೆ ಹಣ ಹರಿಸಿ ಸೋಲಿಸಿ ಬಿಜೆಪಿ ಶಾಸಕನಾಗಿದ್ದರು. ಶಾಸಕನಾಗುತ್ತಲೇ ಬೆಂಗಳೂರು ಸೇರಿಕೊಂಡ ಈ ಲಕ್ಷ್ಮೀನಾರಾಯಣ ಜನರ ಕಷ್ಟಸುಖಕ್ಕೆ ಸ್ಪಂದಿಸಿದ್ದು ಅಷ್ಟಕ್ಕಷ್ಟೇ. ಊರಿನ ರಸ್ತೆ, ನೀರು, ಶಾಲೆಯ ಸಮಸ್ಯೆ ಹೇಳಿಕೊಂಡು ಬಂದವರ ಮೇಲೂ ಈತ ಎಗರಾಡುವುದು ಮಾಮೂಲು. ಹೀಗಾಗಿ ಆತನಿಗೆ ಕ್ಷೇತ್ರದ ಜನ ಸಿಡಿಮಿಡಿ ಮುದುಕನೆಂದೇ ನಾಮಕರಣ ಮಾಡಿದ್ದಾರೆ.

ಈ ಲಕ್ಷ್ಮೀನಾರಾಯಣ ಮಾಜಿ ಸಿಎಂ ಯಡ್ಡಿಯ ಹಿಂಬಾಲಕ. ಅರ್ಥಾತ್ ಜಿಲ್ಲಾ ಬಿಜೆಪಿ ಟಿಕೆಟ್ ದಾತನಾಗಿರುವ ಕಲ್ಲಡ್ಕ ಭಟ್ಟನ ಹಿಟ್‌ಲಿಸ್ಟ್‌ನಲ್ಲಿ ಇರುವಾತ. ಆತನಿಗೆ ಈ ಬಾರಿ ಛಾನ್ಸ್ ತಪ್ಪಿಸಿ ಪ್ರಣಯಕುಮಾರ್ ಶೆಟ್ಟಿ ಎಂಬಾತನಿಗೆ ಟಿಕೆಟ್ ಕೊಡಲು ಭಟ್ಟನ ಚೆಡ್ಡಿ ಪಡೆ ಯೋಚಿಸುತ್ತಿದೆ. ಕೊಲ್ಲೂರು ದೇವಸ್ಥಾನದ ಟ್ರಸ್ಟಿಯಾಗಿ ಲೂಟಿ ಮಾಡಿದ ಕೃಷ್ಣಪ್ರಸಾದ್ ಅಡ್ಯಂತಾಯರ ಚೇಲಾ ಈ ಪ್ರಣಯಕುಮಾರ್. ಅಡ್ಯಂತಾಯ ಕೊಲ್ಲೂರು ದೇವಳದ ಹಣ ಕಾನೂನುಬಾಹಿರ- ಧರ್ಮಬಾಹಿರವಾಗಿ ಕಲ್ಲಡ್ಕನ ಶಿಕ್ಷಣ ಸಂಸ್ಥೆಗೆ ಮೊಗೆ ಮೊಗೆದು ಕೊಟ್ಟಿರುವಾತ. ಈತ ಕಲ್ಲಡ್ಕನ ನಿಷ್ಠಾವಂತ ಗುಲಾಮ. ಈ ಪ್ರಣಯ ಕುಮಾರನಿಗಿಂತಲೂ ಬೆಂಗಳೂರಲ್ಲಿ ಬಿಲ್ಡರ್ ಆಗಿರುವ ಸುಖಾನಂದ ಶೆಟ್ಟಿಯೇ ಬೆಟರ್ ಎಂದೆನಿಸುತ್ತಿದೆ ಕಲ್ಲಡ್ಕನಿಗೆ. ಕಾರಣ ಆತನಲ್ಲಿರುವ ಕೊಪ್ಪರಿಗೆ ಕಾಸು. ಹಣ ಪಡೆದು ಟಿಕೆಟ್ ಕೊಡುವುದು ಕಲ್ಲಡ್ಕನ ಹಳೇ ಚಾಳಿ.

ಚಿತ್ತೇರಿ ಕನ್‌ಸ್ಟ್ರಕ್ಷನ್ ದೊರೆ ಸುಖಾನಂದ ಬಿಜೆಪಿ ಕ್ಯಾಂಡಿಡೇಟಾದರೆ ಕಾಂಗ್ರೆಸ್‌ನ ಹಳೆ ಹುಲಿ ಗೋಪಾಲ ಪೂಜಾರಿಗೆ ಹಣ ಹೆಚ್ಚು ಹರಿಸಬೇಕಾದ ಪೀಕಲಾಟ ಶುರುವಾಗಲಿದೆ. ಗೋಪಾಲ ಪೂಜಾರಿಗೆ ಕಾಂಗ್ರೆಸ್‌ನಲ್ಲೇ ಕಾಲೆಳೆವರಿದ್ದಾರೆ. ರಾಜು ದೇವಾಡಿಗನೆಂಬ ಹಳೆ ಶಿಷ್ಯನೇ ಪೂಜಾರಿಗೆ ತಿರುಮಂತ್ರ ಹಾಕುತ್ತಿದ್ದಾನೆ. ಸದ್ಯಕ್ಕೆ ಕ್ಷೇತ್ರ ಕಾಂಗ್ರೆಸ್ ಮತ್ತು ಬಿಜೆಪಿ ಪರವಾಗಿ ಅರ್ಧರ್ಧ ಹದಗೊಂಡಿದೆ. ಯಡ್ಡಿ ಮಗ ಪ್ರತಿನಿಧಿಸುವ ಶಿವಮೊಗ್ಗ ಪಾರ್ಲಿಮೆಂಟ್ ಕ್ಷೇತ್ರದಲ್ಲಿ ಬರುವ ಈ ಬೈಂದೂರು ಈ ಬಾರಿ ಬಿಜೆಪಿ ಕೈಬಿಟ್ಟು ಹೋಗುವ ಸಾಧ್ಯತೆಯೇ ಹೆಚ್ಚು. ಆದರೆ ಕಾಂಗ್ರೆಸ್‌ನ ಗೋಪಾಲ ಪೂಜಾರಿಯ ಅಧಿಕ ಪ್ರಸಂಗದ ಮೇಲೆ ಇದು ನಿರ್ಧರಿತವಾಗಲಿದೆ.

ಹಾಲಾಡಿ ಫಜೀತಿ!

ಜಿಲ್ಲಾ ಬಿಜೆಪಿಯ ತೆರೆಮರೆ ಬಾಸ್ ಕಲ್ಲಡ್ಕ ಭಟ್ಟನ ಮತಾಂಧ ಮಸಲತ್ತಿಗೆ ಧಿಕ್ಕಾರ ಹಾಕಿ ಬಂಡೆದ್ದಿರುವ ಅಖಂಡ ಬ್ರಹ್ಮಚಾರಿ ಹಾಲಾಡಿ ಶ್ರೀನಿವಾಸ ಶೆಟ್ಟಿ ಈಗ ಭಯಂಕರ ಗೊಂದಲದಲ್ಲಿದ್ದಾರೆ. ಶಾಸಕಗಿರಿಗೆ ರಾಜೀನಾಮೆ ಬಿಸಾಕಿ ಬಿಜೆಪಿಯಿಂದ ಹೊರಗೆ ಬಂದಿರುವ ಆತ ಅದನಿನ್ನೂ ಅಧಿಕೃತವಾಗಿ ಘೋಷಿಸಿಲ್ಲ. ಈ ಶ್ರೀನಿವಾಸ್ ಶೆಟ್ಟಿ ಅಧಿಕಾರದ ದೌಲತ್ತು-ದಗಲುಬಾಜಿತನ ಎಂದೂ ತೋರಿಸದ ಮೋಗಂ ಪುಢಾರಿ ಕಾಂಗ್ರೆಸ್ ಅಥವಾ ಜೆಡಿಎಸ್ ಸೇರುತ್ತಾರೆಂಬ ಸುದ್ದಿಗಳಿವೆಯಾದರೂ ಆತ ಪಕ್ಷೇತರನಾಗಿ ಸ್ಪರ್ಧಿಸಿದರೆ ಹೇಗೆಂಬ ಯೋಚನೆಯಲ್ಲಿದ್ದಾರೆ; ಕಲ್ಲಡ್ಕ ಭಟ್ಟನ ಜತೆ ಸೇರಿ ತನಗೆ ಮಂತ್ರಿಗಿರಿ ತಪ್ಪಿಸಿದ ಮಸಲತ್ತುದಾರ ಮುದುಕ ಎ.ಜಿ.ಕೊಡ್ಗಿಯ ಮಗ ಕಿರಣ ಕೊಡ್ಗಿ ಎಂಬ ತನ್ನ ಖಾಸಾಮಿತ್ರನನ್ನೇ ಬಿಜೆಪಿ ಬಂಡಾಯ ಅಭ್ಯರ್ಥಿಯಾಗಿ ನಿಲ್ಲಿಸಿ ತನ್ನ ಪ್ರತಿಷ್ಠೆ-ಜನಪ್ರಿಯತೆಯನ್ನು ಒರೆಗೆ ಹಚ್ಚಿದರೆ ಹೇಗೆಂಬ ಚಿಂತನೆಯೂ ಒಮ್ಮೊಮ್ಮೆ ನಡೆಸುತ್ತಿದ್ದಾರೆ. ಮೊನ್ನೆ ಉಡುಪಿ ಜಿಲ್ಲಾ ಪಂಚಾಯತಿಯ ಅಧ್ಯಕ್ಷ ಉಪಾಧ್ಯಕ್ಷರ ಆಯ್ಕೆ ಹೊತ್ತಲ್ಲಿ ತನ್ನ ತಾಕತ್ತನ್ನು ಬಿಜೆಪಿಗರಿಗೆ ತೋರಿಸಲು ಹೋಗಿದ್ದ ಹಾಲಾಡಿ ಆನಂತರ ಬಾಲ ಮುದುಡಿಕೊಂಡು ಕೂತರು. ತನ್ನ ಬೆಂಬಲಿಗರಾದ ಎಂಟು ಜಿಲ್ಲಾ ಪಂಚಾಯತ್ ಸದಸ್ಯರ ಬೆಂಬಲ ಕೊಡಲಾರೆನೆಂದು ಹೇಳಿದ್ದ ಹಾಲಾಡಿ ರಾತ್ರಿ ಬೆಳಗಾಗೋದರಲ್ಲಿ ಯೂಟರ್ನ್ ಹೊಡೆದಿದ್ದರು. ಒಟ್ಟಿನಲ್ಲಿ ಹಾಲಾಡಿ ಎಡಬಿಡಂಗಿ ಅಂತಾಗಿದ್ದಾರೆ.

ಬಿಜೆಪಿಗೆ ಹೊಸ ಕ್ಯಾಂಡಿಡೇಟ್ ಹುಡುಕಲೇಬೇಕಾಗಿದೆ. ತಾಲ್ಲೂಕ್ ಬಿಜೆಪಿ ಅಧ್ಯಕ್ಷ ಕಿಶೋರ್‌ಕುಮಾರ್ ಎಂಬ ಭಂಟರ ಭೂಪ ಮತ್ತು ರಾಜಶೇಖರ ಕಾವೇರಿ ಎಂಬ ಶೇರುಗಾರ ಕುಲೋದ್ಧಾರಕನ ಹೆಸರು ಬಿಜೆಪಿ ಬಿಡಾರದಲ್ಲಿ ಕೇಳಿಬರುತ್ತಿದೆ. ಆದರೆ ಕಲ್ಲಡ್ಕ ಭಟ್ಟ ಮಾತ್ರ ಈಗ ತನ್ನ ವಿರುದ್ಧ ತಿರುಗಿಬಿದ್ದಿರುವ ಭಂಟರ ಮೇಲೆ ಸೇಡು ತೀರಿಸಿಕೊಳ್ಳಲು ಪೆದ್ದು ಮಂತ್ರಿ ಶ್ರೀನಿವಾಸ ಪೂಜಾರಿ ಎಂಬ ಬಿಲ್ಲವನನ್ನು ಅಖಾಡಕ್ಕೆ ಇಳಿಸಲು ದೃಢ ನಿರ್ಧಾರ ಮಾಡಿದ್ದಾರೆ. ಈ ಕ್ಷೇತ್ರದಲ್ಲಿ ಹೆಚ್ಚುಕಮ್ಮಿ ಭಂಟರಷ್ಟೇ ಮತ ಬಿಲ್ಲವರದೂ ಇದೆ. ಆದರೆ ತನ್ನನ್ನು ಎಮ್ಮೆಲ್ಸಿ ಮಾಡಿಸಿದ ಹಾಲಾಡಿ ವಿರುದ್ಧ ಸ್ಪರ್ಧಿಸುವ ಇರಾದೆ ಪೂಜಾರಿಗೆ ಇಲ್ಲ.

ಹಾಲಾಡಿಯ ಆಜನ್ಮ ಶತ್ರು ಮಾಜಿ ಕುಂದಾಪುರ ಶಾಸಕ-ಹಾಲಿ ವಿಧಾನ ಪರಿಷತ್ ಸದಸ್ಯ ಪ್ರತಾಪ್‌ಚಂದ್ರ ಶೆಟ್ಟಿ ಎಂಬ ಪಾಳೆಗಾರಿ ಪಳೆಯುಳಿಕೆ ನಿಧಾನಕ್ಕೆ ರಂಗಪ್ರವೇಶ ಮಾಡುತ್ತಿದ್ದಾರೆ. ಈ ಕಾಂಗ್ರೆಸ್ ಕಟ್ಟಾಳಿಗೆ ಹಾಲಾಡಿ ಎದುರು ಸ್ಪರ್ಧಿಸುವ ಧೈರ್ಯವಿಲ್ಲ. ಅಕಸ್ಮಾತ್ ಹಾಲಾಡಿ ಕಣಕ್ಕಿಳಿಯದಿದ್ದರೆ ತಾನೇ ನಿಂತರೆ ಗೆಲುವು ಖಂಡಿತ ಎಂಬುದು ಈ ಭಂಟರ ಕುಡಿಯ ಕನಸು. ಹಾಲಾಡಿ ಇಲ್ಲದೆ ಚುನಾವಣೆ ಎದುರಿಸಿದರೆ ಪ್ರತಾಪ್ ಗೆಲ್ಲುವುದು ಗ್ಯಾರಂಟಿ. ಅಷ್ಟು ಬೇರು-ಬಿಳಲು ಆತ ಕ್ಷೇತ್ರದಲ್ಲಿ ಹೊಂದಿದ್ದಾನೆ. ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಮಲ್ಯಾಡಿ ಶಿವರಾಮ ಶೆಟ್ಟಿ, ಮುಳಹಳ್ಳಿ ದಿನೇಶ್ ಶೆಟ್ಟಿ, ಕೆದೂರು ಸದಾನಂದ ಶೆಟ್ಟಿ, ಶ್ಯಾಮಲಾ ಭಂಡಾರಿ ಎಂಬ ರೆಬೆಲ್ ಲೇಡಿ ತರಹದ ಭಂಟರ ಸಮುದಾಯದವರದೇ ಹೆಸರುಗಳು ಕಾಂಗ್ರೆಸಲ್ಲಿ ಚಾಲ್ತಿಯಲ್ಲಿ ಬಂದಿದೆ.

ಒಂದಂತೂ ಖರೆ. ಹಾಲಾಡಿ ಯಾವ ಪಕ್ಷದಿಂದ ಅಥವಾ ಪಕ್ಷೇತರನಾಗಿ ನಿಂತರೆ ಗೆಲುವು ಖಂಡಿತ. ಹಾಲಾಡಿ ಇಲ್ಲದ ಚುನಾವಣಾ ಅಖಾಡಕ್ಕೆ ಕಾಂಗ್ರೆಸ್‌ನ ಪ್ರತಾಪಚಂದ್ರ ಶೆಟ್ಟಿ ಇಳಿದರೆ ಆತನಿಗೆ ಗೆಲುವು ಗ್ಯಾರಂಟಿ. ಸದ್ಯಕ್ಕೆ ಕುಂದಾಪುರ ಕ್ಷೇತ್ರದ ಇಲೆಕ್ಷನ್. ಹಾಲಾಡಿ ಸುತ್ತಲೇ ಗಿರಕಿ ಹೊಡೆಯುತ್ತಿದೆ.

ಭಟ್ಟನಿಗೆ ಚಟ್ಟ

ಹೆಂಡತಿ ಹಂತಕ, ಕಚ್ಚೆ ಹರುಕ, ಪರ್ಸೆಂಟೇಜ್, ಕಮೀಷನ್ ಕಿಂಗ್, ಸೇಂಟ್ ಮೆರೀಸ್ ಐಲ್ಯಾಂಡಿನ ರೇವ್ ಪಾರ್ಟಿ ವ್ಯವಸ್ಥಾಪಕ, ಪುಂಡರ ಮುಖಂಡ ಎಂಬೆಲ್ಲ ಅಸಂಖ್ಯ ಅಧ್ವ ನಾಮಾಂಕಿತದಿಂದ ಅಲಂಕೃತನಾಗಿರುವ ಉಡುಪಿಯ ಬಿಜೆಪಿ ಶಾಸಕಶ್ರೇಷ್ಠ ರಘುಪತಿ ಭಟ್ಟನ ರಾಜಕೀಯದ ಅಂತಿಮ ಯಾತ್ರೆಗೆ ಉಡುಪಿಯ ಜನ ಚಟ್ಟ ರೆಡಿ ಮಾಡಿಟ್ಟು ತುಂಬ ದಿನಗಳೇ ಆಗಿಹೋಗಿದೆ! ಶಾಸಕನಾಗುವ ಮೊದಲು ಮದ್ರಾಸ್ ಫೈನಾನ್ಸ್‌ನ ರಿಕವರಿ ರೌಡಿಯಾಗಿ ಅಂಡಲೆಯುತ್ತಿದ್ದ ಭಟ್ಟ ಈಗ ಹಲವು ಕೋಟಿಗೆ ತೂಗುತ್ತಾನೆ. ಈತ ಮಹೇಶ ಠಾಕೂರ್, ಉಪೇಂದ್ರ ನಾಯಕ್, ಬೆತ್ತಲೆ ಪ್ರಕರಣದ ರೂವಾರಿ ಯಶಪಾಲ್ ಸುವರ್ಣರಂಥ ಖತರ್‌ನಾಕ್ ರೌಡಿಗಳು ಮತ್ತು ತಲೆಹಿಡುಕ ಸುವರ್ಧನ ನಾಯಕರ ಗ್ಯಾಂಗ್ ಕಟ್ಟಿಕೊಂಡು ಭಟ್ಟ ಮಾಡಿರುವ ಭಾನಗಡಿಗೆಲ್ಲ ಈ ಬಾರಿಯ ಇಲೆಕ್ಷನ್‌ನಲ್ಲಿ ಪ್ರಾಯಶ್ಚಿತ್ತ ಅನುಭವಿಸೋದು ಖಂಡಿತ. ಹಾಗಂತ ಉಡುಪಿಯ ಪಕ್ಕಾ ಬಿಜೆಪಿಗಳೇ ಹೇಳುತ್ತಿದ್ದಾರೆ.


ಕಾಂಗ್ರೆಸ್‌ನಿಂದ ಜನಪರ ತುಡಿತ-ಮಿಡಿತದ ಯುವಕ

...ಮೋದ್ ಮಧ್ವರಾವ್ ಸ್ಪರ್ಧಿಸುವುದು ಖಾತ್ರಿಯಾಗಿದೆ. ...ಳೆದ ಬಾರಿ ತೀರ ಸಣ್ಣ ಅಂತರದಲ್ಲಿ ಸೋತ ಪ್ರಮೋದ್ ...ಗ್ಗೆ ಕ್ಷೇತ್ರದಲ್ಲಿ ಸರಳ-ಸಜ್ಜನ-ಕೆಲಸಗಾರ ಮಾನವೀಯ ...ದಿತದ ದಾನಿ ಎಂಬ ಅಭಿಪ್ರಾಯವಿದೆ. ಕಷ್ಟ ಪಟ್ಟು ...ೇನು ಎಗ್ಗೇ ಉದ್ಯಮ ನಡೆಸುತ್ತಿರುವ ಪ್ರಮೋದ್‌ಗೆ ...ಣದ ಕೊರತೆಯೂ ಇಲ್ಲ. ಜನರನ್ನು ಶತ್ರುಗಳಂತೆ ...ರಿಗಣಿಸುವ ಬಿಜೆಪಿಯ ರಘುಪತಿ ಭಟ್ಟ ಮತ್ತು ...ನಬಳಕೆಯ ಕಾಂಗ್ರೆಸ್‌ನ ಪ್ರಮೋದ್ ನಡುವೆ ನೇರಾನೇರ ...ಂಗಿ ನಿಖಾಲಿ ಕುಸ್ತಿ ಈ ಬಾರಿ ನಡೆಯಲಿದೆ. ಅಂತಿಮವಾಗಿ ...ಟ್ಟಿ ಡಾಗ್ ಹೌಸ್‌ಗೆ, ಪ್ರಮೋದ್ ಮಧ್ವರಾವ್ ಅಸೆಂಬ್ಲಿ ...ೌಸ್‌ಗೆ ಹೋಗಲಿದ್ದಾರೆಂದು ಜನ ಈಗಲೇ ರಿಸಲ್ಟ್ ...ರೆದಿಟ್ಟಿದ್ದಾರೆ.

ಸೊರಕೆ ನಿಂತರೆ ವಿನ್

ಕಾಪು ವಿಧಾನಸಭಾ ಕ್ಷೇತ್ರ ಲಾಗಾಯ್ತಿನಿಂದಲೂ ...ಂಗ್ರೆಸ್‌ನ ಭದ್ರಕೋಟೆ. ಅಲ್ಪಸಂಖ್ಯಾತ ಕ್ರಿಶ್ಚಿಯನ್, ...ುಸ್ಲಿಮ್ ಗಣನೀಯವಾಗಿರುವ, ಬಹು ಸಂಖ್ಯಾತರಲ್ಲಿ ...ಜೆಪಿ ಬಗ್ಗೆ ಅಲರ್ಜಿ ಇರುವ ಕ್ಷೇತ್ರವಿದು. ಆದರೆ ...ಂಗ್ರೆಸ್‌ನೊಳಗೆ ಕಾಲೆಳೆದಾಡುವ ಕಸರತ್ತು ವಿಪರೀತಕ್ಕೆ ...ೋಗಿರುವುದರಿಂದ ಕಳೆದೆರಡು ಇಲೆಕ್ಷನ್‌ನಲ್ಲಿ ಬಿಜೆಪಿಯ ...ದ್ದ ಶಿಖಾಮಣಿ ಲಾಲಾಜಿ ಮೆಂಡನ್ ಗೆದ್ದು ಬಂದಿದ್ದಾನೆ. ...ಈ ಲಾಲಾಜಿ ಎಂಬ ತಿರುಬೋಕಿ ಆಸಾಮಿ ಶಾಸಕನಾಗಿದ್ದೇ ...ದ, ತಲೆ ತಿರುಗಿಹೋಗಿದೆ. ಅಹಂಕಾರ ನೆತ್ತಿಗೇರಿದೆ; ...ಾಸಕನಾಗಿರುವುದೇ ಸ್ವಜೀರ್ಣೋದ್ಧಾರಕ್ಕೆ, ಕಲ್ಲಡ್ಕನ ...ಾದರಕ್ಷೆಯ ಧೂಳು ಒರೆಸೋದಕ್ಕೆ ಎಂದಾತ ದೃಢವಾಗಿ ...ಂಬಿದ್ದಾನೆ.

ಕಾಪು -ಪರಿಸರಕ್ಕೆ ಗಂಡಾಂತರಕಾರಿ ಆಗಿರುವ ...ುಪಿಸಿಎಲ್ ಎಂಬ ಕಲ್ಲಿದ್ದಲು ವಿದ್ಯುತ್ ಘಟಕದ ...ರವಿರುವ ಈ ದಗಲುಬಾಜಿ ಮೆಂಡನ್ ನಡೆ-ನುಡಿಗೆ ...ೇತ್ರವಾಸಿಗಳು ರೋಸಿಹೋಗಿದ್ದಾರೆ. ಆತನಿಗೆ ...ುದ್ಧಿ ಕಲಿಸಲು ಸಿದ್ಧರಾಗಿದ್ದಾರೆ. ಆದರೆ ...ಂಗ್ರೆಸ್ ಒಳಗಿನ ದ್ವೇಷಾಸೂಯೆ 8-10 ...ರ್ಷದಿಂದ ಒಂದೇಥರ ನಡೆದುಕೊಂಡು ...ೋಗಿದೆ. ಕಾಂಗ್ರೆಸ್ ಮಾಂಡಲೀಕರಾದ ...ಸ್ಕರ್, ಮೊಯ್ಲಿ, ಸೊರಕೆಯಂಥವರು ಈ ...ಗಳ ಬಗೆಹರಿಸಿ ಪಾರ್ಟಿ ಕಟ್ಟಲು ...ನಸಲ್ಲೂ ಯೋಚಿಸುತ್ತಿಲ್ಲ. ಇದೇ ಈ ...ೇತ್ರದ ಬಿಜೆಪಿಯ ಬಲ; ಕಾಂಗ್ರೆಸ್‌ನ ...ವಸಾನದ ಗುಟ್ಟು.



ಜಯಪ್ರಕಾಶ್ ಹೆಗ್ಡೆ

ಮಾಜಿ ಮಂತ್ರಿ ಸಾಲಿಯಾನ್‌ನ ಕಂಡರೆ ...ೇತ್ರ ಕಾಂಗ್ರೆಸಿಗರಿಗೆ ಆಗದು. ಮೂರು ...ಲ ಶಾಸಕನಾಗಿ- ಮಂತ್ರಿಯಾಗಿ ಆತ ಅಹಂಕಾರ-ಅಂತಸ್ತು ...ಕ್ರಮ ದಂಧೆ ಬೆಳೆಸಿಕೊಂಡರೇ ಹೊರತು ಜನರ ...ಷ್ಟ-ಸುಖದತ್ತ ಕಣ್ಣು ಹಾಯಿಸಲಿಲ್ಲ. ಜತೆಗೆ ...ನಯಕುಮಾರ್ ಸೊರಕೆಯಂಥ ಸ್ವಜಾತಿ (ಬಿಲ್ಲವ) ...ಕ್ತಿವಾನ್‌ಗಳನ್ನು ಎದುರು ಹಾಕಿಕೊಂಡರು. ಅಳಿಯ ...ುವರ್ಣನ ಭಾನ್ಗಡಿಯಂತೂ ಮಿತಿಮೀರಿ ಹೋಗಿತ್ತು. ...ೀಗಾಗಿ ಜಿಪಂ ಸದಸ್ಯೆಯಾಗಿದ್ದ ಸರಸು ಬಂಗೇರಾ, ದಿವಾಕರ ...ೆಟ್ಟಿ, ಗುರ್ತಿಸುರಜ್ ಶೆಟ್ಟಿ, ಸುಧೀರ್ ಹೆಗಡೆಯಂಥವರು ...ಮಗೇ ಟಿಕೆಟ್ ಬೇಕೆಂದು ಕಳೆದ ಬಾರಿ ಧ್ವನಿ ಏರಿಸಿದ್ದರು. ...ದರೂ ಕ್ಷೇತ್ರದ ನಾಡಿಮಿಡಿತ ಅರಿಯದ ಎಐಸಿಸಿ ...್ಥಳೀಯನಾದರೂ ಪ್ರಯೋಜನಕ್ಕೆ ಬಾರದ ಪವರ್ ಬ್ರೋಕರ್ ...ಂ ಸೋನಿಯಾ ಮೇಡಂ ಪರಿಚಾರಕ ಆಸ್ಕರಣ್ಣ ಈ ...ಹೋಪ್‌ಲೆಸ್ ಸಾಲಿಯಾನ್‌ಗೇ ಟಿಕೆಟ್ ಕೊಟ್ಟಿದ್ದರು. 2008 ...ರ ಮತ್ತು ಅದಕ್ಕಿಂತ ಹಿಂದಿನ ಎರಡೂ ಚುನಾವಣೆಯಲ್ಲಿ ...ಟಿಕೆಟ್ ಕೊಡುವಾಗ ಆಸ್ಕರ್, ಮೊಯ್ಲಿಗಳು ಎಡವಿದ್ದರು. ...ಾಲಿಯಾನ್‌ನನ್ನು ಬದಲಿಸಿ ಬೇರೆ ಬಿಲ್ಲವನನ್ನು ಕಾಂಗ್ರೆಸ್ ...ಭ್ಯರ್ಥಿಯಾಗಿಸಿದ್ದರೆ ಗೆಲುವು ಸಿಗುತ್ತಿತ್ತು. ಚೆಡ್ಡಿ ಶಾಸಕ ...ೆಂಡನ್‌ಗೆ ವೈಯಕ್ತಿಕ ನೆಲೆ- ಬೆಲೆಯಿಲ್ಲ. ಕಾಂಗ್ರೆಸ್ ...ಿರಿಯರಿಗೆ ಅದ್ಯಾಕೋ ಅರ್ಥವೇ ಆಗುತ್ತಿಲ್ಲ.

ಈ ಬಾರಿ ಬರೋಬ್ಬರಿ ಒಂದು ಡಜನ್ ಟಿಕೆಟ್ ...ಕಾಂಕ್ಷಿಗಳು ಕಾಂಗ್ರೆಸ್‌ನಲ್ಲಿ ತಯಾರಾಗಿದ್ದಾರೆ. ಆದರೆ ...ಐಸಿಸಿ ಕಾರ್ಯದರ್ಶಿ-ಮಾಜಿ ಸಂಸದ ವಿನಯಕುಮಾರ್ ...ೊರಕೆ ರಾಜಿ ಅಭ್ಯರ್ಥಿಯಾದರೆ ಸಾಲಿಯಾನ್ ಒಬ್ಬನ ...ಿಟ್ಟು ಉಳಿದ್ಯಾರದ್ದು ತಕರಾರಿಲ್ಲ. ಅತ್ತ ಪುತ್ತೂರಲ್ಲೂ ...ೆಲೆ ಕಳೆದುಕೊಂಡಿರುವ ಮತ್ತೆ ಉಡುಪಿಯಿಂದ ಸಂಸದ ...ಾಗುವ ಛಾನ್ಸ್ ಇಲ್ಲದ ಸೊರಕೆ ಕಾಪುಕ್ಕೆ ಫಿಟ್ ಕ್ಯಾಂಡಿ ...ೇಟ್. ಆಸ್ಕರ್ ಕಾಪು ಕ್ಷೇತ್ರದ ಅಭ್ಯರ್ಥಿ ಆರಿಸುವ ...ವಾಬ್ದಾರಿ ವಹಿಸಿಕೊಂಡಿದ್ದಾರೆ. ಸೊರಕೆ ಇಲ್ಲಿ ಕಾಂಗ್ರೆಸ್ ...್ಯಾಂಡಿಡೇಟಾದರೆ ಚೋಭದ್ರಗೇಡಿ ಲಾಲಾಜಿ ಮೆಂಡನ್‌ನನ್ನು ...ಮಣಿಸಬಹುದೆಂಬ ಸರಳ ಸತ್ಯ ಆಸ್ಕರ್‌ಗೆ ಜ್ಞಾನೋದಯ ...ಈ ಬಾರಿಯಾದರೂ ಆದೀತಾ? ಹಾಗೆಂಬುದು ನಿಷ್ಠಾವಂತ ...ಾಂಗ್ರೆಸಿಗರ ಪ್ರಶ್ನೆ.

ಸೋಗಲಾಡಿ ಸುನಿಲ್ V/s ಜನಪರ ಭಂಡಾರಿ

ಕಾರ್ಕಳದಲ್ಲಿ ಹಳೆಯ ಹುಲ್ಲಿಗಳೇ ಮತ್ತೆ ಹಣಾಹಣಿಗೆ ...ಣಿಯಾಗುತ್ತಿದ್ದಾರೆ. ಇದೀ ಜಿಲ್ಲೆಯಲ್ಲಿ ಕಾಂಗ್ರೆಸ್ ಕೈಲಿರುವ ...ಏಕೈಕ ಕ್ಷೇತ್ರವಿದು. ದಶಕಗಟ್ಟಲೆ ಈ ಕ್ಷೇತ್ರ ಆಳಿದ್ದು ...ವೀರಪ್ಪ ಮೊಯ್ಲಿ, ಈತ ಮಂತ್ರಿ ಮುಖ್ಯಮಂತ್ರಿ ಆದನಂತರ ...ಪಿ ಆಗುವ ಹುಕ್ಕಿಯಿಂದ ಮಂಗಳೂರು-ಚಿಕ್ಕಮಗಳೂರು ...ಕ್ಷೇತ್ರಕ್ಕೆ ವಲಸೆ ಹೋಗಿದ್ದರು. ಆಗ ಈ ಕ್ಷೇತ್ರ ತನ್ನ ಬಲಗೈ ಭಂಟನಂತಿದ್ದ ಗೋಪಾಲ ಭಂಡಾರಿಗೆ ಬಿಟ್ಟುಕೊಟ್ಟಿದ್ದರು. ಅಲ್ಲಿಯವರೆಗೂ ಜಿಪಂ ಸದಸ್ಯನಾಗಿದ್ದ ಅತೀ ಸಣ್ಣ ಕ್ಷೌರಿಕ ಸಮುದಾಯದ ಗೋಪಾಲ ಭಂಡಾರಿ ಮೊದಲ ಪ್ರಯತ್ನದಲ್ಲೇ ಶಾಸಕನಾಗಿದ್ದರು.

ಅದಕ್ಕೆ ಕಾರಣ ಆತನ ಸರಳ-ಸಜ್ಜನಿಕೆ ಮತ್ತು ಜನಪರವಾಗಿ ಹಗಲಿರುಳೂ ದುಡಿಯುವ ನಿಯತ್ತು-ನಿಷ್ಠೆ. ಈ ಗೋಪಾಲ ಅಧಿಕಾರದ ಹಮ್ಮುಬಿಮ್ಮು ಎಂದೂ ತೋರಿಸಿದವರೇ ಅಲ್ಲ; ಅನರ್ಹರಿಗೆ, ಸಮಾಜ ಘಾತುಕರಿಗೆ ಮಣೆ ಹಾಕಿದವರಲ್ಲ. ಲಂಚ-ರುಷುವತ್ತಿಗೆ ಕೈಬಾಯಿ ಹಾಕಿದವರಲ್ಲ. ಈ ಗುಣ ಧರ್ಮವೇ ಆತನನ್ನು ಶಾಸಕನಾಗಿಸಿತ್ತು ಆದರೆ ಮರು ಪ್ರಯತ್ನದಲ್ಲಿ ಆತ ಅನಿರೀಕ್ಷಿತವಾಗಿ ಸೋತರು. ಆಗ ಗೆದ್ದಿದ್ದು ಭಜರಂಗಿ ಭೂಪ ಸುನಿಲ್ ಕುಮಾರ್. ಈತ ಮತಾಂಧ ದತ್ತಪೀಠ ಅಭಿಯಾನದ ಬೈಪ್ರಾಡಕ್ಟ್; ಮಂತ್ರಿ ಸಿ.ಟಿ.ರವಿ ಥರ. ಈ ಸುನಿಲ್‌ಕುಮಾರ್ ತಾನು ಕಾರ್ಕಳದ ಬಹುಸಂಖ್ಯಾತ ಬಿಲ್ಲವರ ಕುಲೋದ್ಧಾರಕನೆಂಬ ಜಾತಿ ಟ್ರಾಂಪ್ ಕಾರ್ಡ್ ಬಳಸಿ ಗೆದ್ದಿದ್ದ.

ಆದರೆ ಸ್ಥಳೀಯ ಬಿಲ್ಲವರಿಗೆ ಈತ ಅರೆಬಿಲ್ಲವ ಎಂಬ ಸತ್ಯ 2008ರ ಇಲೆಕ್ಷನ್ ವೇಳೆಗೆ ಗೊತ್ತಾಗಿತ್ತು. ಜತೆಗೆ ಈತ ಶಾಸಕನಾಗಿ ಲಾರಿಗಳು, ಆಸ್ತಿ, ಹಣ ಮಾಡಿಕೊಳ್ಳಲು ಮಸಲತ್ತು ನಡೆಸಿದ್ದು, ಜನರನ್ನು ಮರೆತು ಮೋಜು ಮಸ್ತಿಯಲ್ಲಿ ಮೈಮರೆತದ್ದು ಜನರನ್ನು ಕೆರಳಿಸಿತ್ತು. ಹೀಗಾಗಿ ಈ ಸುನಿಲ್ ಎಂಬ ಸೋಗಲಾಡಿ ಹಿಂದೂವಾದಿಗಿಂತ ಎಲ್ಲ ಜಾತಿ ಧರ್ಮೀಯರ ಜತೆ ತಾರತಮ್ಯವಿಲ್ಲದೆ ಬೆರೆಯುವ ಗೋಪಾಲ ಭಂಡಾರಿಯೇ ಬೆಟರ್ ಎಂದು ಅನ್ನಿಸಿತ್ತು. ಸುನೀಲ್‌ನನ್ನು ಸೋಲಿಸಿ ಕಾರ್ಕಳದ ಜನರು ಭಂಡಾರಿಯನ್ನು ಶಾಸಕನಾಗಿ ಮಾಡಿಕೊಂಡಿದ್ದರು. ಭಂಡಾರಿ ಜನರ ವಿಶ್ವಾಸಕ್ಕೆ ದ್ರೋಹ ಮಾಡಲಿಲ್ಲ. ವಿರೋಧ ಪಕ್ಷದ ಶಾಸಕನಾದರೂ ಶಕ್ತಿ ಮೀರಿ ಅನುದಾನ ತಂದು ಕ್ಷೇತ್ರದ ಅಭಿವೃದ್ಧಿಗೆ ಶ್ರಮಿಸಿದರು. ಭಜರಂಗಿ ಸುನೀಲ್‌ನಂತೆ ಕ್ಷೇತ್ರದ ನೆಮ್ಮದಿ ಕೆಡಿಸುವ ಒಣ ಪ್ರತಿಷ್ಠೆಯ ರಾಜಕಾರಣ ಮಾಡದೆ ನೊಂದವರಿಗೆ ಸ್ಪಂದಿಸಿದರು.

ಇತ್ತ ಸುನೀಲ್ ಮತ್ತೆ ಶಾಸಕನಾಗಲೇ ಬೇಕೆಂದು ಥಕಧಿಮಿ ಕುಣಿಯುತ್ತಲೇ ಇದ್ದಾನೆ. ಕೋಮು ಕರಾಮತ್ತು-ಜಾತಿಜಗಳ ಮಾಡುತ್ತ ಜನರ ದಾರಿ ತಪ್ಪಿಸುತ್ತಿದ್ದಾನೆ. ಕಳೆದ ಚಿಕ್ಕಮಗಳೂರು ಬೈ ಇಲೆಕ್ಷನ್‌ನಲ್ಲಿ ಬಿಜೆಪಿ ಅಭ್ಯರ್ಥಿಯಾಗಿದ್ದ ಸುನೀಲ್‌ಗೆ ಕಾರ್ಕಳದಲ್ಲಿ ಸಿಕ್ಕಿದ್ದು ಬರೀ ಒಂದೇ ಒಂದು ಸಾವಿರ ಮತದ ಮುನ್ನಡೆ. ಉಳಿದೆಲ್ಲೆಡೆ ಹಿನ್ನಡೆ ಅನುಭವಿಸಿದ್ದ ಸುನಿಲ್‌ಗೆ ಕಾರ್ಕಳದಲ್ಲಿ ಕ್ಷೇತ್ರದವನೆಂದು ಜನ ಓಟು ಹಾಕಿದ್ದರು. ಆದರೆ ಅಸೆಂಬ್ಲಿ ಇಲೆಕ್ಷನ್‌ನಲ್ಲಿ ಆತ ಗೋಪಾಲ ಭಂಡಾರಿ ಎದುರು ಗೆಲ್ಲುವುದು ಕಷ್ಟ. ಏಕೆಂದರೆ, ಬಿಜೆಪಿಯ ಕಟ್ಟಾ ಬೆಂಬಲಿಗರಾದ ಕೊಂಕಣಿಗರೇ ಈ ಠೇಂಕಾರ-ತರಲೆ, ಗೋಲ್‌ಮಾಲ್-ಜಾತಿವಾದಿಗಿಂತ ಸರಳ ಸ್ವಭಾವದ ಸಜ್ಜನ ಗೋಪಾಲ ಭಂಡಾರಿಯೇ-ಶಾಸಕನಾಗಲು ಅರ್ಹನೆಂದು ಭಾವಿಸಿದ್ದಾರೆ. ಅದೇನೇ ಇರಲಿ, ಕಾರ್ಕಳದಲ್ಲಿ ಬಿಜೆಪಿ V/S ಕಾಂಗ್ರೆಸ್ ಕತ್ತುಕತ್ತಿನ ಕುಸ್ತಿ ನಡೆಯುವುದು ಖಾತ್ರಿ!

ಕಾಲಿಲ್ಲದ ಕಾಂಗ್ರೆಸ್

ಕಳೆದ ಒಂದೂವರೆ ದಶಕದಿಂದ ಉಡುಪಿ ಜಿಲ್ಲೆಯಲ್ಲಿ ಕಾಂಗ್ರೆಸ್ ಬರ್ಬಾದ್ ಆಗುತ್ತ ಸಾಗಿದೆ. ಸಂಘಟನಾತ್ಮಕ ಶಕ್ತಿಯೇ ಇಲ್ಲದ ಕಾಂಗ್ರೆಸ್ ಕಾಲಿಲ್ಲದ ಹೆಳವನಂತೆ ತವಳುತ್ತಿದೆ. ಸಂಘ ಪರಿವಾರದ ಅನೈತಿಕ ಪೊಲೀಸ್‌ಗಿರಿ, ಅಕ್ರಮ ವ್ಯವಹಾರ, ಸಂಸ್ಕೃತಿ ಹೆಸರಲ್ಲಿ ಹೆಂಗಸರ ಮೇಲೆ ಬಿದ್ದು ಚಟ ತೀರಿಸಿಕೊಳ್ಳೋದು, ಅಮಾಯಕ ಅಲ್ಪಸಂಖ್ಯಾತರನ್ನು ಸತಾಯಿಸಿ ಪಾಲಿಟಿಕಲ್ ಮೈಲೇಜಿಗೆ ಹವಣಿಸೋದು, ರಕ್ತ ರಾಜಕಾರಣ, ಅಧರ್ಮಕಾರಣವನ್ನೆಲ್ಲಾ ಬಳಸಿಕೊಂಡು ಎದುರಾಳಿಯನ್ನು ಹಣಿಯಲು ಕಾಂಗ್ರೆಸಿಗರು ವ್ಯವಸ್ಥಿತ ಸ್ಟ್ರಟಜಿ ಹೆಣೆದದ್ದೇ ಇಲ್ಲ. ಆಸ್ಕರ್, ಮೊಯ್ಲಿ, ಪೂಜಾರಿ ಎಂಬ ಸೆಟ್ ದೋಸೆಗಳು ವೈಯಕ್ತಿಕ, ಪ್ರತಿಷ್ಠೆಗೆ ಜಿಲ್ಲಾ ಕಾಂಗ್ರೆಸ್ ರಾಜಕಾರಣದಲ್ಲಿ ಗೊಂದಲ ಮೂಡಿಸಿ ರಾಷ್ಟ್ರ-ರಾಜ್ಯ ಮಟ್ಟದಲ್ಲಿ ಮಿಂಚುತ್ತಿದ್ದಾರೆ.

ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಗೋಪಾಲ ಪೂಜಾರಿಗೆ ಜಿಲ್ಲಾ ಮಟ್ಟದಲ್ಲಿ ಪಕ್ಷ ಕಟ್ಟುವ ನಾಯಕತ್ವದ ಕಳೆಯೇ ಇಲ್ಲ. ಆತನದು ಬೈಂದೂರಲ್ಲಿ ತಾನೊಬ್ಬ ಶಾಸಕನಾದರೆ ಸಾಕೆಂಬ ಪ್ರಯತ್ನ, ಪಾಪ! ಜಿಲ್ಲೆಯ ಜನರಿಗೆ ಬಿಜೆಪಿ ಸಹವಾಸ ಸಾಕಾಗಿದೆ. ಆದರೆ ಪರ್ಯಾಯ ಪಕ್ಷ ಕಾಣುತ್ತಿಲ್ಲ. ಜೆಡಿಎಸ್‌ಗೆ ದೇವಿಪ್ರಸಾದ್ ಶೆಟ್ಟಿ, ಮಾಜಿ ಶಾಸಕ ಯು.ಆರ್. ಸಭಾಪತಿಯಂಥವರಿಂದ ಜೀವ ತುಂಬಲು ಆಗುತ್ತಿಲ್ಲ. ಇಂಥ ಸಂಕ್ರಮಣ ಕಾಲಘಟ್ಟದಲ್ಲಿ ಕಾಂಗ್ರೆಸ್‌ನ ಆಸ್ಕರ್, ಮೊಯ್ಲಿ, ಸೊರಕೆ, ಪೂಜಾರಿ, ಜಯಪ್ರಕಾಶ್ ಹೆಗ್ಡೆ ಪ್ರತಾಪಚಂದ್ರ ಶೆಟ್ಟಿಯಂಥವರು ತಮ್ಮ ದ್ವೇಷಾಸೂಯೆ ಬಿಟ್ಟು ಬಿಜೆಪಿಯ ಪಾಪ ಪಾತಕಗಳ ಲಾಭ ಪಡೆದುಕೊಂಡರೆ ಕಾಂಗ್ರೆಸ್‌ಗೆ ಭವಿಷ್ಯವಿದೆ. ಜನರ ವಿಶ್ವಾಸ ಗಳಿಸುವ ಪ್ರಯತ್ನ ಇನ್ನಾದರೂ ಕಾಂಗ್ರೆಸಿಗರು ಮಾಡಿಯಾರಾ? ಮೈ ಕೊಡವಿ ಎದ್ದಾರಾ? ಅಥವಾ ಕಾಂಗ್ರೆಸಿಗರೇ ಅನಾಹುತಕಾರಿ ಕಲ್ಲಡ್ಕ ಭಟ್ಟನನ್ನು ಚೆಡ್ಡಿ ರಿಪಬ್ಲಿಕ್‌ನ ಅನಭಿಷಕ್ತ ದೊರೆಯಾಗಿ ಪಟ್ಟಾಭಿಷೇಕ ಮಾಡುವರಾ?

ಇಂಥ ರೋಚಕ ಪ್ರಶ್ನಾವಳಿಗಳೀಗ ಜಿಲ್ಲಾ ರಾಜಕಾರಣದ ಜಗುಲಿಯಲ್ಲಿ ಚರ್ಚೆಯ ವಸ್ತುಗಳಾಗಿವೆ! ● ನಹುಷ

ಏರ್‌ಟೆಲ್ ಬಗ್ಗೆ ಎಚ್ಚರಿಕೆ

ದೂರಸಂಪರ್ಕ ಕ್ಷೇತ್ರವನ್ನು ಖಾಸಗಿಯವರಿಗೆ ತೆರೆದಿಟ್ಟಾಗ, ಸ್ಪರ್ಧೆಯ ಕಾರಣವಾಗಿ ಗ್ರಾಹಕರಿಗೆ ಹೆಚ್ಚಿನ ಅನುಕೂಲವಾಗುತ್ತದೆ ಎಂದೇ ನಾವೆಲ್ಲ ಭಾವಿಸಿದ್ದೆವು. ಆದರೆ ಅಲ್ಲಿ ಸೇವೆಯ ಅನುಕೂಲಕ್ಕಿಂತಲೂ ಶೋಷಣೆಯ ಕ್ರೌರ್ಯವೇ ಹೆಚ್ಚು ಎಂಬುದು ಅನುಭವಿಸಿದವರಿಗಷ್ಟೇ ಗೊತ್ತು.

ಉದಾಹರಣೆಗೆ ಏರ್‌ಟೆಲ್ ಎಂಬ ಬ್ರೇಡ್ ಸಂಸ್ಥೆ ಗ್ರಾಹಕರನ್ನು ವಂಚಿಸುತ್ತಿರುವ ರೀತಿಯನ್ನೇ ಗಮನಿಸಿ. ನಾನು ಫುಲ್ ಟಾಕ್ ಟೈಂ ಪಡೆಯುವ ಉದ್ದೇಶದಿಂದ ಕಳೆದ ಸೆಪ್ಟಂಬರ್ 24 ರಂದು ಸದರಿ ಸಂಸ್ಥೆಗೆ ಆನ್‌ಲೈನ್ ಮೂಲಕ 250 ರೂಪಾಯಿ ಪಾವತಿಸಿದೆ. ಆದರೆ ಕೇವಲ ಒಂದು ರೂಪಾಯಿಯ ಟಾಕ್ ಟೈಂ ಮಾತ್ರ ನನ್ನ ಖಾತೆಗೆ ಜಮೆ ಆದಾಗ ನೆಲವೇ ಕುಸಿದ ಅನುಭವ ನನಗಾಗಿತ್ತು. ತಕ್ಷಣ ಕಾಲ್ ಸೆಂಟರನ್ನು ಸಂಪರ್ಕಿಸಿ ತಪ್ಪನ್ನು ಸರಿಪಡಿಸುವಂತೆ ಕೋರಿದಾಗ "250 ರೂಪಾಯಿಯು 3G ಪ್ಯಾಕೇಜ್ (ಇಂಟರ್ನೆಟ್ ಸೌಲಭ್ಯ) ಆಗಿರುವುದರಿಂದ ನಿಮ್ಮ ಕೋರಿಕೆಯನ್ನು ಮನ್ನಿಸಲಾಗದು" ಎಂದರು. ಮಾತ್ರವಲ್ಲ "ನಿಮ್ಮ ಮೊಬೈಲ್ 3G ಸೇವೆ ಬಳಸಿಕೊಳ್ಳಲು ಪ್ರಶಸ್ತವಾಗಿದೆ" ಎಂದೆಲ್ಲ ಉಪದೇಶ ನೀಡತೊಡಗಿದ. "ನನ್ನ ಮೊಬೈಲ್ ತೀರಾ ಹಳೆಯದು, ಅದರ ಎಲ್‌ಸಿಡಿ ತೆರೆಯಲ್ಲಿ ಗೆರೆಗಳು ಕಾಣಿಸಿಕೊಂಡು ಸಂದೇಶವನ್ನೂ ಓದಲಾಗದ ಸ್ಥಿತಿಯಲ್ಲಿದೆ. ಮಾತ್ರವಲ್ಲ ನಾನು ಮೊಬೈಲನ್ನು ಬಹುವಾಗಿ ಮಾತನಾಡಲು ಮಾತ್ರ ಬಳಸುತ್ತಿರುವುದರಿಂದ ನನಗೆ ಅದರಲ್ಲಿ 3G ಸೌಲಭ್ಯದಿಂದ ಏನೇನೂ ಪ್ರಯೋಜನವಿಲ್ಲ. ನನ್ನ ಹಣ ಮರಳಿಸಿ ಎಂದೇನೂ ನಾನು ಕೇಳುತ್ತಿಲ್ಲ. ಪ್ಯಾಕೇಜ್ ಬದಲಾಯಿಸಿ ಟಾಕ್ ಟೈಂ ಆಗಿ ಪರಿವರ್ತಿಸಿ ಎಂದಷ್ಟೇ ಕೇಳುತ್ತಿದ್ದೇನೆ" ಎಂದು ಪರಿಪರಿಯಾಗಿ ವಿನಂತಿಸಿಕೊಂಡರೂ ಆತ ಜಗ್ಗಲಿಲ್ಲ. ಮಾರನೇ ದಿನ ಕಾಲ್ ಸೆಂಟರನ್ನು ಮುಖತಃ ಭೇಟಿಯಾದಾಗಲೂ ಇದೇ ನಿರಾಕರಣೆ. ಈ ನಡುವೆ ಸದರಿ ಸಂಸ್ಥೆಯ ಗ್ರಾಹಕ ಸೇವೆಗಳ ಅನೇಕ 'ನಿರ್ಜೀವ ಯಂತ್ರಗಳು' ನಮ್ಮೊಂದಿಗೆ ಲೆಕ್ಕವಿಲ್ಲದಷ್ಟು ಬಾರಿ ವ್ಯವಹರಿಸಿದವು!

ಎಲ್ಲ ದಾರಿಯೂ ಮುಗಿದಾಗ ಸದರಿ ಸಂಸ್ಥೆಯ ನೋಡಲ್ ಅಧಿಕಾರಿಗೆ ಬರೆದು ಮತ್ತೆ ವಿನಂತಿಸಿಕೊಂಡೆವು (ಅವರು ಗ್ರಾಹಕರ ಬಗ್ಗೆ ಹೆಚ್ಚು ಸಂವೇದನಾಶೀಲರಾಗಿರುತ್ತಾರೆ, ನಿಮಗೆ ಅನುಕೂಲವಾಗುವಂತೆ ಸಮಸ್ಯೆ ಬಗೆಹರಿಸುತ್ತಾರೆ ಎಂದು ನಮಗೆ ಕೆಲವರು ಹೇಳಿದ್ದರು). ಒಂದಷ್ಟು ದಿನಗಳ ಬಳಿಕ ಅಲ್ಲಿಂದ ಉತ್ತರ ಬಂದು ಇನ್ನೊಂದು ಸಂಖ್ಯೆಯನ್ನು ಸಂಪರ್ಕಿಸಲು ಹೇಳಿದರು. ಸಂಪರ್ಕಿಸಿದಾಗ ಲೈನ್‌ಗೆ ಬಂದ ಓರ್ವ ವ್ಯಕ್ತಿ ಮತ್ತೆ ಪೂರ್ವಾಪರ ಎಲ್ಲವನ್ನೂ ಕೇಳಿ ಸಮಸ್ಯೆ ಬಗೆಹರಿಸಲು ಮತ್ತು ನಮಗೆ ಸಕಾರಾತ್ಮಕವಾಗುವಂತೆ ನೋಡಿಕೊಳ್ಳಲು ಯತ್ನಿಸುವುದಾಗಿ ಹೇಳಿದ. ಕೊನೆಗೂ 20 ದಿನಗಳ ಬಳಿಕ ಅಂದರೆ ಅಕ್ಟೋಬರ್ 14 ರಂದು ನಮ್ಮನ್ನು ಸಂಪರ್ಕಿಸಿದ ಇನ್ನೊಬ್ಬಾತ ಸಮಸ್ಯೆ ಪರಿಹರಿಸಿದ! ಆತ ನೀಡಿದ ಪರಿಹಾರ ಏನು ಗೊತ್ತೇ? "ನೀವು ಕೇಳಿದ ಪ್ಯಾಕೇಜನ್ನೇ ನಾವು ಕೊಟ್ಟಿದ್ದೇವೆ. ನಮ್ಮ ಕಡೆಯಿಂದ ನಾವು ಸರಿಯಾಗಿಯೇ ಇದ್ದೇವೆ. ನಿಮಗೆ ಒದಗಿಸಲಾದ ಪ್ಯಾಕೇಜಿನಲ್ಲಿ ಆ ಸೌಲಭ್ಯ ಇದೆ... ಈ ಸೌಲಭ್ಯ ಇದೆ..." ಎಂದು ಮತ್ತೆ ಪುಂಗಿ ಊದತೊಡಗಿದ. ಮಾಧ್ಯಮದ ಮೊರೆಹೋಗುವುದಾಗಿ ತಿಳಿಸಿದಾಗ, ಏನುಬೇಕಾದರೂ ಮಾಡಿ ಎಂಬಂತೆ ಉದ್ಧಟತನದಿಂದ ಮಾತನಾಡಿದ. ಇದು ಏರ್‌ಟೆಲ್ ಸಂಸ್ಥೆ ತನ್ನ ಗ್ರಾಹಕರಿಗೆ ಒದಗಿಸುತ್ತಿರುವ 'ಅದ್ಭುತ' ಸೇವೆ. ಅವರ ಈ ಅದ್ಭುತ ಸೇವೆಗೆ ನಾನು 250 ರೂಪಾಯಿ ತೆತ್ತು 1 ರೂಪಾಯಿಯ ಟಾಕ್ ಟೈಂ ಪಡೆದೆ.

ಹಾಗಾಗಿ ನೀವು ಏರ್‌ಟೆಲ್ ಗ್ರಾಹಕರಾಗಿದ್ದಲ್ಲಿ ಅವರ ವ್ಯವಹಾರಗಳ ಬಗ್ಗೆ ಎಚ್ಚರಿಕೆಯಿಂದಿರಿ. ನನ್ನ ಹಾಗೆ ಮೋಸಹೋಗದಿರಿ. ಅದು ಗ್ರಾಹಕರಿಗೆ ಸೇವೆ ಒದಗಿಸುವ ಸಂಸ್ಥೆಯಲ್ಲ, ಗ್ರಾಹಕರನ್ನು ವಿನೂತನ ರೀತಿಯಲ್ಲಿ ದೋಚುವ ಸಂಸ್ಥೆ. ಹೇಗೂ ನಂಬರ್ ಬದಲಾಯಿಸದೆಯೇ ಬೇರೆ ಸಂಸ್ಥೆಗೆ ವರ್ಗಾಯಿಸುವ ಸೌಲಭ್ಯವನ್ನು ಟ್ರಾಯ್ ನೀಡಿದೆ. ಹಾಗಾಗಿ ಏರ್ ಟೆಲ್ ಸಂಸ್ಥೆಯ ಶೋಷಣೆಯ ಕಬಂಧಬಾಹುಗಳಿಂದ ಬೇಗನೇ ಬಿಡಿಸಿಕೊಳ್ಳುವ ಬಗ್ಗೆ ತೀರ್ಮಾನಿಸಿ.

- ಗುಲಾಬಿ ಬಿಳಿಮಲೆ, ಮಂಗಳೂರು

ಸುವರ್ಣ ಸೌಧ-ಯಾರ ಪಾಲಿನ ಬಂಗಾರ?

→ 2

ಅರಸರ ಅರಮನೆಯನ್ನು ಈಗ ಆ ಭಾಗದ 11 ಜನ ರಾಜಕಾರಣಿ ಉದ್ದಿಮೆದಾರರು ಕೊಂಡುಕೊಂಡಿದ್ದಾರೆ. ಅವರಲ್ಲಿ ಬ್ಯಾರೇಜ್ ಖ್ಯಾತಿ ಸಿದ್ದು ನ್ಯಾಮಗೌಡ (ಕಾಂಗ್ರೆಸ್), ಜಿ.ಎಸ್.ನ್ಯಾಮಗೌಡ (ಬಿಜೆಪಿ), ಎಂ.ಸಿ.ಗೋಂದಿ (ಮೊದಲು ಕಮ್ಯುನಿಸ್ಟ್, ನಂತರ ಸಮಾಜವಾದಿ ಪಕ್ಷ, ಈಗ ಕಾಂಗ್ರೆಸ್) ಹಾಗೂ ಇನ್ನಿತರರು ಇದ್ದಾರೆ. ಇನ್ನು ಪ್ರಭುಲಿಂಗೇಶ್ವರ ಷುಗರ್ಸ್‌ನ ಮಾಲೀಕ ಜಗದೀಶ ಗುಡಗುಂಟಿ ಎಂಬಾತ ಜಮಖಂಡಿ ಅರಮನೆಗಿಂತಲೂ ದೊಡ್ಡ ಮನೆಯನ್ನು ಕಟ್ಟಿಸಿಕೊಂಡಿದ್ದಾನೆ.

ಇಂತಹವರೆಲ್ಲಾ ಸೇರಿ ಪೋಷಿಸುವ ಸಾಮಾಜಿಕ, ರಾಜಕೀಯಾರ್ಥಿಕ ಬೆಳವಣಿಗೆಗಳು ಉತ್ತರ ಕರ್ನಾಟಕದಲ್ಲಿ ಯಾವ ರೀತಿಯ ಅಭಿವೃದ್ಧಿಯನ್ನು ತರಬಹುದು? ಕರ್ನಾಟಕದಲ್ಲೇ ಅತ್ಯಂತ ಹೆಚ್ಚು ಹೆಣ್ಣು ಭ್ರೂಣ ಹತ್ಯೆಗಳು ಆಗುವ ಜಿಲ್ಲೆ ಎಂಬ ಕುಖ್ಯಾತಿಯನ್ನು ಹೊಂದಿರುವ ಬೆಳಗಾವಿಯಲ್ಲಿ ಹೆಣ್ಣು ಮಕ್ಕಳ ಸ್ಥಿತಿ ಉತ್ತಮವಾಗಬಲ್ಲುದೇ? ಸುವರ್ಣಸೌಧ ಅದಕ್ಕೇನು ಮಾಡಬಲ್ಲದು? ಅತ್ಯಂತ ಹೆಚ್ಚಿನ ಸಂಖ್ಯೆಯಲ್ಲಿ ದೇವದಾಸಿಯರಿದ್ದ ಜಿಲ್ಲೆಗಳಲ್ಲಿ ಮುಂದುವರೆದ ಬೆಳಗಾವಿ ಮತ್ತು ಬಾಗಲಕೋಟೆ ಜಿಲ್ಲೆಗಳೂ ಇವೆ. ಇಂದು ದೇವದಾಸಿಯರಾಗಿ ಹೊಸದಾಗಿ ಮುತ್ತು ಕಟ್ಟಿಸಿಕೊಳ್ಳುತ್ತಿರುವವರು ಕಡಿಮೆಯಾಗಿದ್ದರೆ, ಅದಕ್ಕೆ ಸರ್ಕಾರದ ಕಲ್ಯಾಣ ಕಾರ್ಯಕ್ರಮಗಳಿಗಿಂತ ಹೆಚ್ಚಾಗಿ ಏಡ್ಸ್‌ನ ಭಯ ಕಾರಣವಾಗಿದೆ.

ದೇವದಾಸಿಯರಲ್ಲಿ ಹೆಚ್ಚಿನವರು ಮಾದಿಗ ಸಮುದಾಯದವರು. ಆ ಸಮುದಾಯದಿಂದ ಬಂದಿರುವ ರಮೇಶ್ ಜಿಗಜಿಣಗಿ ಒಮ್ಮೆ ಈ ರಾಜ್ಯದ ಸಚಿವ ಸಂಪುಟದಲ್ಲಿ ಅತ್ಯಂತ ಮಹತ್ವದ ಖಾತೆಗಳನ್ನು ಹೊಂದಿದ್ದರು. ಇದೇ ಸಮುದಾಯದ ಗೋವಿಂದ ಕಾರಜೋಳ, ಶೆಟ್ಟರ್ ಅಧಿಕಾರಕ್ಕೇರಿದ ಸಂದರ್ಭದ ರಾಜಕೀಯ ಹೊಲಸಾಟದಲ್ಲಿ ಉಪಮುಖ್ಯಮಂತ್ರಿ ಪದವಿಗೆ ಲಾಬಿ ನಡೆಸಿದ್ದರು. ಇಷ್ಟೊಂದು ದೊಡ್ಡವರಾದ ಇವರಿಬ್ಬರೂ ತಮ್ಮ ಕ್ಷೇತ್ರಗಳ ಹಳ್ಳಿಗಳಲ್ಲಿ ಮೇಲ್ಜಾತಿ ಜನರ ಮನೆಗಳಿಗೆ ಸಲೀಸಾಗಿ ತಾವೇ ಹೋಗುವುದಿಲ್ಲ. ಹಾಗಿದ್ದ ಮೇಲೆ ಈ ಸಮುದಾಯಗಳ ಅಭಿವೃದ್ಧಿಯನ್ನು ಸುವರ್ಣಸೌಧ ಯಾವ ರೀತಿ ಮಾಡಬಲ್ಲದು?

2009ರಲ್ಲಿ ಬಂದ ಪ್ರವಾಹದಲ್ಲಿ ಮನೆ - ಬದುಕು ಕಳೆದುಕೊಂಡವರಿಗೆ ಕನಿಷ್ಠ ಸೂರನ್ನು ಕಲ್ಪಿಸಿಕೊಡುವ ಕೆಲಸ ಇನ್ನೂ ಪೂರ್ಣವಾಗಿಲ್ಲ, ಆಗುವುದೂ ಇಲ್ಲ. ಸ್ವತಃ ಅಂದಿನ ಕೇಂದ್ರ ಹಣಕಾಸು ಮಂತ್ರಿ ಚಿದಂಬರಂ ಬಂದು ಉದ್ಘಾಟಿಸಿ ಹೋದ ಆಸರೆ ಯೋಜನೆಯಡಿ ನಿರ್ಮಿತವಾದ ಮನೆಗಳು, ಸಂತ್ರಸ್ತ ಜನರು ಹೋಗುವ ಹೊತ್ತಿಗೆ ಬಿರುಕು ಬಿಟ್ಟಿದ್ದವು. ಸುವರ್ಣಸೌಧದಲ್ಲಿ ಇವರಿಗೆ ಜಾಗವಿದೆಯೇ?

ಬೆಳಗಾವಿ ನಗರದ ವಡಗಾವಿಯಲ್ಲಿ ಅತ್ಯಂತ ಹೆಚ್ಚಿನ ಸಂಖ್ಯೆಯಲ್ಲಿ ಕನ್ನಡ ಮಾತನಾಡುವ ನೇಕಾರರಿದ್ದಾರೆ. ರಾಮದುರ್ಗ, ಸೂಳಿಭಾವಿ, ತೇರದಾಳ, ರಬಕವಿ, ಬನಹಟ್ಟಿ ಇಲ್ಲೆಲ್ಲಾ ಸೇರಿದರೆ ಒಂದು ಲಕ್ಷಕ್ಕೂ ಹೆಚ್ಚು ವಿದ್ಯುತ್ ಮಗ್ಗಗಳಿವೆ. ಎಲ್ಲಾ ನೇಕಾರ ಗಂಡಸರೂ ಮತ್ತು ಹೆಂಗಸರೂ ಸದಾ ಬಿಳಿಚಿಕೊಂಡಿರುವ, ಒಣಕಲು ದೇಹದವರಾಗಿರುವುದು ಎದ್ದು ಕಾಣುತ್ತದೆ. ಅದರಲ್ಲೂ ಕೈಮಗ್ಗಗಳನ್ನು ನಂಬಿದವರ ಕಥೆ ಕೇಳುವುದೇ ಕಷ್ಟ. ಇಂತಹವರು ತಾವು ಅಷ್ಟು ಸಲೀಸಾಗಿ ಮಾಡಲಾಗದ ವಿವಿಧ ವೃತ್ತಿಗಳಿಗೆ ವಲಸೆ ಹೋಗಿ ಕಷ್ಟದಲ್ಲಿ ಬದುಕುತ್ತಿದ್ದಾರೆ. ವಡಗಾವಿಯಿಂದ ಬೆಳಗಾವಿಯ ಇನ್ನೊಂದು ದಿಕ್ಕಿನ ಉದ್ಯಮ್‌ಭಾಗ್‌ಗೆ ಕೆಲಸಕ್ಕೆ ಹೋಗುತ್ತಿರುವವರು ಸೆಕ್ಯುರಿಟಿ, ಹೌಸ್‌ಕೀಪಿಂಗ್ ಇತ್ಯಾದಿ ಅಸಂಘಟಿತ, ಅಭದ್ರ ಕೆಲಸಗಳಲ್ಲಿ ಅರೆಬರೆ ಬದುಕು ಕಂಡುಕೊಳ್ಳುತ್ತಿದ್ದಾರೆ. ಬಾಗಲಕೋಟೆ ಜಿಲ್ಲೆಯಲ್ಲಿ ನೀರಾವರಿ ಇಲ್ಲದ ಒಣ ಹಳ್ಳಿಗಳಿಂದ ವಲಸೆ ಹೋಗುತ್ತಿರುವವರು ಮಂಗಳೂರಿನ ಬಂದರುಗಳಲ್ಲಿ ಮೂಟೆ ಹೊರುತ್ತಾರೆ. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ 'ಬಿಜಾಪುರದ ಕೂಲಿ'ಗಳೆಂದು ಕರೆಯಲ್ಪಡುವ ಇವರನ್ನು ಅತ್ಯಂತ ಕೆಟ್ಟದಾಗಿ ಕಾಣಲಾಗುತ್ತದೆ. ಸುವರ್ಣ ಸೌಧ ಇವರ ಬದುಕನ್ನು ಬಂಗಾರ ಮಾಡುವ ಯಾವ ಸಾಧ್ಯತೆಯೂ ಇಲ್ಲ.

ಏಕೆಂದರೆ ವಿಧಾನಸೌಧ ಸಂಕೇತಿಸುವ ಅದೇ ಅಭಿವೃದ್ಧಿಯ ಮಾದರಿಯನ್ನೇ ಸುವರ್ಣಸೌಧವೂ ಅನುಸರಿಸಿಕೊಂಡು ಹೋಗುತ್ತದೆ. ಅದರ ಲಾಭ ಪಡೆಯಲು ಹೊಸದೊಂದು ಅಧಿಕಾರಶಾಹಿ ಬಂಡವಾಳಶಾಹಿ ವರ್ಗ ಸರ್ವಸನ್ನದ್ಧವಾಗಿ ನಿಂತಿದೆ. ಇದನ್ನು ತಡೆಯಲು, ಜನಸಾಮಾನ್ಯರ ಅಭಿವೃದ್ಧಿಯ ಸೌಧ ಕಟ್ಟಲು ಜಳೆಯ ಜನ ಚಳವಳಿಗಳ ಪರಿಕರಗಳು, ವಿಧಾನಗಳು ಸಾಲವು. ಇನ್ನೊಂದು ಅಂಚಿನಿಂದ ಅದರ ಪ್ರಯತ್ನ ಶುರುವಾಗಬೇಕಿದೆ. ●

ಕಳ್ಳ ಖಾವಿಯ ಪೂರ್ತಿ ಜಾತಕ

ಎದ್ದ ಗೆದ್ದ ಕದ್ದ ಬಿದ್ದ..!



ಸ್ವಾಮಿತ್ವ ಅಂದರೇನೇ ನೊಂದವರ ಕಣ್ಣೀರು ಒರೆಸೋದು ಎಂದ. ಯಾರಿಗೆ ಎಲ್ಲೇ ಪ್ರಾಬ್ಲಂ ಆದ್ರೂ ನಾನೇ ಬೀದಿಗಿಳಿದು ಹೋರಾಡ್ತೀನಿ ಎಂದು ಎದೆ ತಟ್ಟಿದ್ದ. ವಿದೇಶಿ ಹೆಂಗಸೊಬ್ಬಳ ತಲೆ ಮೇಲೆ ಕಾಲನ್ನೇ ಇಟ್ಟ. ಟ್ಯಾಕ್ಸಾ ಕಾರು ತೆಗೆಸಿಕೊಟ್ಟ. ಯಜ್ಞ ಕರೆದು ಪಾದ ಪೂಜೆ ಮಾಡಿದ. ಸಿಕ್ಕಸಿಕ್ಕಲ್ಲೆಲ್ಲ ಭಾಷಣ ಬಿಗಿದ. ಚಿತ್ರವಿಚಿತ್ರ ಪ್ರವಚನವನ್ನೂ ಕೊಟ್ಟ. ಯಾವ ವೇಗದಲ್ಲಿ ಆಕಾಶಕ್ಕೇರಿದನೋ ಅಷ್ಟೇ ಹೀನಾಯವಾಗಿ ಕೊಚ್ಚೆ ಗುಂಡಿಗೂ ಬಿದ್ದ. ಈಗ ಮಾಡಿದ ಪಾಪಕ್ಕೆ ಪ್ರಾಯಶ್ಚಿತ್ತ ಮಾಡಿಕೊಳ್ಳುತ್ತಾನಂತೆ. ಆತ್ಮಾವಲೋಕನವಂತೆ. ಪುಣ್ಯಕ್ಷೇತ್ರಗಳಿಗೆಲ್ಲ ಯಾತ್ರೆಯಂತೆ....!

ಇದು ಋಷಿಕುಮಾರ ಸ್ವಾಮಿ ಉರ್ಫ್ ಕಾಳಿಸ್ವಾಮೀ ಅಲಿಯಾಸ್ ಯೋಗೀಶ್ ಗುರು ಅರ್ಥಾತ್ ಅರಸೀಕೆರೆ ಚಿಕ್ಕನ ಸಂಕ್ಷಿಪ್ತ ಸಾಹಸಗಾಥೆಯ ಸಾರಾಂಶ. ನಾಲ್ಕಾಣೆ ಎಂಟಾಣೆಗೆಲ್ಲ ನಾಯಿಕೊಡೆಗಳಂತೆ ತಲೆ ಎತ್ತಿದ ಟೀವಿ ಚಾನಲ್ಲುಗಳ ಹಾವಳಿಯಿಂದಾಗಿ ಕರ್ನಾಟಕದ ಸಾಂಸ್ಕೃತಿಕ, ನೈತಿಕ, ಬೌದ್ಧಿಕ, ಪರಿಸರ ಯಾಪಾಟ ಕಲುಷಿತಗೊಂಡಿದೆ ಎಂದರೆ; ರಾತ್ರೋರಾತ್ರಿ ದೇವಮಾನವರು, ಸ್ವಾಮೀಜಿಗಳು, ವಂಚಕ ಹೋರಾಟಗಾರರು, ಕಪಟ ಬುದ್ಧಿಜೀವಿಗಳು, ದುಬಾಕೋರ್ ಜ್ಯೋತಿಷಿಗಳೆಲ್ಲ ಇವತ್ತು ಹುತ್ತದಿಂದೆದ್ದು



ಬಾಲಬಿಚ್ಚತೊಡಗಿದ್ದಾರೆ.

ನಿನ್ನೆ ಮೊನ್ನೆತನಕ ಯೋಗ ಕಲಿಸಿಕೊಂಡಿದ್ದು ಪಿಗ್ಮಿ ಕಲೆಕ್ಟರ್ ಆಗಿದ್ದ ಸಂತೋಷ್ ಎಂಬ ಜೊಲ್ಲು ಗಿರಾಕಿ ರಾತ್ರೋರಾತ್ರಿ ವಿಶ್ವಸಂತೋಷ್ ಗುರೂಜಿ.ಶ್ರೀಪಾದನೆಂಬ ಹೆಸರಲ್ಲಿ ಸ್ವಾಮಿಯ ಅವತಾರವೆತ್ತಿದ್ದ. ಗಾಂಧಿನಗರದಲ್ಲಿ ಸಿನಿಮಾ ಶೂಟಿಂಗ್ ಅನ್ನೇ ನೆಚ್ಚಿಕೊಂಡು ಇಡ್ಲಿ ಸಾಂಬಾರಿಗೆ ತತ್ವಾಡುತ್ತಿದ್ದ ನರೇಂದ್ರ ಬಾಬು ಶರ್ಮ ಎಂಬ ಬ್ರೋಕರ್ ಇವತ್ತು ಬ್ರಹ್ಮಾಂಡ ಗುರೂಜಿ. ನಿಮಿಷಾಂಬ ದೇವಾಲಯ ಕಟ್ಟಿಸಿದ ಮಾತ್ರಕ್ಕೇ ರಾತ್ರೋರಾತ್ರಿ ದೇವಮಾನವನಾದ ವನೊಬ್ಬ, ಶೃಂಗೇರಿ ಶಂಕರಮಠದಲ್ಲಿ ಬಟ್ಟೆ ಚಾಕರಿಗಿದ್ದು ಜ್ಯೋತಿಷ್ಯವನ್ನೇ ತನ್ನ ವಂಚನೆಯ ಅಸ್ತ್ರವಾಗಿಸಿಕೊಂಡ ಇನ್ನೊಬ್ಬ, ಪುನರ್ಜನ್ಮದ ದೊಂಬರಾಟ ಶುರುಹಚ್ಚಿಕೊಂಡ ಮಗದೊಬ್ಬ, ಭಗವದ್ಗೀತೆ ಬಗ್ಗೆ ಅತಿರಂಜಿತ ಕತೆ ಹೊಡೆಯುವವನೊಬ್ಬ ಎಲ್ಲೋ ಕವಡೆಶಾಸ್ತ್ರ ಹಕ್ಕಿ ಜ್ಯೋತಿಷ್ಯ ನಾಡಿ ಜ್ಯೋತಿಷ್ಯ ಇತ್ಯಾದಿ ಪ್ರತಿನಿತ್ಯ ವಂಚಿಸುವುದನ್ನೇ ಹೊಟ್ಟೆಪಾಡಾಗಿಸಿಕೊಂಡ ಜ್ಯೋತಿಷಿ, ಕಪಟಿಗಳನ್ನೆಲ್ಲ ಎಳೆದೆಳೆದು ತಂದು ತಮ್ಮ ಟಾಕ್‌ಷೋಗಳಿಗೆ ಬಳಸಿಕೊಂಡ ಮನೆಹಾಳು ಟೀವಿ ಚಾನಲ್ಲುಗಳ ಟಿಆರ್‌ಪಿ ಕಾಳಗವೀಗ ಅವರೇ ಹುಟ್ಟುಹಾಕಿದ ಶನಿಸಂತತಿಗಳನ್ನೇ ಪರಸ್ಪರ ತಿಂದು ಬದುಕಬೇಕಾದ ದುರ್ಗತಿಗೆ ಬಂದು ನಿಂತಿದೆ.

ಇದಕ್ಕೆ ಲೇಟೆಸ್ಟ್ ಬಲಿಯೇ ಋಷಿಕುಮಾರ ಸ್ವಾಮಿ ಉರ್ಫ್ ಕಾಳಿಸ್ವಾಮಿ ಅಲಿಯಾಸ್ ಯೋಗೀಶ್ ಗುರು ಅರ್ಥಾತ್ ಅರಸೀಕೆರೆ ಚಿಕ್ಕ!

ಕಳೆದೊಂದು ವರ್ಷದಿಂದ ಕನ್ನಡದ ನ್ಯೂಸ್ ಚಾನಲ್ಲುಗಳಲ್ಲಿ ಬೇಕಾಬಿಟ್ಟಿ ಮಿಂಚುತ್ತಿದ್ದ ಋಷಿಕುಮಾರ ಸ್ವಾಮಿ ಎಂಬ ಧೂಮಕೇತು ಉರಿದಷ್ಟೇ ವೇಗವಾಗಿ ಭಸ್ಮವಾಗಲಿದೆಯೆಂಬುದು ಖುದ್ದು ಋಷಿಕುಮಾರನಿಗೇ ಗೊತ್ತಿರಲಿಕ್ಕಿಲ್ಲ. ವಿಚಿತ್ರವೆಂದರೆ ಅಸಲಿಗಾತ ಸ್ವಾಮಿಯಾಗಲಿ, ಸನ್ಯಾಸಿಯಾಗಲಿ, ವೇದಾಂತಿಯಾಗಲಿ, ಸಿದ್ಧಾಂತಿಯಾಗಲಿ ಯಾವುದೂ ಆಗಿರಲಿಲ್ಲ. ಈತನದು ಮೂಲತಃ ಅರಸೀಕೆರೆ ತಾಲ್ಲೂಕು ದೇವನೂರು ಸಮೀಪದ ನೀರಗುಂಡಿ ಎಂಬ ಕುಗ್ರಾಮ. ಅದೇನೋ ಅರಸೀಕೆರೆಯೆಂಬ ಊರೇ ಈ ಥರದ ಅದ್ಭುತ ಕಲಾಕೃತಿಗಳನ್ನು ನಾಡಿಗೆ ಕೊಡುಗೆಯಾಗಿ ಕೊಟ್ಟಿದೆ. ಆ ಪೈಕಿ ಸೋಕಾಲ್ಡ್ ರೈತನಾಯಕ ಕೋಡಿಹಳ್ಳಿ ಚಂದ್ರಶೇಖರ್, ಅದೆಂತಹದ್ದೋ ವೇದಿಕೆಯ ನಾರಾಯಣ ಗೌಡ ಇತ್ಯಾದಿ ಪ್ರಳಯಾಂತಕರ ಪಟ್ಟಿಗೆ ಸೇರುವ ಮತ್ತೂ ಒಂದು ಹೆಸರೇ ಋಷಿಕುಮಾರ ಸ್ವಾಮಿ.

ಈತನ ತಂದೆ ರಾಮಣ್ಣ ಅರಸೀಕೆರೆಯ ಎಪಿಎಂಸಿ ಮಂಡಿಯಲ್ಲಿ ವೇಮನ್ ಕೆಲಸದಲ್ಲಿದ್ದ. ಆತನ ಇಬ್ಬರು ಪತ್ನಿಯರ ಪೈಕಿ ಕಿರಿಯಳಾದ ಚಂದ್ರಮ್ಮ ಎಂಬಾಕೆಯ ಇಬ್ಬರು ಮಕ್ಕಳಲ್ಲಿ ಹಿರಿಯನಾದ ಯೋಗೀಶನೇ ಕಾಲಕ್ರಮೇಣ ಋಷಿಕುಮಾರನಾದ. ಈತನಿಗೊಬ್ಬ ಅಂಗವಿಕಲ ತಮ್ಮನಿದ್ದಾನೆ. ಆತನ ಹೆಸರು ಸಂಪತ್‌ಕುಮಾರ್. ಒಕ್ಕಲಿಗ ತಂದೆ ರಾಮಣ್ಣ ಮತ್ತು ಬಳಿಜಗ ನಾಯ್ಡು ಜಾತಿಯ ಚಂದ್ರಮ್ಮನ ಹಿರಿಯ ಮಗನಾಗಿ ಕಡುಬಡತನ, ಅವಮಾನ, ಹಸಿವು, ದಾರಿದ್ರ್ಯದಲ್ಲೇ ಬೆಳೆದ ಯೋಗೀಶ ಓದಿದ್ದು ಇದೇ ಅರಸೀಕೆರೆಯ ಕೋಡಿಮಠದ ಶಾಲೆಯಲ್ಲಿ.

ಅದೇನು ಬಾದರಾಯಣ ಸಂಬಂಧವೋ; 'ಖ್ಯಾತ ಪತ್ರಕರ್ತ' ಮತ್ತು 'ಕನ್ನಡದ ಖ್ಯಾತ ಚಿತ್ರ ನಿರ್ದೇಶಕ' ಕಮ್ 'ನೀರಾವರಿ ತಜ್ಞ' ಚಂದ್ರಚೂಡ್ ಉರ್ಫ್ ಚಕ್ರವರ್ತಿ ಕೂಡ ಇದೇ ಯೋಗೀಶನಿಗೆ ಸಹಪಾಠಿಯಾಗಬೇಕು!

ಕೋಡಿಮಠದ ಶಾಲೆಯಲ್ಲಿ ಎಸ್ಸೆಲ್ಸಿಗೇ ಧುಮುಕಿ ಹೊಡೆದ ಯೋಗೀಶನ ಅಸಂಖ್ಯಾತ ಪವಾಡಗಳು, ಲೀಲಾವಿನೋದಗಳ ಮೊದಲ ಬಲಿಪಶು ಯಾರೆಂಬ ಪ್ರಶ್ನೆಗೆ ಉತ್ತರವಾಗಿ ಸಿಗುವುದು ಇದೇ ಅರಸೀಕೆರೆ ಸಮೀಪದ ಚಿಕ್ಕೂರಿನ ವಸಂತ ಎಂಬ ಲಂಬಾಣಿ ಯುವತಿ. ಆ ಹೊತ್ತಿಗೆ ಅರಸೀಕೆರೆಯ ಮಹಾಸಾಧ್ವಿಮಣಿ ಎಂದೇ ಕೀರ್ತಿಪತ್ತ ಆಶಾಲತಾ ಎಂಬಾಕೆಯ ನಾಟ್ಯ ಭೈರವಿ ಸಂಘದಲ್ಲಿ ಈತ ನೃತ್ಯ ಕಲಿಯುತ್ತಿದ್ದ. ಮುಂದೆ ಕೆಲಕಾಲ ಬೆಂಗಳೂರಿಗೆ ಬಂದು ಅರಸೀಕೆರೆ ಮೂಲದ ಉಷಾ ದಾತಾರ್ ಎಂಬ ಖ್ಯಾತ ನರ್ತಕಿಯ ಮನೆಯಲ್ಲೂ ಭರತನಾಟ್ಯ ಕಲಿತ.

ಎಲ್ಲಾ ಬಿಟ್ಟು ಭಂಗಿ ನೆಟ್ಟ ಎಂಬಂತೆ ಈತ ಅದೇಕೆ ಭರತನಾಟ್ಯದ ಹುಚ್ಚಿಗೆ ಬಿದ್ದಿದ್ದಾನೆಂಬುದರ ಮರ್ಮ ಗೊತ್ತಾಗಿದ್ದು, ಈತ ಅರಸೀಕೆರೆಯ ಸಾಯಿನಾಥ ರಸ್ತೆಯಲ್ಲಿ ನಾಟ್ಯನೂಪುರ ಎಂಬ ಡ್ಯಾನ್ಸ್ ಸ್ಕೂಲ್ ತೆರೆದು ಅದನ್ನು ಮುಚ್ಚಿ ಆನಂತರ ವೀರಭದ್ರನ ಪಕ್ಕ ಕಾರ್ತಿಕ್ ಕಲಾಕೇಂದ್ರ ಎಂಬ ಮತ್ತೊಂದು ನಾಟ್ಯ ಕೇಂದ್ರವನ್ನು ತೆರೆದಾಗಲೇ. ಈತನ ಚಮಕ್ಕು, ಮಾತುಗಾರಿಕೆ, ಸ್ಟೈಲು, ಖದರ್ರಿಗೆ ಮಾರುಹೋದ ಲಂಬಾಣಿ ಯುವತಿ ವಸಂತ ಈತನ ನಾಟ್ಯ ನೂಪುರವನ್ನು ಹೊಕ್ಕವಳು ಆನಂತರ ಏನಾದಳು, ಎಲ್ಲಿಗೆ ಹೋದಳು ಯಾರಿಗೂ ಗೊತ್ತಿಲ್ಲ.

ಇದಾದ ನಂತರ ಎರಡನೇ ಅಧ್ಯಾಯವೆಂಬಂತೆ ಕಾರ್ತಿಕ್ ಕಲಾಕೇಂದ್ರವನ್ನು ತೆರೆದ ಯೋಗೀಶ್ ತನ್ನ ಹೆಸರನ್ನು ಯೋಗೀಶ್ ಗುರು ಎಂದು ಬದಲಿಸಿಕೊಂಡ. ಭರತನಾಟ್ಯ ಹೇಳಿಕೊಡ್ತೀನಿ ಎಂದು ಊರೂರು ಸುತ್ತುತ್ತಾ ಪ್ರಚಾರ ಮಾಡಿದ. ಅದೇನು ಲಕ್ಕು ಕುದುರಿತೋ ಅರಸೀಕೆರೆಯ ಅನುಕೂಲಸ್ಥರ ಮನೆಯ ಹೆಣ್ಣುಮಕ್ಕಳೆಲ್ಲ ಈತನ ನಾಟ್ಯ ಶಾಲೆಗೇ ಬಂದು ಜಮೆಯಾಗುತ್ತಿದ್ದರು. ಇಂತ ಸರಿಸುಮಾರು 60 ಮಂದಿ ಹೆಣ್ಣುಮಕ್ಕಳಿಗೆ ಯೋಗೀಶ್ ನಾಟ್ಯ ಕಲಿಸುತ್ತಿದ್ದ. ಅದಕ್ಕೆ ತಕ್ಕಂತೆ ಬಿಳಿ ಪಂಚೆ, ಬಿಳಿ ಜುಬ್ಬಾ ತೊಟ್ಟು ಕೊರಳಿಗೆ ರುದ್ರಾಕ್ಷಿ ಮಾಲೆ ಹಾಕಿದ್ದೇ ಪಕ್ಕಾ ಬೃಹನ್ನಳೆಯಂತೆ ಸೊಂಟ ಕುಣಿಸುತ್ತ ಓಡಾಡಿಕೊಂಡಿದ್ದ.

ಬಹುಶಃ ಈತ ಹಿಜ್ರಾನೋ ಸಲಿಂಗಿಯೋ ಕಮಂಗಿಯೋ ಆಗಿರಬೇಕೆಂದೇ ಲೆಕ್ಕ ಹಾಕಿದ ಅರಸೀಕೆರೆಯ ಮಾನವಂತರೆಲ್ಲ ತಮ್ಮ ಹೆಣ್ಣುಮಕ್ಕಳನ್ನು ತಂದಿದ್ದೇ ಈತನ ಶಾಲೆಗೆ ಸೇರಿಸುತ್ತಿದ್ದರು. ಹೀಗೆ ನಾಟ್ಯ ಕಲಿಯಲೆಂದು ಯೋಗಿಯ ಡ್ಯಾನ್ಸ್ ಅಡ್ಡೆಗೆ ಕಾಲಿಟ್ಟ ಶಾನುಭೋಗರ ಬೀದಿಯ ಬೇಬಿ ಅಲಿಯಾಸ್ ಬಬಿತಾ ಎಂಬ ಲೋಕಲ್ ಬ್ಯೂಟಿಯನ್ನೇ ಯೋಗೀಶ್ ಪಟಾಯಿಸಿಬಿಟ್ಟ!

ಒಂದೆಡೆ ಲವ್ವು, ಇನ್ನೊಂದೆಡೆ ಡವ್ವು- ಹೀಗೆ ಶೋಕಿಗೆ ಬಿದ್ದೇ ಭರತನಾಟ್ಯದ ಕಾಯಕ ಮರೆತುಬಿಟ್ಟ. ಅಲ್ಲಿಗೆ ಈತನ ಭಾನಗಡಿಗಳೂ ಪುಕಾರಾಗಿ ಡ್ಯಾನ್ಸ್ ಸ್ಕೂಲಿಗೂ ಕಳಂಕ ಶುರುವಾಗಿ ಬರುತ್ತಿದ್ದ ಆದಾಯವೂ ಕ್ಷೀಣಿಸಿತು. ಇನ್ನು ಡ್ಯಾನ್ಸ್ ಮಾಡಿ ಪ್ರಯೋಜನವಿಲ್ಲ ಎಂಬ ನಿರ್ಧಾರಕ್ಕೆ

ವಂಚಕ ಭೀಮಾಶಂಕ್ರ, ಕಂಟಕ ಟೋಕನ್ ಮುನಿರಾಜು ಮತ್ತು ತಿರುಗಿಬಿದ್ದ ಚೋರ ಶಿಷ್ಯರು

ಅದು 2011 ರ ಜನವರಿ ತಿಂಗಳು. ಝೀ ಕನ್ನಡ ಚಾನಲ್‌ನಲ್ಲಿ ಬರುತ್ತಿದ್ದ ನಟಿ ಮಾಳವಿಕಾ ನಿರೂಪಣೆಯ 'ಬದುಕು ಜಟಕಾ ಬಂಡಿ' ಕಾರ್ಯಕ್ರಮಕ್ಕೆಂದು ಋಷಿಕುಮಾರ ಸ್ವಾಮಿಯನ್ನು ಕರೆಸಲಾಗಿತ್ತು. ಯಾರೋ ದೆವ್ವ ಬಂದಂತೆ ಚಿತ್ರ ವಿಚಿತ್ರವಾಗಿ ಚೀರಾಡಿ ಕುಪ್ಪಳಿಸುತ್ತಿದ್ದ ಹೆಂಗಸೊಬ್ಬಳಿಗೆ ಋಷಿಕುಮಾರ ಗದರಿದ್ದೇ ತನ್ನ ಮಂತ್ರದಂಡದಿಂದ ಎರಡೇಟು ಬಾರಿಸಿಬಿಟ್ಟ. ಏಟು ಬೀಳುತ್ತಿದ್ದಂತೆ ಆ ಹೆಂಗಸಿಗೆ ಹಿಡಿದ ದೆವ್ವ ಬಿಟ್ಟಂತೆ ಮಾಮೂಲಿಯಾಗಿ ಬಿಟ್ಟಳು.

ಇದು ಮಾಳವಿಕಾ ನಡೆಸಿಕೊಡುತ್ತಿದ್ದ ಬದುಕು ಜಟಕಾ ಬಂಡಿ ಕಾರ್ಯಕ್ರಮದ ಒಂದು ದೃಶ್ಯ. ಇಷ್ಟಾಗಿದ್ದೇ ತಡ ಋಷಿಕುಮಾರ ಸ್ವಾಮಿ ಎಂಬ ಹೆಸರೊಂದು ಕರ್ನಾಟಕದ ಕೇಸರಿ ಪ್ರಪಂಚದಲ್ಲಿ ಪ್ರವೇಶ ಪಡೆದಾಗಿತ್ತು.

ಆ ಹೊತ್ತಿಗಾಗಲೇ ರಿಯಲ್ ಎಸ್ಟೇಟ್‌ನಲ್ಲಿ ಕಾಲಿಟ್ಟಿದ್ದ ಯೋಗೀಶ್ ಉರ್ಫ್ ಋಷಿಕುಮಾರ್‌ಗೆ ಅದು ಹೇಗೋ ಕನ್ನಡ ಸೇನೆಯ ಕುಮಾರ್ ಪರಿಚಯವಾಗಿತ್ತು. ಜೊತೆಗೆ ಕರ್ನಾಟಕ ರಕ್ಷಣಾ ವೇದಿಕೆಯ ಪ್ರವೀಣ್ ಶೆಟ್ಟಿಯ ಜೊತೆಗೂ ಗೆಳೆತನವಿತ್ತು. ಅದೇ ಹೊತ್ತಿಗೆ ನಾರಾಯಣ ಗೌಡ ನೇತೃತ್ವದ ರಕ್ಷಣಾ ವೇದಿಕೆ ತೊರೆದು ಬಂದಿದ್ದ ಶಿವರಾಜ್ ಜೊತೆಗೂ ಋಷಿಕುಮಾರ್ ಕೈಜೋಡಿಸಿದ.

ಅದೇನು ಲೆಕ್ಕಾಚಾರವಿತ್ತೋ ಅಥವಾ ಅದ್ಯಾರು ಛೂಬಿಟ್ಟರೋ ಗೊತ್ತಿಲ್ಲ, ಬಿಡದಿಯ ನಿತ್ಯಾನಂದ ಸೆಕ್ಸ್ ಪುರಾಣ ಬಯಲಾಗಿದ್ದೇ ತಡ ಕರ್ನಾಟಕ ನವ ನಿರ್ಮಾಣ ಸೇನೆ, ಜನಪರ ವೇದಿಕೆ ಇತ್ಯಾದಿ ಸಂಘಟನೆಗಳು ಬಿಡದಿಯ ನಿತ್ಯಾನಂದನ ಆಶ್ರಮಕ್ಕೆ ನುಗ್ಗಿ ದಾಳಿಯಿಟ್ಟವು. ಹಾಗೇ ದಾಳಿಯಿಟ್ಟ ಕನ್ನಡ ಸಂಘಟನೆಗಳ ಕಾರ್ಯಕರ್ತರನ್ನು ಬಿಡದಿ ಪೊಲೀಸರು ಎಳೆದೊಯ್ದು ಲಾಕಪ್ಪಿನಲ್ಲಿಟ್ಟಾಗ ಇದ್ದಕ್ಕಿದ್ದಂತೆ ಪ್ರತ್ಯಕ್ಷನಾದವನು ಋಷಿಕುಮಾರ. ನಾನು ನಿಮ್ಮ ಪರವಾಗಿದ್ದೀನಿ. ಪಾಪಿ ನಿತ್ಯಾನಂದನನ್ನು ಒದ್ದೋಡಿಸಲೇಬೇಕು. ನೀವೆಲ್ಲ ನನ್ನ ಜೊತೆ ಕೈಜೋಡಿಸಿದರೇ ಚಿಟಿಕೆ ಹೊಡೆಯುವಷ್ಟರಲ್ಲಿ ನಿತ್ಯಾನಂದನನ್ನು ಒದ್ದೋಡಿಸ್ತೀನಿ ಎಂದೆಲ್ಲ ಋಷಿಕುಮಾರ್ ಬೊಬ್ಬೆಯಿಟ್ಟಿದ್ದ.

ಆನಂತರ ನಿತ್ಯಾನಂದನ ವಿರುದ್ಧ ಋಷಿಕುಮಾರನೇ ನಿಂತು ಬೀದಿಗಿಳಿದು ಪ್ರತಿಭಟಿಸಿದ. ರಾಮನಗರದಲ್ಲಿ ಮೆರವಣಿಗೆಯನ್ನೂ ಮಾಡಿದ. ಫ್ರೀಡಂ ಪಾರ್ಕಿನಲ್ಲೂ ಪ್ರತಿಭಟನೆಯಾಯ್ತು. ಇದಾದನಂತರ ನಿತ್ಯಾನಂದನ ಕುರಿತಂತೆ ಚಾನೆಲ್ ಟೀವಿ ಒಂದು ನಡೆಸಿದ ಚರ್ಚೆ, ವಾದ ವಿವಾದದಲ್ಲೂ ಋಷಿಕುಮಾರನೇ ಮಿಂಚಿದ. ಇಷ್ಟೆಲ್ಲದರ ಹಿಂದೆ ಋಷಿಕುಮಾರನ ಜೊತೆಗಿದ್ದವನು ಭೀಮಾಶಂಕರ ಪಾಟೀಲನೆಂಬ ಹುಟ್ಟಾ ವಂಚಕ. ಈತ ಈಗಾಗಲೇ ರಕ್ಷಣಾ ವೇದಿಕೆ ಮತ್ತು ಜಯಕರ್ನಾಟಕ ಸಂಘಟನೆಗಳಲ್ಲಿದ್ದು ರೊಕ್ಕ ವಸೂಲಿಯಿಂದಾಗಿ ಹೊರದಬ್ಬಿಸಿಕೊಂಡಿದ್ದ. ಇಸ್ಕಾನ್‌ನಿಂದಲೂ ಸಾಕಷ್ಟು ಕಾಸು ಕಿತ್ತಿದ್ದ ಇದೇ ಭೀಮಾಶಂಕರನಿಗೆ ಬಿಡದಿಯ ನಿತ್ಯಾನಂದನಿಂದಲೂ ದೊಡ್ಡ ಮೊತ್ತವೊಂದನ್ನು ಕೀಳಬೇಕೆಂಬ ದುರಾಶೆಯಿತ್ತು.



ಬಬಿತಾ

ಅದಕ್ಕೆ ಭೀಮಾಶಂಕರ ಪಾಟೀಲ ಛೂಬಿಟ್ಟಿದ್ದು ಇದೇ ಋಷಿಕುಮಾರನನ್ನು.

ನಿತ್ಯಾನಂದನ ವಿರುದ್ಧದ ಟೀವಿ ಚಾನೆಲ್ ಒಂದರ ಬ್ಲ್ಯಾಕ್‌ಮೇಲ್ ತಂತ್ರಕ್ಕೆಂದು ಬಳಕೆಯಾದ ಋಷಿಕುಮಾರನಿಗೆ ಈ ಹೊತ್ತಿಗಾಗಲೇ ನಿತ್ಯಾನಂದನ ಬಲಗೈ ಬಂಟನಂತಿದ್ದ ಟೋಕನ್ ಮುನಿರಾಜನೊಂದಿಗೆ ಲಿಂಕ್ ಕುದುರಿತ್ತು. ನಿತ್ಯನ ಸೇಲಾ ಪೂರ್ಣಾನಂದನ ಜೊತೆ ಋಷಿಕುಮಾರ್‌ನ ಬಳಿ ಡೀಲಿಗೆ ಬಂದಿದ್ದ ಟೋಕನ್ ಮುನಿರಾಜು ಅದೇನು ಉದ್ದೇಶವಿಟ್ಟುಕೊಂಡು ಏನೇನು ಹೇಳಿದ್ದನೋ ಅದೆಲ್ಲವನ್ನೂ ಋಷಿಕುಮಾರ್ ಉಪಾಯವಾಗಿ ರೆಕಾರ್ಡ್ ಮಾಡಿಕೊಂಡು ತನ್ನ ಪರಮಾಪ್ತ ಟೀವಿ ಚಾನೆಲ್‌ಗೆ ಕೊಟ್ಟು ನಿತ್ಯಾನಂದನ ವಿರುದ್ಧವೇ ಪ್ರಯೋಗಿಸಿದ್ದ.

ಯಾವತ್ತು ನಿತ್ಯನ ವಿರುದ್ಧ ಋಷಿಕುಮಾರ್ ಟೋಕನ್ ಮುನಿರಾಜುನ ರಾಜಿ ಕಬೂಲಿಯ ದೃಶ್ಯಾವಳಿಯನ್ನು ಟೀವಿಗೆ ಕೊಟ್ಟು ಸುದ್ದಿ ಮಾಡಿಸಿದನೋ, ಜೊತೆಗೇ ಇದ್ದ ಋಷಿಕುಮಾರನ ಶಿಷ್ಯನಾದ ವಿನಯ್‌ನ ತಲೆ ಕೆಟ್ಟಿದೆ. ಹಾಲಿ ಟಿವಿಯ ವಿರುದ್ಧವಿರುವ ಮತ್ತೊಂದು ಟೀವಿ ಚಾನೆಲ್ ಅನ್ನು ಸಂಪರ್ಕಿಸಿದ್ದೇ ಋಷಿಕುಮಾರ್ ಕುಡಿಯುವುದು, ಮಾಂಸ ತಿನ್ನುವುದು ಇತ್ಯಾದಿಗಳ ವೀಡಿಯೋ ಕೊಡುತ್ತೇನೆಂದು ಡೀಲು ಕುದುರಿಸಿದ್ದಾನೆ. ನಿತ್ಯನ ವಿರೋಧಿ ಟೀವಿ ವಿರುದ್ಧ ಮೊದಲೇ ಕಿಡಿಕಾರುತ್ತಿದ್ದ ಈ ಟೀವಿ ಚಾನೆಲ್‌ಗೂ ಇಷ್ಟೇ ಬೇಕಿತ್ತೇನೊ.

ನಿತ್ಯಾನಂದನ ಇಬ್ಬರು ಏಜೆಂಟರೆಂಬಂತೆ ತನ್ನ ಮಂದಿಯನ್ನೇ ರೆಡಿ ಮಾಡಿ ಋಷಿಕುಮಾರನ ಬಾಯಿ ಬಿಡಿಸುವಂತೆ ಮಾಡುವ 10 ಕೋಟಿಯ ಡೀಲಿಗೂ ಸ್ಕೆಚ್ಚು ರೆಡಿಯಾಗಿದೆ. ಇದ್ಯಾವುದರ ಪರಿವೆಯಿಲ್ಲದ ಋಷಿಕುಮಾರ್ ತನ್ನ ಎದುರಿಗಿರುವುದು ಸಾಕ್ಷಾತ್ ನಿತ್ಯಾನಂದನ ಏಜೆಂಟರೇ ಎಂದು ಭಾವಿಸಿ ಹತ್ತು ಕೋಟಿ ಕೊಡಿ, ಜೊತೆಗೊಂದು ಫಾರ್ಚುನರ್ ಕಾರು ಕೊಡಿ...! ಎಂದೆಲ್ಲ ಬಾಯಿಹರಿದುಬಿಟ್ಟ. ಲಿಂಗಾಯತ ಸ್ವಾಮಿಗಳನ್ನು ಟೀಕಿಸಿದ ಕನ್ನಡ ಸಂಘಟನೆಗಳನ್ನು ತೆಗಳಿದ. ಸಿಕ್ಕಸಿಕ್ಕ ಮಂತ್ರಿ ರಾಜಕಾರಣಿಗಳಿಗೆಲ್ಲ ವಾಚಾಮಗೋಚರ ಬೈದ.

ಈಗ ಘಟಿತಿಯಾಗಿರುವುದು ಇದೇ 10 ಕೋಟಿ ಕಪ್ಪ ಕೇಳಿದ ವಿಚಿತ್ರ ಸೀಡಿಯಿಂದ. ಋಷಿಕುಮಾರನ ಮಾತು, ಡೈಲಾಗು, ತಂತ್ರ, ದುರಾಶೆ ಎಲ್ಲವೂ ಈ ಒಂದೇ ಸೀಡಿಯಿಂದ ಬಯಲಾಗಿದೆ. ಮಹಾನ್ ಪರಿತ್ಯಾಗಿಯಂತೆ ಋಷಿಕುಮಾರ ಈಗ ತಾನು ಪೀಠತ್ಯಾಗ ಮಾಡ್ತೀನಿ ಎಂದಿದ್ದಾನೆ. ಯಾವ ಪೀಠ? ಯಾರು ಸ್ಥಾಪಿಸಿದ ಪೀಠ? ತಾನು ತ್ಯಾಗ ಮಾಡುತ್ತಿದ್ದೇನೆಂದು ವಹಿಸಿಕೊಟ್ಟಿದ್ದಾದರೂ ಯಾರಿಗೆ? ತನ್ನ ಪತ್ನಿ ಬಬಿತಾಳಿಗೆ ಪೀಠ ವಹಿಸಿಕೊಟ್ಟ ಮಾತ್ರಕ್ಕೆ ಅದು ಪೀಠತ್ಯಾಗವಾಯಿತೆ? ಇಲ್ಲದ ಪೀಠಕ್ಕೆ ಸಲ್ಲದ ನೆಪವೊಡ್ಡಿ ತನ್ನ ಪತ್ನಿಯನ್ನೇ ವಾರಸುದಾರಳನ್ನಾಗಿಸಿದ್ದು ಯಾವ ಸ್ವಾಮಿತ್ವ? ಎಂಥ ಶರಣ ತತ್ವ? ವಂಚಕ ಋಷಿಕುಮಾರನ ಕೇಡಿಬುದ್ಧಿಗೆ ಇದಕ್ಕಿಂತ ಬೇಕೆ?

...ೋಗೀಶ್ ಈ ಬಾರಿ ಹೊಸ ಗೆಟಪ್ಪೊಂದನ್ನು ...ಅದು ಹರಿಕತೆ. ಬೆಂಗಳೂರಿಗೆ ಬಂದವನೇ ...ರಿಕಥಾ ವಿದ್ವಾನ್ ಗುರುರಾಜುಲು ನಾಯ್ಡು ...ಭಾ ನಾಯ್ಡುರ ಶಿಷ್ಯತ್ವ ಸ್ವೀಕರಿಸಿದ. ಒಂದಷ್ಟು ...ಹರಿಕತೆಯನ್ನು ಕಲಿತ.

...ಗುರುರಾಜುಲು ನಾಯ್ಡು ಥರವೇ ವೇಷ ...ಳ್ಳಿಹಳ್ಳಿ ಸುತ್ತಿ ಹರಿಕತೆ ಮಾಡುತ್ತಿದ್ದ. ತಾನೇ ...ಜುಲು ನಾಯ್ಡು ಶಿಷ್ಯ, ಅವರ ಉತ್ತರಾಧಿಕಾರಿ ...ಕಡೂರು ಸಮೀಪದ ಕಬ್ಬಳ್ಳಿಯಲ್ಲಿ ಬೇಕಾ ...ಕತೆ ಮಾಡಲು ಹೋಗಿ ಅಲ್ಲಿನ ಜನರಿಂದಲೇ ... ಈತನ ಕಪಿಚೇಷ್ಟೆಗೆ ರೋಸತ್ತು ರೊಚ್ಚಿಗೆದ್ದ ...ಕಿತ್ತು ತಾರಾಮಾರಾ ಹೊಡೆದು ಓಡಿಸಿಬಿಟ್ಟರು.

...ನಂತರ ಕೆಲಕಾಲ ಯೋಗೀಶ ಗಣೇಶೋತ್ಸವ, ... ಸಂತೆಗಳಲ್ಲಿ ಭರತನಾಟ್ಯದ ಪ್ರೋಗ್ರಾಮ್ ... ತಾನೇ ಬೃಹನ್ನಳೆಯಂತೆ ಸ್ತ್ರೀ ವೇಷ ಧರಿಸಿ ...ಕುಣಿಯುತ್ತಿದ್ದ. ಈ ಮಧ್ಯೆ ಈತನ ಮಲಿತಮ್ಮ ...ಂಬಾತ ಹಾಸನ ರಸ್ತೆಯ ತಮಿಳರ ...ಬ್ಬಳನ್ನು ಹಾರಿಸಿಕೊಂಡು ಪರಾರಿಯಾದ. ... ಬರಕತ್ತಾಗದೆ, ಊರೂರು ಸುತ್ತಿ ನಾಟ್ಯ ... ಹೊಟ್ಟೆ ತುಂಬದೆ ಅತಂತ್ರ ಸ್ಥಿತಿಯಲ್ಲೇ ...ತುತ್ತಿದ್ದ ಯೋಗೀಶ್ ಈ ಬಾರಿ ಹೊಸ ...ದಕ್ಕೆ ಕೈಯಿಟ್ಟಿದ್ದ. ಅದು ಪೂಜಾರಿ ವೇಷ. ...ಯ ವೀರಭದ್ರೇಶ್ವರ ಸ್ವಾಮಿ ದೇವಾಲಯದ ...ನನ್ನು ಜನ ಕುರುಡುಸ್ವಾಮಿ ಎನ್ನುತ್ತಾರೆ. ಯೋಗಿಗೆ ...ತೋ ಹೋಗಿ ಪೂಜಾರಿಯ ಕಾಲಿಗೆ ಬಿದ್ದು ...ಲಿಂಗಾಯತ, ನಿಮ್ಮ ಜೊತೆ ನಿಂತು ದೇವರ ...ಡ್ತೀನಿ ಎಂದು ಗೋಗರೆದ. ಪೂಜಾರಿಕೆ ಜೊತೆ ...ವನ್ನು ಖಯಾಯಿಯ ಮಾರ್ಗೋಪಾಯ



ಬಲಿಯಾದದ್ದು ಅರಸೀಕೆರೆಯ ಪ್ರಭಾವಿ ಶ್ರೀಮಂತ ಮತ್ತು ಲಿಕ್ಕರ್ ದೊರೆ ಜಯಣ್ಣ ಮತ್ತು ಆತನ ಪತ್ನಿ ಲಲಿತಮ್ಮ!

ಯಾರೋ ನಿಮಗೆ ಮಾಟ ಮಾಡಿಸಿದ್ದಾರೆ, ಆ ಕಾರಣಕ್ಕೇ ನಿಮಗೆ ನೆಮ್ಮದಿಯಿಲ್ಲ ಎಂದೆಲ್ಲ ಶ್ರೀಮಂತ ಜಯಣ್ಣನನ್ನು ನಂಬಿಸಿದ ಯೋಗಿ, ಜಯಣ್ಣನ ಮಾಲೀಕತ್ವದ ಅರಸೀಕೆರೆಯ ಮಯೂರ ಲಾಡ್ಜಿನಲ್ಲೊಂದು ಬಿಟ್ಟಿ ರೂಮು ಹಿಡಿದ. ರೂಮು ಸಿಕ್ಕ ಮೇಲಂತೂ ಆತನ ಗೆಟಪ್ಪೇ ಬದಲಾಯಿತು. ಐವರು ಶಿಷ್ಯರನ್ನು ಜೊತೆ ಹಾಕಿಕೊಂಡು ಅವರೆಲ್ಲರಿಗೂ ಬಿಳಿ ಪಂಚೆ, ಬಿಳಿ ಜುಬ್ಬಾದಂಥ ಯೂನಿಫಾರ್ಮ್ ಕೊಡಿಸಿಕೊಟ್ಟ. ಕುಬೇರ ಜಯಣ್ಣನನ್ನು ಮತ್ತಷ್ಟು ಯಾಮಾರಿಸಲು ಹೋಗಿ ನಿನ್ನ ವಿರುದ್ಧ ನಿನ್ನ ತಂಗಿಯೇ ಮಾಟ ಮಾಡಿಸಿದ್ದಾಳೆ ಎಂದು ಮತ್ತೊಂದು ಬಂಡಲ್ ಬಿಟ್ಟ. ಅಣ್ಣತಂಗಿ ಹೀನಾಯವಾಗಿ ಬಡಿದಾಡಿಕೊಂಡರು.



...ಹಿಡಿದ್ದ ಕುರುಡುಸ್ವಾಮಿಗೂ ಇಂಥವನೇ ಶಿಷ್ಯನೊಬ್ಬ ... ತಾನು ಜ್ಯೋತಿಷ್ಯಕ್ಕೆ ನಿಂತಿದ್ದೇ ಯೋಗೀಶನನ್ನು ... ಕೆಲಸಕ್ಕಿಳಿಸಿದ. ಶುರುವಿನಲ್ಲಿ ಈತನನ್ನು ...ಮತ ಎಂದುಕೊಂಡವರಿಗೆ ಯಾವುದೋ ...ಂದ ಈತನ ಅಸಲೀ ಜಾತಿ ಗೊತ್ತಾಗಿದೆ. ...ಯಾಗಿದೆ.

...ತ್ತಾಗಿದ್ದೇ ಯೋಗೀಶ ಪೂಜಾರಿಯ ಹೆಂಡತಿಯ ... ನೆಕ್ಲೇಸ್ ಇತ್ಯಾದಿ ಚಿನ್ನಾಭರಣಗಳನ್ನು ವಿದ್ಯುತ್ ... ಸಮಯವನ್ನೇ ಕಾದು ನಾಟಕದ ಋಷಿಯಂತೆ ... ಮಾರುವೇಷದಲ್ಲಿ ದಾಳಿ ಮಾಡಿ ಕಿತ್ತೊಯ್ದುಬಿಟ್ಟ. ...ಪೊಲೀಸ್ ಠಾಣೆಗೂ ಹೋಗಿ ಇನ್ನೇನು ಈತ ...ಪಾಲಾಗುತ್ತಾನೆನ್ನುವಷ್ಟರಲ್ಲಿ ಅತ್ತೂ ಕರೆದು ಕಾಲಿಗೆ ...ಬಚಾವಾದ!

...ಗೆ ಪೂಜಾರಿಯಾಗಿದ್ದಾಗಲೇ ಯೋಗಿ ಕೋಡಿಮಠದ ... ಸ್ವಾಮಿ ಶಿವಾನಂದ ಶಿವಯೋಗಿ ರಾಜೇಂದ್ರ ...ಮೀಜಿಯವರನ್ನು ಪರಿಚಯಿಸಿಕೊಂಡಿದ್ದ. ತಾನು ಅವರ ... ಒತ್ತುತ್ತಿರುವಂತೆ ಉಪಾಯವಾಗಿ ಫೋಟೋ ... ತೆಗೆಸಿಕೊಂಡಿದ್ದ. ಅದೇ ಫೋಟೋ ಅನ್ನು ...ಟ್ಟದ ಫ್ರೇಮು ಹಾಕಿ ತಾನೇ ಕೋಡಿಮಠದ ...ಶಿಷ್ಯ, ಶಿಷ್ಯನೆಂದೂ ತನಗೆ ಕಾಲಜ್ಞಾನ, ಹಸ್ತ ...ದ್ರಿಕೆ, ಫೇಸ್ ರೀಡಿಂಗ್ ಗೊತ್ತೆಂದೂ ಮುಗ್ಧರನ್ನು ...ಸುತ್ತಿದ್ದ.

...ದು ಗೊತ್ತಾಗಿ ಕೋಡಿಮಠದ ಸ್ವಾಮಿಯೇ ಕರೆದು ...ರನ್ನು ಬಳಸದಂತೆ ಛೀಮಾರಿ ಹಾಕಿದ್ದರು. ಆದರೆ ...ಬುದ್ಧಿವಂತನಿಗೆ ಇದೆಲ್ಲ ಯಾವ ಲೆಕ್ಕ, ತಾನೇ ಕಾಳಿಯ ... ತನಗೆ ಮಾಟಮಂತ್ರ ಗೊತ್ತು, ಭೂತ ಬಿಡಿಸ್ತೀನಿ. ...ತೀನಿ ಎಂದೆಲ್ಲ ಹೊಸ ಗೆಟಪ್ಪು ತೊಟ್ಟು ...ದ. ಇದು ಆತನ ಹೊಸ ವೇಷವಾಗಿತ್ತು, ಅದಕ್ಕೆ

ಬದಲಾದ ಗೆಟಪ್ಪು, ಜೊತೆಗೆ ಶಿಷ್ಯ ಪಡೆ, ತಕ್ಕಮಟ್ಟಿಗೆ ಆದಾಯ ಇತ್ಯಾದಿಯಿಂದ ಕೊಂಚ ಚಿಗುರಿದ ಯೋಗೀಶ ಪ್ರತಿ ಸಂಜೆಯಾದರೆ ಸಾಕು, ಮಯೂರ ಲಾಡ್ಜಿನ ಎದುರೇ ಇದ್ದ ವೈಶಾಲಿ ಬಾರಿಗೆ ದಾಳಿಯಿಟ್ಟು ಕಂಠಮಟ್ಟ ಕುಡಿಯುತ್ತಿದ್ದ. ಅರಸೀಕೆರೆಯ ಮತ್ತೊಬ್ಬ ತೆಂಗಿನ ಮಂಡಿ ಮಾಲೀಕ ದೋಸೆ ರಾಜಣ್ಣನನ್ನು ಯಾಮಾರಿಸಿ ಆತನಿಗೂ ನಿನ್ನ ತಂಗೀನೇ ಮಾಟ ಮಾಡಿಸಿದ್ದಾಳೆ ಎಂದು ಒಂದೂವರೆ ಲಕ್ಷ ಕಿತ್ತ. ನಡುನಡುವೆ ಹರಿಕತೆ, ಭರತನಾಟ್ಯ ಮಾಟ-ಮಂತ್ರ, ತಡೆ ಒಡೆಯೋದು, ಭೂತ ಬಿಡಿಸೋದು ಇತ್ಯಾದಿ ಥರೇವಾರಿ ವೇಷ ಧರಿಸಿ ಕೈತುಂಬಾ ಖಯಾಯಿಸುತ್ತಿದ್ದಾಗಲೇ ಯೋಗೀಶ ವೈಶಾಲಿ ಬಾರಲ್ಲಿ ಕುಡಿದು ಯಡವಟ್ಟು ಮಾಡಿಕೊಂಡ.

ಈತನ ಕುಡಿದ ಹಾವಳಿಗೆ ರೋಸತ್ತ ವೈಶಾಲಿ ಬಾರ್‌ನ ಕುಡುಕರೇ ಬಾರಲ್ಲೇ ಹಿಡಿದು ಸಖತ್ತಾ ಬಡಿದು ಬೀದಿಗೆಸೆದರು. ಇಷ್ಟು ಪುಕಾರಾಗಿದ್ದೇ ತಡ ಈ ಸುದ್ದಿ ಚಿತ್ರವಿಚಿತ್ರ ರೂಪ ತಾಳಿ ಬಾಯಿಂದ ಬಾಯಿಗೆ ಇಲ್ಲಸಲ್ಲದ ವದಂತಿ ಹಬ್ಬಿ ಮರುದಿನ ಈತನಿಂದ ಯಾರ್‍ಯಾರು ಉಪಟಳ ಅನುಭವಿಸಿದ್ದರೋ ಅವರೆಲ್ಲ ಲಾಡ್ಜಿಗೆ ನುಗ್ಗಿದ್ದೇ ಈತನನ್ನು ಅಟ್ಟಾಡಿಸಿ ಬಡಿದರು. ಅದು 2010 ರ ಡಿಸೆಂಬರ್ ತಿಂಗಳು.

ಹಾಗೆ ಅರಸೀಕೆರೆಯಲ್ಲಿ ನಾನಾ ಅವತಾರವೆತ್ತಿ ಊರಜನರಿಂದಲೇ ಒದೆ ತಿಂದು ಪರಾರಿಯಾದ ಯೋಗಿ ಅಲಿಯಾಸ್ ಯೋಗೀಶ್ ಗುರು ಉರ್ಫ್ ಅರಸೀಕೆರೆ ಚಿಕ್ಕ ಅನಂತರ ಪ್ರತ್ಯಕ್ಷನಾಗಿದ್ದು ಬೆಂಗಳೂರಿನಲ್ಲಿ, ಬೆಂಗಳೂರಿನ ದಿಣ್ಣೂರಿನಲ್ಲಿ ಬಾಡಿಗೆ ಮನೆಯೊಂದನ್ನು ಹಿಡಿದು ತನ್ನ ಪತ್ನಿ ಬಬಿತಾ ಮತ್ತು ಮಗಳನ್ನು ತಂದಿಟ್ಟ ಯೋಗಿ ಒಂದಷ್ಟು ದಿನ ತಾನು ಸಿನಿಮಾ ನಟ, ಸಿನಿಮಾ ಡೈರೆಕ್ಟರ್ ಎಂದೆಲ್ಲ ಓಡಾಡಿಕೊಂಡಿದ್ದ. ಜೆ.ಸಿ. ಭೂಷಣ್ [illegible] ತಗಡು ಡೈರೆಕ್ಟರ್‌ನ 'ನನ್ನ ಒಲವಿನ ಬಣ್ಣ' [illegible] ಕಳಪೆ

ಚಿತ್ರದಲ್ಲಿ ವಿಲನ್ ಆಗಿಯೂ ನಟಿಸಿದ.

'ಒಲವಿನ ಬಣ್ಣ' ಬಿಡುಗಡೆಯಾದ ಎರಡೇ ದಿನಕ್ಕೆ ಥೇಟರ್‌ನಿಂದ ಕಿತ್ತಾಬಿಟ್ಟಿತು. ಆ ಹೊತ್ತಿಗಾಗಲೇ ಡೈರೆಕ್ಟರ್ ತಾಜ್‌ಮಹಲ್ ಚಂದ್ರು, ಲಕ್ಕಿ ಶಂಕರ್, ಆದಿತ್ಯರಂಥ ಸಿನಿಮಾ ಶೂರರನ್ನು ಪರಿಚಯಿಸಿಕೊಂಡಿದ್ದ. ಇದೇ ಹೊತ್ತಿಗೆ ನುಸಿಪೀಡೆ ಕುರಿತಂತೆ ಡಾಕ್ಯುಮೆಂಟರಿ ಒಂದನ್ನು ಮಾಡ್ತೀನಿ ಎಂದು 'ರೈತನಾಯಕ' ಕೋಡಿಹಳ್ಳಿ ಚಂದ್ರಶೇಖರ್‌ನಿಂದ 65 ಸಾವಿರ ರೂಪಾಯಿ ಕಿತ್ತ. ಜೊತೆಗೆ ಅಸೀಕೆರೆ ಜೇನುಕಲ್ ಸಿದ್ದೇಶ್ವರ ಎಂಬ ಶರಣರ ಮೇಲೂ ಡಾಕ್ಯುಮೆಂಟರಿ ಮಾಡ್ತೀನಿ ಎಂದು ದುಡ್ಡೆತ್ತತೊಡಗಿದ. ನುಸಿಪೀಡೆ ಬಗ್ಗೆ ಡಾಕ್ಯುಮೆಂಟರಿ ಬರ್ತದೆ ಎಂದು ಕಾಸುಕೊಟ್ಟ ಕೋಡಿಹಳ್ಳಿ ಕಾದುಕಾದು ಸುಸ್ತಾದದ್ದೇ ಬಂತು.

ಚಿತ್ರ ನಿರ್ದೇಶಕ ತಾಜ್‌ಮಹಲ್ ಚಂದ್ರು ಮೂಲಕ ಬಿಳಿ ಶಿವಾಲೆಯ ರವಿಶಂಕರ್ ಎಂಬ ನೆಲಗಳ್ಳನಿಗೆ ಪರಿಚಯವಾದ ಯೋಗಿ ಆತನ ದಿಣ್ಣೂರಿನ ರಿಯಲ್ ಎಸ್ಟೇಟ್ ಅಡ್ಡೆಯಲ್ಲಿ ಇಟ್ಕಾಡಿಕೊಂಡಿದ್ದ. ಕಾಲಕ್ರಮೇಣ ಬೆಂಗಳೂರಿನ ರಿಯಲ್ ಎಸ್ಟೇಟ್ ವಂಚನೆಯಲ್ಲಿ ಕೈಯಿಟ್ಟ. ಯಾವುದೋ 10 ಕೋಟಿಯ ಲ್ಯಾಂಡ್ ಡೀಲೊಂದರಲ್ಲಿ ರವಿಶಂಕರ್ ಕೈಯಿಟ್ಟಿದ್ದ ಜಮೀನನ್ನು ಖರೀದಿಸಲು ಬಂದಿದ್ದ ಆಂಧ್ರದ ಖದೀಮನೊಬ್ಬನನ್ನು ಹಿಮ್ಮೆಟ್ಟಿಸಬೇಕಿತ್ತು. ಆ ಆಂಧ್ರಾ ಖದೀಮನಿಗೆ ಶಾಸ್ತ್ರ ಜ್ಯೋತಿಷ್ಯ ಎಂದರೆ ವಿಪರೀತ ಭೀತಿ. ಅದನ್ನು ಲೆಕ್ಕ ಹಾಕಿಯೇ ಅರಸೀಕೆರೆಯಿಂದ ಓಡಿಬಂದಿದ್ದ ಯೋಗಿಗೆ ಸ್ವಾಮೀಜಿಯಂತೆ ವೇಷ ತೊಡಿಸಿ ತಮ್ಮ ಭೂಮಿಗೆ ಕೈಯಿಟ್ಟರೆ ನೀನು ನಾಶ ಅಗ್ತೀಯ ಎಂದು ಹೆದರಿಸಲು ಕಳುಹಿಸಲಾಯ್ತು. ಹಾಗೇ ಸ್ವಾಮೀಜಿ ವೇಷ ತೊಟ್ಟು ಹೋದ ಯೋಗಿ ಆಂಧ್ರಾ ಲ್ಯಾಂಡ್ ಡೀಲರ್‌ನನ್ನು ಯಶಸ್ವಿಯಾಗಿಯೇ ಭೀತಿಗೆ ನೂಕಿ ಆತ ರವಿಶಂಕರನ ಲ್ಯಾಂಡಿಗೆ ಕೈಹಾಕದ ಹಾಗೇ ನೋಡಿಕೊಂಡ.

ಅಲ್ಲಿಗೆ ಒಂದಂತೂ ಸಾಬೀತಾಯಿತು. ಅರಸೀಕೆರೆ ಯೋಗಿಗೆ ಸ್ವಾಮೀಜಿ ಸೋಗು ಒಪ್ಪುತ್ತದೆ ಮತ್ತು ಜನ ಸಲೀಸಾಗಿ ಬುಟ್ಟಿಗೆ ಬೀಳುತ್ತಾರೆ!

ಇಂಥ ಸೋಗಲಾಡಿ ತಂತ್ರಕ್ಕೆ ಕೈಯಿಟ್ಟೇ ಬೆಂಗಳೂರಿನಲ್ಲಿ ಹೊಸದೊಂದು ಗೆಟಪ್ಪು ಧರಿಸಿ ಫುಲ್‌ಟೈಂ ವಂಚನೆಗಿಳಿದ ಯೋಗಿ 2011 ರ ಹೊತ್ತಿಗೆ ತನ್ನ ಹೆಸರನ್ನು ಋಷಿಕುಮಾರ ಸ್ವಾಮೀಜಿ ಎಂದು ಸ್ವಯಂಘೋಷಿಸಿಕೊಂಡ. ತನ್ನ ಕಾರಿನ ಮೇಲೆ ಕಾಳೀಪೀಠ ಎಂದೂ ಬರೆಸಿಕೊಂಡ. ಕೈಹಾಕಿದ ಲ್ಯಾಂಡ್ ಡೀಲಿನಿಂದ ಬಂದ ಪಾಲಿನಲ್ಲಿ ಗಾಯತ್ರಿ ನಗರದಲ್ಲಿ ಮೂರು ಬೆಡ್‌ರೂಮಿನ ಮನೆಯೊಂದನ್ನು ಬಾಡಿಗೆಗೆ ಹಿಡಿದು ಅದಕ್ಕೆ ಕಾಳೀಪೀಠವೆಂದು ಹೆಸರಿಟ್ಟ. ಮನೆಯ ಹಾಲಲ್ಲೇ ಕಾಳಿಕಾ ದೇವಿಯ ಪ್ರತಿಮೆಯಿಟ್ಟು ತಾನು ಚಿತ್ರವಿಚಿತ್ರ ವೇಷ ತೊಟ್ಟು ಕೂರುತ್ತಿದ್ದ. ಒಳಗೆ ಒಂದು ಕೋಣೆಯಲ್ಲಿ ತನ್ನ ಪತ್ನಿ ಮಕ್ಕಳನ್ನಿಟ್ಟರೆ ಮತ್ತೊಂದು ಕೋಣೆಯನ್ನು ಡೀಲಿಗೆ ಅಂತಲೇ ಇಟ್ಟುಕೊಂಡ.

ಈ ಮಧ್ಯೆ ಕೆಐಎಡಿಬಿ ಹಗರಣದಲ್ಲಿ ಸಿಲುಕಿಕೊಂಡು ಜೈಲುಪಾಲಾಗಿದ್ದ ಕಟ್ಟಾನಾಯ್ಡು ರಾಶಿಗೆ ಪ್ರವೇಶಿಸಿದ ಋಷಿಕುಮಾರ ತಾನು ಕೂಡ ನಾಯ್ಡು ಜನಾಂಗದ ಸ್ವಾಮೀಜಿಯೆಂದೂ ನಿಮ್ಮನ್ನು ಕಷ್ಟದಿಂದ ಪಾರುಮಾಡಲೆಂದೇ ಬಂದಿದ್ದೇನೆಂದೂ ಬಂಡಲ್ ಬಿಟ್ಟ. ಮಗ ಕಟ್ಟಾ ಜಗ್ಗ ಇದನ್ನು ನಂಬಿಬಿಟ್ಟ. ಅದೇನೋ ಪೂಜೆ ಮಾಡಿ ನಡುರಾತ್ರಿಯಲ್ಲಿ ಇನ್ನೆಲ್ಲೋ ಹೂತಿದ್ದ ಮಾಟದ ಕುಡಿಕೆಯನ್ನು ತೆಗೆದದ್ದೇ ತಡ, ತಮ್ಮ ವಿರುದ್ಧ ಯಾರೋ ಮಾಟ ಮಾಡಿಸಿದ್ದಾರೆಂಬುದನ್ನು ಅಪ್ಪ ಕಟ್ಟಾ ಕೂಡ ನಂಬಿದ್ದ. ಹೂತಿದ್ದ ಮಾಟದ ಕುಡಿಕೆ ತೆಗೆದದ್ದೇ ತಡ ಕಾಕತಾಳೀಯ ಎಂಬಂತೆ ಜೈಲಲ್ಲಿದ್ದ ಕಟ್ಟಾಗೆ ಜಾಮೀನು ಸಿಕ್ಕಿತ್ತು. ಇದರಿಂದ ಅಪ್ಪ ಕಟ್ಟಾ ಮಗ ಕಟ್ಟಾ ಇಬ್ಬರೂ ಋಷಿಕುಮಾರನ ಕಾಲಿಗೆ ಬಿದ್ದಿದ್ದೇ ಆಸೆಂಟ್ ಕಾರೊಂದನ್ನು ಕಾಣಿಕೆಯಾಗಿ ಕೊಟ್ಟರು.

ಕಟ್ಟಾನಿಂದ ಬಳುವಳಿಯಾಗಿ ಬಂದ ಕಾರಿನ ಮೇಲೆ ತ್ರಿಪುರ ಸುಂದರಿ ಕಾಳಿಕಾ ಪೀಠ ಎಂದು ಬೋರ್ಡೊಂದನ್ನು ಬರೆಸಿಹಾಕಿದ ಋಷಿಕುಮಾರ ಕ್ರಮೇಣ ಯಡಿಯೂರಪ್ಪನಿಗೂ ಆತ್ಮೀಯನಾದ. ತಾನು ಲಿಂಗಾಯತ ಎಂದೇ ಯಡ್ಡಿ ಮನೆಯಲ್ಲಿ ಹೇಳಿಕೊಂಡರೆ ಯಲಹಂಕ ಶಾಸಕ ವಿಶ್ವನಾಥ್ ಮತ್ತು ಸಿ.ಟಿ. ರವಿ ಬಳಿ ತಾನು ಒಕ್ಕಲಿಗ ಎಂದು ಭಜ್ಜಕಟ್ಟಿದ್ದ. ಶ್ರೀರಂಗಪಟ್ಟಣದಲ್ಲಿ ಪಶ್ಚಿಮ ವಾಹಿನಿಯ ದಂಡೆ ಮೇಲೆ ತಾನು ಭೂತ-ಪ್ರೇತ ಬಿಡಿಸ್ತೀನಿ ಎಂದು ಮತ್ತೂ ಒಂದು ದೊಂಬರಾಟ ಶುರುಹಚ್ಚಿಕೊಂಡ. ಋಷಿಕುಮಾರ ಸ್ವಾಮಿಯ ರಾತ್ರೋರಾತ್ರಿಯ ಅವತಾರ, ಉತ್ಪತ್ತಿ, ಕೀರ್ತಿ, ಖಯಾಯಿ ಎಲ್ಲಕ್ಕೂ ಒಂದು ನಿಗೂಢ ಕಾರಣವಿತ್ತು.

ಅದು ತಮಿಳುಸ್ವಾಮಿ ನಿತ್ಯಾನಂದನ ವಿರುದ್ಧ ಆತ ಮೊಳಗಿಸಿದ ರಣಕಹಳೆ. ಕೊನೆಗೆ ಅದೇ ಆತನಿಗೆ ಮುಳು ವಾಯಿತು. ವಂಚಕನೊಬ್ಬನ ಥರೇವಾರಿ ವಂಚನಾವತಾರ ಗಳಿಗೂ ಒಂದು ಮಿತಿಯಿರುತ್ತದೆಯಲ್ಲವೆ? ತಾನೇ ತೋಡಿದ ಗುಂಡಿಗೆ ತಾನೇ ಬಿದ್ದು ನರಳಾಡುತ್ತಿದ್ದಾನೆ ಋಷಿಕುಮಾರ!

● ರಾ.ಸೋಮನಾಥ್

ಸುವರ್ಣದ ಹಿಡಿಸಿ ಹಾಕುವ ಹಿಕಮತ್ತು!

ಸುವರ್ಣ ಸುದ್ದಿವಾಹಿನಿ ದೊಡ್ಡ ಸಕಲಕಲಾವಲ್ಲಭ ಕಾಳಿ "ಮಠಾಧೀಶ" ಋಷಿಕುಮಾರನನ್ನು ಕುರಿತು ಅಹೋರಾತ್ರಿ ಒಂದು ಕಾರ್ಯಕ್ರಮ ಪ್ರಸಾರ ಮಾಡಿತ್ತಲ್ಲವಾ? ಇದು ಬರೋಬ್ಬರಿ 14 ತಾಸುಗಳ ಹಿಂಸೋನ್ಮಾದದ-ಜಗಳ ಹಚ್ಚಿಹಾಕಿ ಚೆಂದನೋಡುವ ಕೊಳಕು ಕತೆಯಾಗಿತ್ತು. ಈ ಪ್ರಸಾರದಲ್ಲಿ ಟಿಆರ್‌ಪಿ ಹೆಚ್ಚಿಸಿಕೊಳ್ಳುವ ವ್ಯಾಪಾರಿ ವ್ಯಸನಶೀಲತೆ ಹೊರತು ಯಾವ ಸಾಮಾಜಿಕ ಬದ್ಧತೆ-ಆರೋಗ್ಯಕರ ಚರ್ಚೆ ಇರಲೇ ಇಲ್ಲ. ಮಹಾನ್ ಪತ್ರಕರ್ತ ವಿಶ್ವೇಶ್ವರ ಭಟ್ಟರ ಟೀಮಿನ ವೈಚಾರಿ ದಿವಾಳಿಕೋರತನ, ಕಿತಾಪತಿ ಸಂಸ್ಕೃತಿಯ ಪ್ರತೀಕದಂತಿತ್ತು ಋಷಿಕುಮಾರ್ ಎಪಿಸೋಡು.

ಋಷಿಕುಮಾರ ಹೇಳಿಕೇಳಿ ಹಸಿ-ಹಸೀ ಹುಂಬ; ಸಾಮಾಜಿಕ-ಧಾರ್ಮಿಕ ಬದ್ಧತೆ-ತತ್ವಾದರ್ಶಗಳಲ್ಲಿ ಉಂಡಾಡಿ ಗುಂಡ; ಎಲ್ಲ ಬಿಟ್ಟು ಭಂಗಿ ನೆಟ್ಟಿದ್ದ ಈ ಮಹಾಸ್ವಾಮಿ ಕೆಟ್ಟು ಮಠ ಸೇರಿದ್ದ. ಇಂಥವನನ್ನು ದೊಡ್ಡ ಹೋರಾಟಗಾರ-ಹಾರಾಟಗಾರ ಮಾಡಿದ್ದೇ ದೃಶ್ಯ ಮಾಧ್ಯಮದ ಚಿಕಿತ್ಸಕ ಬುದ್ಧಿಯಿಲ್ಲದ ಭಂಡರು. ಅಧ್ಯಯನ-ಅನುಭವ ಇಲ್ಲದ, ನಾಗರಿಕ ಸಮಾಜದಲ್ಲಿ ಹೇಗಿರಬೇಕೆಂಬ ಕನಿಷ್ಠ ಜ್ಞಾನವೂ ಇಲ್ಲದ ಬಾಯಿ ಬಡಿವಾರದ ಭೂಪನೀತ. ಇವನಿಂದ ಅದೆಂಥ ಸಂಸ್ಕಾರ-ಸಂಯಮ-ಜನೋಪಯೋಗಿ 'ಕರ್ಮ' ಬಯಸಲು ಸಾಧ್ಯ?

ಹೀಗಿರುವಾಗ ಆತ ನಿತ್ಯಾನಂದನೆಂಬ ಆತನದೇ ಅಣ್ಣನಂತಿರುವ ಇನ್ನೊಬ್ಬ ಕಾವಿಕ್ರಿಮಿಯ ಆಟ-ನೋಟ-ಮಾಟದ ವಿರುದ್ಧ ಬೀದಿಗೆ ಬಂದು ಅರಚಿದಾಗಲೇ ಎಂಥವರಿಗೂ ಸಂಶಯಗಳು ಕಾಡಲಾರಂಭಿಸಿದವು. ಆದರೆ ಪೈಪೋಟಿಗೆ ಬಿದ್ದು ಹಾಳು-ಮೂಳು ಬಿತ್ತರಿಸುವ 24x7 ಚಾನೆಲ್‌ಗಳ ಮಂದಬುದ್ಧಿಜೀವಿಗಳಿಗೆ ಇದು ಸಹಜವಾಗೇ ಹೊಳೆಯಲಿಲ್ಲ. ಅದಿರಲಿ; ಈ ಋಷಿ ಡೀಲ್‌ಗೆ ಹೋಗಿದ್ದು ಅಂತಾರಾಷ್ಟ್ರೀಯ ವಿಪತ್ತು ಎಂಬಂತೆ "ಸುವರ್ಣ"ದ ಸಾಹಸಿಗಳು ಹಗಲು-ರಾತ್ರಿ ಚರ್ವಿತ-ಚರ್ವಣ ನಡೆಸಿದರು; ಕುತರ್ಕಗಳೇ ಅಂದು ಆ ಟೀವಿ ಸ್ಟೂಡಿಯೋದಲ್ಲಿ ನಡೆಯಿತು. ಎಲ್ಲರೂ ತಾನು ಕಳ್ಳ ಅಲ್ಲ; ಅವನು ಕಳ್ಳ ಎಂದರು. ಎಲ್ಲರಿಗೂ ಒಣಪ್ರತಿಷ್ಠೆ ಮುಖ್ಯವಾಗಿತ್ತೇ ಹೊರತು ಕನ್ನಡ ನೆಲದ ಬೇಕು-ಬೇಡ ಅರ್ಥವಾಗಿರಲಿಲ್ಲ; ಕೆಲವರಂತೂ ಅವಧೂತರಂತೆ ಉಪದೇಶ ಬಿಗಿದರು.

ಮೊದಲಾಗಿ ಈ ಪೆದ್ದು ಸ್ವಾಮಿ ಆ ಟಿವಿ ಸ್ಟುಡಿಯೋಕ್ಕೆ ಬಂದು ಕುಳಿತದ್ದೇ ತಮಾಷೆ. ಒಂಚೂರು ಬುದ್ಧಿ ಎಂಬುದು ಇದ್ದಿದ್ದರೆ ಋಷಿಕುಮಾರ ಹೀಗೆ ಇಡೀ ದಿನ-ರಾತ್ರಿ ಕುತರ್ಕ ಮಂಡಿಸುತ್ತಾ ದೈನೇಸಿ ಸ್ಥಿತಿ ತಲುಪುತ್ತಿರಲಿಲ್ಲ. ಒಂದರ್ಥ ಗಂಟೆ ಕೂತು "ಪೀಠತ್ಯಾಗ"ವೂ- ಹೊಸ ಸಂಸಾರವೂ-ಹಣಕ್ಕಾಗಿ ಹೋರಾಟ. ಎಂದೋ ಹೇಳಿ ವಾನಪ್ರಸ್ಥಕ್ಕೆ ತೆರಳುತ್ತಿದ್ದ ತನ್ನ ಮೇಲೆ ಕಿಡಿಕಿಡಿ ಬೆಂಕಿಯಾಗಿದ್ದ ಕಸ್ತೂರಿ ಕನ್ನಡ ಸಂಘಟನೆಯ ಒರಣ ರಮೇಶ್ ಗೌಡನನ್ನು ಸುವರ್ಣದವರು ತಂದು ಪಕ್ಕಕ್ಕೇ ಕೂರಿಸಿದಾಗಲೇ ಈತ ಎಚ್ಚೆತ್ತುಕೊಳ್ಳಬೇಕಿತ್ತು. ಏಕವಚನ-ಬೈಗುಳದಂಥ ಭಾಷೆ ಬಳಸುತ್ತಿದ್ದ ರಮೇಶ್ ಗೌಡ ಎರಡು ಬಾರಿಸಿಯೇ ಬಿಡುತ್ತಾನೋ ಆ ಕಾವಿ ಜೀವಿಗೆ ಎಂಬ ಭಯ ನೋಡುಗರಿಗೇ ಕಾಡುತಿತ್ತು. ಬಹುಶಃ ಸುವರ್ಣದವರು ಇಂಥದೊಂದು "ಫೈಟಿಂಗ್" ನಿರೀಕ್ಷೆಯಲ್ಲಿ ಇದ್ದಂತಿತ್ತು. ಒಂದು ಹಂತದಲ್ಲಿ ಗೌಡರು ಋಷಿಯ "ಧರ್ಮದೀಕ್ಷೆ"ಯ ಪೇಟಕ್ಕೆ ಕೈಹಾಕಿ ಕೆಳಗಿಳಿಸಿಬಿಟ್ಟರು!

ಅದೆಂಥ ಪಾಪಿ-ಆರೋಪಿಯೇ ಆಗಲಿ. ಆತನ ಮೈಮೇಲೆ ಕೈಹಾಕುವ ಅಥವಾ ಆತನ ಪೋಷಾಕು ಕಳಚಿ ಹಾಕುವ ಅಧಿಕಾರ ಈ ನೆಲದ ಸುವಿಧಾನ ಯಾರಿಗೂ ಕೊಟ್ಟಿಲ್ಲ. ಎಡವಟ್ಟು ಋಷಿಕುಮಾರನ "ಪೀಠತ್ಯಾಗ" ಮಾಡಿಸುವ ಅಂತಿಮ ಗುರಿ ಇಟ್ಟುಕೊಂಡೇ ಸುವರ್ಣ ಟೀಮು ಮತ್ತು ರಮೇಶ್ ಗೌಡ ಪಡೆ "ಫಿಕ್ಸಿಂಗ್" ನಡೆಸಿ ಚರ್ವಿತ ಚರ್ವಣಕ್ಕೆ ಬಂದು ಕುಳಿತಂತಿತ್ತು. ಈ ಋಷಿಕುಮಾರ ಎಂಬ ನಿಕೃಷ್ಟ ಧರ್ಮೋನ್ಮಾದಿ ದಂಧೆದಾರ ಪೀಠತ್ಯಾಗ ಮಾಡಿದರೆಷ್ಟು? ಬಿಟ್ಟರೆಷ್ಟು? ಕನ್ನಡಿಗರಿಗೇನು ಭಾಗ್ಯ ಬರುತ್ತದೆ? ವೆರಿ ಸಿಂಪಲ್ ಒಂದು ಕ್ರಿಮಿನಲ್ ಕೇಸು ಈತನ ಮೇಲೆ ಜಡಿಸಿ ವಿಚಾರಣೆ-ತನಿಖೆ ನಡೆಸಿ ಆತನ ಬಂಡವಾಳ ಬಯಲು ಮಾಡ ಬಹುದಿತ್ತು. ಆತನ ವಿರೋಧಿಗಳು; ಸುವರ್ಣದವರೂ ಅಷ್ಟೇ 14 ಗಂಟೆಗಳ ಕಾಲ ಸಮಯ ವ್ಯರ್ಥ ಮಾಡುವ ಬದಲು ಕಾಲುಗಂಟೆ [illegible] ಬಿತ್ತರಿಸಿದ್ದರೆ ಈಗಾಗಿರುವ "ಸಾಧನೆ"ಗಿಂತ ದೊಡ್ಡ ಪುಣ್ಯ [illegible] ಆಗುತಿತ್ತು.

● ನವುಮ

ಮೊಳಕಾಲ್ಮೂರು: ಶಾಸಕ ಎನ್.ವೈಗೆ ನಡುಕ ಶುರು

ಮೊಳಕಾಲ್ಮೂರಿನ ಕಾಂಗ್ರೆಸ್ ಶಾಸಕ ಎನ್.ವೈ.ಗೋಪಾಲ ಕೃಷ್ಣನಿಗೆ ಚುನಾವಣೆಯ ಮೊದಲೇ ಸೋಲಿನ ನಡುಕ ಶುರುವಾಗಿದೆ. ಯಾಕೆಂದರೆ ಈ ವಿಧಾನ ಸಭಾ ಕ್ಷೇತ್ರದಲ್ಲಿ ಒಂದೆಡೆ ಹಾಲಿ ಶಾಸಕನ ವಿರುದ್ಧ ಬ್ಯಾಡರ ಸಮುದಾಯದ ಉಪಜಾತಿಗಳ ನಡುವೆ ಜಗಳ ಪ್ರಾರಂಭವಾಗಿದ್ದರೆ ಇನ್ನೊಂದೆಡೆ ಬಿಎಸ್‌ಆರ್ ಪಕ್ಷದಿಂದ ಹಾಲಿ ಸಂಸದೆ ಶಾಂತಾ ಅಸೆಂಬ್ಲಿಗೆ ಸ್ಪರ್ಧಿಸುವ ಸುದ್ದಿ ಕೇಳಿಬರುತ್ತಿದೆ. ಮತ್ತೊಂದೆಡೆ ಇಬ್ಬರು ಹಣದ ಕುಳಗಳು ಮುಂದಿನ ಬಾರಿ ಗೋಪಾಲಕೃಷ್ಣನನ್ನು ಸೋಲಿಸಲೇ ಬೇಕೆಂದು ಪಣ ತೊಟ್ಟಿದ್ದಾರೆ. ಇವೆಲ್ಲ ಜೊತೆಗೂಡಿ ಗೋಪಾಲಕೃಷ್ಣನಿಗೆ ಚಳಿಜ್ವರ ಶುರುಹಚ್ಚಿಕೊಂಡಿದೆ.

ಬಿಜೆಪಿಯ ಶಾಂತಾ ವಿರುದ್ಧ ಬಳ್ಳಾರಿ ಲೋಕಸಭೆ ಚುನಾವಣೆಯಲ್ಲಿ ಸೋತ ಎನ್.ವೈ.ಹನುಮಂತಪ್ಪ (ಇವರು ಶಾಸಕ ಗೋಪಾಲಕೃಷ್ಣನ ಸಹೋದರ) ತನ್ನ ಹಿಂಬಾಲಕರ ಮೂಲಕ ಶಾಂತ ಗೆಲುವನ್ನು ಪ್ರಶ್ನಿಸಿ ನ್ಯಾಯಾಲಯದ ಮೆಟ್ಟಿಲನ್ನು ಏರಿದ್ದರು. ಇದಕ್ಕೆ ಸಂಬಂಧಿಸಿದಂತೆ ನ್ಯಾಯಾಲಯ ಮರು ಎಣಿಕೆಗೆ ಆಜ್ಞೆ ಹೊರಡಿಸಿದಾಗ ಬಿಎಸ್‌ಆರ್ ಪಾರ್ಟಿಯ ಅಧಿನಾಯಕ ಶ್ರೀರಾಮುಲುಗೆ ನಖಶಿಖ ಕೋಪ ಬಂದಿತ್ತು. ಮರುಎಣಿಕೆಯಲ್ಲಿ ಶಾಂತಾಳ ಭವಿಷ್ಯ ಗಟ್ಟಿಯಾದದ್ದೇ ತಡ, ಶ್ರೀರಾಮುಲು ಪಕ್ಷ ಮೊಳಕಾಲ್ಮೂರು ಕ್ಷೇತ್ರದಲ್ಲಿ ಹುರುಪಿನಿಂದಲೇ ಎನ್.ವೈ ಕುಟುಂಬದ ವಿರುದ್ಧ ಚುನಾವಣಾ ಸಮರ ಸಾರಿದೆ.

ರಾಜಕೀಯ ಕುಟುಂಬ


ಪಕ್ಕಾ ಫ್ಯೂಡಲ್ ಪ್ರವೃತ್ತಿಯ ಎನ್.ವೈ. ಕುಟುಂಬ ಪಕ್ಕಾ ರಾಜಕೀಯ ಕುಟುಂಬ. ಗೋಪಾಲಕೃಷ್ಣ ಮೊಳಕಾಲ್ಮೂರಿನಿಂದ ನಾಲ್ಕು ಬಾರಿ ಶಾಸಕರಾದರೂ ತಮ್ಮ ಕ್ಷೇತ್ರಕ್ಕೆ ಕಡಿದು ಕಟ್ಟೆಹಾಕಿದ್ದು ಅಷ್ಟರಲ್ಲೇ ಇದೆ. ಸಭ್ಯಸ್ಥನ ಮುಖವಾಡ ಧರಿಸಿಯೇ ಗೋಪಾಲಕೃಷ್ಣ ಸರ್ವಾಧಿಕಾರಿ ಧೋರಣೆಯಿಂದ ಮೆರೆದರು. ತನ್ನ ವಿರುದ್ಧ ದನಿ ಎತ್ತುವವರನ್ನು ಸದ್ದಿಲ್ಲದೆ ಸದ್ದಡಗಿಸುತ್ತಿದ್ದರು.

ಮೊಳಕಾಲ್ಮೂರು ವಿಧಾನಸಭಾ ಕ್ಷೇತ್ರವೇ ವಿಚಿತ್ರ. ರಾಂಪುರ ಮತ್ತು ಮೊಳಕಾಲ್ಮೂರು ಕಸಬಾ ಹೋಬಳಿಗಳೆರಡು ಸೇರಿ ತಾಲ್ಲೂಕು ಕೇಂದ್ರವಾಗಿದೆ. ಇಲ್ಲಿ 16 ಗ್ರಾಮ ಪಂಚಾಯತಿಗಳಿವೆ. ಇಂಥಾ ಸಣ್ಣ ತಾಲ್ಲೂಕಿಗೆ ಪಕ್ಕದ ಚಳ್ಳಕೆರೆಯ ನಾಯಕನಹಟ್ಟಿ ಮತ್ತು ತಳಕು ಹೋಬಳಿಯನ್ನು ಮೊಳಕಾಲ್ಮೂರು ವಿಧಾನಸಭಾ ಕ್ಷೇತ್ರಕ್ಕೆ ಸೇರಿಸಲಾಗಿದೆ. ಈ ಕ್ಷೇತ್ರದಲ್ಲಿರುವ ಒಟ್ಟು ಮತದಾರರ ಸಂಖ್ಯೆ ಒಂದು ಲಕ್ಷದ ಎಂಟು ಸಾವಿರ ಮಾತ್ರ. ಆದರೆ ಗೋಪಾಲಕೃಷ್ಣನ ಸ್ವಜಾತಿ ನಾಯಕರ ಮತಗಳೇ 80 ಸಾವಿರ. ಬಳ್ಳಾರಿ ಜಿಲ್ಲೆಗೆ ಕೂಗಳತೆ ದೂರದಲ್ಲಿರುವ ರಾಂಪುರದಲ್ಲಿ ಮಾತ್ರ ವೀರಶೈವರ ಮತಗಳಿವೆ. ಉಳಿದಂತೆ ಗೊಲ್ಲರು, ಕುರುಬರು, ಮುಸ್ಲಿಮರು, ಇತರರು ಸೇರಿ ಮೂವತ್ತು ಸಾವಿರ ಮತಗಳಿವೆ. ಗೋಪಾಲಕೃಷ್ಣರಿಗೆ ತಮ್ಮ ಸ್ವಜಾತಿ ನಾಯಕ ಮತದಾರರ ಮೇಲೆ ಹಿಡಿತವಿದೆ. ಈ ಕಾರಣಕ್ಕಾಗಿಯೇ ತನ್ನ ಮುಂದೆ ಸೋಲೆಂಬುದೇ ಹೆದರಿಹೋಗಿದೆ ಎಂಬ ಭ್ರಮೆಯಲ್ಲಿ ಗೋಪಾಲಕೃಷ್ಣ ಪ್ರತೀ ಚುನಾವಣೆಯನ್ನು ಲೀಲಾಜಾಲವಾಗಿ ಗೆಲ್ಲುತ್ತಾ ಬಂದರು.




2008ರಲ್ಲಿ ಬಿಸಿ ಮುಟ್ಟಿತು

2008ರ ಚುನಾವಣೆ ಎನ್.ವೈ ಕುಟುಂಬಕ್ಕೆ ಬಿಸಿ ಮುಟ್ಟಿಸಿತು. ಆಗ ಈ ಕ್ಷೇತ್ರದಲ್ಲಿ ಯಡಿಯೂರಪ್ಪನ ಹವಾ ಇತ್ತು. ನಾಯಕ ಸಮುದಾಯದ ಮತ್ತೊಂದು ಕುಳ ಗೋಪಾಲಕೃಷ್ಣನ ವಿರುದ್ಧ ತಲೆ ಎತ್ತಿತ್ತು. ಅವನೇ ನೇರಲಗುಂಟೆ ತಿಪ್ಪೇಸ್ವಾಮಿ. ಈ ನೇರಲಗುಂಟೆ ತಿಪ್ಪೇಸ್ವಾಮಿ ಬೇರೆ ಯಾರೂ ಅಲ್ಲ. ಗಣಿಕಳ್ಳ ರೆಡ್ಡಿಗಳಿಗೆ ಬಳ್ಳಾರಿ ನೆಲವನ್ನೇ ದಾನ ಮಾಡಿದ್ದ ಪುಣ್ಯಾತ್ಮ ಅರಣ್ಯಾಧಿಕಾರಿ ಮುತ್ತಯ್ಯನ ಅಣ್ಣ ಈ ತಿಪ್ಪೇಸ್ವಾಮಿ. ಆಗ ಮುತ್ತಯ್ಯ ಅಕ್ರಮವಾಗಿ ಗಳಿಸಿದ್ದ ದುಡ್ಡೆಲ್ಲ ಅಣ್ಣ ತಿಪ್ಪೇಸ್ವಾಮಿಯ ಖಜಾನೆಯಲ್ಲಿ ಭರ್ತಿಯಾಗಿತ್ತು.


ಜೆ.ಶಾಂತಾ


ನೇರಲಗುಂಟೆ ತಿಪ್ಪೇಸ್ವಾಮಿ


ಯತ್ನಳ್ಳಿ ತಿಪ್ಪೇಸ್ವಾಮಿ

ಇಂಥಾ ತಿಪ್ಪೇಸ್ವಾಮಿ ಗೋಪಾಲಕೃಷ್ಣನ ವಿರುದ್ಧ ಬಿಜೆಪಿಯಿಂದ ಕಣಕ್ಕಿಳಿದು ಬಿಟ್ಟ. ಮತ್ತೊಂದು ಕಡೆ ಜೆಡಿಎಸ್‌ನಿಂದ ಸ್ಪರ್ಧಿಸಿ ಸತತವಾಗಿ ನಾಲ್ಕು ಬಾರಿ ಮೂರನೇ ಸ್ಥಾನವನ್ನೇ ತನ್ನದಾಗಿಸಿಕೊಂಡಿದ್ದ ಎತ್ನಳ್ಳಿ ಗೌಡರ ತಿಪ್ಪೇಸ್ವಾಮಿ ಎಂಬಾತನೂ ನಿಂತಿದ್ದ. ಈ ಮೂವರ ನಡುವೆ ಅವರ 80 ಸಾವಿರ ಸ್ವಜಾತಿ ಮತಗಳು ಛಿದ್ರವಾದವು. ಆದರೆ ಮೊಳಕಾಲ್ಮೂರು ತಾಲ್ಲೂಕಿನ ನಾಯಕರು, ಲಿಂಗಾಯತರು ಮತ್ತಿತರರ ಸಮುದಾಯದ ಮತಗಳು ಕಾಂಗ್ರೆಸ್‌ಗೆ ಬಂದವು. ಆಗ ಗೋಪಾಲಕೃಷ್ಣ ಕೇವಲ 4,000 ಚಿಲ್ಲರೆ ಮತಗಳಿಂದ ಮತ್ತೆ ಗೆದ್ದಿದ್ದ.

ಬರಪೂರ ಪ್ರಚಾರ

ಈಗ ಕ್ಷೇತ್ರದಲ್ಲಿ ಚುನಾವಣಾ ರಂಗೇರಿದೆ. ಬಿಜೆಪಿಯಿಂದ ನೇರಲಗುಂಟೆ ತಿಪ್ಪೇಸ್ವಾಮಿ ಬರಪೂರ ಪ್ರಚಾರ ಶುರುಮಾಡಿದ್ದಾನೆ. ಅಣ್ಣ ಮುತ್ತಯ್ಯ ಜೈಲಲ್ಲಿ ಮುದ್ದೆ ಮುರಿಯುತ್ತಿದ್ದರೂ ತಮ್ಮನ ಗೆಲುವಿಗೆ ತನ್ನ ಅಕ್ರಮ ಹಣವನ್ನು ಹೊಳೆಯಂತೆ ಹರಿಸುತ್ತಿದ್ದಾನೆ. ಜೆಡಿಎಸ್‌ನಿಂದ ಎತ್ನಳ್ಳಿ ತಿಪ್ಪೇಸ್ವಾಮಿ ಐದನೇ ಚುನಾವಣೆಯನ್ನು ಖುಷಿಯಿಂದಲೇ ಎದುರು ನೋಡುತ್ತಿದ್ದಾನೆ.

ಈ ಬಾರಿ ನಾಯಕ ಸಮುದಾಯದೊಳಗೆ ಒಳಪಂಗಡಗಳ ಜಗಳ ಪ್ರಾರಂಭವಾಗಿದೆ. 80 ಸಾವಿರ ಮತದಾರರಿರುವ ನಾಯಕ ಸಮುದಾಯದೊಳಗೆ ಮ್ಯಾಸನಾಯಕರು ಮತ್ತು ಊರು ನಾಯಕರೆಂಬ ಉಪಜಾತಿಗಳಿವೆ. ಮೊಳಕಾಲ್ಮೂರು-ರಾಂಪುರ ಭಾಗದಲ್ಲಿ ಗೋಪಾಲಕೃಷ್ಣನ ಸಮುದಾಯವಾದ ಊರು ನಾ[illegible] 12 ಸಾವಿರ ಮತಗಳಿದ್ದರೆ ಉಳಿದ 68 ಸಾವಿರ ಮತ[illegible] ಮ್ಯಾಸನಾಯಕರದ್ದು. ಚಳ್ಳಕೆರೆ, ನಾಯಕನಹಟ್ಟಿ-ತ[illegible] ಹೋಬಳಿಗಳಲ್ಲಿ ಮ್ಯಾಸನಾಯಕರದ್ದೇ ಮೇಲುಗೈ. ಬಿಜೆ[illegible] ನೇರಲಗುಂಟೆ ತಿಪ್ಪೇಸ್ವಾಮಿ ಮತ್ತು ಜೆಡಿಎಸ್‌ನ [illegible] ತಿಪ್ಪೇಸ್ವಾಮಿಗಳಿಬ್ಬರೂ ಮ್ಯಾಸನಾಯಕರು. ಇವರಿಬ[illegible] ಈಗ ಕ್ಷೇತ್ರದ ತುಂಬಾ ಬಹುಸಂಖ್ಯಾತ ಮ್ಯಾಸನಾ[illegible] ಪ್ರತಿಷ್ಠೆಯನ್ನೇ ಚುನಾವಣಾ ಗೆಲುವಿನ ಮಾನದಂಡವ[illegible] ಮಾಡಿಕೊಂಡಿದ್ದಾರೆ. ಇಲ್ಲಿಯತನಕ ಇಲ್ಲದಿದ್ದ ಉಪ[illegible] ಪ್ರಶ್ನೆ ಈಗ ಕ್ಷೇತ್ರವನ್ನು ಕಾಡುತ್ತಿದ್ದು 12 ಸಾ[illegible] ಮತಗಳಿರುವ ಊರುನಾಯಕರ ಗೋಪಾಲಕೃಷ್ಣ ನಾ[illegible] ಬಾರಿ ಶಾಸಕನಾಗುವುದಾದರೆ 68 ಸಾವಿರ ಮತಗಳ[illegible] ಮ್ಯಾಸನಾಯಕರವನು ಯಾಕೆ ಶಾಸಕರಾಗಬಾರದು ಎ[illegible] ಸವಾಲು ಕೇಳಿಬರುತ್ತಿದೆ. ಈ ಒಳಜಾತಿ ಜಗಳವೇ ಮುಂ[illegible] ಚುನಾವಣೆಯಲ್ಲಿ ಪ್ರಧಾನವಾಗಿ ಕ್ಷೇತ್ರ ನೆಮ್ಮದಿ ಕೆಡಿ[illegible] ಸೂಚನೆಗಳಿವೆ.


ಶ್ರೀರಾಮುಲು ಎಂಟ್ರಿ

ಮುಂದಿನ ಬಾರಿ ಶ್ರೀರಾಮುಲು ಮೊಳಕಾಲ್ಮೂ[illegible] ವಿಧಾನ ಸಭಾ ಕ್ಷೇತ್ರಕ್ಕೆ ಎಂಟ್ರಿ ಕೊಡುವ ಸಾಧ್ಯತೆಗ[illegible] ಆತನ ಬಿಎಸ್‌ಆರ್ ಪಾರ್ಟಿಗೆ ಮೊಳಕಾಲ್ಮೂರಿನಲ್ಲಿ [illegible] ಇರದಿದ್ದರೂ ರಾಮುಲಿಗೆ ಎನ್.ವೈ. ಕುಟು[illegible] ರಾಜಕಾರಣವನ್ನು ನೆಲಕಚ್ಚಿಸುವ ಸೇಡಿನ ತವಕ[illegible] ಬಳ್ಳಾರಿಯಲ್ಲಿ ಗೆದ್ದಿದ್ದ ತನ್ನ ಸಹೋದರಿ ಶಾಂತಾ ವಿ[illegible] ಎನ್.ವೈ.ಕುಟುಂಬ ಕೋರ್ಟ್ ಮೆಟ್ಟಿಲನ್ನು ಹತ್ತಿದ್ದರಿ[illegible] ಅವರ ವಿರುದ್ಧ ರಾಮುಲು ಕೆಂಡಕಾರುತ್ತಿದ್ದಾನೆ. ಆದ್ದರಿ[illegible] ಮುಂದಿನ ಚುನಾವಣೆಯಲ್ಲಿ ಗೋಪಾಲಕೃಷ್ಣನ[illegible] ಮನೆಗಟ್ಟಲು ಶ್ರೀರಾಮುಲು ಸಕಲ ತಯಾರಿ ನಡೆಸಿದ[illegible]

ಗಣಿ ಕಳ್ಳರ ಗ್ಯಾಂಗಿಗೆ ಅರಣ್ಯಾಧಿಕಾರಿ ಮುತ್ತ[illegible] ನೀಡಿದ್ದ ಸಹಾಯವನ್ನು ಶ್ರೀರಾಮುಲು ಮರೆ[illegible] ಆದ್ದರಿಂದ ಬಿಜೆಪಿಯ ನೇರಲಗುಂಟೆ ತಿಪ್ಪೇಸ್ವಾಮಿ ಪರ[illegible] ಶ್ರೀರಾಮುಲು ನಿಲ್ಲುವ ಸೂಚನೆಗಳೂ ಇವೆ. [illegible] ಸೇಡಿನ ರಾಜಕಾರಣದಲ್ಲಿ ಮೊಳಕಾಲ್ಮೂರು ವಿಧಾನಸ[illegible] ಕ್ಷೇತ್ರದಲ್ಲಿ ದೊಂಬಿಗಳಿಗೆ ಲೆಕ್ಕವಿಲ್ಲದಂತಾಗುತ್ತ[illegible] ಶ್ರೀರಾಮುಲು ಮತ್ತು ಎನ್.ವೈ. ಕುಟುಂಬಗಳೆರ[illegible] ಸರ್ವಾಧಿಕಾರಿ ಕುಟುಂಬಗಳೇ ಆಗಿರುವುದರಿಂದ ಮು[illegible] ಎದುರಾಗುವ ರಾಜಕೀಯ ಪರಿಣಾಮಗಳು ಈಗಾಗ[illegible] ಭಯಭೀತಿ ಹುಟ್ಟಿಸಿವೆ.

● ಟಿ.ಎನ್.ಷಣ್ಮು[illegible]

'ಬಹುಮತ' ಹಾಲಪ್ಪ ಇನ್ನಿಲ[illegible]



'ಬಹುಮತ' ಹಾಲಪ್ಪನವರು ತೀರಿಕೊಂಡಿದ್ದಾರೆ. ಅವರ ನಿರಂತರ ಹೋರಾಟದ ಉದ್ದೇಶವೇನೆಂದರೆ, ಬಹು ನಿಖರವಾದ ಜಾತಿ ಜನಗಣತಿ ನಡೆಯಬೇಕು. ಆಗ ಮಾತ್ರ ಈ ಶ್ರೇಣೀಕೃತ ವಿಕೃತ ಸಮಾಜದ ಸತ್ಯದರ್ಶನವಾಗುತ್ತದೆ. ಆಗ ಸರ್ಕಾರಗಳು ನಿರ್ಲಕ್ಷಿತ ಜಾತಿಗಳನ್ನು ವಿಶೇಷವಾದ ಕಾರ್ಯಕ್ರಮಗಳಿಂದ ಮೇಲೆತ್ತಬಹುದು. ಇಲ್ಲವಾದರೆ ಇಲ್ಲಿನ ಸಂಪತ್ತೆಲ್ಲವೂ ಉಳ್ಳವರ ಪಾಲಾಗುತ್ತದೆ. ಈ ನಿಟ್ಟಿನಲ್ಲಿ ತಮ್ಮ ಬದುಕಿನ ಕಡೆಯವರೆಗೂ-ಅನಾರೋಗ್ಯವನ್ನೂ ನಿರ್ಲಕ್ಷಿಸಿ-ಹೋರಾಡಿದ ಹಾಲಪ್ಪನವರು ನಿರ್ಗಮಿಸಿದ್ದಾರೆ.

ಹಾಲಪ್ಪನವರು ಇನ್ನೊಂದು ವಾದವನ್ನು ಮಂಡಿಸುತ್ತಿದ್ದರು: "ಮೇಲುಜಾತಿಗಳು ಸಹಜವಾಗಿಯೇ ಎಲ್ಲಾ ಸವಲತ್ತಿನಿಂದ ಕೂಡಿವೆ. ಇನ್ನು ಹರಿಜನರು ಮತ್ತವರ ಸಹಮತಸ್ಥರಿಗೆ ಸರ್ಕಾರದ ಸವಲತ್ತು, ಮೀಸಲಾತಿ ದೊರಕುತ್ತಿವೆ. ಆದರೆ ಮಧ್ಯದಲ್ಲಿನ ಕೆಲ ಅನಾಮಧೇಯ ಜಾತಿಗಳು ಹೇಳುವವರು ಕೇಳುವವರಿಲ್ಲದೆ ಅನಾಥವಾಗಿವೆ. ಈ ಜಾತಿಗಳನ್ನು ಗುರುತಿಸಿ ಮೇಲೆತ್ತದ ಹೊರತು ಸಾಮಾಜಿಕ ನ್ಯಾಯ ಸಿಗಲಾರದು" ಯಾವುದೇ ಸರ್ಕಾರ ಬಂದಕೂಡಲೇ ಹಾಲಪ್ಪನವರು ಮುಖ್ಯಮಂತ್ರಿಯನ್ನು ಭೇಟಿಯಾಗಿ ಈ ಬಗ್ಗೆ ಮನವಿ ಕೊಡುತ್ತಿದ್ದರು. ಅಲ್ಲದೆ "ಹಿಂದುಳಿದ ವರ್ಗಗಳಿಗಾಗಿ ಪ್ರತಿವರ್ಷ ಸರ್ಕಾರದಿಂದ ಕೋಟಿಗಟ್ಟಲೆ ಹಣ ಬಿಡುಗಡೆಯಾಗುತ್ತದೆ. ಈ ಹಣ ಏನಾಗುತ್ತಿದೆ? ಯಾಕೆಂದರೆ ದಲಿತ ವರ್ಗ ಮಾತ್ರ ಹಾಗೇ ಇದೆ" ಎಂದು ಕೊರಗುತ್ತಿದ್ದರು.

ಬಹುಮತ ಹಾಲಪ್ಪನವರು ಹೊನ್ನಾಳಿ ತಾಲ್ಲೂಕಿನ ಬುಳ್ಳಾಪುರದವರು. ಬಡ ಕುಟುಂಬದಿಂದ ಬಂದವರು. ಬಟ್ಟೆ ಹೊಲಿಯುತ್ತ ಬಟ್ಟೆ ಅಂಗಡಿಯನ್ನು ಇಟ್ಟಿದ್ದ ಹಾಲಪ್ಪನವರು ತಾವು ದುಡಿದ ಹಣವನ್ನೆಲ್ಲ ಬಳಸಿದ್ದು ದುರ್ಬಲರ ಬಗೆಗಿನ ಹೋರಾಟಕ್ಕೆ.

ದಲಿತ ಸಂಘರ್ಷ ಸಮಿತಿ ಶಿವಮೊಗ್ಗ ಜಿಲ್ಲೆಯಲ್ಲಿ ಗಟ್ಟಿದನಿ ಹೊರಡಿಸುತ್ತಾ ಸಕ್ರಿಯವಾಗಿದ್ದಾಗ ಪ್ರೊ. ಬಿ. ಕೃಷ್ಣಪ್ಪನವರ ಜೊತೆ ಗುರುತಿಸಿಕೊಂಡ ಹಾಲಪ್ಪನವರು ಹೊನ್ನಾಳಿ ಪ್ರಾಂತ್ಯದ ಸಂಚಾಲಕರಾಗಿ ಎಂಟತ್ತು ವರ್ಷಗಳ ಕಾಲ ದಸಂಸದಲ್ಲಿ ಕೆಲಸ ಮಾಡಿದರು. ನಂತರ ಶಿವಮೊಗ್ಗಕ್ಕೆ ಬಂದು ಬಟ್ಟೆ ಅಂಗಡಿ ತೆರೆದರು. 'ಬಹುಮತ' ಎಂಬ ಪತ್ರಿಕೆಯನ್ನು ಪ್ರಾರಂಭಿಸಿದರು. ನಾಡಿನ ಮೂಲೆಮೂಲೆಯಲ್ಲಿನ ಹಿಂದುಳಿದ ವರ್ಗದವರ ಬಗ್ಗೆ ಕಾಳಜಿ ಹೊಂದಿದ್ದ ವಿದ್ವಾಂಸರನ್ನು ಬೇಡಿ ಲೇಖನ ಬರೆಸಿದರು. ಅದರ ಸಂಪಾದಕ ಮಂಡಲಿಯಲ್ಲಿದ್ದವರಿಗೇ ಪತ್ರಿಕೆ ಯಾವಾಗ ಬರುತ್ತದೆ, ಯಾವ ಸಂಗತಿ ಹೊತ್ತು ಬರುತ್ತದೆ ಎಂಬ ವಿಷಯವೇ ತಿಳಿಯದಷ್ಟು ಏಕವ್ಯಕ್ತಿ ಶ್ರಮದಿಂದ ಹೊರಬರುತ್ತಿತ್ತು. ಅದು ಹೇಗೆಂದರೆ ಈ ನಾಡಿನಲ್ಲಿ ಏನಾದರೂ ಸಂಭವಿಸಿದರೆ ಕೂಡಲೇ 'ಬಹುಮತ' ಪ್ರಕಟವಾಗುತ್ತಿತ್ತು. ಅದರಲ್ಲಿನ ಉತ್ತಮ ಲೇಖನಗಳನ್ನು ತೆಗೆದು ಪುಸ್ತಕವಾಗಿ ಪ್ರಕಟಿಸಿ ಬಿಟ್ಟಿಯಾಗಿ ಹಂಚಿ ಸುಮ್ಮನಾಗುತ್ತಿದ್ದರು.


ಅವರು ಬದುಕಿರುವಷ್ಟು ಕಾಲ ತಪ್ಪದೇ ಅರಸು ಜನ್ಮದಿನಾಚರಣೆ ಆಚರಿಸಿದರು. ಅದಕ್ಕಾಗಿ ನಾಡಿನ ವಿದ್ವಾಂಸರನ್ನು ಗೊತ್ತು ಮಾಡಿ ಆಹ್ವಾನ ಪತ್ರಿಕೆಯಿಂದ ಹಿಡಿದು ಸಕಲಿಷ್ಟು ಜವಾಬ್ದಾರಿಯನ್ನು ಒಬ್ಬರೇ ಹೊತ್ತು ಎಳೆಯುತ್ತಿದ್ದರು. ಹಲವೊಮ್ಮೆ ಎಂ.ಬಿ. ನಟರಾಜರಿಗೆ ಒಂದಿಷ್ಟು ಉಸ್ತುವಾರಿ ವಹಿಸುತ್ತಿದ್ದರು ಅಷ್ಟೇ. ಕೆಳಜಾತಿ ಅಧಿಕಾರಿಗಳ ಭ್ರಷ್ಟತೆ ಸಹಿಸುತ್ತಿದ್ದ ಹಾಲಪ್ಪನವರು, ಭ್ರಷ್ಟರು ಲಪಟಾಯಿಸಿದ ಹಣವನ್ನು ಬಡವರಿಗಾಗಿ ಖರ್ಚು ಮಾಡಿದರೆ ಮೆಚ್ಚುತ್ತಿದ್ದರು. ಕನಕಗೋಪುರ ಕೆಡವಿದಾಗ ಶಿವಮೊಗ್ಗದಲ್ಲಿ ಬಹುಮತ ಸಂಘಟನೆ ಮುಖಾಂತರ ಪ್ರತಿಭಟನೆ ನಡೆಸಿ, ಕುವೆಂಪು ರಂಗಮಂದಿರದಲ್ಲಿ ಸಭೆ ನಡೆಸಿದ್ದರು. ಆದರೆ ಶಿವಮೊಗ್ಗದ ಕುರುಬರು ಅತ್ತ ತಿರುಗಿಯೂ ನೋಡಿರಲಿಲ್ಲ, ಏಕೆಂದರೆ ಅವರೆಲ್ಲಾ ಪೇಜಾವರಸ್ವಾಮಿಯ ಪ್ರಥಮ ಶಿಷ್ಯರಾದ ಈಶ್ವರಪ್ಪನ ಆಜ್ಞಾನುವರ್ತಿಗಳಾಗಿದ್ದರು.

ಹಾಲಪ್ಪನವರು ಹಿಂದುಳಿದ ವರ್ಗಗಳಿಗಾಗಿ ಶ್ರಮಿಸಿದ್ದನ್ನು ಪರಿಗಣಿಸಿ, ಅವರು ಪ್ರತಿವರ್ಷ ಅರಸು ಜನ್ಮದಿನವನ್ನಾಚರಿಸಿ ಆ ದಿನ ಹಿಂದುಳಿದವರ ಬಗ್ಗೆ ಸೆಮಿನಾರನ್ನು ನಡೆಸುತ್ತ ಬರುವುದನ್ನಾದರೂ ಗಮನಿಸಿ ಅವರಿಗೆ ಅರಸು ಪ್ರಶಸ್ತಿ ಕೊಡಬಹುದಿತ್ತು, ಹಾಲಪ್ಪನವರೂ ಅದನ್ನು ನಿರೀಕ್ಷಿಸಿದ್ದರು. ಆದರೆ ಅವರಿಗೆ ದೇವರಾಜ ಅರಸು ಪ್ರಶಸ್ತಿ ಬರಲಿಲ್ಲ, ಏಕೆಂದರೆ ದೇವರಾಜ ಅರಸು ಪ್ರಶಸ್ತಿಯನ್ನೇ ಹಾಳು ಮಾಡುವಂತಹವರು ಸರ್ಕಾರದಲ್ಲಿ ಇದ್ದರು. ಉದಾಹರಣೆಗೆ ಕುಮಾರಸ್ವಾಮಿ ಮುಖ್ಯಮಂತ್ರಿಯಾಗಿದ್ದಾಗ ಅರಸು ಪ್ರಶಸ್ತಿ ಪ್ರಕಟವಾಯ್ತು. ಅದನ್ನು ಪಡೆಯಲು ಯೋಗ್ಯತೆಯಿದ್ದ ವ್ಯಕ್ತಿ ಆಹಿಂದ ಚಟುವಟಿಕೆಯಲ್ಲಿ ತೊಡಗಿದ್ದಾನೆಂದು ಭಾವಿಸಿ ಕೂಡಲೇ ಸದರಿ ಹೆಸರನ್ನು ತೆಗೆದು ಶಿವಮೊಗ್ಗದಲ್ಲಿ ನಡೆದ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾಗಿದ್ದ ಕೆ.ಎಸ್. ನಿಸಾರ್ ಅಹಮದ್‌ಗೆ ಕೊಡುವಂತೆ ದೇವೇಗೌಡರು ಆಜ್ಞಾಪಿಸಿದ್ದರು. ನಿಜ[illegible] ಕೆ.ಎಸ್. ನಿಸಾರ್ ಅಹಮದ್ ದೇವರಾಜ ಅರಸು ಪ್ರ[illegible] ಪಡೆಯಲು ಯೋಗ್ಯರಾಗಿರಲಿಲ್ಲ. ಆದರೇನು, ಅ[illegible] ಕಂಡರಾಗದ ದೇವೇಗೌಡರು ಇನ್ನು ಅವರ ಹೆಸರಿನ ಪ್ರ[illegible] ಯೋಗ್ಯರಿಗೆ ಸಿಗಲು ಬಿಟ್ಟಾರೆಯೇ? ಹಾಲಪ್ಪನವ[illegible] ಹಿಂದುಳಿದ ವರ್ಗದ ನೇತಾರನ ಹೆಸರಿನ ಪ್ರಶಸ್ತಿಗೆ ಬ[illegible] ಗತಿ ಕುರಿತು ಹಲವು ಬಾರಿ ಮಾತನಾಡಿದ್ದರು ಮತ್ತು[illegible] ಪ್ರಶಸ್ತಿ ತನ್ನಂತವರಿಗೆ ಬರಬೇಕೆಂದು ಕಾದಿದ್ದರು. ಆ[illegible] ಶಿವಮೊಗ್ಗ ಜಿಲ್ಲಾಡಳಿತ ಅರಸು ಜನ್ಮ ದಿನಾಚರಣೆ[illegible] ದಿನ ಹಾಲಪ್ಪನವರನ್ನು ಸನ್ಮಾನಿಸಿ ತನ್ನ ಜವಾಬ[illegible] ಕಳೆದುಕೊಂಡಿತು.

ಹಾಲಪ್ಪನವರು ನಡೆಸುತ್ತಿದ್ದ 'ಬಹುಮತ' ಪತ್ರಿಕೆಯ[illegible] ಹೊಸರೂಪದಲ್ಲಿ ತರಬೇಕೆಂದು ಅದನ್ನು ತ[illegible] ಸಂಪಾದಕತ್ವಕ್ಕೆ ವಹಿಸಿಕೊಡಲು ಡಿ.ಎಸ್. ನಾಗಭೂಷ[illegible] ಕೇಳಿದ್ದರು. 'ಬಹುಮತ' ಪತ್ರಿಕೆ ಕರ್ನಾಟಕದಲ್ಲೇ ಹೆ[illegible] ಸರ್ಕ್ಯುಲೇಷನ್ ಇರುವ ಪ್ರಖ್ಯಾತ ಪತ್ರಿಕೆ ಎಂಬ[illegible] ಮಾತನಾಡಿದ ಹಾಲಪ್ಪನವರು, ತಮ್ಮ ಪತ್ರಿ[illegible] ವಹಿಸುವುದಾದರೆ ಅದರಲ್ಲಿ ಎಷ್ಟು [illegible] ಹಿಂದುಳಿದವರಿಗಾಗಿ ಇರಬೇಕು ಮತ್ತು ನಾಗಭೂಷ[illegible] ಕೂಡ ತಮ್ಮ ಸೋಷಲಿಸ್ಟ್ ನಡವಳಿಕೆಯಲ್ಲಿ ಕೊ[illegible] ಬದಲಾವಣೆ ಮಾಡಿಕೊಳ್ಳಬೇಕೆಂದು ನಮಗೆಲ್ಲಾ ಪಾ[illegible] ಕೊಡಿಸಿ ಚರ್ಚಿಸಿ ನಮ್ಮ ಅಭಿಪ್ರಾಯ ಕೇಳತೊಡಗಿದ[illegible] ಅಷ್ಟರಲ್ಲಿ ಡಿ.ಎಸ್. ನಾಗಭೂಷಣ "ನವಮಾಸ[illegible] ಮಾಸಿಕವನ್ನು ಹೊರತಂದಾಗಿತ್ತು.

ಹೀಗೆ ತಮ್ಮ ಹೋರಾಟದ ನಡುವೆ ಹಾಸ್ಯವ[illegible] ಸೃಷ್ಟಿಸುತ್ತಿದ್ದ ಆಗಾಗ್ಗೆ ನಮ್ಮ ದೃಷ್ಟಿ ನಿರ್ಗತಿಕರ [illegible] ಹರಿಯುವಂತೆ ಮಾಡುತ್ತಿದ್ದ ಹಾಲಪ್ಪನವರು ಇನ್ನು ನೆನಪು[illegible]

● ಬಿ.ಚ[illegible]



...ಮುನಿ ಮುನವಳ್ಳಿ ಮೋಹನ್ ಅಸುಂಡಿ ಮೋಹನ್ ಲಿಂಬಿಕಾಯಿ ಬಸವರಾಜ ಹೊರಟ್ಟಿ

...ಬ್ಬಳ್ಳಿ: ಮೂರು ಸಾವಿರ ಮಠಕ್ಕೆ ...ಂಗನಾಮ ತಿಕ್ಕಿದ ಕೆಎಲ್ಇ ಸಂಸ್ಥೆ

...ಮೂಜಗಂ ಬದುಕಿದ್ದಾಗ ಆತನ ಖಯಾಲಿ ... ಅವರು ಪೀಠಾಧಿಕಾರಿಯಾಗಿದ್ದ ಹುಬ್ಬಳ್ಳಿಯ ... ಸಾವಿರ ಮಠ ಸುದ್ದಿಯಲ್ಲಿರುತ್ತಿತ್ತು, ಆದರೀಗ ...ವಿಷಯಕ್ಕೆ ಸಂಬಂಧಿಸಿದಂತೆ ಮೂರು ಸಾವಿರ ...ತ್ತೆ ಸುದ್ದಿಯಲ್ಲಿದೆ.

...ಜಗಂ ಕಾಲದಲ್ಲಾದ ಬಾರಾಭಾನಗಡಿಗಳು, ಮಠದ ...ಮು, ಉತ್ತರಾಧಿಕಾರಿ ವಿಷಯದಲ್ಲಿ ಮೂಜಗಂ ...ದ್ರಮುನಿಯ ನಡುವಿನ ಜಗಳಗಳನ್ನೆಲ್ಲ ಭಕ್ತರು ...ವ ಮುನ್ನವೇ ಮೂರು ಸಾವಿರ ಮಠಕ್ಕೆ ಕೆಎಲ್ಇ ...ದು ಕೋಟಿ ರೂಪಾಯಿಗಳಿಗೆ ಪಂಗನಾಮ ...ಮ ಮತ್ತೆ ಭಕ್ತರ ಕಣ್ಣುಕೆಂಪಾಗಿಸಿದೆ.

...ಜಗಂರ ಕಾವಿಯ ನಿರಿಗೆಗಳಲ್ಲೇ ಅವಿತಿರುತ್ತಿದ್ದ ... ಗದ್ದಿಮಠ, ಆರ್.ಟಿ.ಮಜ್ಜಗಿ ತರಹದ ಮಿಕಗಳು ... ಸತ್ತ ನಂತರ ಮಠವನ್ನು ಗಟ್ಟಿಯಾಗಿ ಅಪ್ಪಿಕೊಂಡು ...ಆಸ್ತಿಗಳನ್ನು ಕಂಡವರ ಹೆಸರಿಗೆ ಮಾಡಿದ್ದರು. ...ಮಠವನ್ನು ಚೊಕ್ಕವಾಗಿ ಗುಡಿಸಿದ ನಂತರ ...ದದ್ದನ್ನಾದರೂ ಮಠಕ್ಕೆ ಉಳಿಸಿಕೊಳ್ಳಬೇಕೆಂದು ... ಶೆಟ್ಟರ್, ಬಸವರಾಜ ಹೊರಟ್ಟಿ, ಮೋಹನ ...ಮ, ಬಸವರಾಜ ಬೊಮ್ಮಾಯಿ, ... ಶಂಕ್ರಣ್ಣ ಮುನವಳ್ಳಿ, ... ಡಂಗನವರ ಅವರುಗಳು ...ಸಿದ್ದರು. ಇವರೆಲ್ಲರ ...ತ್ವದಲ್ಲಿ ಮಠದ ಆಸ್ತಿ ಉಳಿಸಲು ...ಸಮಿತಿ ಅಸ್ತಿತ್ವಕ್ಕೆ ಬಂದಿತ್ತು, ...ತಿ ಪ್ರಾರಂಭವಾದ ನಂತರ ... ಗದ್ದಿಮಠ, ಮಜ್ಜಗಿಯಂತಹ ...ಮಠದಿಂದ ಕಾಲು ಕಿತ್ತಿದ್ದರು.



...ಎಲ್ಇ ಸಂಸ್ಥೆಗೆ ಮೂರು ಸಾವಿರ ...ದಾನವಾಗಿ ನೀಡಿರುವ ಬಿಡ್ನಾಳ ... 2.3 ಎಕರೆ 32 ಗುಂಟೆ ...ಜಮೀನೇ ಹಾಲಿ ವಿವಾದದ ...ಬಿಂದು.

ವಿವಾದದ ಹಿನ್ನೆಲೆ

... ಮಠಾಧಿಪತಿಯಾಗಿರುವ ಗುರುಸಿದ್ದ ...ಯೋಗೀಂದ್ರರನ್ನು ತಮ್ಮ ಉತ್ತರಾಧಿಕಾರಿಯಾಗಿ ... ಹಲವು ವರ್ಷಗಳ ಹಿಂದೆ ಆಯ್ಕೆ ಮಾಡಿದಾಗ ...ನಾರೀ ವಿರೋಧ ವ್ಯಕ್ತವಾಗಿತ್ತು, ಆಗ ವಿರೋಧ ...ದಲ್ಲಿ ಕೆಎಲ್ಇ ಸಂಸ್ಥೆಯ ನಿರ್ದೇಶಕ ಶಂಕ್ರಣ್ಣ ... ವಿಶ್ವಪ್ರಕಾಶ, ಉಳ್ಳಾಗಡ್ಡಿಮಠ, ಮೋಹನ್ ... ಈರಣ್ಣ ಕಲ್ಲೂರ ಹಾಗೂ ನಾಡೋಜ ಪಾಟೀ...ಣಿಯಲ್ಲಿದ್ದರು. ಅಷ್ಟೇ ಅಲ್ಲ ಇವರೆಲ್ಲ ಚಿಕ್ಕಮಠ, ...ಹಾಗೂ ಮಜ್ಜಗಿಯಂತಹ ಹೆಗ್ಗಣಗಳ ಜೊತೆಗೂಡಿ ...ನ ಷಡಕ್ಷರಿ ಮಠದ ರುದ್ರಮುನಿ ಸ್ವಾಮಿಯನ್ನು ... ರಾತ್ರೋರಾತ್ರಿ ಆತನನ್ನು ಅಡ್ಡಪಲಕ್ಕಿಯಲ್ಲಿ ...ಸಿದ್ದು ಮೂರು ಸಾವಿರ ಮಠದ ಉತ್ತರಾಧಿಕಾರಿ ... ಪಟ್ಟಾಭಿಷೇಕ ಮಾಡಿದ್ದರು.

...ಮುನಿಯನ್ನು ತನ್ನ ಉತ್ತರಾಧಿಕಾರಿ ಎಂದು ... ಮೂಜಗಂ ಅವರು ಗುರುಸಿದ್ಧ ರಾಜ ...ದ್ದರೇ ತನ್ನ ಉತ್ತರಾಧಿಕಾರಿ ಎಂದು ಪಟ್ಟುಹಿಡಿದಿ...ಗ ಮೂಜಗಂ ಮತ್ತು ಗುರುಸಿದ್ಧ ರಾಜ ...ದ್ದರ ವಿರುದ್ಧ ರುದ್ರಮುನಿ ಕೋರ್ಟ್ ಮೆಟ್ಟಲೇ ...ಅಷ್ಟೇ ಅಲ್ಲ, ರುದ್ರಮುನಿಯವರು ಈ ವಿವಾದ ...ಮುಗಿಯುವವರೆಗೆ ಮಠದ ಯಾವುದೇ ಆಸ್ತಿಯನ್ನು ... ಮಾಡುವಂತಿಲ್ಲ ಎಂದು ಸುಪ್ರೀಂಕೋರ್ಟ್‌ನ ... ಸಮಿತಿಯಿಂದ ಆದೇಶ ತಂದಿದ್ದರು.

...ರೆ ಕಳೆದ ಏಪ್ರಿಲ್ ತಿಂಗಳ 20ರಂದು ನಿವೃತ್ತ ...ನ್ಯಾಯಾಧೀಶ ಶಿವೈಭರಮಗೌಡರ ಸಮ್ಮುಖದಲ್ಲಿ ... ಸ್ವಾಮೀಜಿ ಹಾಗೂ ರಾಜಯೋಗೀಂದ್ರ ... ನಡುವೆ ರಾಜಿ ಏರ್ಪಟ್ಟಿತು. ಅದರ ಪ್ರಕಾರ ...ಧಿವೃದ್ಧಿಗಾಗಿ ಆಸ್ತಿ ಮಾರಾಟ ಸೇರಿದಂತೆ ಆಡಳಿತ ...ಕೈಗೊಳ್ಳುವ ಯಾವುದೇ ನಿರ್ಧಾರಕ್ಕೆ ತಾವು ...ಮಾಡುವುದಿಲ್ಲ ಎಂದು ರುದ್ರಮುನಿಸ್ವಾಮಿ ...ದರು.

ಭೂಮಿಯನ್ನು ನುಂಗಿದ ಕೆಎಲ್ಇ

ಹುಬ್ಬಳ್ಳಿಯ ಬಿಡ್ನಾಳ್ ಸಮೀಪ ಇರುವ ಮಠದ 23.32 ಎಕರೆ ಜಮೀನನ್ನು ಕೆಎಲ್ಇ ಸಂಸ್ಥೆಗೆ 'ದಾನ'ವಾಗಿ ನೀಡಿದ್ದೆ ಈಗಿನ ವಿವಾದದ ಕೇಂದ್ರಬಿಂದುವಾಗಿದೆ. ಈ ಹಿಂದೆ ಮಠದ ಆಸ್ತಿಯಾಗಿದ್ದ ಬಿಡ್ನಾಳ್ ಸಮೀಪದ 40 ಎಕರೆಯಷ್ಟು ಜಮೀನು ಕಳೆದ 50 ವರ್ಷಗಳಿಗೂ ಮೇಲ್ಪಟ್ಟು ಅಸುಂಡಿ ಎಂಬುವವರ ಕುಟುಂಬದ ವಶದಲ್ಲಿತ್ತು. ಚೆನ್ನಮಲ್ಲಪ್ಪ ಅಸುಂಡಿ ಎಂಬುವವರು ಮಠದ ಈ ಜಮೀನನ್ನು ಉಳುಮೆ ಮಾಡುತ್ತಿದ್ದರು. ಈ ವ್ಯವಸ್ಥೆಗೆ ಅವಕಾಶ ಮಾಡಿಕೊಟ್ಟದ್ದವರು ಮೂಜಗಂ ಅವರಿಗಿಂತಲೂ ಮೊದಲು ಮಠಾಧೀಶರಾಗಿದ್ದ ಗುರುಸಿದ್ದಸ್ವಾಮೀಜಿಯವರು. ಅಂದಿನಿಂದ ಮಠದ ಈ ಆಸ್ತಿ ಅಸುಂಡಿ ಕುಟುಂಬದ ಹಿಡಿತದಲ್ಲಿತ್ತು.

ಹದಿನೈದು ವರ್ಷಗಳ ಹಿಂದೆ - ಅಂದರೆ ಮೂಜಗಂ ಅವರು ಬದುಕಿದ್ದಾಗಲೇ - ಮಠದ ಈ ಜಮೀನು ತಮಗೆ ಸೇರಿದ್ದೆಂದು ಮೋಹನ್ ಅಸುಂಡಿ ಹಾಗೂ ಶೇಖರಪ್ಪ ಅಸುಂಡಿ ಲ್ಯಾಂಡ್ ಟ್ರಿಬ್ಯುನಲ್‌ನಲ್ಲಿ ಅರ್ಜಿ ಸಲ್ಲಿಸಿದ್ದರು. ಮೂಜಗಂ ಹಾಗೂ ಅಸುಂಡಿ ಕುಟುಂಬದ ನಡುವಿನ ಈ ವ್ಯಾಜ್ಯವನ್ನು ಸಂಧಾನದ ಮೂಲಕ ಬಗೆಹರಿಸಲು ಆಸಕ್ತಿ ತೋರಿದ್ದು ಹಾಲಿ ಸಿಎಂ ಆಗಿರುವ ಜಗದೀಶ್ ಶೆಟ್ಟರ್ ಅವರ ಸಹೋದರ ಪ್ರದೀಪ್ ಶೆಟ್ಟರ್, ಸಹೋದರ ಸಂಬಂಧಿ ವಿಜಯ ಶೆಟ್ಟರ್, ಅರವಿಂದ ಕುಬಸದ ಮತ್ತು ಕೆಎಲ್ಇ ನಿರ್ದೇಶಕ ಶಂಕರಣ್ಣ ಮುನವಳ್ಳಿಯವರಂಥವರು. ಇದಕ್ಕೆ ಕಾರಣವೂ ಇತ್ತು, ಅದೇನೆಂದರೆ ಮೂಜಗಂ ಅವರು ಈ ಜಮೀನಿನಲ್ಲಿ 23.32 ಎಕರೆಗಳನ್ನು ದವಾಖಾನೆ ಸ್ಥಾಪಿಸಲು ಕೆಎಲ್ಇ ಸಂಸ್ಥೆಗೆ ದಾನದ ರೂಪದಲ್ಲಿ ಕೊಡುತ್ತೇನೆಂದು 2009 ಜುಲೈ 16 ರಂದು ಮಾತು ಕೊಟ್ಟಿದ್ದರು.

ಕೊನೆಗೂ ಲ್ಯಾಂಡ್ ಟ್ರಿಬ್ಯುನಲ್ ಮುಂದೆ ಎರಡೂ ಕಡೆಯವರ ನಡುವೆ ರಾಜಿ ಏರ್ಪಟ್ಟು ಮೋಹನ್ ಅಸುಂಡಿ ಹಾಗೂ ಶೇಖರಪ್ಪ ಅಸುಂಡಿ ಹಿಡಿತದಲ್ಲಿದ್ದ 40 ಎಕರೆ ಜಮೀನಿನಲ್ಲಿ 20 ಎಕರೆಗಳನ್ನು ಮಠಕ್ಕೆ ಕೊಡಬೇಕೆಂದೂ, ಮಿಕ್ಕ 20 ಎಕರೆಗಳನ್ನು ಅಸುಂಡಿ ಕುಟುಂಬವೇ ಇಟ್ಟುಕೊಳ್ಳುವುದೆಂದೂ ನಿರ್ಧಾರವಾಯಿತು.

ಆದರೆ ಕೆಎಲ್ಇ ಸಂಸ್ಥೆಗೆ ದಾನವಾಗಿ 23.32 ಎಕರೆಗಳನ್ನು ಕೊಡುವುದಾಗಿ ಮೂಜಗಂ ಹೇಳಿದ್ದರಲ್ಲ? ಅದನ್ನು ಈಡೇರಿಸಲು ಮಧ್ಯಸ್ಥಿಕೆಗೆ ಮುಂದಾದವರು ಮತ್ತದೇ ಪ್ರದೀಪ್ ಶೆಟ್ಟರ್, ವಿಜಯ್ ಶೆಟ್ಟರ್, ಅರವಿಂದ ಕುಬುಸದ ಮತ್ತು ಶಂಕ್ರಣ್ಣ ಮುನವಳ್ಳಿ. ಇವರೆಲ್ಲರ ಸಮ್ಮುಖದಲ್ಲಿ ಒಂದು ಅಲಿಖಿತ ಸಂಧಾನ ಏರ್ಪಟ್ಟಿತು. ಅದರ ಪ್ರಕಾರ ಮೋಹನ್ ಅಸುಂಡಿ 2.14 ಎಕರೆ ಮತ್ತು ಶೇಖರಪ್ಪ ಅಸುಂಡಿಗೆ 13 ಎಕರೆಗಳನ್ನು ಬಿಟ್ಟುಕೊಡುವುದು. ಉಳಿದ 5 ಎಕರೆ ಜಮೀನಿಗೆ ಪ್ರತಿ ಎಕರೆಗೆ 67 ಲಕ್ಷ ರೂಪಾಯಿಯಂತೆ ಕೆಎಲ್ಇ ಸಂಸ್ಥೆ ಅಸುಂಡಿಗಳಿಗೆ ಕೊಡುವುದು, ಜೊತೆಗೆ ಕೆಎಲ್ಇ ಮಠಕ್ಕೆ ಐದು ಕೋಟಿ ರೂಪಾಯಿ ಕೊಡುವುದು ಎಂದು ಒಪ್ಪಂದ ಏರ್ಪಟ್ಟಿತು.

ಆದರೀಗ ಮೂಜಗಂ ಲಿಂಗೈಕ್ಯರಾಗಿರುವುದರಿಂದ ಹಾಲಿ ಸ್ವಾಮೀಜಿ ಮೇಲೆ ಒತ್ತಡ ಹೇರಿದ ಕೆಎಲ್ಇ ಸಂಸ್ಥೆಯ ನಿರ್ದೇಶಕ ಶಂಕರಣ್ಣ ಮುನವಳ್ಳಿ ಕೆಎಲ್ಇ ಸಂಸ್ಥೆಗೆ ಸದರಿ ಭೂಮಿಯನ್ನು ಜುಲೈ 16, 2012ರಂದು ದಾನಪತ್ರವಾಗಿ ಮಾಡಿಸಿಕೊಂಡುಬಿಟ್ಟಿದ್ದಾನೆ. ಅಂದರೆ ಒಪ್ಪಿಗೆಯಂತೆ ಕೆಎಲ್ಇ ಸಂಸ್ಥೆ ಮಠಕ್ಕೆ ಕೊಡಬೇಕಿದ್ದ ಐದು ಕೋಟಿ ರೂಪಾಯಿಗಳಿಗೆ ಪಂಗನಾಮ ಹಾಕಿದ್ದಾನೆ!

ಮಠಕ್ಕೆ ಕೊಡಬೇಕಿರುವ ಹಣವನ್ನು ಕೊಡು ಎಂದು ಹೇಳಿದರೆ ಈ ಮನವಳ್ಳಿ "ಅಂತಹ ಯಾವುದೇ ಒಪ್ಪಂದವೇ ಆಗಿಲ್ಲ" ಎಂದು ರಾಗ ಎಳೆಯುತ್ತಿದ್ದಾನೆ. ಅವನಿಗೆ ಯಾವುದರಿಂದ ಹೊಡೆಯಬೇಕೋ ಗೊತ್ತಾಗದೆ ಮಠದ ಭಕ್ತರು ಪೇಚಾಡುತ್ತಿದ್ದಾರೆ.

● ಹುಬ್ಬಳ್ಳಿ ಗಾಂವ

ಮುಂದಿನ ಮುಖ್ಯಮಂತ್ರಿ ನಾನೆ, ಬರದಿಟಗಳಿ

ಬೆಳಗಾಂನಲ್ಲಿ ಸುವರ್ಣ ಸೌಧ ಮಾಡಿಬಿಟ್ಟರೆ ಆ ಪ್ರಾಂತ್ಯದ ಗಡಿ ಸಮಸ್ಯೆ, ಜಗಳ ಸಮಸ್ಯೆಗಳೆಲ್ಲಾ ಛೂ... ಮಾಡಿದಂತೆ ಪರಿಹಾರ ಕಾಣುತ್ತವೆಂದು ತಿಳಿದ ರಾಜಕಾರಣಿಗಳು, ಜಾದೂ ಮಾಡಿದಂತೆ ಮೂರು ಮುಕ್ಕಾಲು ವರ್ಷದಲ್ಲಿ ಸುವರ್ಣ ಸೌಧವನ್ನ ಕಟ್ಟಿಬಿಟ್ಟರಂತಲ್ಲಾ, ಅದರ ಉದ್ಘಾಟನೆಗೆಂದು ಬಂದಿದ್ದ ಮಾಜಿ ಮುಖ್ಯಮಂತ್ರಿ ಕುಮಾರಸ್ವಾಮಿ, ರಾಷ್ಟ್ರಪತಿ ಬರುವ ಮಾರ್ಗದಲ್ಲೇ ಬೀದಿ ಬದಿಯ ಪ್ರೆಸ್‌ಮೀಟ್ ಮಾಡುತ್ತಿದ್ದಾಗ, ಬೆಳಗಾಂ ಪೊಲೀಸರು ಯಾರೋ ಲೋಕಲ್ ರಾಜಕಾರಣಿ ಇರಬೇಕೆಂದು ಗದರಿ ಓಡಿಸಲು ಯತ್ನಿಸಿದರಂತಲ್ಲಾ, ಆಗ ಕುಮಾರಣ್ಣನವರು "ನಾನು ಯಾರು ಗೊತ್ತೆ?" ಎಂದು ಧಮಕಿ ಹಾಕಲಾಗಿ ಅದಕ್ಕೆ ಪೊಲೀಸರು "ನೀ ಯಾರಾದ್ರೆ ನಮಗೇನಲೆ. ರಾಷ್ಟ್ರಪತಿ ಹೋಗೋ ಮಾರ್ಗದಾಗ ಒಂದು ಮಿನಿಟು ಲೇಟಾತಪ ಅಂದ್ರ, ಯದಕ್ಕ ಲೇಟಾತು ಅಂತ ದಿಲ್ಲಿಗೆ ತಿಳಿಸಬೇಕು. ಗೊತ್ತೇನೆ ಸರಿಯಿಲ್ಲ" ಎಂದರಂತಲ್ಲಾ.


"ನಾನು ಮಾಜಿ ಮುಖ್ಯಮಂತ್ರಿ, ಈ ಸುವರ್ಣ ಸೌಧಕ್ಕೆ ಅಡಿಗಲ್ಲಾಕಿದವನು ನಾನೇ" ಎಂದು ಕಲ್ಲುಗೆಲಸದ ಕಾರ್ಮಿಕನಂತೆ ಕುಮಾರಣ್ಣ ಜೋರು ಮಾಡಲಾಗಿ, ಬೆಳಗಾಂ ಪೊಲೀಸರು "ನೀ ಮಾಜಿ ಮುಖ್ಯಮಂತ್ರಿಯಾಗಿದ್ರ, ರಾಷ್ಟ್ರಪತಿ ಎದುರು ಕುರ್ಚಿ ಹಾಕೀವಿ. ಹೋಗಿ ಅಲ್ಲಿ ಕುಂದ್ರಪ್ಪ, ರಸ್ತಿ ಬದಿ ಪ್ರೆಸ್‌ಮೀಟ್ ಮಾಡಕತ್ತಿಯಲ್ಲಾ" ಎಂದು ಜೋರು ಮಾಡಿದರಂತಲ್ಲಾ. ಅದರಿಂದ ಸಿಟ್ಟಾದ ಕುಮಾರಣ್ಣ ತನ್ನ ಜೊತೆಗಿನ ಐವತ್ತು ಮಂದಿಯನ್ನ ಕರೆದುಕೊಂಡು ಒಳನುಗ್ಗಲು ಯತ್ನಿಸಿದಾಗ ತಲೆಕೆಟ್ಟ ಪೊಲೀಸರು ಕುಮಾರಣ್ಣನನ್ನ ಮಾತ್ರ ಒಳಬಿಟ್ಟು ಉಳಿದ್ನೆವತ್ತು ಮಂದಿಯನ್ನು ಲಾರಿಯಲ್ಲೇ ತಳ್ಳಿ ಓಡಿಸಿದರಂತಲ್ಲಾ, ಥೂತ್ತೇರಿ!

* * *

ಥೂತ್ತೇರಿ

▸ಯಾಹೂ

ಮಾಜಿ ಮುಖ್ಯಮಂತ್ರಿ ಕುಮಾರಣ್ಣನಿಗೆ ಶಿಷ್ಟಾಚಾರಗಳ ಸಮಸ್ಯೆ ಇರುವಾಗ ಮತ್ತೊಬ್ಬ ಮಾಜಿ ಸಿಎಂ ಎಡೂರಪ್ಪನನ್ನು ಬಿ.ಜೆ.ಪಿಯ ಜನಗಳು ಬೆಳಗಾಂ ಪೊಲೀಸರಂತೆಯೇ ನಡೆಸಿಕೊಂಡು ಯಾವ ಧಮಕಿಗೂ ಕೇರ್ ಮಾಡದೆ, "ಹೋದರೆ ಹೋಗು ನಮಗೇನು" ಎನ್ನುವಂತಿದ್ದಾರಲ್ಲಾ, ಈ ಸಂಬಂಧವಾಗಿ ಮಾನ್ಯ ಮಾಜಿಯವರನ್ನು ಮಾತನಾಡಿಸಬೇಕೆನಿಸಿತಲ್ಲಾ, ಆ ಕೂಡಲೇ ಫೋನ್ ಮಾಡಲಾಗಿ ರಿಂಗಾಯ್ತು.



ರಿಂಗ್ ಟೋನ್: "ಕಟ್ಟುವೆವು ನಾವು, ಕಟ್ಟುವೆವು ನಾವು, ನಮ್ಮ ನಾಡೊಂದನು ಕೆಡಗುವೆವು ನಾವು ಕೆಡಗುವೆವು ನಾವು, ಚಡ್ಡಿಗಳ ಗೂಡೊಂದನು...

"ಹಲೋ ಯಾರ್ರಿ?"

"ನಾನು ಯಾಹು."

"ನಾನು ಯಾರು ಅಂತಿರಲ್ರೀ. ಯಾರ್ರಿ ನೀವು?"

"ಯಾಹು ಅಂತ ಪತ್ರಕರ್ತ. ಎಡೂರಪ್ಪನೋರಿಗೆ ಫೋನ್ ಕೊಡ್ರಿ ರೇಣುಕಾಚಾರಿ."

"ನಾನು ಅಂತ ಯಂಗ್ರಿ ಗೊತ್ತಾಯ್ತು?"

"ನಿಮ್ಮ ಇರಿಟೇಟಿಂಗ್ ಟೋನು ಕಂಡ್ರಿ."

"ಏನಂದ್ರಿ?"

"ನಿಮ್ಮ ಪರಿಚಿತ ದನಿ ಸಾರ್. ಎಡೂರಪ್ಪನೋರಿಗೆ ಫೋನ್ ಕೊಡಿ."

"ಎಡೂರಪ್ಪನೋರು ನಮ್ಮ ನಾಯಕರು. ಅವ್ರುರು ಎಲ್ಲಿ ಇರತರೋ ಅಲ್ಲೇ ನಾವು ಇರ್ತಿವಿ. ಅದರ ಬಗ್ಗೆ ಮೀಡಿಯಾದವರಿಗೆ ಯಾವ ಡವುಟು ಬೇಡ. ಸರಿ ಮಾತಾಡಿ. ಸಾಹೇಬ್ರಿಗೆ ಕೊಟ್ಟೆ."

"ಹಲೋ ನಮಸ್ಕಾರ ಸಾರ್. ನಾನು ಯಾಹು."

"ಹೇಳಿ ಯಾಹು ಅವ್ರೆ."

"ಅಭಿನಂದನೆ ಸಾರ್."

"ಯಾಕೆ ಅಭಿನಂದನೆ?"

"ತಾವು ಹೊಸ ಪಾರ್ಟಿ ಕಟ್ಟೊ ತೀರ್ಮಾನ ತಗೊಂಡರಲ್ಲಾ ಅದಕ್ಕೆ ಸಾರ್."

"ಇನ್ನೇನು ಮಾಡದ್ರಿ? ನನ್ನನ್ನ ಹಗುರವಾಗಿ ಪರಿಗಣಿಸಿದೋರಿಗೆಲ್ಲಾ ನಾನೇನು ಅಂತ ಮನವರಿಕೆ ಮಾಡಿಕೊಡ್ತಾನೇ ಬಂದಿದ್ದಿನಿ. ಆ ದಾರೀಲಿ ಇದೊಂದು ಹೆಜ್ಜೆ."

"ಹೆದರಬೇಡಿ ಸಾರ್. ನಿಮ್ಮ ಜೊತೆ ನಾವು ಇದ್ದಿವಿ."

"ಇರಲೇಬೇಕು ಮತ್ತೆ, ಪತ್ರಕರ್ತರಿಗೆ ಎಷ್ಟು ಅನುಕೂಲ ಮಾಡಿಕೊಟ್ಟಿದ್ದಿನಿ. ಶಿವಮೊಗ್ಗದಲ್ಲಿ ಕೆಲವು ಪತ್ರಕರ್ತರಿಗೆ ಸೈಟು ಕೊಟ್ಟಿದ್ದೂ ಅಲ್ಲದೆ ಸೈಟಿಗೆ ದುಡ್ಡೂ ನಾನೇ ಕೊಟ್ಟಿದ್ದಿನಿ."

"ನಿಜ ಸಾರ್. ನಿಮ್ಮಿಂದ ಸಹಾಯ ಪಡೆದೋರೆ ಇಲ್ಲ. ಪತ್ರಕರ್ತರು, ಮಠಾಧಿಪತಿಗಳು, ಕೆಲವು ವಕೀಲರು, ಬಂಧುಬಳಗ, ಮಕ್ಕಳು, ಅಳಿಯಂದಿರು, ಕರ್ನಾಟಕದ ರಾಜಕಾರಣದ ಇತಿಹಾಸದಲ್ಲಿ ಇಷ್ಟೊಂದು ಸಹಾಯ ಮಾಡಿದ ಮುಖ್ಯಮಂತ್ರಿ ಇನ್ನೊಬ್ಬರಿಲ್ಲ ಸಾರ್."

"ಇನ್ನೂ ಮಾಡತಿದ್ದೆ ಕಂಡ್ರಿ. ಅನಂತಕುಮಾರ, ಈಶ್ವರಪ್ಪನ ಷಡ್ಯಂತ್ರದಿಂದ ಅಧಿಕಾರ ಕಳಕೊಬೇಕಾಯ್ತು. ಇಲ್ಲ ಅಂದ್ರೆ ಇಷ್ಟೊತ್ತಿಗೆ ಕರ್ನಾಟಕನ ಮಾದರಿ ರಾಜ್ಯ ಮಾಡಿಬಿಡತಿದ್ದೆ."

"ಮಾದರಿ ರಾಜ್ಯ ಈಗಾಗ್ಲೆ ಆಗಿದೆ ಸಾರ್. ಅದನ್ನ ಮೇನ್‌ಟೇನ್ ಮಾಡಬೇಕು ಅಷ್ಟೆ."

"ಅದು ಈ ಶೆಟ್ಟರ್ ಕೈಯಿಂದ ಆಗಲ್ಲ ಕಂಡ್ರಿ. ಇವರನ್ನ ಬದ್ಲಾಯಿಸಬೇಕು."

"ಬದ್ಲಾಯಿಸಿ ಯಾರನ್ನ ತರ್ತಿರಿ ಸಾರ್?"

"ಯಾರನ್ನೂ ತರಲ್ಲ, ಚುನಾವಣೆಗೆ ಹೋಗಿ ಪುನಃ ನಾನೇ ಮುಖ್ಯಮಂತ್ರಿ ಆಗ್ತಿನಿ."

"ಆತ್ಮವಿಶ್ವಾಸ ಅಂದ್ರೆ ಇದು ಸಾರ್. ಈ ಹಿಂದೆ ಪ್ರಾದೇಶಿಕ ಪಾರ್ಟಿ ಮಾಡಿದವ್ರುರಿಗಿಂತ್ಲೂ ನೀವೇ ಗ್ರೇಟ್."

"ಹಾಗಂತಿರಾ?!"

"ಹೌದು ಸಾರ್. ಎಂಟು ವರ್ಷ ಆಳಿದ ಅರಸು ಕಾಂಗ್ರೆಸ್‌ನಿಂದ ಹೊರಗೋಗಿ ಪಾರ್ಟಿ ಕಟ್ಟಿದಾಗ ಯಾರನ್ನೂ ಗೆಲ್ಲಿಸಕ್ಕಾಗಲಿಲ್ಲ, ದೇವೇಗೌಡ್ರು ಎಸ್.ಜೆ.ಪಿ. ಕಟ್ಟಿದಾಗ ಎರಡು ಕಡೆಲೂ ಸೋತು ಹೋದದ್ದೂ ಅಲ್ಲದೆ ಭೈರೇಗೌಡು ಮಾತ್ರ ಗೆದ್ರು. ಇನ್ನ ಬಂಗಾರಪ್ಪ ಏಳೆಂಟು ಸೀಟು ತಗಂಡ್ರು. ಅವೆಲ್ಲಾ ಜೊಳ್ಳಾಗಿದ್ವೊ. ಆದ್ರೆ ನಿಮ್ಮ ಜೊತೆ ತುಂಬಾ ಜನ ಶಾಸಕರು, ಮಂತ್ರಿಗಳು ಬರ್ತಾರೆ. ಅಪ್ಪ ಮಕ್ಕಳಿಗಿಂತ ನೀವು ಹೆಚ್ಚು ಸೀಟು ತಗೋಳ್ತಿರಿ. ಆಗ ಸರಕಾರ ಮಾಡೋದು ನಿಮ್ಮ ಮನೆಹತ್ರ ಬರ್ತಾರೆ. ಆಗ ಮುಖ್ಯಮಂತ್ರಿ ನೀವೇ ಆಗಿ ಉಪಮುಖ್ಯಮಂತ್ರಿ ಸ್ಥಾನ ಬಿಟ್ಟುಕೊಡಬಹುದು."

"ನಾನು ಅದನ್ನೇ ಯೋಚನೆ ಮಾಡ್ತಾಯಿದ್ದಿನಿ."

"ನಿಮ್ಮ ಯೋಚನೆ ಸರಿ ಸಾರ್. ಈಗ ಕಾಂಗ್ರೆಸ್‌ನೋರು ಬಂದ್ರು ಅನ್ನಿ, ಅಲ್ಲಿ ಈಗಾಗ್ಲೆ ಇರೊ ಸಿದ್ದರಾಮಯ್ಯ ಉಪಮುಖ್ಯಮಂತ್ರಿ. ದಳ ಬಂತು ಅನ್ನಿ ರೇವಣ್ಣ ಉಪಮುಖ್ಯಮಂತ್ರಿ. ಬಿ.ಜೆ.ಪಿ ಬಂದ್ರೆ ಅಶೋಕ ಉಪಮುಖ್ಯಮಂತ್ರಿ. ಹಾಗೇ ನೋಡಿದ್ರೆ ಮುಂದೆ ಮುಖ್ಯಮಂತ್ರಿ ಕ್ಯಾಂಡೇಟ್ ನೀವೊಬ್ರೆ ಕಾಣ್ತಿರಿ ಸಾರ್."

"ನಿಜ ಯಾಹೂ!"

"ಆದ್ರೆ ಒಂದು ಡವುಟು ಸಾರ್. ನೀವು ಹೊಡದಾಕದು ಬಿ.ಜೆ.ಪಿ. ಓಟನ್ನ ಮಾತ್ರ. ಅಂಗಾಗಿ ಬಿ.ಜೆ.ಪಿ. ತಗದು ನೀವೂ ಹೋಗಿಬಟೆ, ಅಂತ ಭಯ."

"ಅಂತ ಭಯಕ್ಕೆ ಅವಕಾಶನೆ ಇಲ್ಲ ಯಾಹು. ಕನಿಷ್ಠ ಎಂಬತ್ತು ಸೀಟು ಗೆಲ್ತಿವಿ. ಮುಂದಿನ ಮುಖ್ಯಮಂತ್ರಿ ನಾನೆ ಬೇಕಾದೆ, ಬರದಿಟಗಳಿ."

"ಥೂತ್ತೇರಿ!!!" ●

ರಾಷ್ಟ್ರಾದ್ಯಂತ ವ್ಯಾಪಿಸಿರುವ ಕೋಮು ವಿಷವನ್ನು ತೊಡೆದುಹಾಕಬೇಕಿ

ಭಾರತದ ಅನೇಕ ಹಿಂದೂಗಳು ಹಾಗೂ ಮುಸಲ್ಮಾನರು ಇಂದು ಕೋಮುವಾದವೆಂಬ ಸೋಂಕುರೋಗಕ್ಕೆ ತುತ್ತಾಗಿದ್ದಾರೆ. ಆದರೆ 1857ನೆ ಇಸವಿಗೆ ಮುನ್ನ ಬಹುತೇಕ ಭಾರತೀಯರಲ್ಲಿ ಕೋಮುವಾದಿ ಭಾವನೆಗಳು ಇರಲೇ ಇಲ್ಲ. ಅಂದು ಹಿಂದೂ ಮುಸ್ಲಿಮರ ನಡುವೆ ಕೆಲವು ಅಭಿಪ್ರಾಯಭೇದಗಳಿದ್ದವು ಎಂಬುದರ ಬಗ್ಗೆ ಸಂದೇಹವಿಲ್ಲ; ಆದರೆ ಅವರು ಬದ್ಧವೈರಿಗಳಾಗಿರಲಿಲ್ಲ. ಮುಸ್ಲಿಮರ ಈದ್ ಹಬ್ಬದಲ್ಲಿ ಹಿಂದೂಗಳು ಪಾಲ್ಗೊಳ್ಳುತ್ತಿದ್ದರು. ಹೋಳಿ, ದೀಪಾವಳಿ ಹಬ್ಬಗಳನ್ನು ಹಿಂದೂ-ಮುಸ್ಲಿಮರು ಜೊತೆಯಾಗಿ ಆಚರಿಸುತ್ತಿದ್ದರು. ಹಿಂದೂ-ಮುಸ್ಲಿಮರು ಅಣ್ಣತಮ್ಮಂದಿರಂತೆ ಬಾಳುತ್ತಿದ್ದ ಕಾಲವದು.

ಹಾಗಾದರೆ ಈಗ, ಸುಮಾರು 150 ವರ್ಷಗಳ ನಂತರ, ಈ ಉಪಭೂಖಂಡದ ಎರಡು ಅತಿದೊಡ್ಡ ಧಾರ್ಮಿಕ ಸಮುದಾಯಗಳ ನಡುವೆ ಬೆಳೆದಿರುವ ಅನುಮಾನ ಮತ್ತು ದ್ವೇಷದ ಭಾವನೆಗಳಿಗೆ ಕಾರಣವೇನು? ಭಾರತದಲ್ಲಿಂದು ಮುಸ್ಲಿಮರಿಗೆ ಹಿಂದೂಗಳ ಮನೆಗಳು ಬಾಡಿಗೆಗೆ ಸಿಗುವುದೆ ಕಠಿಣವಾಗಿದೆ. ದೇಶದಲ್ಲೆಲ್ಲಾದರೂ ಬಾಂಬ್ ಸ್ಫೋಟದಂತಹ ದುಷ್ಕೃತ್ಯ ನಡೆದಾಗ ಪೊಲೀಸರು ಅದನ್ನು 'ಭೇದಿಸುವ' ಪರಿಯೆಂದರೆ ಐದಾರು ಮುಸ್ಲಿಮರನ್ನು ಬಂಧಿಸುವುದು. ಇದು ಯಾಕೆ ಹೀಗೆ? ಯಾಕೆಂದರೆ ವೈಜ್ಞಾನಿಕ ತನಿಖಾ ವಿಧಾನಗಳ ಬಗ್ಗೆ ತರಬೇತಿ ಪಡೆದಿರದ ನಮ್ಮ ಪೊಲೀಸರಲ್ಲಿ ನೈಜ ಅಪರಾಧಿಗಳನ್ನು ಪತ್ತೆಹಚ್ಚುವ ಸಾಮರ್ಥ್ಯ ಇಲ್ಲ. ಹೀಗೆ ಬಂಧಿತರಾಗುವ ಮಂದಿಯನ್ನು ವರ್ಷಗಟ್ಟಲೆ ಜೈಲುಗಳಲ್ಲಿ ಕೂಡಿಹಾಕಲಾಗುತ್ತದೆ. ಅಂತಿಮವಾಗಿ ಅವರನ್ನು ನ್ಯಾಯಾಲಯದ ಮುಂದೆ ಹಾಜರುಪಡಿಸಿದಾಗ ಅವರಲ್ಲಿ ಹೆಚ್ಚಿನವರು ನಿರಪರಾಧಿಗಳೆಂಬ ತೀರ್ಪು ಬರುತ್ತದೆ.

ಹೈದರಾಬಾದ್‌ನ ನಿಜಾಮರನ್ನು ಒಳಗೊಂಡಂತೆ ಭಾರತದ ಹೆಚ್ಚುಕಮ್ಮಿ ಎಲ್ಲಾ ಮುಸಲ್ಮಾನ ಅರಸರು ಕೋಮು ಸೌಹಾರ್ದತೆಗೆ ಒತ್ತಾಸೆ ನೀಡಿದರು.

1857ರಲ್ಲಿ ನಡೆದ ಪ್ರಥಮ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಹಿಂದೂ ಮುಸಲ್ಮಾನರು ಒಟ್ಟಾಗಿ ಬ್ರಿಟಿಷರ ವಿರುದ್ಧ ಹೋರಾಡಿದ್ದರು. ಆ ಹೋರಾಟವನ್ನು ಹತ್ತಿಕ್ಕಿದ ಬ್ರಿಟಿಷರು ಇನ್ನು ಮುಂದೆ ಭಾರತವನ್ನು ಅಂಕೆಯಲ್ಲಿಟ್ಟುಕೊಳ್ಳುವ ಏಕೈಕ ವಿಧಾನವೆ ಒಡೆದಾಳುವ ನೀತಿ ಎಂಬ ನಿರ್ಧಾರಕ್ಕೆ ಬಂದರು. 1862ನೆ ಇಸವಿಯಲ್ಲಿ ಅಂದು ಭಾರತದ ಪ್ರಧಾನ ಕಾರ್ಯದರ್ಶಿಯಾಗಿದ್ದ ಸರ್ ಚಾರ್ಲ್ಸ್ ವುಡ್ ಎಂಬಾತ ವೈಸರಾಯ್ ಎಲ್ಗಿನ್‌ಗೆ ಒಂದು ಪತ್ರ ಬರೆಯುತ್ತಾನೆ. ಅದರ ಒಕ್ಕಣೆ ಹೀಗಿದೆ: "ನಾವು ಭಾರತದಲ್ಲಿ ನಮ್ಮ ಅಧಿಕಾರವನ್ನು ಉಳಿಸಿಕೊಂಡಿರುವುದೆ ಒಂದು ಸಮುದಾಯವನ್ನು ಇನ್ನೊಂದರ ವಿರುದ್ಧ ಎತ್ತಿಕಟ್ಟುವ ಮೂಲಕ. ಅದನ್ನು ನಾವು ಮುಂದುವರಿಸಲೇಬೇಕು. ಆದುದರಿಂದ ಎಲ್ಲರಲ್ಲೂ ಒಂದೇ ತೆರನಾದ ಭಾವನೆಗಳು ಮೂಡದಂತಾಗಲು ನಿಮ್ಮಿಂದ ಸಾಧ್ಯವಾದುದನ್ನೆಲ್ಲ ಮಾಡಿ."

ಒಡೆದಾಳುವ ನೀತಿ

1887ರಲ್ಲಿ ಅಂದಿನ ಪ್ರಧಾನ ಕಾರ್ಯದರ್ಶಿ ವೈಕೌಂಟ್ ಕ್ರಾಸ್ ಎಂಬಾತ ಭಾರತದ ಗವರ್ನರ್ ಜನರಲ್ ಆಗಿದ್ದ ಡಫ್ರಿನ್‌ರಿಗೆ ಬರೆದ ಜನವರಿ 14ರ ಪತ್ರವೊಂದರಲ್ಲಿ "ಧಾರ್ಮಿಕ ಭಾವನೆಗಳ ಮಧ್ಯೆ ಮೂಡಿರುವ ಈ ಒಡಕುಗಳು ನಮಗೆ ಭಾರಿ ಪ್ರಯೋಜನ ತಂದುಕೊಡಲಿವೆ. ನೀವು ಭಾರತದ ಶಿಕ್ಷಣ ವ್ಯವಸ್ಥೆ ಮತ್ತು ಶೈಕ್ಷಣಿಕ ಪುಸ್ತಕಗಳ ಬಗ್ಗೆ ಹಮ್ಮಿಕೊಂಡಿರುವ ತನಿಖಾ ಸಮಿತಿ ಒಂದಷ್ಟು ಒಳ್ಳೆಯದನ್ನು ಮಾಡುವುದೆಂದು ನನ್ನ ನಿರೀಕ್ಷೆ" ಎನ್ನುತ್ತಾನೆ.





ಆದರೆ ಅವರ ವಂಶಜರೆ ಆದ ಸ್ಥಳೀಯ ಮುಸ್ಲಿಂ ಅರಸರು (ಉದಾ: ಅಕ್ಬರ್ ಚಕ್ರವರ್ತಿ ದಾಳಿಕೋರ ಬಾಬರನ ವಂಶಜ) ಹಾಗೆ ಮಾಡಿಲ್ಲ. ಬದಲಿಗೆ ಅವರು ಹಿಂದೂ ದೇವಸ್ಥಾನಗಳಿಗೆ ನಿಯಮಿತವಾಗಿ ದತ್ತಿ ನೀಡುತ್ತಿದ್ದರು; ರಾಮಲೀಲಾ ಕಾರ್ಯಕ್ರಮಗಳನ್ನು ಆಯೋಜಿಸುತ್ತಿದ್ದರು; (ಅವಧ್, ಮುರ್ಷಿದಾಬಾದ್ ಮತ್ತು ಆರ್ಕಾಟ್‌ನ ನವಾಬರಂತೆ) ಹೋಳಿ ಮತ್ತು ದೀಪಾವಳಿ ಹಬ್ಬಗಳಲ್ಲಿ ಭಾಗವಹಿಸುತ್ತಿದ್ದರು. ಹೀಗೆ ದಾಳಿಕೋರ ಮುಸಲ್ಮಾನರ ವಂಶಜರ ಪೈಕಿ ಹೆಚ್ಚುಕಮ್ಮಿ ಎಲ್ಲರೂ ಕೋಮು ಸೌಹಾರ್ದತೆಗೆ ಪ್ರೋತ್ಸಾಹ ನೀಡಿರುವುದು ನಮ್ಮ ಚರಿತ್ರೆಯ ಎರಡನೆ ಭಾಗ. ಆದರೆ ಇದನ್ನು ಮಾತ್ರ ನಮ್ಮ ಇತಿಹಾಸ ಪುಸ್ತಕಗಳಿಂದ ಸಂಪೂರ್ಣವಾಗಿ ಹೊರಗಿಡಲಾಗಿದೆ. ನಮ್ಮ ಮಕ್ಕಳಿಗೆ ಕಲಿಸುತ್ತಿರುವುದೇನು? ಘಜನಿ ಮಹಮೂದನು ಸೋಮನಾಥ ದೇವಾಲಯವನ್ನು ನಾಶಮಾಡಿದ ಎಂಬ ವಿಷಯವನ್ನು ಮಾತ್ರ. ಆದರೆ ಮೊಘಲ್ ಚಕ್ರವರ್ತಿಗಳು, ಟಿಪ್ಪೂ ಸುಲ್ತಾನ ಮುಂತಾದವರು ಹಿಂದೂ ದೇವಾಲಯಗಳಿಗೆ ದತ್ತಿ ನೀಡುತ್ತಿದ್ದ ವಿಷಯವನ್ನೂ ಹಿಂದೂ ಹಬ್ಬಹರಿದಿನಗಳನ್ನು ಆಚರಿಸುತ್ತಿದ್ದ ವಿಷಯವನ್ನೂ ನಮ್ಮ ಮಕ್ಕಳಿಗೆ ಕಲಿಸಲಾಗುತ್ತಿಲ್ಲ. (ಅಂತರ್ಜಾಲದಲ್ಲಿ ನೋಡಿ: ಬಿ.ಎನ್. ಪಾಂಡೆಯವರ **'History in the Service of Imperialism'**)


ಮುದ್ರಿಸಲಾಗುತ್ತದೆ. ಆ ಮೂಲಕ ಹಿಂದೂಗಳ ಮ... ಮುಸ್ಲಿಮರೆಲ್ಲರೂ ಬಾಂಬ್ ಹಾಕುವ ಉಗ್ರರು ಎನ್ನುವ ... ಸವಿರಾದ ಭಾವನೆಯೊಂದನ್ನು ಮೂಡಿಸಲಾಗುತ್ತದೆ. ಸತ್ಯಸಂಗತಿ ಏನೆಂದರೆ ಎಲ್ಲಾ ಸಮುದಾಯಗಳಲ್ಲಿ ಶೇ 99ರಷ್ಟು ಜನ ಶಾಂತಿಪ್ರಿಯರು ಮತ್ತು ಒಳ್ಳೆಯ...


ಬಾಬರಿ ಮಸೀದಿ ರಾಮಜನ್ಮಭೂಮಿ ಚಳ... ಕಾಲದಲ್ಲಿ ಮಾಧ್ಯಮಗಳ ಒಂದು ವಿಭಾಗ (ನಿರ್ದಿ... ಹಿಂದಿ ಮುದ್ರಣಮಾಧ್ಯಮಗಳು) ಕರಸೇವ... ಬದಲಾಗಿತ್ತು.

ಬೆಂಗಳೂರಲ್ಲಿ ಗಾಬರಿಯ ವಾತಾವ...

ಬೆಂಗಳೂರು ಮತ್ತಿತರ ನಗರಗಳಲ್ಲಿ ವಾಸ... ಈಶಾನ್ಯ ಭಾರತೀಯರ ಮೊಬೈಲುಗಳಿಗೆ ಇತ್ತೀಚೆಗೆ ... ಎಸ್ಸೆಮ್ಮೆಸ್ ಬಂದಿತ್ತು: ಅವರು ಅಸ್ಸಾಂನಲ್ಲಿ ಮುಸ್ಲಿ... ಕೊಂದಿರುವುದರಿಂದ ಬೆಂಗಳೂರು ಬಿಟ್ಟುಹೋಗ... ಅವರೆಲ್ಲರನ್ನೂ ಸಾಮೂಹಿಕವಾಗಿ ... ಮಾಡಲಾಗುವುದು. ಈಶಾನ್ಯ ಭಾರತೀಯರಿಗೆ ದಿಗಿ... ದಿಗಿಲು. ಈ ವಿಚಾರ ಬೆಂಗಳೂರಿನ ಮುಸ್ಲಿ... ತಿಳಿದಾಕ್ಷಣ ಅವರು ಈಶಾನ್ಯ ಭಾರತೀಯರ... ಹಬ್ಬದೂಟ ಏರ್ಪಡಿಸಿದರು. ಮುಸ್ಲಿಮರಿಗೆ ಈ... ಭಾರತೀಯರ ವಿರುದ್ಧ ಯಾವುದೇ ಹಗೆತನವಿಲ್ಲ; ... ಯಾರೋ ಕಿಡಿಗೇಡಿಗಳು ಮಾಡಿದ ಕೆಲಸ... ತಿಳಿಸಿದರು.

ಇದೆಲ್ಲವೂ ಕೆಲವು ನಿರ್ದಿಷ್ಟ ಸ್ಥಾಪಿತ ಹಿತಾ... ಒಂದು ಅತಿದುಷ್ಟ ಆಟ ಎಂಬುದನ್ನು ಭಾರತೀಯ... ತಿಳಿದುಕೊಳ್ಳಬೇಕಾಗಿದೆ. ಭಾರತ ಅಪಾರ ವೈವಿಧ್ಯ... ನಾಡು. ಹಾಗಾಗಿ ಐಕ್ಯತೆ ಮತ್ತು ಏಳಿಗೆಯನ್ನು ಸಾಧಿ... ಏಕೈಕ ವಿಧಾನವೆಂದರೆ ಸಮಾಜದ ಎಲ್ಲಾ ವರ್ಗ... ಮತ್ತು ಎಲ್ಲಾ ಸಮುದಾಯಗಳಿಗೆ ಸಮಾನ ಗ... ನೀಡುವುದು. ನಮ್ಮ ವಿಖ್ಯಾತ ಚಕ್ರವರ್ತಿ ಅಕ್ಬರ್ (... ಮತ್ತು ಅಶೋಕ ನಮ್ಮ ಜಗತ್ತಿನ ಅತ್ಯಂತ ಶ್ರೇಷ್ಠ ಅರಸ... ನನ್ನ ಅಭಿಪ್ರಾಯ) ತೋರಿಸಿಕೊಟ್ಟ ದಾರಿಯ... (ಅಂತರ್ಜಾಲದಲ್ಲಿ ನೋಡಿ: ಹಿಂಸಾ ವಿರೋಧಕ್ ಸ... Vs. ಮಿರ್ಜಾಪುರ್ ಮೋತಿ ಕುರೇಶ್ ಜಮಾ... ಪ್ರಕರಣದಲ್ಲಿ ನನ್ನ ತೀರ್ಪು).





ಇದರ ಪರಿಣಾಮವಾಗಿ ಭಾರತದ ಮುಸ್ಲಿಮರಲ್ಲಿ ಬಹಳ ಭೀಕರವಾದ ಒಂದು ಪ್ರತ್ಯೇಕತೆಯ ಭಾವನೆ ನಿರ್ಮಾಣವಾಗಿದೆ. ಪಾಕಿಸ್ತಾನದಲ್ಲಂತೂ ಅಲ್ಪಸಂಖ್ಯಾತರ ಪಾಡು ಇನ್ನಷ್ಟು ಕೆಟ್ಟದಾಗಿದೆ. ಹೆಚ್ಚಿನ ವೇಳೆ ತೀವ್ರವಾದಿಗಳ ಹಾಗೂ ಮತಾಂಧರ ಭಯದಲ್ಲಿ ಬದುಕುತ್ತಿರುವ ಅವರ ಪರಿಸ್ಥಿತಿ ಅತ್ಯಂತ ಆತಂಕಕಾರಿಯಾಗಿದೆ.

ಸಂಧಿಕಾಲ

ಭಾರತದ ಕೋಮುವಾದಿ ಇತಿಹಾಸದಲ್ಲಿ 1857 ಒಂದು ಸಂಧಿಕಾಲ. ಯಾಕೆಂದರೆ 1857ಕ್ಕೂ ಮೊದಲು ಭಾರತದಲ್ಲಿ ಕೋಮು ಸಮಸ್ಯೆಗಳಿರಲಿಲ್ಲ, ಕೋಮು ದಂಗೆಗಳೂ ಇರಲಿಲ್ಲ. ಹಿಂದೂ-ಮುಸ್ಲಿಮರ ಮಧ್ಯೆ ಕೆಲವು ಭಿನ್ನಾಭಿಪ್ರಾಯಗಳಿದ್ದುದು ನಿಜ. ಹಾಗೆ ನೋಡಿದರೆ ಒಂದೇ ತಂದೆಗೆ ಹುಟ್ಟಿದ ಗಂಡು ಅಥವಾ ಹೆಣ್ಣು ಮಕ್ಕಳ ನಡುವೆಯೂ ಅಭಿಪ್ರಾಯಭೇದಗಳಿರುವುದಿಲ್ಲವೇ? ಅಂದು ಹಿಂದೂ ಮುಸ್ಲಿಮರು ಶಾಂತಿಯುತವಾಗಿ ಬಾಳುತ್ತಿದ್ದರಲ್ಲದೆ ಕಷ್ಟಕಾಲಗಳಲ್ಲಿ ಪರಸ್ಪರರಿಗೆ ನೆರವಾಗುತ್ತಿದ್ದರು.

ಭಾರತ ಮೇಲೆ ದಂಡೆತ್ತಿಬಂದ ಮುಸಲ್ಮಾನರು ಅನೇಕ ಮಂದಿರಗಳನ್ನು ನಾಶಪಡಿಸಿರುವ ವಿಚಾರ ಸಂಶಯಾತೀತ. ಇವರ ವಂಶಸ್ಥರೆ ನಂತರದ ದಿನಗಳಲ್ಲಿ ಸ್ಥಳೀಯ ಮುಸ್ಲಿಂ ಅರಸರಾದರು. ಗಮನಾರ್ಹ ವಿಷಯವೆಂದರೆ ಈ ಸ್ಥಳೀಯ ಮುಸ್ಲಿಂ ಅರಸರಲ್ಲಿ ಹೆಚ್ಚುಕಮ್ಮಿ ಎಲ್ಲರೂ ಕೋಮು ಸೌಹಾರ್ದತೆಯನ್ನು ಪೋಷಿಸಿ ಬೆಳೆಸಿದರು. ಇದನ್ನವರು ಮಾಡಿದ್ದು ಸ್ವಹಿತಾಸಕ್ತಿಗಾಗಿ ಯಾಕೆಂದರೆ ಅವರ ಪ್ರಜೆಗಳ ಪೈಕಿ ಗರಿಷ್ಠ ಸಂಖ್ಯೆಯ ಜನ ಹಿಂದೂಗಳಾಗಿದ್ದರು. ತಾವು ಹಿಂದೂ ದೇವಾಲಯಗಳನ್ನು ಕೆಡವಿಹಾಕಿದರೆ ಗಲಭೆ ಹಾಗೂ ದಂಗೆಗಳನ್ನು ಎದುರಿಸಬೇಕಾಗುತ್ತದೆ ಎಂಬ ಪರಿಜ್ಞಾನ ಅಂದಿನ ಮುಸ್ಲಿಂ ಅರಸರಲ್ಲಿತ್ತು. ಯಾವ ಅರಸನಿಗೂ ಗಲಭೆ, ದಂಗೆಗಳು ಬೇಕಾಗಿಲ್ಲ. ಹಾಗಾಗಿ ಮೊಘಲರು, ಅವಧ್, ಮುರ್ಷಿದಾಬಾದ್ ಅಥವಾ ಆರ್ಕಾಟ್‌ನ ನವಾಬರು, ಟಿಪ್ಪು ಸುಲ್ತಾನ ಅಥವಾ

ಜಾರ್ಜ್ ಹ್ಯಾಮಿಲ್ಟನ್ ಎಂಬ ಮತ್ತೊಬ್ಬ ಪ್ರಧಾನ ಕಾರ್ಯದರ್ಶಿ ಆಗ ಭಾರತದ ಗವರ್ನರ್ ಜನರಲ್ ಆಗಿದ್ದ ಕರ್ಜನ್‌ಗೆ ಹೀಗೆ ಬರೆದ: "ನನ್ನ ಅಭಿಪ್ರಾಯದಲ್ಲಿ ಭಾರತದಲ್ಲಿ ನಮ್ಮ ಆಳ್ವಿಕೆಗೆ ನೈಜ ಅಪಾಯವಿರುವುದು... ಇಲ್ಲಿ ನಿಧಾನವಾಗಿ ಆಗಲಿರುವ ಪಾಶ್ಚಿಮಾತ್ಯ ಚಿಂತನೆಗಳ ಅಳವಡಿಕೆ ಮತ್ತು ಅವುಗಳ ಮುಂದುವರಿಕೆಗಳಿಂದ... ಮತ್ತು ನಾವು ಸುಶಿಕ್ಷಿತ ಭಾರತೀಯರನ್ನು (ಹಿಂದೂ ಮತ್ತು ಮುಸ್ಲಿಂ ಎಂಬ) ಎರಡು ಗುಂಪುಗಳಾಗಿ ಒಡೆಯಲು ಸಾಧ್ಯವಾದರೆ... ಹೆಚ್ಚೆಚ್ಚು ಜನ ವಿದ್ಯಾವಂತರಾದಂತೆ ನಮ್ಮ ಆಡಳಿತ ವ್ಯವಸ್ಥೆ ಮೇಲೆ ಆಗಿಯೇ ಆಗಲಿರುವ ಸೂಕ್ಷ್ಮ ಹಾಗೂ ನಿರಂತರ ದಾಳಿಯ ವಿರುದ್ಧ ನಮ್ಮ ನೆಲೆಯನ್ನು ಗಟ್ಟಿಗೊಳಿಸಬೇಕಿರುವುದು ಅಂತಹ ವಿಭಜನೆಯ ಮೂಲಕ. ನಾವು ಪಠ್ಯಪುಸ್ತಕಗಳನ್ನು ರಚಿಸುವಾಗ ಅವುಗಳನ್ನು ಹೇಗೆ ಯೋಜಿಸಬೇಕೆಂದರೆ ಆ ಎರಡು ಸಮುದಾಯಗಳ ನಡುವಿನ ಮತಭೇದಗಳು ಇನ್ನಷ್ಟು ಹೆಚ್ಚಬೇಕು."

1857ರ ನಂತರ ಹಿಂದೂ ಮುಸ್ಲಿಮರ ನಡುವೆ ದ್ವೇಷ ಮೂಡಿಸುವ ಉದ್ದೇಶಪೂರ್ವಕ ನೀತಿಗೆ ಬ್ರಿಟಿಷರು ಚಾಲನೆ ನೀಡಿದ್ದು ಹೀಗೆ. ಇದನ್ನು ಅನೇಕ ವಿಧಗಳಲ್ಲಿ ಮಾಡಲಾಯಿತು.

1. ಧಾರ್ಮಿಕ ನಾಯಕರಿಗೆ ಲಂಚ

ಬ್ರಿಟಿಷ್ ಜಿಲ್ಲಾಧಿಕಾರಿ ಹಿಂದೂ ಪುರೋಹಿತರನ್ನು ಗುಟ್ಟಾಗಿ ಕರೆಯಿಸಿಕೊಂಡು ಆತನಿಗೆ ದುಡ್ಡು ಕೊಟ್ಟು ಮುಸಲ್ಮಾನರ ವಿರುದ್ಧ ಮಾತನಾಡುವಂತೆ ಹೇಳುತ್ತಿದ್ದ. ಅದೇರೀತಿ ಮುಲ್ಲಾಗಳು ಹಿಂದೂಗಳ ವಿರುದ್ಧ ಮಾತನಾಡುವಂತೆ ಮಾಡುತ್ತಿದ್ದ.

2. ಇತಿಹಾಸ ಪುಸ್ತಕಗಳ ವಿಕೃತೀಕರಣ

ಇತಿಹಾಸವನ್ನು ತಿರುಚುವ ಮೂಲಕ ಕೋಮು ದ್ವೇಷವನ್ನು ಹುಟ್ಟಿಸಲಾಯಿತು.

ಈಗಾಗಲೆ ಹೇಳಿರುವಂತೆ ಆರಂಭದ ಮುಸ್ಲಿಂ ದಾಳಿಕೋರರು ಅನೇಕ ಮಂದಿರಗಳನ್ನು ನಾಶಪಡಿಸಿದ್ದಾರೆ.

3. ಉದ್ದೇಶಪೂರ್ವಕ ಕೋಮು ಗಲಭೆಗಳು


ಎಲ್ಲಾ ಕೋಮು ಗಲಭೆಗಳು ಆರಂಭವಾದದ್ದೆ 1857ರ ನಂತರ. ಅದಕ್ಕೂ ಮುನ್ನ ಒಂದಾದರೂ ಕೋಮುಗಲಭೆ ನಡೆದಿಲ್ಲ. ಸರ್ಕಾರದಿಂದ ನಿಯೋಜಿಸಲ್ಪಟ್ಟ ಚಿತಾವಣೆಗಾರರು ಉದ್ದೇಶಪೂರ್ವಕವಾಗಿ ಕೋಮು ದ್ವೇಷವನ್ನು ಪ್ರಚೋದಿಸುತ್ತಿದ್ದರು. ಅದನ್ನು ವಿವಿಧ ಬಗೆಗಳಲ್ಲಿ ಮಾಡುತ್ತಿದ್ದರು. ಉದಾ: ನಮಾಜು ಮಾಡುವ ಕಾಲದಲ್ಲಿ ಮಸೀದಿಗಳ ಎದುರು ದೊಡ್ಡದಾಗಿ ಸಂಗೀತ ಬಾರಿಸುವುದು ಅಥವಾ ಹಿಂದೂ ದೇವತಾಮೂರ್ತಿಗಳನ್ನು ಒಡೆದುಹಾಕುವುದು ಇತ್ಯಾದಿ, ಇತ್ಯಾದಿ.

ಬ್ರಿಟಿಷ್ ಆಡಳಿತಗಾರರು ಈ ರೀತಿ ವರ್ಷಗಳ, ದಶಕಗಳ ಕಾಲ ನಮ್ಮ ದೇಶದ ಜನತೆಯಲ್ಲಿ ಇಂಥಾ ಕೋಮು ವಿಷವನ್ನು ವ್ಯವಸ್ಥಿತವಾಗಿ ಬಿತ್ತಿದ್ದರ ಪರಿಣಾಮವೆ 1947ರಲ್ಲಿ ಆದ ದೇಶ ವಿಭಜನೆ. ಧಾರ್ಮಿಕ ದ್ವೇಷವನ್ನು ಉತ್ತೇಜಿಸುತ್ತಾ ಅದರಲ್ಲೇ ಹಸನಾಗಿ ಬೆಳೆಯುವ ಮಹಾಪಾತಕಿಗಳು ಇಂದಿಗೂ ಇದ್ದಾರೆ.

ಇಂದು ನಮ್ಮ ಅನೇಕ ಸುದ್ದಿವಾಹಿನಿಗಳು ಒಂದು ಬಾಂಬ್ ಸ್ಫೋಟ ನಡೆದ ಮರುಕ್ಷಣದಲ್ಲಿ ಏನು ಮಾಡುತ್ತವೆ? ಇಂಡಿಯನ್ ಮುಜಾಹಿದೀನ್ ಅಥವಾ ಜೈಶ್-ಎ-ಮುಹಮ್ಮದ್ ಅಥವಾ ಹರ್ಕತ್-ಉಲ್-ಜಿಹಾದ್-ಅಲ್-ಇಸ್ಲಾಮಿಯಾ ಎಂಬ ಸಂಘಟನೆಯಿಂದ ಸ್ಫೋಟ ನಡೆಸಿದ್ದು ತಾವೆಂದು ಹೇಳುವ ಈಮೇಲ್ ಯಾ ಎಸ್ಸೆಮ್ಮೆಸ್ ಬಂದಿದೆ ಎಂದು ಬಿತ್ತರಿಸಲಾರಂಭಿಸುತ್ತವೆ. ಇಂತಹ ಈಮೇಲ್, ಎಸ್ಸೆಮ್ಮೆಸ್‌ಗಳನ್ನು ಯಾವನೇ ಒಬ್ಬ ಕಿಡಿಗೇಡಿ ಕೂಡ ಕಳುಹಿಸಬಹುದಾಗಿದೆ. ಆದರೆ ಇಂತಹ ಸುದ್ದಿಗಳನ್ನು ಅದೇ ದಿನ ಟಿವಿ ಪರದೆಗಳಲ್ಲಿ ತೋರಿಸಲಾಗುತ್ತದೆ; ಮರುದಿನದ ಪತ್ರಿಕೆಗಳಲ್ಲಿ

1947ರಲ್ಲಿ ಭಾರತಕ್ಕೆ ಸ್ವಾತಂತ್ರ್ಯ ದೊರೆತಾಗ ಧಾ... ಭಾವನೆಗಳನ್ನು ಬಡಿದೆಬ್ಬಿಸಲಾಯಿತು. ಆಗ ಪಾ... ತನ್ನನ್ನೊಂದು ಇಸ್ಲಾಮಿಕ್ ರಾಷ್ಟ್ರವೆಂದು ಘೋ... ಕಾರಣಕ್ಕಾಗಿ ಭಾರತವನ್ನು ಒಂದು ಹಿಂದೂ ... ಎಂಬುದಾಗಿ ಘೋಷಿಸಬೇಕೆಂಬ ಭಾರಿ ಒತ್ತ... ಸಿಲುಕಿರಬೇಕು ನಮ್ಮ ಅಂದಿನ ನಾಯಕರಾದ ಪಂ... ನೆಹರೂ ಮತ್ತು ಅವರ ಸಹೋದ್ಯೋಗಿಗಳು. ... ಅವರ್‍ಯಾರೂ ಸ್ಥಿಮಿತ ಕಳೆದುಕೊಳ್ಳಲಿಲ್ಲ. ಅವರ 'ಭ... ಹಿಂದೂ ರಾಷ್ಟ್ರ ಆಗಲಾರದು; ಅದೊಂದು ಜಾತ್ಯ... (ಧರ್ಮನಿರಪೇಕ್ಷ) ರಾಷ್ಟ್ರ ಆಗಲಿದೆ' ಎಂಬ ಹೇಳಿಕೆ ... ಹಿರಿಮೆಗೆ ಸಾಕ್ಷಿ. ತುಲನಾತ್ಮಕವಾಗಿ ನೋಡಿದರೆ ... ನಮ್ಮ ನೆರೆಹೊರೆಯ ದೇಶಕ್ಕಿಂತಲೂ ಉತ್ತಮ ಪರಿಸ್ಥಿತಿ ... ಇರುವುದೇ ನಾವು ಜಾತ್ಯತೀತ ರಾಷ್ಟ್ರವಾದ ಕಾರಣ...

ಜಾತ್ಯತೀತತೆಯ ಅರ್ಥ ವ್ಯಕ್ತಿಯೊಬ್ಬ ತನ್ನ ಧರ್ಮ... ಅನುಸರಿಸಬಾರದು ಎಂದಲ್ಲ. ಧ... ಒಂದು ಖಾಸಗಿ ವ್ಯವಹಾರ; ಅದ... ಯಾವುದೇ ನಿರ್ದಿಷ್ಟ ಧರ್ಮ... ಸರ್ಕಾರಕ್ಕೂ ಸಂಬಂಧ ಇಲ್ಲ ಎ... ಅದರರ್ಥ. ನನ್ನ ಅಭಿಪ್ರಾಯ... ನಮ್ಮ ದೇಶದ ಒಗ್ಗಟ್ಟನ್ನು ಕಾ... ಕೊಂಡು ಅದನ್ನು ಸಮೃದ್ಧಿ... ಪಥದಲ್ಲಿ ಒಯ್ಯಬಲ್ಲ ಏ... ನೀತಿಯೆಂದರೆ ಜಾತ್ಯತೀತತೆ ಮ...



ಕೃಪೆ: 'ದ ಹಿಂದ...


...ಕ್ಯುಲರಿಸಂ ಮತ್ತು ಬಿಜೆಪಿಯ ದ್ವಂದ್ವಗಳು

...ಬಹಳಷ್ಟು ರಾಜಕೀಯ ಪಕ್ಷಗಳಿಗೆ ಚುನಾವಣಾ ...ಯು ಎಂದರೆ ಬದಲಾಗುವ ಕಾಲಕ್ಕೆ ತಕ್ಕಂತೆ ...ರೆ ಮುಖವಾಡ ತೊಡುವುದು. ಈ ಮಾತು ...ಯ ಜನತಾ ಪಕ್ಷದ ಮಟ್ಟಿಗೆ ಮತ್ತಷ್ಟು ನಿಜ. ...ವರೆಗೂ ಆ ಪಕ್ಷ ಇದನ್ನು ಸಲೀಸಾಗಿ ...ಕೊಂಡುಬಂದಿದೆ, ಆದರೆ ಕಳೆದೆರಡು ...ಳಿಂದೀಚೆಗೆ ಅದರ ರಾಜಕೀಯದ ಹಾದಿ ...ಸಿದರೆ ಇತ್ತೀಚೆಗೆ ಅದರ ದ್ವಂದ್ವಗಳು ...ತ್ತಿರುವುದು ತಿಳಿಯುತ್ತದೆ. ಬಿಜೆಪಿಯ ಗೇರ್ ... ಮುಖವಾಡ ಬದಲಿಸುವ ಅಂಥ ಒಂದು ಪ್ರಯತ್ನ ...ರ್ 2012ರಲ್ಲಿ ದೆಹಲಿಯಲ್ಲಿ ನಡೆದ ಬಿಜೆಪಿ ...ಕಾರಿ ಸಮಿತಿ ಸಭೆಯಲ್ಲಿ ಎಲ್.ಕೆ.ಅಡ್ವಾಣಿಯವರಿಂದ ...ತು. ಎಲ್ಲರ ಕೈಗಳಲ್ಲೂ ರಾರಾಜಿಸಿದ ಅವರ ಭಾಷಣ ...ತು ಹೇಳುವಂತೆ ಅಡ್ವಾಣಿ 'ಬಿಜೆಪಿಯು ...ತತೆಯನ್ನು ಮರು ಯೋಜಿಸುವತ್ತ ಸಮಾರೋಪ ...ದಲ್ಲಿ ಚಿಂತಿಸಿದ್ದರು. ಮಾತನಾಡುತ್ತ ಆಡುತ್ತ ಅವರು ...ತ್ತಿದ್ದದ್ದು ಸ್ಪಷ್ಟವಾಗಿತ್ತು, ಏಕೆಂದರೆ ಜಾತ್ಯತೀತತೆ ...ದು ಬಿಜೆಪಿ ನಿಜವಾಗಿಯೂ ನಂಬಿಕೆ ಇಡದ, ...ದ ಪದ. ಅವರ ಭಾಷಣದಲ್ಲಿ ಈ ಪದ ಪದೇಪದೇ ...ಹೋಗುತ್ತಿತ್ತು.

...ತ್ತೀಚಿನ ಬೆಳವಣಿಗೆಗಳನ್ನು ಗಮನಿಸಿದರೆ, ನಿತೀಶ್ ...ರ್ ಎನ್‌ಡಿಎಯು ಜಾತ್ಯತೀತ ಇಮೇಜ್ ...ರುವ ನಾಯಕನನ್ನು ಹೊಂದಬೇಕೆಂದು ಹೇಳಿದ್ದರು. ... ಉದ್ದೇಶ ಭಾವಿ ಪ್ರಧಾನಿ ಸ್ಥಾನಕ್ಕೆ ಸೂಚಿಸಲ್ಪಟ್ಟ ...ದ್ರ ಮೋದಿಯನ್ನು ವಿರೋಧಿಸುವುದೇ ಆಗಿತ್ತು. ... ಚುನಾವಣಾ ಕಾರಣಗಳಿಗಾಗಿ ನಿತೀಶ್ ಕುಮಾರ್ ...ದ್ರ ಮೋದಿಯನ್ನು ಮುಟ್ಟಲು, ಕೋಲಿನಿಂದ ...ವುದನ್ನೂ ತಪ್ಪಿಸಿಕೊಳ್ಳುತ್ತಾರೆ. ಬಿಜೆಪಿ ಅಧಿಕಾರಕ್ಕೆ ... ನಿತೀಶ್ ಕುಮಾರ್ ಮತ್ತಿತರರ ಮೈತ್ರಿ ...ರ್ಯವಾಗಿರುವುದರಿಂದ ನರೇಂದ್ರ ಮೋದಿಯನ್ನು ... ಸ್ಥಾನಕ್ಕೆ ಸೂಚಿಸುವಲ್ಲಿ ಬಿಜೆಪಿಗೆ ಈಗ ಇಬ್ಬಗೆಯ ... ಭಾರತ ರಾಷ್ಟ್ರ ಮತ್ತು ಜಾತ್ಯತೀತತೆ ಕುರಿತೂ ... ಮೊದಲಿನಿಂದ ಸಂಕೀರ್ಣ ಲೆಕ್ಕಾಚಾರಗಳನ್ನೇ ...ದೆ.

...ಂದರ್ಭದಲ್ಲಿ ಬಿಜೆಪಿ ಎಂದರೆ ಆರೆಸ್ಸೆಸ್‌ನ ರಾಜಕೀಯ ...ವಾಣಿಯಿದ್ದಂತೆ. ಬಿಜೆಪಿಯಲ್ಲಿ ಆರೆಸ್ಸೆಸ್ಸಿನ ...ಸೇವಕರು ಮುಂಚೂಣಿ ನಾಯಕರ ಸ್ಥಾನದಲ್ಲಿದ್ದರೆ ... ಹಿನ್ನೆಲೆಯಿಲ್ಲದವರು ಅಲ್ಲಿ ಚದುರಿದಂತಿದ್ದಾರೆ. ...ದು ಮುಖ್ಯ ನಾಯಕತ್ವವಿರುವುದು ಆರೆಸ್ಸೆಸ್ ತರಬೇತಿ ...ದಿದವರ ಬಳಿಯೇ. ಬಿಜೆಪಿಯ ರಾಜಕೀಯ ...ನ್ನು ನಿರ್ಧರಿಸುವುದು, ಮುಖ್ಯ ನಿರ್ಧಾರಗಳನ್ನು ...ಕೊಳ್ಳುವುದು ಆರೆಸ್ಸೆಸ್ ಎಂಬ ತಂದೆಯೇ. ಕೆಲವೇ ... ಕೆಳಗೆ ನಿತಿನ್ ಗಡ್ಕರಿಯನ್ನು ಬಿಜೆಪಿ ಅಧ್ಯಕ್ಷ ... ತಂದು ಕೂರಿಸಲಾಯಿತು ಮತ್ತು ನಂತರ ಅವರ ...ವಿರುದ್ಧವಾಗಿ ಆರೆಸ್ಸೆಸ್ಸಿನ ನಿರ್ದೇಶನದಂತೆ ಅವರನ್ನು ...ಚುನಾಯಿಸಲಾಯಿತು. ಈ ಮೊದಲೂ ಆರೆಸ್ಸೆಸ್ ... ನಡೆಗಳನ್ನು ನಿರ್ಧರಿಸಿದ ನೂರಾರು ...ದರಣೆಗಳಿವೆ. ಕೆಲವು ಮಿತಿಗಳೊಂದಿಗೆ ಬಿಜೆಪಿಗೆ ...ಟ್ಟಿಗೆ ಸ್ವತಂತ್ರವಿದೆಯೆನ್ನುವುದು ನಿಜವಾದರೂ ಅದು ... ನೀತಿಗಳ ನಿರ್ಧಾರದ ವಿಷಯದಲ್ಲಿ ಅಲ್ಲದೇ ...ಷ್ಟ ವಿಷಯಗಳಿಗೆ ಸೀಮಿತಗೊಂಡಿರುತ್ತದೆ.

...ಜೆಪಿ ಪರವಾದ ಪ್ರಚಾರ ಕಾರ್ಯವೂ ಸಂಘದ ಸ್ವಯಂಸೇವಕರಿಂದಲೇ ಬಹುಪಾಲು ನಡೆಯುತ್ತದೆ, ಆದರ ಚುನಾವಣಾ ವ್ಯವಸ್ಥೆಯ ಬೆನ್ನೆಲುಬು ಅವರೇ ಎನ್ನಬಹುದು. ಬಿಜೆಪಿಯ ಎಲ್ಲ ಮುಖ್ಯ ನಾಯಕರು - ವಾಜಪೇಯಿ, ಅಡ್ವಾಣಿ, ಗಡ್ಕರಿ, ಮುರಳಿ ಮನೋಹರ ಜೋಷಿ, ನರೇಂದ್ರ ಮೋದಿ, ಅರುಣ್ ಜೇಟ್ಲಿ ಮುಂತಾದವರೆಲ್ಲರೂ ಸಂಘದ ಸ್ವಯಂಸೇವಕರಾಗಿ ತರಬೇತಿ ಪಡೆದವರೇ. ಅವರಿಗೆ ಮತ್ತೆಲ್ಲಕ್ಕಿಂತಲೂ ಸಂಘವೇ ಪ್ರಾಮುಖ್ಯತೆ ಪಡೆದಿರುವಂತಹ ಭಾವನೆಯಿರುತ್ತದೆ ಹಾಗೂ ಇದನ್ನು ಕಾಲದಿಂದ ಕಾಲಕ್ಕೆ ಅವರು ತೋರಿಸುತ್ತಲೇ ಬಂದಿದ್ದಾರೆ. ಪ್ರಧಾನ ಮಂತ್ರಿಯಾದಾಗ ಒಮ್ಮೆ ವಾಜಪೇಯಿ ಅಮೆರಿಕದ ಸ್ಟೇಟನ್ ಐಲ್ಯಾಂಡಿನಲ್ಲಿ ಅನಿವಾಸಿ ಭಾರತೀಯರೆದುರು ಮಾತನಾಡುತ್ತ ಹೇಳಿದ್ದರು; "ನಾನು ಪ್ರಧಾನ ಮಂತ್ರಿಯೇ ಇರಬಹುದು ಆದರೆ ಅದಕ್ಕಿಂತ ಮುಖ್ಯವಾಗಿ ನಾನೊಬ್ಬ ಆರೆಸ್ಸೆಸ್ಸಿನ ವಿನಮ್ರ ಸೇವಕ" ಎಂದು. ಅದು ತನ್ನಿಂದ ಯಾರೂ ಕಸಿದುಕೊಳ್ಳಲಾರದ ಹಕ್ಕು ಎಂದು ಹೆಮ್ಮೆ ಪಟ್ಟಿದ್ದರು. ಅಡ್ವಾಣಿ ಬಾಬ್ರಿ ಮಸೀದಿ ಧ್ವಂಸಗೊಳಿಸಿದವರ ವೇಷದಿಂದ ಪ್ರಧಾನಿ ಅಭ್ಯರ್ಥಿಯಾಗುವ ವೇಷ ತೊಡುವ ಭರದಲ್ಲಿ ಜಿನ್ನಾರನ್ನೂ, 1947ರ ಆಗಸ್ಟ್ 11ರ ಅವರ ಭಾಷಣವನ್ನೂ



ಮೆಚ್ಚಿದ್ದರು. ಕೂಡಲೇ ಆರೆಸ್ಸೆಸ್ ತನ್ನ ಚಾಟಿ ಬೀಸಿ ಅಡ್ವಾಣಿಯನ್ನು ನಾಯಕತ್ವದಿಂದ ಕೆಳಗಿಳಿಸತೊಡಗಿತು. ಮತ್ತೆ ಆ ಸ್ಥಾನ ಗಳಿಸಲು ಅಡ್ವಾಣಿ ಮಾಡಿದ ಯತ್ನಗಳೆಲ್ಲ ವಿಫಲವಾದವು. ಹೀಗೆಯೇ ಬಿಜೆಪಿಯ ಮುಂಚಿನ ಅವತಾರವಾದ ಭಾರತೀಯ ಜನಸಂಘವು ಜನತಾ ಪಕ್ಷದೊಂದಿಗೆ ವಿಲೀನಕ್ಕೆ ಪ್ರಯತ್ನಿಸಿದರೂ ತುರ್ತುಪರಿಸ್ಥಿತಿಯ ಬಿಗಿ ಹಿಡಿತವಿದ್ದಾಗ ಅದರ ನಾಯಕತ್ವ ಜನತಾ ಪಕ್ಷವನ್ನು ಒಡೆಯಿತು ಹಾಗೂ ಭಾರತೀಯ ಜನತಾ ಪಕ್ಷ ಉದಯವಾಯಿತು. ಜನತಾ ಪಾರ್ಟಿಯಲ್ಲಿದ್ದ ಸಮಾಜವಾದಿಗಳು ಜನಸಂಘದ ಸದಸ್ಯರು ಜನತಾ ಪಕ್ಷ ಹಾಗೂ ಆರೆಸ್ಸೆಸ್ ಎರಡರ ಸದಸ್ಯತ್ವವನ್ನು ಹೊಂದಲು ಸಾಧ್ಯವಿಲ್ಲವೆಂದು ಪಟ್ಟು ಹಿಡಿದಿದ್ದರು. ಅದೇ ಗುಂಪು ಆರೆಸ್ಸೆಸ್ ಜೊತೆಗೆ ಸಂಬಂಧ ಇಟ್ಟುಕೊಳ್ಳಲಾರದೇ ಸಿಡಿದು ಹೊರಬಂತು.

ಆರೆಸ್ಸೆಸ್ ಮೂಲಭೂತವಾಗಿ ಹಿಂದೂ ರಾಷ್ಟ್ರ ಕಲ್ಪನೆಗೆ



ತನ್ನನ್ನು ತೆತ್ತುಕೊಂಡಿದೆ. ಅದು ಇಸ್ಲಾಮಿಕ್ ದೇಶದ ಕಲ್ಪನೆ ಹೊಂದಿ ಪಾಕಿಸ್ತಾನ ಉದಯವಾದ ಹಾಗೆಯೇ. ಬಿಜೆಪಿಯ ವೈರುಧ್ಯ ಏನಾಗಿದೆಯೆಂದರೆ ಹಿಂದೂ ರಾಷ್ಟ್ರ ಕಟ್ಟಲೂ ಸಹ ಅದು ಚುನಾವಣೆಯನ್ನು ಆ ಮೂಲಕ ಈ ದೇಶದ ಎಲ್ಲ ಧರ್ಮ, ಸಂಸ್ಕೃತಿಯವರನ್ನು ಓಟಿಗಾಗಿ ನೆಚ್ಚಿಕೊಳ್ಳಬೇಕಾಗಿದೆ. ಅದು ಹಿಂದೂ ರಾಷ್ಟ್ರ ತರಬಯಸುತ್ತದೆ ಹಾಗೂ ಹಾಗೆ ಮಾಡಲು ಅಧಿಕಾರಕ್ಕೆ ಬರಬೇಕಾದರೆ ಹಿಂದೂಯೇತರರ ಮರ್ಜಿಯನ್ನೂ ಹಿಡಿಯಬೇಕಾಗಿದೆ. ಅದಕ್ಕೆ ಓಟ್ ಬ್ಯಾಂಕ್ ರಾಜಕಾರಣದಲ್ಲಿ ತೊಡಗಿಕೊಳ್ಳುವುದು ಅನಿವಾರ್ಯವಾಗಿದೆ. ಅದರ ಗುರಿ ಮೊದಲು ಹಿಂದೂ ಓಟುಗಳನ್ನು ಧ್ರುವೀಕರಿಸುವುದು ಮತ್ತು ನಂತರ ಸಮಾಜದ ಇತರರನ್ನು ವೋಟಿಗಾಗಿ ಓಲೈಸುವುದು. ಹಿಂದೂ ಓಟುಗಳ ಸಂಗ್ರಹವನ್ನು ಬಾಬ್ರಿ ಮಸೀದಿ ಧ್ವಂಸ, ತದನಂತರದ ಹಿಂಸಾಚಾರ, ಗುಜರಾತ್ ದಂಗೆಗಳಿಂದ ಶುರುಮಾಡಿತು. ಇಷ್ಟಾದ ಮೇಲೆ ದಲಿತರು ಮತ್ತಿತರ ದುರ್ಬಲ ವರ್ಗದವರನ್ನು ಗೆಲ್ಲಲು 'ಸಾಮಾಜಿಕ ಸಾಮರಸತಾ', 'ಆದಿವಾಸಿಗಳ ಹಿಂದೂಕರಣ', ಮುಸ್ಲಿಂ ದೊರೆಗಳ ದುರಾಕ್ರಮಣಕ್ಕೆ ಕಾಡಿಗೆ ಓಡಿಹೋದ ಹಿಂದೂಗಳೇ ಆದಿವಾಸಿಗಳೆಂದು ಪ್ರಚಾರಮಾಡುವುದು, ಅವರನ್ನು 'ಘರ್ ವಾಪಸಿ' ಕಾರ್ಯಕ್ರಮದಲ್ಲಿ ಹಿಂದೂವನ್ನಾಗಿ ಮಾಡುವುದು ಇವೆಲ್ಲ ಸೇರಿವೆ. ಬುಡಕಟ್ಟು ಪ್ರದೇಶದಲ್ಲಿ ಕ್ರಿಶ್ಚಿಯನ್ ವಿರೋಧಿ ದಂಗೆ ಶುರುವಾಗಿದ್ದು ಈ ಕಾರಣಕ್ಕೇ.

ಮುಸ್ಲಿಮರೆಂಬ ಅತಿದೊಡ್ಡ ಅಲ್ಪಸಂಖ್ಯಾತ ವರ್ಗಕ್ಕೆ ಸಂಬಂಧಿಸಿ ಹೇಳುವುದಾದರೆ ಅವರು ಬಿಜೆಪಿಗೆ ಮಿಶ್ರ ಪ್ರತಿಕ್ರಿಯೆ ತೋರಿಸಿದ್ದಾರೆ. ಎಲ್ಲ ಹಿಂದೂಗಳೂ ಯಾವಾಗಲೂ ಬಿಜೆಪಿಗೆ ಮತ ಹಾಕಲಾರರು ಎಂದೇ ಮುಸ್ಲಿಮರ ಒಂದು ಭಾಗವನ್ನು ಓಲೈಸುವ ಪ್ರಯತ್ನ ನಡೆದಿದೆ. ಇದರ ಮೊದಲ ಯತ್ನ ವಾಜಪೇಯಿಯನ್ನು ನಾಯಕನನ್ನಾಗಿಸುವುದು, ಏಕೆಂದರೆ ಇದಕ್ಕೆ ವಾಜಪೇಯಿ ಅತ್ಯುತ್ತಮ ಮುಖವಾಡ. ಅದು ಅವರ ವ್ಯಕ್ತಿತ್ವದ ಭಾಗವೇ ಆಗಿತ್ತು, ಎಷ್ಟರ ಮಟ್ಟಿಗೆಂದರೆ ಬಹಳಷ್ಟು ಜನ ಅವರನ್ನು ತಪ್ಪು ಪಕ್ಷದಲ್ಲಿರುವ ಸೂಕ್ತ ವ್ಯಕ್ತಿ ಎಂದು ಬಣ್ಣಿಸಿದರು. ಕಾಂಗ್ರೆಸ್ ಅನ್ನು ಎದುರಿಸಲು ಅಡ್ವಾಣಿ 'ಹುಸಿ ಜಾತ್ಯತೀತತೆ' ಎಂಬ ಪದಪ್ರಯೋಗ ಶುರುಮಾಡಿಕೊಂಡರು. ಖಂಡಿತ, ಕಾಂಗ್ರೆಸ್ ಏನೂ ಜಾತ್ಯತೀತ ದೇವತೆಯಲ್ಲ, ವೋಟ್ ಬ್ಯಾಂಕ್ ರಾಜಕಾರಣದಲ್ಲಿ ಅದೂ ಅವಕಾಶವಾದಿ ಕೋಮುವಾದದಲ್ಲಿ ತೊಡಗಿಕೊಂಡಿದ್ದಿದೆ. ಬಿಜೆಪಿ ಕೋಮುವಾದಕ್ಕೆಂದೇ ಹುಟ್ಟಿಕೊಂಡ ಪಕ್ಷವಾದರೆ ಕಾಂಗ್ರೆಸ್ಸಿನದು ವೈರುಧ್ಯದ ನಿಲುವಾಗಿದೆ. ವಾಜಪೇಯಿ ನಂತರ ಸೆಕ್ಯುಲರ್ ಮುಖವಾಡ ಹಾಕುವುದು ಬಿಜೆಪಿಗೆ ಸ್ವಲ್ಪ ಕಷ್ಟವಾಗಿದ್ದು ಅದಕ್ಕೆ ಅವರು ಕಲಾವಿದನ ಕೈಚಳಕ ತೋರಬೇಕಾಗಿದೆ. ಹಿಂದೂ ಮತಗಳನ್ನು ಕಳೆದುಕೊಳ್ಳದೇ ಮುಸ್ಲಿಂ ಮತಗಳನ್ನೂ ಗಳಿಸಬೇಕಿದೆ.

ಈ ಉದ್ದೇಶದಿಂದಲೇ ಒಮ್ಮೆ ಬಂಗಾರು ಲಕ್ಷ್ಮಣ್ 'ಮುಸ್ಲಿಮರು ನಮ್ಮ ರಕ್ತದ ರಕ್ತ, ಮಾಂಸದ ಮಾಂಸ' ಎಂದು ಹೇಳಿದ್ದು, ಅಡ್ವಾಣಿ ಜಿನ್ನಾ ಸೆಕ್ಯುಲರ್ ಎಂಬ ಹೇಳಿಕೆ ನೀಡಿದ್ದೂ ಇದಕ್ಕೇ. ಈಗ ಅದೇ ಅಡ್ವಾಣಿ ಮತ್ತೊಮ್ಮೆ ಆ ಪ್ರಯತ್ನಕ್ಕೆ ಕೈಹಾಕಿದ್ದಾರೆ. ಅವರು ಓದಿದ ಭಾಷಣದಲ್ಲಿ ಹೀಗೆ ಬರೆಯಲಾಗಿತ್ತು: 'ಅಲ್ಪಸಂಖ್ಯಾತ ವರ್ಗಕ್ಕೆ ಸೇರಿದ ನಮ್ಮ ಬಾಂಧವರಿಗೆ ನಾವು ಸಂಪೂರ್ಣ ಭರವಸೆ ನೀಡುತ್ತೇವೆ, ವೈವಿಧ್ಯಮಯ ನಮ್ಮ ಸಮಾಜದ ಜೊತೆ ವ್ಯವಹರಿಸುವಾಗ ನಾವು ಯಾವ ತಾರತಮ್ಯವನ್ನೂ ಮಾಡುವುದಿಲ್ಲವೆಂದು ಹೇಳುತ್ತೇವೆ.' ಅಪರಿಚಿತರಲ್ಲದೆ ಈ ಮಾತನ್ನು ನಂಬುವವರು ಯಾರು?

ಇಂಥ ಹೊಸ ಮುಖವಾಡದಿಂದ ಮುಸ್ಲಿಮರನ್ನು ಸೆಳೆಯಬಹುದೇ? ಅವರಿಗೆ ಈಗ ಗೊತ್ತಾಗಿದೆ ಹೊರಗೆಂಥ ಮುಖವಾಡ ತೊಟ್ಟರೂ ಆಳದಲ್ಲಿ ಬಿಜೆಪಿ ಕೋಮುವಾದಿ ಎಂದು. 'ಎಲ್ಲರಿಗೂ ನ್ಯಾಯ, ಯಾರ ಓಲೈಕೆಯೂ ಇಲ್ಲ' ಎಂಬ ಘೋಷಣೆಯಲ್ಲೇ ಅವರ ಸೆಕ್ಯುಲರಿಸಂ ಎಂಥದೆಂದು ತಿಳಿಸುತ್ತದೆ. ದಮನಿತ ಸಮುದಾಯವು ತನ್ನ ಉನ್ನತಿಗೆ ಅದರಿಂದ ಯಾವ ಕ್ರಮ ನಿರೀಕ್ಷಿಸಬಹುದು?


ಈಗ ಕೋಮುವಾದಿ ಪಕ್ಷಗಳು ಧರ್ಮದ ಆಧಾರದ ಮೇಲೆ ಜನರನ್ನು ಒಡೆಯುತ್ತಿರುವಾಗ ಸೆಕ್ಯುಲರ್ ಜಾಡಿನಲ್ಲಿ ಒಂದು ತತ್ವಾಧಾರಿತ ರಾಜಕಾರಣ ಅಗತ್ಯವಾಗಿದೆ. ಹಿಂದೂ ರಾಷ್ಟ್ರ ನಿರ್ಮಾಣದ ತತ್ವದಿಂದ ಹೊರಟವರು ಸೆಕ್ಯುಲರ್ ಆಗಲು ಸಾಧ್ಯವಿಲ್ಲ, ಅದು ಜನರ ಕಣ್ಣಿಗೆ ಮಣ್ಣೆರಚುವ ಒಂದು ವಿಧಾನ ಅಷ್ಟೆ. ರಾಷ್ಟ್ರಪಿತ ಗಾಂಧಿಯ ಮೌಲ್ಯಗಳು ಎಷ್ಟು ಹಿಂದೂ ಆಗಿದ್ದವೆಂದು ನಾವು ನೋಡಬಹುದು. ಆದರೆ ಹಿಂದೂ ಧರ್ಮದಲ್ಲಿ ಶ್ರದ್ಧೆಯಿದ್ದರೂ ಅವರು ಒಂದು ಸಲವೂ ಜನರನ್ನು ಕೂಡಿಸುವ ಅಸ್ಮಿತೆಯಾಗಿ ಅದನ್ನು ಬಳಸಲಿಲ್ಲ, ಬಿಜೆಪಿಯ ಬತ್ತಳಿಕೆಯಲ್ಲಿರುವುದೇ ಬಾಬ್ರಿ ಮಸೀದಿ, ರಾಮ್ ಸೇತು, ಅಮರನಾಥ್ ಯಾತ್ರಾ, ಪವಿತ್ರ ಗೋವು ಮತ್ತು ಇಂಥ ವಿಷಯಗಳೇ. ಅದು ರಾಜಕೀಯ ಅಸ್ತಿತ್ವಕ್ಕಾಗಿ ಧಾರ್ಮಿಕ ಅಸ್ಮಿತೆ ಯನ್ನು ಬಳಸಿಕೊಂಡಂತೆ. ಗಾಂಧಿ ಧರ್ಮವನ್ನು ನೈತಿಕತೆಗಾಗಿ ಅನುಸರಿಸಿದರೆ ಅಡ್ವಾಣಿ ಥರದವರು ಧಾರ್ಮಿಕತೆಯನ್ನು ರಾಜಕೀಯ ಅಸ್ತಿತ್ವಕ್ಕಾಗಿ ಬಳಸಿಕೊಳ್ಳುತ್ತಾರೆ. ಇದನ್ನೇ ಕೋಮುವಾದ ಎನ್ನುವುದು ಹಾಗೂ ಬಿಜೆಪಿಯ ಪ್ರಮುಖ ಲಕ್ಷಣವೂ ಇದೇ ಆಗಿದೆ.

ಮೂಲ: ರಾಮ್ ಪುನಿಯಾನಿ



ಕನ್ನಡಕ್ಕೆ: ಡಾ.ಜಿ.ಎಸ್.ಅನುಪಮಾ

ಪ್ರಾರ್ಥನೆ



ಪ್ರಭುವೇ ನಮ್ಮನ್ನು
ಸುಂದರ ನದಿಯ ತೋಳಿನ ಆಸರೆಯಲ್ಲಿ
ಬೆಳೆಯುವ ಫಲಭರಿತ ವೃಕ್ಷವನ್ನಾಗಿ ಮಾಡು,
ಅದರಿಂದ ಬರಿದಾದ ಹೊಟ್ಟೆಗಳ
ಹಸಿವು ತಣಿಯುವಂತೆ ಮಾಡು.

ನಿರಾಶ ಮನಸ್ಸುಗಳ ಮನ ಮುದಗೊಳಿಸುವ
ಸುಮಧುರ ಸಂಗೀತ ಹಾಡುವ ಕೋಗಿಲೆಯಾಗಿ ಮಾಡು
ಆಕಾಶದಗಲ ಹರಡಿದ ಬೆಳ್ಮೋಡಗಳಾಗಿ
ಮಳೆ ಸುರಿಸಿ ಭೂಮಿಯನ್ನು ತೃಪ್ತಿಗೊಳಿಸುವಂತೆ ಮಾಡು.

ಕತ್ತಲೆಯ ಕಾಡನ್ನು ಗೆಲ್ಲುವ
ಗಾಳಿಯ ದಾಳಿಗೆ ಬೆದರದ
ಪ್ರೀತಿಯ ತೈಲ ತುಂಬಿದ
ಬೆಳಗುವ ದೀಪವಾಗಿ ಬೆಳಗಿಸು.

ಸರಳತೆ ಕರುಣೆಗಳ ಸಾಕಾರವಾಗಿ
ಪ್ರಕೃತಿಯ ಮಡಿಲಲ್ಲಿ
ಸುಶ್ರಾವ್ಯ ನಾದವಾಗಿ
ಪರಿತಪಿಸುವ ಪ್ರಾಣಗಳಿಗೆ ಅಮೃತವಾಗುವಂತೆ ಬದುಕಿಸು.

ಪ್ರೀತಿ, ಮಮತೆಗಳ ಹೃದಯಗಳಲ್ಲಿ ಬಿತ್ತಿ
ಮಾನವತೆಯ ಪೋಷಣೆ ನೀಡಿ
ಸಕಲರಿಗೆ ಶಾಂತಿ, ಸಮಾಧಾನ, ಸಮಾನತೆ
ನೀಡುವ ಬೆಳೆಬೆಳೆದು ಸುಗ್ಗಿಯಾಗುವಂತೆ ಮಾಡು.

ಶಾಂತಿಪ್ರೀತಿಗಳ ಸಂಕೇತ
ಮಾನವತೆಯನ್ನು ಮರೆಯದಂತೆ ಮಾಡು.
ಸಕಲ ತಪ್ತ ಹೃದಯಗಳಿಗೆ
ನೆಮ್ಮದಿ ನೀಡುವ ಮನುಷ್ಯರನ್ನಾಗಿ ಮಾಡು.


ಎಂ.ಇಕ್‌ಬಾಲ್ ಹುಸೇನ್

ರಂಗೀಲಾ ರೀಲಿನ ಕಪ್ಪು-ಬಿಳುಪು ನಟರು





ಗುಮಾಸ್ತನ ಬ್ಲಾಗ್ – 3 • ಕೆ.ಫಣಿರಾಜ್

ಜನ ಒಂದೊಂದು ಸಂದರ್ಭದಲ್ಲಿ ಒಂದೊಂದು ತರಹ ಆಡ್ತಾರೆ. ದುಡ್ಡಿದ್ದವರು, ಅಧಿಕಾರಸ್ಥರ ಎದುರು ತಗ್ಗಿಬಗ್ಗಿ ನಡೆಯೋ ಜನ, ತಮಗಿಂತ ದರಿದ್ರರಾದವರ ಮೇಲೆ ಜಬರ್ದಸ್ತ್ ಮಾಡ್ತಾರೆ. ಬಲಾಢ್ಯರು ಒದ್ದರೆ 'ಬಡವನ ಕೋಪ ದವಡೆಗೆ ಮೂಲ' ಅಂತ ಮುಚ್ಚಿಕೊಂಡಿರುವ ಮಂದಿ, ತಮಗಿಂತ ನಿತ್ರಾಣಿಗಳಾದವರ ಮೇಲೆ 'ಗಂಡಸ್ತನ' ತೋರಿಸ್ತಾರೆ. ಸಮಯ-ಸನ್ನಿವೇಶಕ್ಕೆ ತಕ್ಕ ಹಾಗೆ ಜನ 'ಇಲಿ-ಹುಲಿ'ಯ ಹಾಗೆ ವರ್ತಿಸುವುದನ್ನು 'ಒಬ್ಬನೊಳಗೆ ಇನ್ನೊಬ್ಬ' ಎಂದು ಗುರುತಿಸುವುದು 'ಸಾಹಿತ್ಯ-ಸಂಸ್ಕೃತಿ ವಿಮರ್ಶೆ'ಯಲ್ಲಿ ಈಗ ಮಾಮೂಲಿ. ಜನರ ಬದುಕನ್ನು ಅರ್ಥಮಾಡಿಕೊಳ್ಳಲು ಒದಗಿಬರುವ ಈ 'ಒಬ್ಬನೊಳಗೆ ಇನ್ನೊಬ್ಬ' ಅನ್ನೋದು ಖರೆನೆ ವಜನ್ ಇರೋ ಮಾತು. ಪ್ರಪಂಚದಲ್ಲಿ ಜನರ ಜಬರ್ದಸ್ತ್-ದೌಲತ್ತು ಯಾವ್ಯಾವ ನಮೂನೆಯಲ್ಲಿ, ಯಾವ ಬಣ್ಣದ ಸೀನ್‌ನಲ್ಲಿ ಸಾಮಾನ್ಯ ಬದುಕಿನ ದೊಡ್ಡ ಪರದೆಯ ಮೇಲೆ ರಂಗೀಲ ರೀಲು ಬಿಚ್ಚುತ್ತದೆ, ಯಾವ್ಯಾವ ನಮೂನೆಯ ಮಚ್ಚು-ಲಾಂಗುಗಳಿಂದ ತೊಟ್ಟು ರಕ್ತ ಹರಿಸದೆಯೂ ಜನರನ್ನ ಖತಂ ಮಾಡಲಾಗುತ್ತದೆ ಎಂದು ತಲೆಯಲ್ಲಿ ಬಲ್ಬು ಹೊತ್ತಿಸುವ ನಾಜೂಕಿನ



ಅನಿಲ್ ಕಪೂರ್ ಡಬಲ್





ಮಾತಿದು. ಆದರೆ ನಮ್ಮ ವಿಮರ್ಶಕರ ತೌಡು ಕುಟ್ಟುವಿಕೆಯಿಂದ ಈ ಮಾತೂ ತಿಪ್ಪೆ ಸಾರಿಸುವ ವರಸೆಯಾಗಿಬಿಟ್ಟಿದೆ; ಇರ್ಲಿ, ಸದ್ಯಕ್ಕೆ ವಿಮರ್ಶಕರ ಉಸಾಬ್ರರಿ ಬಿಟ್ಟು ಸ್ವಲ್ಪ ಆಚೆ, ಸಿನಿಮಾ ಟಾಕೀಸಿನ ಕಡೆ ಹೋಗೋಣ. ನಾವು ಟಾಕೀಸಿನ ದೊಡ್ಡಪರದೆಯ ಮೇಲೆ ಬೆರಗಾಗಿ ಸಿನಿಮಾ ನೋಡ್ತೇವಲ್ಲ, ಆ ಸಿನಿಮಾಗಳಲ್ಲಿರುವ ಮಿನುಗು ತಾರೆಗಳು ನಮ್ಮ ಕಣ್ಣು ತುಂಬುತ್ತಾರೆ. ಆದರೆ ಅದೇ ಸಿನಿಮಾದಲ್ಲಿ ನಮ್ಮ ಕಣ್ಣೆದುರಿಗೆ ಬಂದರೂ, ನಾವು ನೋಡದೆ ಇರುವ 'ಇನ್ನೊಬ್ಬ ತಾರೆ'ಗಳೂ ಇರುತ್ತಾರೆ. ಅಂತಹ ಪಾತ್ರಧಾರಿಗಳ ತೆರೆಯ ಹಿಂದಿನ ಬದುಕಿನ ಸಂಕಟವನ್ನು ಹೇಳುವ ಒಂದು ಒಳ್ಳೆಯ ಬರಹ 'ಟ್ರ್ಯಾಜಿಕ್ ಹಿರೋಸ್' (ದುರಂತ ನಾಯಕರು) ಸೆಪ್ಟಂಬರ್ 29, 2012ರ 'ಓಪನ್' ಪತ್ರಿಕೆಯಲ್ಲಿ ಪ್ರಕಟವಾಗಿದೆ (www.openthemagazine.com). ಇದನ್ನು ಬರೆದಿರುವವರು ಷೇಕ್ ಅಯಾಜ್. ಸಿನಿಮಾ ಬದುಕಿನ ಕುರಿತ ಕೆಲವು ಒಳ್ಳೆಯ ಬರಹಗಳನ್ನು ಈ ಪತ್ರಿಕೆಯಲ್ಲಿ ಅವರು ಬರೆದಿದ್ದಾರೆ. ಅವು ಬರಿ ಸಿನಿಮಾ ಮಂದಿಯ ಬದುಕಿನ ಬಗೆಗಿನ ಕತೆಗಳು ಮಾತ್ರವಲ್ಲ, ನಮ್ಮ ಸಮಾಜದಲ್ಲಿ ನಡೆಯುವ ಅಧಿಕಾರದ ಅಂದರ್-ಬಾಹರ್ ಆಟದ ಕೆಲವು ಝಲಕ್‌ಗಳನ್ನು ತೋರಿಸುವ ಬರಹಗಳೂ ಆಗಿವೆ.

ಇನ್ನೊಬ್ಬ ಶಾರೂಕ್, ಮತ್ತೊಬ್ಬ ಬಿಗ್ ಬಚ್ಚನ್

ಮುಂಬೈಯ ಬಯಾಂದರಿನ ಇಕ್ಕಟ್ಟು ಓಣಿಯಲ್ಲಿ ಒಂದು ಸಾಮಾನ್ಯ ಅಪಾರ್ಟ್‌ಮೆಂಟ್. ಅಲ್ಲಿ ಒಂದು ಪುಟ್ಟ ಮನೆ. ಆ ಮನೆಯ ಪಡಸಾಲೆಯಲ್ಲಿ ಒಂದು ಹಳೆ ಕಂಪ್ಯೂಟರ್ ಮತ್ತು ಒಂದು ಚೈನಾ ಟಿ.ವಿ.ಸೆಟ್ಟುಗಳು ತಾವೇ ಆ ಮನೆಯ ಅಮೂಲ್ಯ ಆಸ್ತಿ ಎಂಬಂತೆ ಗತ್ತಿನಲ್ಲಿ ಕೂತಿವೆ. ಅವುಗಳನ್ನುಳಿದು ಅಲ್ಲಿ ಬೇರೇನೂ ಹೆಚ್ಚು ವಸ್ತುಗಳಿಲ್ಲ, ಅಲ್ಲಿ ಒಂದು ಅಗ್ಗದ ಸೋಫಾದ ಮೇಲೆ ಶಾರೂಕ್ ಸಂದರ್ಶನ ಮಾಡಲಿಕ್ಕೆ ಬರಲಿರುವ ಅಯಾಜ್‌ಗೆ ಕಾಯುತ್ತಿದ್ದಾನೆ. ಅಯಾಜ್ ಬಂದೊಡನೆ ಎದ್ದು ಬಲವಾಗಿ ಕೈಹಿಂಡಿದು ಕುಲುಕುತ್ತಾನೆ. ಟಿ.ವಿ. ದೊಡ್ಡ ಗಂಟಲಲ್ಲಿ ಕಾರ್ಯಕ್ರಮ ಬಿತ್ತರಿಸುತ್ತಿರುವುದರಿಂದ, ಶಾರೂಕ್ ಮಾತಾಡಲು ಹೊರಗೆ ಹೋಗೋಣ ಎಂದು ಸೂಚಿಸುತ್ತಾನೆ. ಇಬ್ಬರೂ ಬೀದಿಗಿಳಿಯುತ್ತಾರೆ. ಬೀದಿಯಲ್ಲಿ ಶಾಲೆ ಮುಗಿಸಿ ಹೊರಟಿರುವ ಚೆಲ್ಲುಗಳು ಶಾರೂಕ್ ಕಡೆ ಒಮ್ಮೆ ನೋಡುತ್ತವೆ. ಆದರೆ "ಏ! ಹೇ! ಶಾರೂಕ್! ಶಾರೂಕ್!" ಎಂದು ಬೊಬ್ಬೆ ಹಾಕಿ ಮುತ್ತುವುದಿಲ್ಲ, ಆಟೋಗ್ರಾಫ್‌ಗೆ ಪೀಡಿಸುವುದಿಲ್ಲ, ಯಾಕೆಂದರೆ ಈ 'ಇನ್ನೊಬ್ಬ ಶಾರೂಕ್'ನನ್ನು ಅವು ದಿನವೂ ನೋಡುತ್ತವೆ. ಈಗ ಹೊರಬಂದದ್ದು ಸಿನಿಮಾ ಸೆಟ್‌ನಿಂದಲ್ಲ, 'ಇನ್ನೊಬ್ಬ ಶಾರೂಕ'ನ ವಾಸದ ಮನೆಯಿಂದ. ಅಲ್ಲಿ ತನ್ನ ಹೆಂಡತಿ ಮಕ್ಕಳೊಂದಿಗೆ, ಸೂಪರ್ ಸ್ಟಾರ್ ಶಾರೂಕ್ ಖಾನನ 'ಬಾಡಿ ಡಬಲ್' ಪ್ರಶಾಂತ್ ವಾಲ್ದೆ ವರ್ಷಾಂತರಗಳಿಂದ ಇದ್ದಾನೆ. ನೀವು ಶಾರೂಕನ XX ಪೇಂಟಿನ ಜಾಹಿರಾತು ನೋಡಿರಬಹುದು. ಅಲ್ಲಿ ಒಬ್ಬ ಸುಂದರಿ ಕಣ್ಣರಳಿಸಿ ಆಸೆಯಿಂದ ನೋಡುತ್ತಿರುವ ಹಾಗೆ ಪೇಂಟಿನ ಮಡುವಿನಿಂದ ಎದ್ದು ಬರುವವನು ಪ್ರಶಾಂತ್... ಕಟ್.. ಶಾಟ್ ಓಕೆ! ಮತ್ತೊಂದು ಫ್ರೇಂನಲ್ಲಿ ಸುಂದರಿಯ ಸೊಂಟ ಬಳಸಿ 'ನಿಮ್ಮ ಜೀವನವನ್ನು ರಂಗಾಗಿಸುವ ಬಯಕೆ ನಿಮಗಿಲ್ಲವೇ..' ಎಂದು ಸುಂದರಿಯನ್ನು ಹತ್ತಿರ ಅವಚಿಕೊಳ್ಳುವವನು ಸೂಪರ್ ಸ್ಟಾರ್ ಶಾರೂಕ್. 'ಇನ್ನೊಬ್ಬ ಶಾರೂಕ್' ಮೈನಿಮಿರುವ ಅಪಾಯಕಾರಿ ಸ್ಟಂಟ್ ಮಾಡಿ ಮೈಮಣ್ಣು ಮಾಡಿಕೊಂಡ ಮೇಲೆ, 'ಒಬ್ಬ ಶಾರೂಕ್' ಉಡುಪಿನ ಮೇಲಿನ ಮಣ್ಣನ್ನು ಸ್ಟೈಲಲ್ಲಿ ಕೊಡವಿಕೊಳ್ಳುತ್ತ ಬರುವಾಗ ಕ್ಯಾಮರದ ಲೆನ್ಸ್ ಹಿಗ್ಗಿಹಿಗ್ಗಿ ಸೂಪರ್ ಸ್ಟಾರ್‌ನನ್ನು ರಜತಪರದೆಯ ಮೇಲೆ ಬಿಂಬಿಸುತ್ತದೆ.

ಪ್ರಶಾಂತ್ ವಾಲ್ದೆ ದೊಡ್ಡ ನೃತ್ಯನಿರ್ದೇಶಕನಾಗುವ ಕನಸು ಇಟ್ಟುಕೊಂಡಿದ್ದ. ಸಾರ್ವಜನಿಕ ಮನೋರಂಜನ ಕಾರ್ಯಕ್ರಮಗಳಲ್ಲಿ ನೃತ್ಯ ಮಾಡತೊಡಗಿದ. ಜನ ಇವನು 'ಥೇಟು ಶಾರೂಕ್ ಖಾನನ ಹಾಗೆ ಇದ್ದೀಯ' ಎಂದು ಗುರುತಿಸಲು ತೊಡಗಿದ ಮೇಲೆ ಮಿಮಿಕ್ರಿ ಕಲಾವಿದನಾದ. ಇದ್ಯಾವುದು ಹೊಟ್ಟೆಪಾಡಿಗೆ ತಕ್ಕುದಲ್ಲವೆಂದು ಗೊತ್ತಾಗಿ ನಾಗಪುರದಲ್ಲಿ 4,500 ರೂಪಾಯಿ ಸಂಬಳಕ್ಕೆ ಸೈಬರ್ ಕೇಫ್ ಮ್ಯಾನೇಜರ್ ಕೆಲಸ ಮಾಡತೊಡಗಿದ. ಆದರೆ, ಕೆಲಸದಲ್ಲಿ ಮನಸ್ಸು ಕೂಡದು-ಇದು ತನ್ನ ಜಗತ್ತಲ್ಲ, ಅದು ಅಲ್ಲಿ ಮುಂಬೈನ ರಂಗೀಲ ರೀಲು ಲೋಕದಲ್ಲಿದೆ ಎಂಬ ಹಳಹಳಿಕೆ. ಯಾವಾಗಲೂ ಒಂದು ಕಾಲು ಹೊರಗೆ ಇಟ್ಟುಕೊಂಡವನಿಗೆ ಮಗಳನ್ನು ಮದುವೆ ಮಾಡಿಕೊಡುವಾಗ ಇವನ ಅತ್ತೆ-ಮಾವ ಖಡಕ್ ಆಗಿಯೇ ಕೇಳಿದರಂತೆ-"ನೋಡೋಕೆ ಶಾರೂಕ್ ಖಾನ್ ತರಹ ಇದ್ದೀಯ ಸರಿ. ಆದ್ರೆ ನಿನ್ನ ಮುಖ ನನ್ನ ಮಗಳ ಹೊಟ್ಟೆ ತುಂಬುಸ್ತಾ?" ವಿಚಿತ್ರ ಸಿನಿಮಾ ಲೋಕದಲ್ಲಿ ಒಂದು ಠಿಕಾಣಿ ಪಡೆಯುವ ಛಲ ಬಿಡದೆ, ಪ್ರಶಾಂತ ಹೆಂಡತಿಯನ್ನು ಪುಸಲಾಯಿಸಿ ಕೊನೆಯ ಒಂದು ಸಲ ಮುಂಬೈಗೆ ಹೋಗಿ ಪ್ರಯತ್ನ ಮಾಡುತ್ತೇನೆ ಎಂದು ನಾಗಪುರದಿಂದ ಮುಂಬೈ ರೈಲು ಹತ್ತಿದ. ಅವನ ಅದೃಷ್ಟ ಚೆನ್ನಾಗಿತ್ತು ಅನ್ನುತ್ತೆ. ಆಗತಾನೆ, ಶಾರೂಕನ 'ಡಬಲ್' ಆಗಿದ್ದವನೊಬ್ಬ, ಇನ್ನು ಈ ಬದುಕು ಸಾಕೆಂದು ಮುಂಬೈ ತೊರೆದು ಸುರತ್ ನಗರದಲ್ಲಿ ರಿಕ್ಷಾ ಓಡಿಸುತ್ತಿದ್ದ. ಬಾಲಿವುಡ್ ಹೊಸ 'ಡಬಲ್'ಗಾಗಿ ಪರೀಕ್ಷೆಗೆ ಕರೆಯಿತು. ವಾಲ್ದೆ ಹುಮ್ಮಸ್ಸಿಂದ ಹೋಗಿ ನೋಡ್ತಾನೆ, ಅಲ್ಲಿ ಹತ್ತಾರು 'ಇನ್ನೊಬ್ಬ ಶಾರೂಕ್'ಗಳು! ಪ್ರಶಾಂತ್ ಹಲ್ಲು ಕಚ್ಚಿ ಪರೀಕ್ಷೆಯಲ್ಲಿ ಗೆದ್ದನೇನೋ ಸರಿ. ಆದರೆ ಅಂದಿನಿಂದ 'ತಾನು ಪ್ರಶಾಂತ್ ವಾಲ್ದೆ' ಎಂಬ ಗುರುತನ್ನು ಅಳಿಸುತ್ತ ಹೋಗದೇ ವಿಧಿಯಿಲ್ಲದಾಯಿತು. ದಿನಂಪ್ರತಿ ಆತ ತನ್ನನ್ನು ಶಾರೂಕನ ಹೊಸ ಹೊಸ ವರಸೆಗಳಿಗೆ ತಕ್ಕ ಹಾಗೆ ಚಾಚೂತಪ್ಪದೆ ಹೊಂದಿಸಿಕೊಳ್ಳದೆ ಹೋದರೆ ಹೊಟ್ಟೆಗೆ ತಣ್ಣೀರು ಬಟ್ಟೆಯೇ ಗತಿ. ಪ್ರಶಾಂತನಿಗೆ 'ತಾನು' ಕಳೆದುಹೋಗುತ್ತಿರುವುದರ ಬಗ್ಗೆ ಅಷ್ಟೇನೂ ದುಃಖವಿದ್ದಂತಿಲ್ಲ. "ಶಾರೂಕ್ ದೇವರ ಹಾಗೆ ನನ್ನ ಜೀವನದಲ್ಲಿ ಬಂದಿದ್ದಾರೆ. ನಾನು ಅವರ ಹಾಗೆ ಇರದೆ ಹೋಗಿದ್ದರೆ ಈ ಪ್ರಶಾಂತ್ ವಾಲ್ದೆಗೆ ಜನ ಕವಡೆ ಕಿಮ್ಮತ್ತೂ ಕೊಡುತ್ತಿರಲಿಲ್ಲ, ಶಾರೂಕರಿಂದ ನನ್ನ ಸಂಸಾರ ಎರಡು ಹೊತ್ತಿನ ಊಟ ಕಾಣುವಂತಾಗಿದೆ. ಮೇಲಾಗಿ ಶಾರೂಕ್ ಖಾನ್ ನನ್ನನ್ನು ಪರಿಚಯಸ್ಥನ ಸೌಜನ್ಯದಲ್ಲಿ ನಡೆಸಿಕೊಳ್ಳುತ್ತಾರೆ. ಎಷ್ಟು ಜನಕ್ಕೆ ಈ ಚಾನ್ಸ್ ಇದೆ ಹೇಳಿ! ನಾನು ಪ್ರಶಾಂತ್ ವಾಲ್ದೆಯಾಗಲು ಹೋದರೆ ಗತಿಹೀನನಾಗಿ ಸಾಯಬೇಕಷ್ಟೆ". ಎನ್ನುತ್ತಾನೆ.

ಆದರೆ, ಈ ನಮೂನೆಯ ತೃಪ್ತಿ ಎಲ್ಲ 'ಇನ್ನೊಬ್ಬ'ರಲ್ಲೂ ಇರದು . ವೃದ್ಧ ಅಮಿತಾಭ್ ಬಚ್ಚನನ 'ಡಬಲ್' ಆಗಿರುವ 57 ವರ್ಷದ ರಾಜಕುಮಾರ್ ಭಕ್ತಿಯಾನಿಗೆ ತನ್ನ ಕಳೆದುಹೋದ ಸ್ವಂತಿಕೆಯ ಬಗ್ಗೆ ನೋವಿದೆ. ತಾನು ದೇಶದ ಸ್ವಾತಂತ್ರ್ಯಕ್ಕಾಗಿ ಹೋರಾಡಿದ ತಂದೆಯ ಮಗ ಎಂಬ ಗುರುತೂ ಮರೆಯಾಗಿಹೋಗಿದೆ, ತಾನೇನಿದ್ದರೂ ಈಗೊಬ್ಬ ಕೋಡಂಗಿ ಎಂಬ ವಿಷಾದ ಅವರಲ್ಲಿ ಊರಿಬಿಟ್ಟಿದೆ. ಭಕ್ತಿಯಾನಿ ಅಯಾಜ್‌ಗೆ ಹೇಳಿದ ಈ ಮಾತುಗಳನ್ನು ಕೇಳಿ: "ನಾನೀಗ ಮುಖವಾಡ ತೊಟ್ಟುಬಿಟ್ಟರೋ ಮನುಷ್ಯ ಅದೇ ಈಗ ನನ್ನ ಮುಖವಾಗಿಬಿಟ್ಟಿದೆ. ನಾನು ಯಾರು ಎಂಬ ಪ್ರಶ್ನೆ ನನ್ನನ್ನು ಕಾಡುವುದಿಲ್ಲ. ದಾರಿಯಲ್ಲಿ ಹೋಗುವಾಗ ಜನ 'ಓಯ್, ಬೋಲ್ ಬಚ್ಚನ್, ಓಯ್ ಡೂಪ್ಲಿಕೇಟ್' ಎಂದು ಕೆಟ್ಟದಾಗಿ ಚುಡಾಯಿಸುತ್ತಾರೆ. ಒಮ್ಮೊಮ್ಮೆ ರೇಗುತ್ತದೆ. ಆದರೆ ತೋರಿಸಿಕೊಳ್ಳೋದಿಲ್ಲ, ಎಷ್ಟಿದ್ದರೂ ನಾನು ಒಬ್ಬ ವೃತ್ತಿಪರ ಮನುಷ್ಯ ಅಲ್ವಾ. ಸಿಟ್ಟು ಮಾಡ್ಕೊಂಡ್ರೆ ಆಗಲ್ಲ, ಇವನು ಇಂಥವನು, ಇಂಥ ತಂದೆ-ತಾಯಿಗಳ ಮಗ' ಅಂತ ಕರೆಸ್ಕೋಳ್ಳೋಕೆ ಯಾರಿಗೆ ಇಷ್ಟ ಇರಲ್ಲ ಹೇಳಿ. ಆದರೆ ನಮ್ಮಂಥವರಿಗೆ ಬದುಕುಳಿಯೋದೇ ಕಷ್ಟವಾಗಿದೆ. ಹೆಂಡತಿ ಮಕ್ಕಳನ್ನ ಹೇಗೋ ಹೊಂದಿಸಿಕೊಂಡು ಸಾಕಿದ್ರೆ ಅದೇ ದೊಡ್ಡದು. ನನ್ನತನವನ್ನು ನೆಕ್ಕುತ್ತ ಕೂತ್ಕೋಳೊಕೆ ಟೈಮೆಲ್ಲಿದೆ ಸ್ವಾಮಿ?"

ಜಾಹಿರಾತುಗಳಲ್ಲಿ ಅವಕಾಶ ಸಿಕ್ಕರೆ 'ಡಬಲ್'ಗಳಿಗೆ ಐದರಿಂದ ನಲವತ್ತು ಸಾವಿರದವರೆಗೆ ಕಮಾಯಿಯಾಗುತ್ತದೆ. ಸಿನಿಮಾಗಳಲ್ಲಿ ಯಾವ ಸೀನಲ್ಲಿ 'ಇನ್ನೊಬ್ಬ'ನಾಗಿ ನಟಿಸಬೇಕು ಎಂಬುದರ ಮೇಲೆ ದರ ನಿರ್ಧಾರವಾಗುತ್ತದೆ. ಹೀಗೇ ಬಂದು ಹಾಗೇ ಹೋದರೆ ಕಮ್ಮಿ, ಮೈಮುರಿದುಕೊಳ್ಳುವ ಸಾಹಸ ದೃಶ್ಯಗಳಾದರೆ ಚೂರು ಜಾಸ್ತಿ. ಆದರೆ ಇವರು ಮೈಯೆಲ್ಲ ಕಣ್ಣಾಗಿಸಿಕೊಂಡು ಆ 'ಒಬ್ಬ' ತಾರೆ ತನ್ನ ಸ್ಟೈಲ್, ಮಾತಿನ ವರಸೆ, ದೇಹದ ರೂಪಗಳಲ್ಲಿ ಯಾವ ಸೂಕ್ಷ್ಮ ಬದಲಾವಣೆಗಳನ್ನು ತಂದುಕೊಳ್ಳುತ್ತಾನೆ' ಎಂದು ಎಚ್ಚರದಿಂದ ಗಮನಿಸುತ್ತಿರಬೇಕು. ಅಮೀರ್ ಖಾನನ 'ಡಬಲ್' ಆಗಿರುವ ದೇವಾಶಿಶ್ ಘೋಷ್ ಪಾಡು ಯಾರಿಗೂ ಬೇಡ ಪಾಪ. ಅಮೀರನದು ಒಂದು ವರಸೆಯಲ್ಲ, ಒಮ್ಮೆ ಮೀಸೆ ಇದ್ದರೆ ಒಮ್ಮೆ ಇಲ್ಲ; ಒಮ್ಮೆ ತೊಪ್ಪೆ ಮೈ ಮತ್ತೊಮ್ಮೆ 'ಗಜನಿ'ಯ ಸಿಕ್ಸ್ ಪ್ಯಾಕ್ - ಬೋಳು ತಲೆ! ಅನಿಲ್ ಕಪೂರನ 'ಇನ್ನೊಬ್ಬ' ಆರೀಫ್ ಖಾನನಿಗೆ ಅನಿಲನ ಮಾತಿನ ವರಸೆಯೇ ದೊಡ್ಡ ತಲೆನೋವಾಗಿತ್ತು; ಏನು ಮಾಡಿದರೂ ಕರಗತವಾಗುತ್ತಿರಲಿಲ್ಲ, ಒಬ್ಬ ಖ್ಯಾತ ಮಿಮಿಕ್ರಿ ಕಲಾವಿದ 'ಅಮಿತಾಭ್ ಮಾತಿನ ವರಸೆಗೆ ವಿನೋದ್ ಖಾನನ ವರಸೆ ಸೇರಿಸಿದರೆ ನಿಂಗೆ ಅನಿಲ ಕಪೂರನ ಮಾತಿನ ವರಸೆ ಸಿಗುತ್ತದೆ' ಎಂಬ ಸಲಹೆ ಕೊಟ್ಟ ಮೇಲೆ ಪರಿಸ್ಥಿತಿ ಸುಧಾರಿಸಿತು. ಆದರೆ ಜನ ತಮ್ಮನ್ನು 'ಡೂಪ್ಲಿಕೇಟ್' ಅನ್ನುತ್ತಾರೆ ಅಂತ ಆರೀಫ್‌ಗೆ ಭಯಂಕರ ಬೇಜಾರು. "ಜನ ಮರ್ಯಾದೆ ಕೊಡೊ ಸಭ್ಯತೆ ಕಳ್ಕೊಂಡು ಬಿಟ್ಟಿದ್ದಾರೆ ಕಣ್ರಿ. ಮೊದಲೆಲ್ಲ ಗೌರವಯುತವಾಗಿ ಜ್ಯುನಿಯರ್ ಅನಿಲ್ ಕಪೂರ್ ಅನ್ನೋರು-ಅದು ಮರ್ಯಾದೆ. ಈಗ ನೋಡ್ರಿ ಡೂಪ್ಲಿಕೇಟ್ ಅಂತಾರೆ! ಏನಾಗಿದೆ ಈ ಮಂದಿಗೆ" ಎಂದು ಆರೀಫ್ ನೊಂದು ಹೇಳುತ್ತಾನೆ.

ಮುಂಬೈ ಸಿನಿಮಾರಂಗದಲ್ಲಿ ಪುರುಷ ತಾರೆಯರಿಗೆ 20-30 ಜನ 'ಡಬಲ್'ಗಳಿದ್ದಾರೆ. ಆದರೆ ಖ್ಯಾತ ನಾಯಕಿಯರಿಗೆ 'ಇನ್ನೊಬ್ಬಾಕೆ' ಇಲ್ಲವೇ ಇಲ್ಲ ಎನ್ನೋಷ್ಟು ಕಡಿಮೆ! ಹೇಮಮಾಲಿನಿಯ 'ಇನ್ನೊಬ್ಬಳಾಗಿ' ಸೀಮ ಮಾಲಿನಿ ಎಂಬಾಕೆ ಇದ್ದದ್ದು ಒಂದು ಅಪವಾದ. ಥೇಟು ಐಶ್ವರ್ಯ ರೈಯಂತಿರುವ ಸ್ನೇಹಾ ಉಳ್ಳಾಲ್ ಸಲ್ಲೂಭಾಯಿ ಜೊತೆ ನಾಯಕಿಯಾಗಿ ನಟಿಸಿದಳು. ನಾಯಕಿಯೇ ನಾಯಕನ ನೆರಳಾಗಿ ಪಾತ್ರ ನಿರ್ವಹಿಸಬೇಕಿದ್ದ ಕಾಲದಲ್ಲಿ, ನೆರಳಿಗ್ಯಾಕೆ ನೆರಳು ಎಂಬ ವ್ಯವಹಾರ ಬುದ್ಧಿಯೋ, ನಾಯಕಿ ಪ್ರಧಾನ ಚಿತ್ರಗಳಲ್ಲೂ ಪಾತ್ರ ಪೋಷಣೆಗೆ ಡಬಲ್ಲುಗಳ ಅವಶ್ಯಕತೆ ಇಲ್ಲದಿರುವಂತೆ ಪಾತ್ರ ನಿರೂಪಣೆ ಇರುವುದರಿಂದಲೋ, ಏನೋ- ಡಬಲಪ್ಪಗಳಿದ್ದಂಗೆ ಡಬಲಮ್ಮಗಳಿಲ್ಲ, ಯ... ಎಂದು ಗಂಭೀರ ಸಂಸ್ಕೃತಿ ವಿಮರ್ಶಕರಲ್ಲದಿದ್ದರೂ, ನಮ್ಮ... ಲೂಸ್ ಸಿನಿಮಾ ಶಪೋರಿಗಳು ಯೋಚಿಸಬೇಕಾ... ವಿಷಯವೇ.

ಐ.ಎಸ್.ಜೋಹರ್ ಎಂಬ ನಟ ನಿರ್ದೇ... 1950-90ರವರೆಗೆ ಬಾಂಬೆ ರೀಲ್ ರಂಗೀಲ ದುನಿಯಾ... ಸಿನಿಮಾ ಮಾಡುತ್ತಿದ್ದ ಐದು ಮದುವೆ, ನಾಲ್ಕು ಡೈವೋ... ಮಾಡಿಕೊಂಡಿದ್ದ ಈ ಪಾರ್ಟಿ ಕಂಡಾಪಟ್ಟೆ ಲೂಸು ಅ... ಸಿನಿಮಾ ಮಂದಿ ಆಡಿಕೊಳ್ಳುತ್ತಿದ್ದರು. ದೇಶವಿಭಜನೆ... ನಂತರ ಭಾರತಕ್ಕೆ ಬಂದು, ಜೋಹರ್ ಸಣ್ಣಪುಟ್ಟ ಕೆ... ಮಾಡಿಕೊಂಡು ಬದುಕಲು ಯತ್ನಿಸಿದ್ದ. ಆದರೆ, '... ಮಾ ಕೀ.. ಇದೆಲ್ಲ ನಂಗಲ್ಲ' ಅಂತ ಬಾಂಬೆ ರಂಗಿ... ದುನಿಯಾಕ್ಕೆ ನುಗ್ಗಿದ. ಆತ ಸಿನಿಮಾ ನಿರ್ದೇಶನ ಮಾಡು... ಹೊಸತರಲ್ಲಿ, ಈಗ ದಿಗ್ಗಜ ಎನಿಸಿಕೊಂಡಿರುವ ಯ... ಚೋಪ್ರ ಆತನಿಗೆ ಸಹಾಯಕನಾಗಿ ಕೆಲಸ ಮಾಡಿ... ಜೋಹರ್ ಮಾಡಿದ್ದೆಲ್ಲ 'ಬಿ-ಗ್ರೇಡ್' ಸಿನಿಮಾ-ಅಂದ... ಕಡಿಮೆ ಖರ್ಚಿನಲ್ಲಿ, ಅಗ್ಗದ ನಟರನ್ನು ಹಾಕಿಕೊಂ... ಕಲಾವಂತಿಕೆಯ ಬಗ್ಗೆ ತಲೆಕೆಡಿಸಿಕೊಳ್ಳದೆ ಅವಸರ... ಸುತ್ತಿದ ರೀಲು- ಎಂದು ಮೂಗು ಮುರಿಯುವವ... ಜಾಸ್ತಿ. ಆದರೆ ಸಭ್ಯ ಸಂಸ್ಕೃತಿ, ಸಾಮಾಜಿಕ ಶೀಲವಂತಿಕೆ... ಡಂಬಾಚಾರಗಳಿಗೆ ಮುಲಾಜಿಲ್ಲದೇ ಹೊಡೆಯುವು... ಜೋಹರನ ವರಸೆ. ಭಾರತ ಸಿನಿಮಾರಂಗದ ಅತ್ಯ... ಯಶಸ್ವಿ ಚಿತ್ರ ಎಂದು ಕರೆಯಲಾಗುವ 'ಶೋ... ಭರಾಟೆಯಿಂದ ಹಣ ಕವಾಯಿಸುತ್ತಿದ್ದಾ... ಐ.ಎಸ್.ಜೋಹರ್ ಅದನ್ನು ಲೇವಡಿ ಮಾಡುವ ವರಸೆಯ... 'ಪಾಂಚ್ ರೈಫಲ್ಸ್' ಅನ್ನೋ ಸಿನಿಮಾ ಮಾಡಿದ. ಚಿತ್ರದ ನಾಯಕರು ಯಾರು ಗೊತ್ತಾ? ರಾಕೇಶ್ ... ಹಾಗು ಶಾಹಿ ಕಪೂರ್ ಎಂಬ ನಾಮಾಂಕಿತ ತಾರೆಯ... ಡಬಲ್‌ಗಳು. ಈ ಸಿನಿಮಾ ಸಣ್ಣ ಪಟ್ಟಣ ಮತ್ತು ಹಳ್ಳಿ... ಟೂರಿಂಗ್ ಟಾಕೀಸುಗಳಲ್ಲಿ ಭರ್ಜರಿಯಾಗಿ ಓಡಿತು. ... ಸಿನಿಮಾದ 'ಜೂಂಬರಾಬರ್ ಜೂಂ ಶರಾಬಿ' ಹಾಡಂತ... ಆಗ ಹಿಂದಿ ಸಿನಿಮಾ ಪ್ರೇಮಿಗಳ ಮೆಚ್ಚಿನ ರೇಡಿಯ... ಕಾರ್ಯಕ್ರಮವಾಗಿದ್ದ 'ಬಿನಾಕ ಗೀತ್ ಮಾಲ'ದಲ್ಲಿ ಸು... 12 ವಾರ 'ಚೋಟಿ'ಯಲ್ಲಿತ್ತು (ಅಂದರೆ ಮೊದ... ನಂಬರ್‌ನಲ್ಲಿತ್ತು). ನಂತರ ತುರ್ತುಪರಿಸ್ಥಿತಿಯ ಕಾಲದ... ಸಂಜಯ್ ಗಾಂಧಿಯ ಎಡವಟ್ಟು ದಬ್ಬಾಳಿಕೆಯ 'ನ... ಬಂಧಿ'. ಕಾರ್ಯಕ್ರಮವನ್ನು ಕಟುವಾಗಿ ಲೇವಡಿ ಮಾಡು... 'ನಸ್ ಬಂಧಿ' ಅನ್ನೋ ಕಾಮಿಡಿ ಸಿನಿಮಾವನ್ನು ಜೋಹ... ನಾಲ್ಕು ಜನ ಡಬಲ್‌ಗಳನ್ನು ಹಾಕಿಕೊಂಡು ನಿರ್ಮಿಸಿ... ಸಿನಿಮಾ ಮೂರು ವರ್ಷ ಬ್ಯಾನ್ ಆಗಿ, ನಂತರ ತೆರೆಕಂ... ಹಿಟ್ಟಾಗಿತ್ತು. ಭಾರತ ಚಿತ್ರರಂಗದಲ್ಲಿ ಡಬಲ್‌ಗಳ... ನಾಯಕರನ್ನಾಗಿಸಿದ ನಿರ್ಮಾಪಕ ನಿರ್ದೇಶ... ಐ.ಎಸ್.ಜೋಹರ್ ಒಬ್ಬನೆ ಎಂದು ಕಾಣುತ್ತದೆ.

ಮಹಾನ್ ಕಲಾವಿದನಲ್ಲದಿದ್ದರೂ ರಂಗೀಲ ರಾಜ್ಯದ ಚೌಪ... ರಾಜಗಳ ವಿರುದ್ಧ ಈ ಬಗೆಯಲ್ಲಿ ವಕ್ರ ಬಂಡಾ... ತೋರುವ ಗುಣ ಜೋಹರನಲ್ಲಿತ್ತು-ನಿರ್ಗತಿಕರೂ ಸಖ... ಟೈಟಾಗಿ ದೊಡ್ಡ ಮನುಷ್ಯರ ಹಾದರಗಳನ್ನ ಬೀದಿಯ... ಹರಾಜಿಗೆ ಹಾಕ್ತರಲ್ಲ ಹಾಗೆ. ಹೊಟ್ಟೆಹೊರೆಯೋಕೆ ಒ... ಸೂಪರ್ ಸ್ಟಾರನ 'ಇನ್ನೊಬ್ಬ'ನಾಗುವುದು ಯಾ... ನಮೂನೆಯಲ್ಲೂ ಪ್ರಶಾಂತ್, ಆರೀಫ್, ದೇವಾಶಿ... ಭಕ್ತಿಯಾನಿಗಳ ಮನಸಾರೆ ಆಯ್ಕೆಯಲ್ಲ, ರೀಲುರಂಗೀಲ... ದೌಲತ್ತಿನ ನಗರದಲ್ಲಿ ಅಡಗಿರುವ ಹಿಂಸೆ. ಜೋಹರ... ಥರವಾದರೂ ಅದಕ್ಕೊಂದು ಕಲ್ಲು ಹೊಡಿಬೇಕ... ಯಾಕೆಂದರೆ ಈ ನಮೂನೆಯ ಬದುಕಿನ ಹಿಂಸೆಗಳ... ಅನುಭವಿಸಿ, ಮಜ್ಜಿಗೆ ಕಡೆಕಡೆದು ಬೆಣ್ಣೆ ತೆಗೆದ ಹಾ... ಸರ್ವಾಧಿಕಾರಿಯೊಬ್ಬನ 'ಡಬಲ್'ನನ್ನು ಜಗದ ಎಲ್ಲ ಬಗೆ... ಸರ್ವಾಧಿಕಾರದ ವಿರುದ್ಧ ಧ್ವನಿ ಎತ್ತಬಲ್ಲ ಜನನಾಯಕ... ಪ್ರತಿಮೆಯಾಗಿ ಕಟ್ಟುವ ಅಸಾಧಾರಣ ಕಲೆ ಚಾರ್ಲಿ... ಮಾತ್ರ ಇರುವುದು. ನೆನಪಿದೆಯಾ 'ದಿ ಗ್ರೇಟ್ ಡಿಕ್ಟೇಟರ್'...

ಅಯಾಜ್ ಷೇಕರ 'ಟ್ರಾಜಿಕ್ ಹಿರೋಸ್' ಇಷ್ಟ... ಯೋಚಿಸುವಂತೆ ಕಿಕ್ ಕೊಡುತ್ತದೆ. ಸಿನಿಮಾ ಮಂದಿ... ಬಗ್ಗೆ ಬರೆಯೋದು ಹಗುರದ ಮಾತಲ್ಲ.

ದಸರಕೆ ಮದ್ಲಿನ ಕಳೇನೆ ಇಲ್ಲ ಕಂಡ್ಯ

ಬಯಲುಸೀಮೆ ಕಟ್ಟೆಪುರಾಣ

• ಬಿ.ಚಂದ್ರೇಗೌಡ

...ಟಕ್ಕೆ ಬರುತ್ತಿದ್ದಂತೆ ಜುಮ್ಮಿ,
"...ಸರ ನೋಡಕ್ಕೆ ಹೋಗದಿಲವೇನ್ಲ?" ಎಂದಳು.

"...ಸರ ನೋಡಕ್ಕೆ ನಾನು ಯಾವಾಗೋಗಿದ್ದಿನಕ್ಕ. ...ಬ ದಸರದಲ್ಲಿ ನನಿಗೇನು ಕೆಲಸ" ಎಂದ.

"...ಸರಕೆ ಮದ್ಲಿನ ಕಳೇವಿಲ್ಲ ಕಂಡ್ಯ" ಎಂದ ಕಾಳಮಾವ.

"...ಯಾವತ್ತು ಮೈಸೂರು ಮಾರಾಜನ್ನ ಇಳಿಸಿ ...ನಿಮ್ಯಾಕೆ ಚಾಮುಂಡಿ ಕುಂಡ್ರಿಸಿದ್ರೊ ಅವತ್ತೇ ಆದರ ...ಯೋಯ್ತು ಕಂಡ್ಯ" ಎಂದ ಸೀರ.

"...ಕಿಮಾಕ್ರಸಿಲಿ ರಾಜನ್ನ ಮ್ಯರಸಕ್ಕಾದತೆ ಚಿಗಪ್ಪ?"

"...ಲ್ಲ, ಹುಟ್ಟುಕಳ್ಳ ನನ್ನಮಕ್ಕಳು ಯಮ್ಮೆಲ್ಲೆ ಮೆರಸು. ...ಕಣೊ ಮಾರಾಜು ಅವುನಷ್ಟಕವುನು ದಸರ ...ತಿದ್ದ. ಸಿರಿಗೆರೆ ಸ್ವಾಮಿ ತರಳಬಾಳು ಮಾಡಿಕಂಡು ...ಮ್ಯರವಣಿಗೆ ಮಾಡಿಕಳದಿಲವೆ ಅಂಗೆ ನಮ್ಮ ...ದನೂ ಮಾಡಿಕತಿದ್ದ. ಅದ ನಿಲ್ಸಿಸಿ ಇವತ್ತು ದಸರಕೆ ...ಕಳೆನೂ ಇಲ್ದಂಗೆ ಮಾಡಿದರಲ್ಲ ಹೇಳು" ಎಂದ

"...ಭೈರಪ್ಪ ದಸರ ಉದ್ಘಾಟನೆ ಮಾಡಿದ್ರೆ ವಳ್ಳೆ ಕಳೆ ...ಕಣೊ ಉಗ್ರಿ."

"...ಭೈರಪ್ಪ ಯಾರ್ಲ?"

"...ಮ್ಮ ಸಂತೆ ಶಿವರದ ಭೈರಪ್ಪ ಗೊತ್ತಿಲವೆ ದೊಡಪ್ಪ. ...ಮೂಟೆ ಕಾದಂಬರಿ ಬರದವುನೆ. ಅದ್ಕೆ ಈ ...ಗಳು ಹೋಗಿ ಈ ವರ್ಸ ನೀನೆ ಸರಿ ಕಣಪ್ಪ ದಸರ ...ಟನೆ ಮಾಡಕ್ಕೆ ಅಂತ ಕರದಿದ್ರು."

"...ವುನ್ಯಾಕೆ ಕರದಿದ್ರೂ?"

"...ಈ ಸತಿ ಬರಗಾಲ ಬಂದದಲ್ಲವೆ ದೊಡಪ್ಪ, ಈ ...ನೂ ಬರಗಾಲದಲ್ಲಿ ಹುಟ್ಟಿ, ಕಾಲರ ಕಾಲ್ದಲ್ಲಿ ..., ಪ್ಲೇಗಿನ ಕಾಲ್ದಲ್ಲಿ ಬದುಕಿ ಬಂದೋನಂತೆ. ಅದ್ಕೆ ...ಮನುಸ ಮಾತ್ರ ಈ ಬರಗಾಲದ ದಸರ ಉದ್ಘಾಟನೆ ...ಕ್ಕೆ ಸೂಟಬಲ್ ಪರಸನ್ನು ಅಂತ ಮೈಸೂರಿನ ...ಬತ್ತಿ ಗಿರಾಕಿ ಆಯ್ಕೆ ಮಾಡಿದ್ದ."

"...ಊದುಬತ್ತಿ ಗಿರಾಕಿ ಯಾರ್ಲ?"

"...ಅವುನು ರಾಮದಾಸ ಅಂತ ಕಣಕ್ಕ, ಆಕ್ಚುವಲಿ ಅವುನು ...ಮಂತ ಅಂತ ಹೆಸರಿಟಗಬೇಕಾಗಿತ್ತು. ಯಾಕಂದ್ರೆ ...ಮಂತ ರಾಮನಿಗೆ ಹ್ಯಂಗೆ ನಿಷ್ಠಾವಂತನೊ ಅಂಗೆ ...ಬಿಜೆಪಿ ನಿಷ್ಠಾವಂತ. ಇವುನ ಕಡಿಂದ ಮೈಸೂರು ...ರ ಕಿಂಡದೋಗ್ಯದೆ. ದುಡ್ಡು ಸುರುವಾದ್ರು ಕಾಮಗಾರಿನೆ ...ಲ್ಲ ಅಂದ್ರೆ ಇವುನ್ಯಂಥ ಕೋಡಂಗಿ ಲ್ಯಕ್ಕ ಹಾಕು."

"...ಕ್ಯಲಸ ಮುಗದಿಲ್ಲ ಅಂದ್ರೆ ಅದಿಂಗೆ ಕಣೊ. ...ನ್ಯವಾಗಿ ಕ್ಯಲಸ ಡಿಲೆ ಆಗದು ಕಮಿಷನ್ ವಿಷಯದಲ್ಲಿ ...ವ್ವಾಗ. ಈಗ್ಲೂ ಅಂಗೆ ಆಗಿರಬೌದು."

"...ಹಂಡ್ರೆಡ್ ಪರಸೆಂಟು ನಿಜ ಕಣೊ ಉಗ್ರಿ. ಅದಕಿಂತ ...ಮುದಾಸನ್ನ ಮೈಸೂರಿಗ್ಯಲ್ಲ ಊದುಬತ್ತಿ ಸಪ್ಲೆ ಮಾಡಕ್ಕೆ ...ಬೇಕಿತ್ತೆ ಹೊರತು ಅವುನಿಗೆ ದಸರದ ಉಸ್ತುವಾರಿ ...ಮಾರದಿತ್ತು. ಕೊಟ್ಟ ಕಾರಣಕ್ಕೆ ಅವುನು ಭೈರಪ್ಪನ್ನೆ ಕರದು ಮಾನಕಳಕಂಡ."

"ಮಾನ ಯಾಕ್ಲ ಕಳಕಂಡ?"

"ನೋಡಕ್ಕ, ಸಾಮಾನ್ಯವಾಗಿ ದಸರ ಉದ್ಘಾಟನೆ ಮಾಡೋ ವ್ಯಕ್ತಿ ಭಾಳ ವಿಶಾಲವಾದ ಮೈಂಡಿನ ದೊಡ್ಡ ಮನುಸ ಆಗಿರಬೇಕು."

"ಅಂಗಾದ್ರೆ ಕಳೆದ ಸತಿ ಪೇಜಾವರ ಮಾಡಿದನಲ್ಲ ಅವುನ್ಯಾವ ದೊಡ್ಡಮನ್ಸ?"

"ನೋಡೋ ಉಗ್ರಿ, ಪೇಜಾವರ ಎಷ್ಟೇ ಆಗ್ಲಿ ಸ್ವಾಮಿ, ಉಗ್ರಿ ಬ್ರಹ್ಮಚಾರಿ ಆದ್ರೂ ನಾಟಕಕ್ಕಾದ್ರು ಹರಿಜನರ ಕೇರಿಗೋದೋನು. ಅದೇ ಈ ಭೈರಪ್ಪನಿಗೆ ಸಾಬರ ಕಂಡ್ರಾಗದಿಲ್ಲ. ಹರಿಜನರ ಕಂಡ್ರೆ ಅಷ್ಟಕಷ್ಟೆ. ಶೆಟ್ರು ಕಂಡ್ರೆ ಪ್ರೀತಿ. ಆದರಲ್ಲೂ ಆರೆಸೆಸ್ಸಿನೋರಂತೂ ಅವುನಿಗೆ ಬಂಧುಬಳಗ ಇದ್ದಂಗೆ. ಇಂತ ಮನುಸುನ್ನ ದಸರ ಉದ್ಘಾಟನೆ ಮಾಡು ಅಂತ ಕರದವುನಲ್ಲಾ ಅವುನಿಗೇನನ್ನಬೇಕು?"

"ಅಷ್ಟುಕೂ ಅವುನು ಬರಲಿಲ್ಲವಲ್ಲ ತಗೊ."



"ಯಾಕೆ ಬರಲಿಲ್ಲ ಗೊತ್ತೇನೊ? ಇಡೀ ರಾಜ್ಯದಲ್ಲಿ ನನ್ನಂಥೋರು ಸರಿಯಾಗಿ ಉಗುದ್ರು. ಅದರಲ್ಲೂ ಮೈಸೂರಲ್ಲಿ ಭೈರಪ್ಪನಂಥೋರು ಬಂದ್ರೆ ವಿಚಾರಿಸಿಗಳಕ್ಕೆ ಜನವುರೆ. ಅದು ಗೊತ್ತಾಗಿ ಪರಾರಿಯಾದ."

"ಈಗ್ಯಾರು ಮಾಡಿದುರ್ಲ?"

"ಈಗ ಬಿಜಾಪುರದ ಕಡೆ ಸಿದ್ಧೇಶ್ವರ ಸ್ವಾಮಿ ಅಂತ ಮಾಡಿದ್ರು, ದೊಡಪ್ಪ, ಇದೊಂತರ ಸರಿ. ಮೈಸೂರು ಪಂಕ್ಷನ್ನಿಗೆ ಬಿಜಾಪುರ, ಬೆಳಗಾಂ ಕಡಿಯೋರು ಬರೋದು, ಆ ಕಡೆ ಕಾರ್ಯಕ್ರಮಕ್ಕೆ ಈ ಕಡಿಯೋರು ಹೋಗದು ಯಾವತ್ತಿಗೂ ವಳ್ಳೆದ್ದು. ಇಲ್ಲ ಅಂದ್ರೆ ಅವುರತ್ತಗೆ, ನಾವಿತ್ತಗೆ ಅನ್ನಂಗಾಯ್ತಿವಿ."

"ಬೆಳಗಾಮಲ್ಲೇನೊ ವಿಧಾನಸೌಧ ಕಟ್ಟಿದರಂತೆ ನಿಜವೆ?"

"ವಿಧಾನಸೌಧ ಅಲ್ಲ ದೊಡಪ್ಪ, ಸುವರ್ಣ ಸೌಧ ಅಂತ ಕಟ್ಟಿದ್ರು. ಉದ್ಘಾಟನೆನೂ ಆಯ್ತು, ಸಾಮಾನ್ಯವಾಗಿ ಸರ್ಕಾರಿ ಕಟ್ಟಡ ಬೇಗ ಆಯ್ತವೆ. ಯಾಕಂದ್ರೆ, ರಾಜಕಾರಣಿಗಳಿಗೆ ಕಮಿಷನ್ ಬರೋದ್ರಿಂದ ಬೇಗ ಹಣ ಬಿಡುಗಡೆ ಆಗುತ್ತೆ, ಬೇಗ ಉದ್ಘಾಟನೆ ಆಯ್ತವೆ. ಅದೇ ಜನಗಳಿಗೆ ಬೇಕಾದ ಕ್ಯಲಸ ಜಲ್ದಿ ಆಗದಿಲ್ಲ, ಹರೆಗ್ ಜಾಂಪಲ್ ಕುಡಿಯೋ ನೀರು, ರೈತರಿಗೆ ಗೊಬ್ಬರ, ರಸ್ತೆ ಕಾಮಗಾರಿ ಇಂತವ್ಯಲ್ಲ ಡಿಲೆ ಆಯ್ತವೆ."

"ಅಂಗರೆ ಇದಾನ ಸಭೆ ಅಲ್ಲೂ ನ್ಯಡಿತದೆ ಅನ್ನು."

"ಎಲ್ಲಿ ನ್ಯಡುದ್ರೂ ಅಷ್ಟೇ ದೊಡ್ಡಪ್ಪ, ಅಲ್ಲೂ ಚರ್ಚೆ ಮಾಡದ ಬುಟ್ಟು ಸಭೆಯಲ್ಲಿ ಬ್ಲೂ ಫಿಲಂ ನೋಡೊ ಗಿರಾಕಿಗಳವುರೆ. ಕರ್ನಾಟಕದ ಜನಕೆ ಏನು ಬೇಕು, ಬ್ಯಾಡ ಅನ್ನದ ಓದಿಕಳದೆ ಸುಮ್ಮನೆ ಬಂದು ನಿದ್ದೆ ಮಾಡೊ ಸದಸ್ಯರವುರೆ. ಇಂಥೋರಿರಗಂಟ ನೀನು ಎಲ್ಲಿ ಸಭೆ ಮಾಡಿದ್ರು ಅಷ್ಟೆಯಾ."

"ಆದ್ರು ಆ ಕಡೆ ಭಾಗದ ಜನಕೆ ಅನಕೂಲ ಕಣೊ" ಎಂದ ಉಗ್ರಿ.

"ಅನುಕೂಲ ಯಾವಾಗ ಅಂದ್ರೇ, ಆ ಕಡೆ ಜನ ಬೆಂಗಳೂರುಗಂಟ ಬಂದು ಮಾಡಿಸಿಗತ್ತಿದ್ದ ಕೆಲಸ ಅಲ್ಲೇ ಆಗದಾದ್ರೆ ಸರಿ ಕಣೊ. ಇಲ್ಲ ಅಂದ್ರೆ ನಮ್ಮ ಪಂಚಾತಿ ತರ ಅದೂ ಹಾಳಾಯ್ತದೆ."

"ಪಂಚಾತಿ ಎಲ್ಲಿ ಹಾಳಾಗಿದ್ದತ್ಲ?" ಎಂದಳು ಜುಮ್ಮಿ.

"ಅಕ್ಕ, ಜಾಸ್ತಿ ಮಾತಾಡಬ್ಯಾಡ. ನಜೀರಸಾಬ್ರು ಮಾಡಿದ್ರಲ್ಲ ಅಂಗಿದ್ದತೆ ನಿಮ್ಮ ಪಂಚಾಯ್ತಿ? ಅಧ್ಯಕ್ಷ ಆಗಿರೊರು ಚಿಕ್ಕ ಹರದೇಟಿಗೆ ಕಮಿಷನ್ ಕೇಳ್ತರೆ. ಮೊನ್ನೆಮೊನ್ನೆ ಬೀದಿಲಿದ್ದವ್ಯಲ್ಲ ಪಂಚಾತಿ ದ್ಯಸಿಂದ ಬಂಗಲೆ ಕಟಿಗಂಡವುರೆ. ಎಲ್ಲಿಂದ ಬತ್ತವ್ವ ದುಡ್ಡು? ಅಂಗೆ ನೀನು ಏನೇ ಮಾಡಿದ್ರೂ ಯಲ್ಲಾ ಹಾಳಾಯ್ತಾ ಅದೆ. ಈ ಬೆಳಗಾಂನಲ್ಲಿ ಕಟ್ಟಿರೊ ಸುವರ್ಣ ಸೌಧ ಸರಿಯಾಗಿ ಬಳಸಲಿಲ್ಲ ಅಂದ್ರೆ ಅಲ್ಲಿ ಕಸ ಹೊಡಿಯೋರಿಗೆ ಸಂಬಳ ಕಟಿಗಂಡು, ಲೈಟ್‌ಬಿಲ್ ಕಟಿಗಂಡು ಇರಬೇಕಾಯ್ತದೆ. ಆಗ ಮಾರಾಟಿ ಜನ ತಿಗ ಬಡಕಂಡು ನಗಾಡ್ತರೆ."

"ಆ ಮರಾಟಿ ಜನ ಯಾವತ್ತಿಗೂ ಅಂಗೆ ಕಂಡ್ಯ. ನಮಿಗೆ ತೊಂದ್ರೆ ಮಾಡ್ತಾ ಇರತರೆ."

"ಮರಾಟಿ ಜನ ವಳ್ಳೆ ಜನ ದೊಡಪ್ಪ, ಈ ಓಟಿನ ರಾಜಕಾರಣಿಗಳಿಂದ ಅವುರಂಗಾಗ್ಯವುರೆ. ಆಕ್ಚುವಲಿ, ಶಿವಾಜಿ ಮಾರಾಜನೇ ಕನ್ನಡಿಗ ಅನ್ನದಕ್ಕೆ ನಮ್ಮಲ್ಲಿ ದಾಖಲೆನೆ ಅವೆ. ಆದ್ರಿಂದ ನಾವು ಗ್ರ್ಯಾಂಡಾಗಿ ಶಿವಾಜಿ ಹುಟ್ಟದ ದಿನ ಮಾಡಿದ್ರೆ ಅರ್ಧ ಪ್ರಾಬ್ಲಂ ಸಾಲ್ವ್ ಆಯ್ತದೆ. ಏನು ಮಾಡ್ತಿ, ಅಲ್ಲಿ ಭಾಳಠಾಕ್ರೆ ಇದ್ರೆ, ಇಲ್ಲೂ ಅಂಥೋರವುರೆ. ಅದರೊಳಗೆ ಇತ್ತೀಚಿಗೆ ಒಂದು ಓತಿಕ್ಯಾತ ಬಂದು ಸೇರಿಕಂಡಿತ್ತು, ಬ್ಯಾಡ ಅದರ ಫಜೀತಿ ಈಗ."

"ಓತಿಕ್ಯಾತ್ಯಾರ್ಲ?"

"ನಮ್ಮೂರು ಜಟಾಯಿ ಇದ್ನಲ್ಲಕ್ಕ, ಅದೇ ತರ ಒಂದುಡುಗ ಅರಸೀಕೆರೆಲಿತ್ತು. ನಾಟಕದಲ್ಲಿ ಲೇಡಿರೋಲ್ ಮಾಡತಿದ್ದ. ಡ್ಯಾನ್ಸ್ ಮಾಡತಿದ್ದ. ಮಾತಾಡ್ತನೆ ಅಂದ್ರೆ ಅಂಗಿಂಗಲ್ಲ ಉಳ್ಳಿನೆ ಉರಿತನೆ. ಅವುನೇನು ಮಾಡಿದನವ್ವ ಅಂದ್ರೆ ಇದ್ದಕ್ಕಿದ್ದಂತೆ ಕಾವಿ ಬಟ್ಟೆ ಹಾಕಿಬುಟ್ಟ."

"ಸನ್ಯೇಸಿಯಾದ ಅನ್ನು."

"ಸನ್ಯಾಸಿ ಆಗದ್ಕ ಮದ್ಲೆ ಮದಿವಾಗಿ ಯರುಡು ಮಕ್ಕಳಿದ್ವೊ. ಬದಲಾಗಿರೋ ಈ ಕಾಲ್ದಲ್ಲಿ, ಆದರಲ್ಲೂ ಎಡೂರಪ್ಪನ ಕಾಲ್ದಲ್ಲಿ, ಸ್ವಾಮಿಗಳಾದವುರಿಗೆ ಸಿಗತಿದ್ದ ದುಡ್ಡು ಕಾಸು, ಗೌರವ, ಅವುರು ಉಣ್ಣತಿದ್ದ ಊಟ ನೋಡಿದ. ಅಂಗೆ ಆ ಸ್ವಾಮಿಗಳು ಸರ್ಕಾರದ ಜಾಗಕ್ಕೆ ಬೇಲಿಹಾಕಿ, ದಕ್ಕಿಸಿಗತಿದ್ದೂ ನೋಡಿದ. ಎಷ್ಟು ಚನ್ನಾಗಿ ಅಧಿಕಾರ ಅನುಭವುಸ್ತಾ ಅವುರಲ್ಲ ಈ ಸ್ವಾಮಿಗಳು ಅಂತ ತನಿಗೆ ತಾನೆ ಸ್ವಾಮಿಯಾಗಿ, ಕಾಳಿಕಾಮಠ ಅಂತ ಮಾಡಿ, ಋಷಿಕುಮಾರ ಅಂತ ಹೆಸುರುನೂ ಬದ್ಲಾಸಿಗಂಡ. ಅವುನಿಗೆ ಶಿಷ್ಯರ್‍ಯಾರು ಗೊತ್ತೆ? ಸಿ.ಟಿ. ರವಿಯಿಂದ ಹಿಡಿದು ಕರ್ನಾಟಕದ ರಕ್ಷಣಾ ವೇದಿಕೆ, ಸೇನೆ, ಕಾಲಾಳು, ಚತುರಂಗ ಭಾಗವೆಲ್ಲ ಋಷಿಕುಮಾರನ ಲೀಡರ್‌ಶಿಪ್ಪ ಒಪ್ಪಿಗಂಡು ಬುಡ್ತು, ಆಗ ಈ ಢೋಂಗಿ ಸ್ವಾಮಿ ಏನು ಮಾಡಿದ ಗೊತ್ತೇನಕ್ಕ?"


"ನನಿಗೇನು ಗೊತ್ತು ಹೇಳ್ಳ."


"ನಿತ್ಯಾನಂದನ ಬಗ್ಗೆ ನಿಂದನೆ ನಿಲ್ಲುಸ್ತಿನಿ. ಅವುನತ್ತುಕೋಗಿ ಹತ್ತು ಕೋಟಿ ತಂದು ಕೊಡಿ ಅಂತ ಕನ್ನಡ ಹೋರಾಟಗಾರ್ರಿಗೆ ಹೇಳಿದನಂತೆ. ಅಲ್ಲಿ ಸಿಗಾಯ್ತಂಡ ನೋಡವ್ವ. ಈಗ ಯಲ್ಲಾರು ಸೇರಿ ಚಟ್ಟಿ ಕಾವಿ ಬಟ್ಟೆ ಕಿತ್ತು ಕಳಿಸ್ಯವುರೆ. ಅವುನೇನೋ ಹೋದ. ಅವುನ ತರದೋರೆ ದೊಡ್ಡ ಮಠದಲ್ಲಿ ಸೇರಿಕಂಡವುರಲ್ಲಾ ಅವುರ್‍ಯಂಗೆ ಕಳಸದೂ ಅಂತ."

"ದೊಡ್ಡಮಠ ಯಾವುದ್ಲ?"

"ಉಡುಪಿ ಕಡೆ ಇದ್ದವಂತೆ. ಅವಂಗಾಗಿರದ್ಕೆ ಇಲ್ಲಿ ಋಷಿಕುಮಾರ ಹುಟ್ಟಿಗಂಡಿದ್ದು. ಅಂತೂ ಕಾವಿ ಕ್ವಾತು ಮೋಸ್ಟ್ ಡೈನ್‌ಜರ್ ಆಯ್ತಾ ಅದೆ." ●

ಕಾಗದ ಮತ್ತು ದಾಖಲೆ





ನೀವು ಬರೆದ ಕಾಗದ ನಿಮ್ಮ ಒತ್ತಡ, ವಿಷಯ ಹೇಳುವ ಅಗತ್ಯ, ಇವತ್ತಿನ ಮನಃಸ್ಥಿತಿ, ...ದೇ ಪ್ರದರ್ಶನದ ಗೀಳಿಲ್ಲದ ಸರಳತೆ ತೋರುತ್ತದೆ. ಅದನ್ನು ನೀವು ಪ್ರಕಟಿಸುವ ಆಶೆ ಇಟ್ಟುಕೊಂಡಿದ್ದರೆ, ...ವಾಗಿ ಬಳಸುವ ನಿರೀಕ್ಷೆಯಲ್ಲಿದ್ದರೆ, ನಿಮ್ಮ ಕಾಗದವನ್ನು ಸ್ವೀಕರಿಸಿದವರು ಅದನ್ನು ಪ್ರಕಟಿಸುವುದಾಗಿ ...ಗೊತ್ತಿದ್ದರೆ- ಆ ಕಾಗದದ ಶೈಲಿಯೇ ಬೇರೆಯಾಗುತ್ತದೆ. ಆದ್ದರಿಂದ ಸುಮ್ಮನೇ ಬರೆದ ಖಾಸಗಿ ...ಗಳಿಗೂ ಪ್ರಕಟಿಸುವ ಉದ್ದೇಶದ ಕಾಗದಗಳಿಗೂ ವ್ಯತ್ಯಾಸವಿರುತ್ತದೆ. ಸುಮ್ಮನೇ ಬರೆದ ಕಾಗದದಲ್ಲಿರುವ ..., ಸಹಜಸ್ಫೂರ್ತಿ, ಬಿಚ್ಚಿಟ್ಟ ಬೆಚ್ಚನೆಯ ಮನಸ್ಸು ಇನ್ನಿತರ ಕಾಗದಗಳಲ್ಲಿರುವುದಿಲ್ಲ. ನಿಮ್ಮ ಕತೆಯಾಗಲಿ ...ವಾಗಲಿ ನಾಟಕವಾಗಲಿ ಚೆನ್ನಾಗಿರಬೇಕಾದರೆ ಈ ಸಹಜ ಕಾಗದಗಳ ಜೀವ ಪಡೆದಿರಬೇಕು; ನಿಮ್ಮ ...ನ್ನು ನೀವೆಷ್ಟೇ ತಿಣುಕಿ ಬರೆದರೂ ಅದರಲ್ಲಿ ಪ್ರೇಯಸಿಯೊಬ್ಬಳು ತನ್ನ ಪ್ರಿಯಕರನಿಗೆ ಗುಟ್ಟಾಗಿ ...ಯುವ ಕಾಗದದ ಜೀವ ಇರಬೇಕು; ಗೋಪ್ಯ ಇರಬೇಕು, ಅರ್ಥ ಇರಬೇಕು. ಇಲ್ಲದಿದ್ದರೆ ...ಮ ಕತೆಯಾಗುವುದಿಲ್ಲ, ವೇದಿಕೆಯಿಂದ ಚೀರಿಕೊಂಡಾಗಿನ ಜಡತೆ ಪಡೆದುಬಿಡುತ್ತದೆ.

ಇದೆಷ್ಟು ಕಷ್ಟ ಎನ್ನುವುದನ್ನು ಬಲ್ಲವರೇ ಬಲ್ಲರು. ಮೂವತ್ತು ನಲವತ್ತು ವರ್ಷದ ಹಿಂದೆ ...ತಲುಪಿದ ಕಾಗದವನ್ನೂ, ತೆಗೆಸಿಕೊಂಡ ಫೋಟೋವನ್ನೂ ಇವತ್ತು ನೋಡುವಾಗ ನಿಮಗಾಗುವ ..., ನೋವು, ಖುಷಿಯನ್ನು ವಿಶ್ಲೇಷಿಸಿದರೆ ಇದು ತಿಳಿಯುತ್ತದೆ. ಈ ಮುಗ್ಧ ಖಾಸಗಿಪತ್ರಗಳ ...ತೆಯನ್ನು ವಿವರಿಸಲು ನಾನು ಇನ್ನೊಂದು ಉದಾಹರಣೆ ಕೊಡುತ್ತೇನೆ. ನೀವೆಲ್ಲ ಖುಷಿಗಾಗಿ ...ಕಟ್ಟದೆ ಜೂಜಾಡಬಹುದು ಎಂದು ತಿಳಿದಿದ್ದೀರಿ; ಜೂಜನ್ನೂ ನಿಮ್ಮ ಅನೇಕ ಆಸಕ್ತಿಗಳಲ್ಲಿ ...ನ್ನಾಗಿಸಿಕೊಳ್ಳಬಹುದು ಎಂದು ತಿಳಿದಿರುತ್ತೀರಿ. ಅದು ಹಾಗಾಗುವುದಿಲ್ಲ. ನಿಮಗೆ ಜೂಜಾಡುವ ...ಅಂಟಿಕೊಳ್ಳದಿದ್ದರೆ, ನೀವು ಹಣ ಕಟ್ಟಿ ಆಡಿ ಗೆದ್ದು, ಕಳೆದುಕೊಂಡು, ದಿಗ್ಭ್ರಮೆ ಅನುಭವಿಸಿ, ...ಕಟ್ಟುವಾಗ ಆದ ತಪ್ಪು ಸರಿಗಳ ಬಗ್ಗೆ ಹಗಲುಗನಸು ಕಾಣದಿದ್ದರೆ ನಿಮಗೆ ಜೂಜಿನ ...ಸಿಗುವುದಿಲ್ಲ. ಇದು ಸರ್ಕಸ್ಸಿನ ಹುಲಿಯನ್ನು ಮುಟ್ಟಿದಂತಲ್ಲ; ಅರಣ್ಯದ ಹುಲಿಯನ್ನು ... ಉಳಿದುಕೊಂಡಂತೆ ಅಥವಾ ಗಾಯಗೊಂಡಂತೆ. ಮದ್ಯಪಾನ, ಗಾಂಜಾ ಅಭ್ಯಾಸಗಳೆಲ್ಲಾ ... ಇದೆಲ್ಲ ಬೇಡ ಎಂದು ಸುಮ್ಮನಿರುವವರು ಮೊದ್ದುಗಳಾಗುತ್ತಾರೆ; ಇವುಗಳನ್ನು ಕೂಡ ... ಹುಲಿಗಳಂತೆ ಹುಡುಗಿಸುವವರು ಆತ್ಮವಂಚಕರಾಗುತ್ತಾರೆ; ಇದನ್ನು ಎದುರಿಸಿ ನೋಡುವವರು ಅಪಾಯದ ಅಂಚಿನಲ್ಲಿ ಜೀವಂತವಾಗಿರುತ್ತಾರೆ.

ಇದನ್ನೆಲ್ಲ ನಾನಿವತ್ತು ಬರೆಯುತ್ತಿರುವುದು ಹೋದ ಸಲ ಪತ್ರಿಕೆಯಲ್ಲಿ ಪ್ರಕಟವಾದ ಬಿ.ಎಸ್.ಚಿತ್ರಾಳ ಕಾಗದ ಕುರಿತು ಎರಡು ಸಾಲು ಬರೆಯಬೇಕು ಎಂದು ಚಿಂತಿಸುತ್ತಿರುವುದರಿಂದ. ನನ್ನಂಥವರು ಈ ಬದುಕೆಂಬ ವಿಚಿತ್ರವನ್ನು ತಿಳಿದುಕೊಳ್ಳುವುದೇ ಈ ಚಿತ್ರಾ ತರಹದವರ ಬಗ್ಗೆ ಯೋಚಿಸಿ. ಈ ಹಳ್ಳಿಯ ಹುಡುಗಿ 'ಹುಳಿಮಾವಿನ ಮರ'ದ ಬಗ್ಗೆ ತಿಳಿದದ್ದು ಹೇಗೆ ಎನ್ನುವುದಕ್ಕೆ ಉತ್ತರ ಸುಲಭ; ಈಕೆ 'ಪತ್ರಿಕೆ' ಓದುತ್ತಿರಬಹುದು. ಸಂತೆಗೆ ಹೋಗಿ ನೂರು ರೂಪಾಯಿ ಕೊಟ್ಟು 'ಹುಳಿಮಾವು' ಅನ್ನಲು ಮುಜುಗರ ಅನುಭವಿಸಿ, ತನ್ನ ತಾಯಿ ತನ್ನ ಔಷಧಿಗೆ ಕೊಟ್ಟ ದುಡ್ಡನ್ನು, ಸಂತೆಯ ದುಡ್ಡನ್ನು ದುರುಪಯೋಗಪಡಿಸಿಕೊಂಡ ಅಳುಕಿನಿಂದ ತಲ್ಲಣಗೊಂಡು, ಇಷ್ಟಾದರೂ ಪುಸ್ತಕವನ್ನು ಬಚ್ಚಿಟ್ಟುಕೊಂಡು ಓದಿ ಖುಷಿಪಟ್ಟ ಈ ಹುಡುಗಿಯ ಪ್ರಾಯ, ದುಗುಡ, ಹುಮ್ಮಸ್ಸು ಎಲ್ಲ ಇಲ್ಲಿದೆ. ನನಗೆ ಇವೆಲ್ಲ ಸೇರಿ ಕಣ್ಣೀರು ತರಿಸಿರಬಹುದು; ಆದರೆ ಈ ಹೆಣ್ಣುಮಗಳ ಬಡತನ, ಪುಸ್ತಕ ಕೊಳ್ಳುವುದು ಒಳ್ಳೆಯದೋ ಕೆಟ್ಟದೋ ಎನ್ನುವ ಸಂದಿಗ್ಧ... ನನ್ನನ್ನು ಅಲ್ಲಾಡಿಸಿದವು. ಯಾವ ನೆಮ್ಮದಿಯ ದೇಶದಲ್ಲಿಯೂ ಶಿಕ್ಷಣ, ಆರೋಗ್ಯ ಆಕಸ್ಮಿಕವಾಗಕೂಡದು, **chancy** ಆಗಕೂಡದು. ಹಾಗೆಯೇ ಒಂದು ಹರೆಯದ ಜೀವಕ್ಕೆ ಪುಷ್ಟಿಕರವಾದದ್ದು ಉಣ್ಣುವುದು, ತನಗೆ ಇಷ್ಟವಾದ ಪುಸ್ತಕ ಓದುವುದು, ಸಂತೋಷ ಕೊಡುವ ಬಟ್ಟೆ ಹಾಕಿಕೊಳ್ಳುವುದು ಕಡುಕಷ್ಟ ಅನ್ನಿಸಕೂಡದು. ಈ ಚಿತ್ರಾಳ ಕಷ್ಟ ನೋಡಿ. ನೂರು ರೂಪಾಯಿ ಕೊಟ್ಟು ಈ ಪುಸ್ತಕ ಕೊಳ್ಳುವುದು ಆಕೆಗೆ ಕಷ್ಟ; ಕೊಂಡರೆ ಔಷಧಿಗೆ, ಸಂತೆಗೆ ದುಡ್ಡಿಲ್ಲ. ಹಾಗೆಯೇ ತಿಂಗಳಿಗೆ ಇಪ್ಪತ್ನಾಲ್ಕು ರೂಪಾಯಿ ಕೊಟ್ಟು ಪತ್ರಿಕೆ ಕೊಳ್ಳುವುದು ದುಸ್ತರ. ಆ ಇಪ್ಪತ್ನಾಲ್ಕು ರೂಪಾಯಿಗೆ ಬೆಂಗಳೂರಲ್ಲಿ ಈಗ ಎರಡು ಇಡ್ಲಿ, ಎರಡು ವಡೆ, ಒಂದು ದೋಸೆ ಬರುವುದಿಲ್ಲ; ಹಳ್ಳಿಯಲ್ಲಿಯ ಇಪ್ಪತ್ನಾಲ್ಕು ರೂಪಾಯಿಗೆ ಇನ್ನೂರು ರೂಪಾಯಿಯ ಮೌಲ್ಯವಿರುತ್ತದೆ. ಯಾಕೆಂದರೆ ಪೌಷ್ಟಿಕ ಆಹಾರ, ಪುಸ್ತಕ, ಕ್ರೀಮ್, ಚಪ್ಪಲಿ, ಬಟ್ಟೆ-ಎಲ್ಲವೂ ಅಲ್ಲಿ **luxury!**

ಇದು ಭಾರತದ ಈಗಿನ ಚಿತ್ರ. ನಾನು ಮೊನ್ನೆ ನೋಡಿದ ಒಂದು ಸಿನಿಮಾದಲ್ಲಿ ಸೇವಕರು ಊಟ ಮಾಡುತ್ತಿರುವುದನ್ನು ಗಮನಿಸಿದೆ. ಭಾರತದ ಶ್ರೀಮಂತರೂ ಉಣ್ಣದಂಥ ತಿನಿಸು, ಹಣ್ಣು, ಕಜ್ಜಾಯ ಅಲ್ಲಿದ್ದವು.

ಚಿತ್ರಾಳ ತಳಮಳದ ಕಣ್ಣು ನೆನಪಾದವು.

-ಜನವರಿ 20, 1990

ಹಸಿದ ಗೂಳಿ ಹೊಲ ಯಾರ್ದು ಅಂತ ನೋಡಲ್ಲ


ಅಣಕ



• ಎಚ್.ಎಲ್.ಕೇಶವಮೂರ್ತಿ


'ಹದಿನೈದು' ಅಂತ ನಾನು. 'ಇಲ್ಲ ಹದಿನೇಳು' ಅಂತ ಅವನು. 'ಎರಡೂ ಅಲ್ಲ ಕಣ್ರಿ ಹತ್ತೊಂಬತ್ತು' ಅಂತ ಇನ್ನೊಬ್ಬನು. ಇವೆಲ್ಲ ಏನು ಅಂದಿರಾ? ರೇಪುಗಳ ಸಂಖ್ಯೆ ಕಣ್ರಿ. ಹರಿಯಾಣ ರಾಜ್ಯದಲ್ಲಿ ಒಂದು ತಿಂಗಳಲ್ಲಿ ನಡೆದಿರೋದು. ಬೆಳಕಿಗೆ ಬಂದಿರೋವು ಇಷ್ಟು. ಬರದೇ ಇರೋವು ಇನ್ನೆಷ್ಟೋ ಅನ್ನುವವರೂ ಇರಬಹುದು. ಸಂಖ್ಯೆ [illegible]ವುದಾದರೂ ಇರಲಿ. ಈ ಪಾಟ ಅತ್ಯಾಚಾರ ನಡೀತು ಅಂದರೆ ಅಲ್ಲೇನು ಕಾನೂನು ಅನ್ನೋದು ಕತ್ತೆ ಕಾಯುತ್ತಿದೆಯಾ ಅಂದರೆ ಹಂಗಲ್ಲವಂತೆ. ಅಲ್ಲಿ ರೇಪೇ ಆಗಿಲ್ಲವಂತೆ! ಹಂಗಾದರೆ ಪತ್ರಿಕೇಲಿ ಬರ್ತಿರೋದು, ಟೀವಿಲಿ ಹಗಲೂ ರಾತ್ರಿ [illegible]ಕೊಳ್ಳುತ್ತಿರೋದು ಎಲ್ಲ ಸುಳ್ಳೆ ಅಂದ್ರೆ, ಹೂಂ ಸುಳ್ಳೇಯ ಅಂತೆ! ರೇಪಾಯಣ ಕೇಳಿ ಅಲ್ಲಿನ ಮಂತ್ರಿ ಒಬ್ಬರಿಗೆ ಫೋನಾಯಿಸಿ ಕೇಳಿದಾಗ ಹಿಂಗೆ ಅಂದ್ರು. "ಅದೆಂಗ್ರಿ ಸಾಹೇಬರೆ ಸಾಧ್ಯ" ಅಂತ ಕೇಳಿದ್ದಕ್ಕೆ "ಟಿವಿ ಸಿನಿಮಾ ಬಂದು ಎಲ್ಲಾನೂ ಕುಲಗೆಡಿಸಿವೆ ಕಣ್ರಿ. ಹೆಂಗಸರು ಮಕ್ಕಳು ಆದಿಯಾಗಿ ಮನೆಮಂದಿಯೆಲ್ಲ ಕಲೀಬಾರದ್ದನ್ನೆಲ್ಲ ಕ್ಕಲ್ತವೆ. ಮೊಬೈಲ್ ಕಿವಿಗೆ ಅಂಟಿಸಿಕೊಂಡು ಪುರುಸೊತ್ತು ಇಲ್ಲದಂಗೆ ಗುಸುಗುಸು ಪಿಸುಪಿಸು ಅಂತಿರ್ತಾವೆ. ಅವೇನು ಮಾತಾಡ್ಕತಾವೋ ಏನು ಕತೆಯೊ ಯಾರಿಗೂ ತಿಳಿಯಂಗಿಲ್ಲ. ಹೊಂಚು ಹಾಕಿ ಜನ ಇಲ್ಲದ ಕಡೆ ಸೇರ್ಕಂತವೆ. ಕದ್ದುಮುಚ್ಚಿ ಹಿಂಗೆ ಮಾಡೋದ್ರಲ್ಲೇ ಮಜಾ ಇರುತ್ತಲ್ಲವಾ. ಅದ್ಕೆ ಮತ್ತೆಮತ್ತೆ ಸೇರ್ತವೆ. ಈ ಸೇರಾಟ ಯಾವಾಗ ಹಳಸಿಕೊಳ್ತದೊ ಆವಾಗ 'ಹೋ ನಮ್ ಶೀಲ ಹಾಳಾಯ್ತೋ, ರೇಪಾಗೋಯ್ತೋ' ಅಂತ ಊರುಕೇರಿ ಒಂದು ಮಾಡ್ತವೆ. ಮಾಧ್ಯಮದವರಿಗೆ ಇಂತದ್ದು ಸಿಕ್ಕಿತು ಅಂದ್ರೆ ರಸಗುಲ್ಲ ಸಿಕ್ಕಿದಂಗೆ. ತಲೆಗೆ ತೋಚಿದಂಗೆ ಪತ್ರಿಕೇಲಿ ಗೀಚ್ತವೆ, ಟೀವಿಲಿ ಬೊಗಳ್ತ ಬಿದ್ಕತ್ತವೆ. ಹಿಂಗಾಗಿರೋದು ಕಣ್ರಿ ಇವೆಲ್ಲ" ಅಂದರು. "ಅದು ಸರಿ ಸಾಹೇಬರೆ, ರೇಪ್ ಮಾಡಿದ್ದನ್ನೇ ಏನೋ ಘನಂದಾರಿ ಕೆಲಸ ಮಾಡಿದೆ ಅನ್ನೊ ಹಂಗೆ ವಾಕರಿಕೆ ಬರೋ ಅಂತೋವನ್ನೆಲ್ಲ ವೀಡಿಯೋ ಮಾಡಿ ಊರಲ್ಲೆಲ್ಲ ಹರಿದಾಡೋ ಹಂಗೆ ಮಾಡಿದಾರಂತಲ್ಲ ಅದಕ್ಕೇನು ಹೇಳ್ತೀರಿ" ಅಂದದಕ್ಕೆ "ನೀವು ರೇಪ್ ಮಾಡವ್ರೆ ಅಂತೀರಲ್ಲ ಅವರ ಕೆಲಸ ಅಲ್ಲ ಕಣ್ರಿ ಇದು. ಮಾಡಿಸಿಕೊಂಡೆ ಅಂತ ಹೇಳ್ತವಲ್ಲ ಅವೇಯ ಪ್ರೂಫ್‌ಗಿರಲಿ ಅಂತ ಹಿಂಗೆಲ್ಲ ಮಾಡ್ತ ಬಿದ್ದವೆ" ಅಂದರು ಸಾಹೇಬರು!

ಇದೇನು ಈವಯ್ಯ ಹಿಂಗಂತಾವನಲ್ಲ ಅಂತಾವ, ಹೆಂಗಿದ್ರೂ ಕೇಂದ್ರದಲ್ಲೂ ಕಾಂಗ್ರೆಸ್ ಸರ್ಕಾರಾನೆ ಇದೆ, ಅವರು ಏನಂತಾರೋ ನೋಡೋಣ ಅಂತ ಅಲ್ಲಿನ ಮಂತ್ರಿಗೆ ಫೋನ್ ಹಚ್ಚಿದೆ. ರೇಣುಕಾ ಚೌಧುರಿ ಸಿಕ್ಕಿದರು. ಹೆಣ್ಣೆಂಗ್ಸು ಮಹಿಳೆಯರ ಬಗ್ಗೆ ಕಳಕಳಿ ಇದ್ದೇ ಇರ್ತದೆ; ಮೊಕ ಮುಸುಡಿ ನೋಡದೆ ಇದ್ದದ್ನ ಇದ್ದಂಗೆ ಹೇಳಬಹುದು ಅನ್ನೊ ಆಸೇಲಿ ಅವರ ಹತ್ತಿರ "ಏನು ತಾಯಿ ರೇಣುಕಾ ಅವರೆ ಹಿಂಗಿಂಗೆ ಆಗ್ತಿದೆಯಲ್ಲ" ಅಂತ ಕೇಳಿದ್ರೆ ಅವರು "ಇದೇನ್ರಿ ಹೀಗೆ ಏನೋ ಆಗಬಾರದ್ದು ಆಗಿಹೋಗಿ ಅನ್ನೋ ಹಂಗೆ ಪೆದ್ದುಪೆದ್ದಾಗಿ ಕೇಳ್ತಾ ಇದೀರಿ. ನಮ್ ದೇಶದಲ್ಲಿ ಒಂದೇ ಅಲ್ಲ ಹಿಂಗೆ ನಡೀತಿರೋದು. ಪ್ರಪಂಚದಲ್ಲೆಲ್ಲ ಹಿಂಗೇ ನಡೀತಾನೂ ಇದೆ, ಹೆಚ್ತಾನೂ ಇದೆ" ಅಂತ ಫೋನ್ ಕಟ್ ಮಾಡಿದ್ರು! ಎಷ್ಟೇ ಆಗಲಿ ಅಮ್ಮಾವರು ಇಂದಿರಾ ಗಾಂಧಿ ಗರಡಿಯಲ್ಲಿ ಪಳಗಿದೋರು. 'ಭಾರತದಲ್ಲಿ ಭ್ರಷ್ಟಾಚಾರ ಮಿತಿಮೀರುತ್ತಿದೆ' ಅನ್ನುವ ಗುಲ್ಲೆಬ್ಬಿದಾಗ ಅವರು "ವಿಶ್ವದ ಎಲ್ಲೆಡೆಯೂ ಹೀಗೆ ಆಗುತ್ತಿದೆ" ಎಂದಿದ್ದರು! ಅವರ ಶಿಷ್ಯೆ ಇವರು. ಹಿಂಗೆ ಹೇಳುವುದು ಸಹಜವಾಗೇ ಇತ್ತು.



ಬುದ್ಧಿಜೀವಿಗಳು ಅನ್ನೊ ಸ್ಪೀಸೀಸು ಇದೆಯಲ್ಲ ಅದು ಅಲ್ಲೂ ಇತ್ತು. ಅವಕ್ಕೆ ಫೋನು ಹಚ್ಚಿದೆ. ವಿಷಯ ತಿಳಿಸಿದೆ. 'ಲಿಂಗ ಅಸಮಾನತೆ' ಅನ್ನೋ ಫರ್ಮಾನು ನೀಡಿದರು! ಬಿಡಿಸಿ ಹೇಳುವಂತೆ ಕೋರಿಕೊಂಡೆ. ನನ್ನಂತಹ ದಡ್ಡ ಸಿಕ್ಕಿದ್ದು ಅವರಿಗೆ ಸ್ಫೂರ್ತಿ ತಂದಿರಬೇಕು. ಇಲ್ಲಿನ ಯುವಕರಿಗೆ ಮದುವೆಯಾಗಲು ಹೆಣ್ಣುಗಳೇ ಸಿಗುತ್ತಿಲ್ಲ. ಉಪ್ಪುಹುಳಿ ತಿಂದ ದೇಹ ಪೀಡಿಸುತ್ತೆ. ಅದಕ್ಕೆ ಇವೆಲ್ಲ ನಡೆಯುತ್ತೆ ಅನ್ನುವ ಮಾತು ಹೇಳಿದರು. ನನಗೆ ಏನೋ ಅನುಮಾನ. ದಡ್ಡರಿಗೆ ಸಹಜವಾದ ಅನುಮಾನ. "ಅಲ್ಲ ಸಾರ್ ಅವರ ತೀಟೆ ತೀರಿಸಿಕೊಳ್ಳೋಕೆ ದಲಿತರ ಹೆಂಗಸರೇ ಆಗಬೇಕೆ" ಅಂತ ಅಂಜುತ್ತ ಅಂಜುತ್ತಲೇ ಕೇಳಿದೆ. "ಹಸಿದ ಗೂಳಿ ಅವರ ಹೊಲ ಇವರ ಹೊಲ ಅಂತ ನೋಡಲ್ಲ. ಸುಲಭವಾಗಿ ಎಲ್ಲಿ ಸಿಕ್ಕುತ್ತೊ ಅಲ್ಲಿ ತನ್ನ ಬಯಕೆ ತೀರಿಸಿಕೊಳ್ಳುತ್ತೆ" ಅಂದರು! ಮೇಲ್ಜಾತಿಯವರಿಗೂ ಹುಲ್ಲುಗಾವಲಿತ್ತು, ಸೊಗಸಾಗಿ ಹುಲ್ಲೂ ಬೆಳೆದಿತ್ತು, ಆದರೆ ಗೂಳಿ ಬಾಯಿ ಹಾಕದಂತೆ ಅವರು ಭದ್ರವಾದ ಬೇಲಿ ಹಾಕಿದ್ದರು. ದಲಿತರೂ ಹಾಗೆಯೇ ತಮ್ಮ ಹುಲ್ಲುಗಾವಲನ್ನು ಜೋಪಾನ ಮಾಡಬೇಕೆಂಬುದು ಅವರ ಘನವಾದ ಉಪದೇಶ ಆಗಿತ್ತು!

ಹಾವು ಹಿಡಿಯೋಣ ಅಂತ ಹೊರಟವನಿಗೆ ಹುತ್ತದೊಳಗೆ ಹುತ್ತ ಗೋಚರಿಸುತ್ತಿತ್ತೇ ವಿನಹ ಹಾವು ಮಾತ್ರ ಸಿಗದಂತಾಯಿತು. ಹಾಗೇ ಯೋಚಿಸಿದೆ. ಈ ಬುದ್ಧಿಜೀವಿಗಳು, ರಾಜಕಾರಣಿಗಳು ಎಲ್ಲ ಅವರವರಿಗೆ ತೋಚಿದಂತೆ ಹೇಳ್ತಾರೆ. ಜನ ಅಭಿಪ್ರಾಯ ಕೇಳೋಣ ಅಂದುಕೊಂಡೆ. ಖಾಪ್ ಪಂಚಾಯತ್ ಹರ್ಯಾಣದಲ್ಲಿನ ಶಾಸನ ಸಭೆ, ಮಹಾ ಪಂಚಾಯತ್ ಸಂಸತ್ತು ಇದ್ದಂಗೆ. ಅಲ್ಲಿನ 'ಸಂಸತ್ತು' ಸೇರುವುದರಲ್ಲಿತ್ತು. "ಕಷ್ಟಪಟ್ಟು ಒಬ್ಬ ಸದಸ್ಯನ ಮೊಬೈಲ್ ನಂಬರ್ ಸಂಪಾದಿಸಿದೆ. ಮಾತನಾಡಲು ಪ್ರಯತ್ನಿಸಿದೆ." ರಿಂಗಾಯಿತು. "ಕೌನ್" ಅಂದರು. ಪ್ರವರ ಒಪ್ಪಿಸಿದೆ. 'ನೈ ನೈ ಮೈ ನೈ ಬಾತ್ ಕರ್‌ಸಕ್ತಾ' ಅಂತ ಕಟ್ ಮಾಡಿದರು. ಯಾಕಪ್ಪ ಇವರು ಮಾತನಾಡುವ ಮೊದಲೇ ಕಟ್ ಮಾಡ್ತಾ ಅವರಲ್ಲ, ಇದಕ್ಕೇನು ಕಾರಣ ಅಂತ ಅಲ್ಲಿಇಲ್ಲಿ ವಿಚಾರಿಸಿದೆ. ವಿಷಯ ಮನದಟ್ಟಾಯಿತು. ಅದೇನು ಅಂದರೆ ಮಾಧ್ಯಮದವರಿಂದಾಗಿಯೇ ಖಾಪ್ ಪಂಚಾಯತಿಗೆ ದೇಶಾದ್ಯಂತ ಕೆಟ್ಟ ಹೆಸರು ಬಂದಿದೆಯಂತೆ. ಮರ್ಯಾದಾ ಹತ್ಯೆ ಮಾಡುವ ರಾಕ್ಷಸರು ಅಂತೆಲ್ಲ ಅವರನ್ನು ಬಿಂಬಿಸಲಾಗುತ್ತಿದೆಯಂತೆ. ಇದರಿಂದ ರೋಸಿಹೋದ ಅವರು ಯಾವ್ರೋಳು ಯಾವ್ರೋನ್ನಾರ ಕಟ್ಟಿಕೊಂಡು ಸಾಯಲಿ ಅಂತ ಸುಮ್ಮನಿದ್ದರು ಅನ್ನಿ. ಹಾಳಾದೋವು ಹೋಗಿ ಹೋಗಿ ಸಗೋತ್ರದಲ್ಲೇ ಮದುವೆಯಾಗ್ತವಂತೆ. ಹಾಳಾಗಿಹೋಗಲಿ ಅನ್ನುವಂತೆ ಇಲ್ಲ, ಯಾಕೆ ಅಂದರೆ ಶಾಸ್ತ್ರೀಸ್ತ್ರ ಎಲ್ಲ ಹಾಳಾದರೂ ಚಿಂತೆ ಇಲ್ಲ, ಎಲ್ಲೋ ದೂರದ ಊರಿನವನ್ನ ಕಟ್ಟಿಕೊಂಡಿದ್ದರೂ ಸಹಿಸಿಕೊಳ್ಳಬಹುದಾಗಿತ್ತು.



ಕಣ್ಣಿಗೆ ಮರೆಯಾಗಿ ಹೋದವಲ್ಲ ಅಂತ ಹೆಂಗೋ ಮರೆಯಬಹುದಾಗಿತ್ತು. ಆದರೆ ಹಂಗೆ ಆಗುತ್ತಿಲ್ಲ. ಅವು ಪಕ್ಕದ ಮನೆಯವನನ್ನೋ, ಊರಿನವನನ್ನೋ ಮದುವೆಯಾಗಿ ಕಣ್ಣಿಗೆ ಕಡ್ಡಿಯಾಗವಂತೆ. ಅಷ್ಟು ಮಾತ್ರವಲ್ಲ ಆಸ್ತಿಯಲ್ಲಿ ಪಾಲನ್ನೂ ಕೇಳ್ತಾ ಬಿದ್ದವಂತೆ! 'ಕೊಟ್ಟ ಹೆಣ್ಣು ಕುಲಕ್ಕೆ ಹೊರಗೆ ಕಣವ್ವ ಹಂಗೆಲ್ಲ ಮೊಂಡುತನ ಮಾಡಬಾರ[illegible] ಅಂತ ಬುದ್ಧಿ ಮಾತು ಹೇಳಿದ್ರೆ ಕೋರ್ಟ್ ಕಾನೂ[illegible] ಅಂತ ಬೆದರುಸ್ತವಂತೆ. ಇಂತೋರ ಜೊತೆ ಹೊಡೆದಾಡ[illegible] ಆಗಲ್ಲ ಅಂತ ಅವರ್ನ ಮುಗಿಸುಬಿಡ್ತಾರಂತೆ. ಇದನ್ನ ತಿಳಿ[illegible] ಹಾಳಾದ ಮಾಧ್ಯಮದವರು ಮರ್ಯಾದೆ ಹತ್ಯೆ, ಮ[illegible] ಹತ್ಯೆ ಆಗೋಗದೆ, ದೇಶವೇ ಮುಳುಗಿಹೋಗದೆ [illegible] ಕೂಗಾಡ್ತವೆ ಅನ್ನೋದು ಅವರ ಅಳಲಂತೆ. ಅಯ್[illegible] ಪಾಪ!

ಹೇಗಾದರೂ ಮಾದಿ ಅವರೊಡ[illegible] ಮಾತನಾಡಲೇಬೇಕೆಂದು ಮತ್ತೆ ಫೋನಾಯಿಸಿದೆ. ಎತ್ತಿದ[illegible] "ಚೌಧುರಿ ಸಾಬ್" ಅಂದೆ. ಸ್ವಲ್ಪ ಮೆತ್ತಗಾದಂತೆ ಕಂಡ[illegible] "ಮರ್ಯಾದಾ ಹತ್ಯೆ ವಿಚಾರಕ್ಕಲ್ಲ, ರೇಪ್ ವಿಚಾರಕ್ಕೆ ಫೋ[illegible] ಮಾಡಿದೆ" ಅಂದೆ. ಸ್ವಲ್ಪ ತೆರೆದುಕೊಂಡರು. ಅವರ ಪ್ರ[illegible] ರೇಪ್‌ಗೆ ಮೊಬೈಲ್ ಫೋನೇ ಕಾರಣ ಅಂತೆ! ಅ[illegible] ಮೊದಲು ಬ್ಯಾನ್ ಮಾಡಬೇಕಂತೆ! (ಅವ[illegible] ಮಾತನಾಡುತ್ತಿದ್ದದ್ದೂ ಮೊಬೈಲ್‌ನಲ್ಲೆ! ಇರಲಿ) ಮಾಡಿ[illegible] ಇದು ನಿಲ್ಲುತ್ತದೆಯೆ? ಪೂರ್ಣ ನಿಲ್ಲಲ್ಲವಂತೆ. ಮುಕ್ಕಾ[illegible] ಪಾಲು ಕಡಿಮೆಯಾಗುತ್ತದಂತೆ. ಪೂರ್ಣ ನಿಲ್ಲಲು [illegible] ಮಾಡಬೇಕು ಅಂದರೆ ಹದಿನಾರು ವರ್ಷದ ಒ[illegible] ಹುಡುಗಿಯರ ಕತ್ತಿಗೆ ತಾಳಿ ಬಿಗಿಸಿಬಿಡಬೇಕಂತೆ! ಹಿ[illegible] ಮಾಡಿದರೆ ತಿಮಿರು ಹತ್ತಿದೋವು ಮನೆಯ[illegible] ಇಳಿಸಿಕೊಳ್ಳಬಹುದಂತೆ! ಅವರ ಅಭಿಪ್ರಾಯ ಯಾ[illegible] ನನಗೆ ಹಿಡಿಸಲಿಲ್ಲ, ಅಪ್ರಾಪ್ತ ವಯಸ್ಸಿಗೆ ಮದ[illegible] ಮಾಡೋದು ಕಾನೂನುಬಾಹಿರ ಅಲ್ಲವೆ? ಅದನ್ನೇ ಅವ[illegible] ತಿಳಿಸಿದೆ. ಅದಕ್ಕೆ ಅವರು ಹದಿನಾರು ವರ್ಷದವರು ಲೈ[illegible] ಸಂಪರ್ಕ ಮಾಡಿದರೆ ಅಪರಾಧ ಅಲ್ಲ ಅನ್ನುತ್ತದೆ ನಿ[illegible] ಕಾನೂನು. ಹದಿನಾರು ವರ್ಷಕ್ಕೆ ಮದುವೆ ಮಾ[illegible] ಅಂದರೆ ಬೇಡ ಅನ್ನುತ್ತದೆ ಅದೇ ಕಾನೂನು. [illegible] ಯಾವ ಸೀಮೆ ನ್ಯಾಯ. ಬಿಸಾಕ್ರಿ ಅದ ಎನ್ನುವ ವ್ಯಾಖ[illegible] ಮಾಡಿದರು! 'ಅದರ ಬದಲು ತೊಟ್ಟಿಲಲ್ಲೇ ತಾಳಿ ಕಟ್ಟಿಸಿ[illegible] ಆಗಬಹುದಾ' ಅಂತ ಕೇಳಬೇಕು ಅಂತಿದ್ದೆ. ಮೊಬೈ[illegible] ಕಟ್ ಮಾಡಿಯಾರು ಅಂತ ಕೇಳಲಿಲ್ಲ.

"ಕೊನೆಯದಾಗಿ ಒಂದು ಪ್ರಶ್ನೆ ಚೌಧರಿ ಸಾಹೇಬ[illegible] ಅಂದೆ. "ಏನು" ಅಂದರು. "ಮದುವೆ ಆಗಿರುವ ಹೆಂಗ[illegible] ರೇಪ್ರೂ ನಡೆಯುತ್ತಿದೆಯಲ್ಲ ಅದು ಯಾಕೆ?" ಅಂತ ಕೇ[illegible] "ಮೇಟಿ ಸರಿ ಇದಲ್ಲ ಅದಕ್ಕೆ" ಅಂದರು ಅವರು!


ಮೇಟಿ ಸರಿ ಇರುವುದಿಲ್ಲವೊ? ಅಥವಾ ಹಾಗೆ ಇರ[illegible] ಇವರು ಬಿಡುವುದಿಲ್ಲವೊ? ಎಂಬ ಪ್ರಶ್ನೆ ಪ್ರಶ್ನೆಯಾಗಿ[illegible] ಉಳಿಯಿತು!

ಮಲಾಲ ಬದುಕುಳಿಯಲಿ

ಮಲಾಲ ಬದುಕಿ ಉಳಿಯಲಿ. ತಾಲಿಬಾನ್ ಅಂದರೆ ವಿದ್ಯಾರ್ಥಿ ಅಂತ ಅರ್ಥವಂತೆ. ಹಿಂಸೆ, ಮತಾಂಧತೆಗಳ ವಿದ್ಯಾರ್ಥಿಗಳು ಅವರು. ಅವರ ಪಡಿಯಚ್ಚುಗಳು ಇಂಡಿಯಾದಲ್ಲೂ ಇವೆಯಲ್ಲ, ನಾವೆಲ್ಲ ಸುಮ್ಮನಿದ್ದರೆ ಇಲ್ಲಿನ ಪಡಿಯಚ್ಚುಗಳು ನಮ್ಮ ದೇಶದಲ್ಲಿ ಸತಿ ಸಹಗಮನ ಸಂಪ್ರದಾಯವನ್ನು ಮತ್ತೆ ಜಾರಿಗೆ ತಂದಾವು. ಅವು ಯಾರೆಂದು ಬಾಯಿಬಿಟ್ಟು ಹೇಳಬೇಕಾ?

- ರವಿಕುಮಾರ್, ಹಾಸನ

ಮಲಾಲ ಎಂಬ ಪಾಕಿಸ್ತಾನದ ಹುಡುಗಿಯ ಮೇಲಾದ ದಾಳಿಯ ಬಗ್ಗೆ ಓದಿ ತುಂಬಾ ಬೇಸರವಾಯಿತು. ಧರ್ಮದ ಅಮಲನ್ನು ಏರಿಸಿಕೊಂಡಿರುವವರು ಮಾತ್ರ ಎಸಗುವಂತಹ ಕೃತ್ಯವಿದು.





ಮಲಾಲಳಿಗೆ ಉಗ್ರರಿಂದ ಪ್ರಾಣ ಬೆದರಿಕೆ ಇದ್ದರೂ ಅದನ್ನು ಆಕೆಯ ತಂದೆ ಗಂಭೀರವಾಗಿ ತೆಗೆದುಕೊಳ್ಳದಿದ್ದಕ್ಕೆ ಕಾರಣ ಅವರು ಇಸ್ಲಾಂ ಧರ್ಮವನ್ನು ಸರಿಯಾಗಿ ಅರ್ಥಮಾಡಿಕೊಂಡಿರುವುದು ಅನಿಸುತ್ತದೆ. ಯಾಕೆಂದರೆ ಮಲಾಲ ತರಹದ ಚಿಕ್ಕ ಹುಡುಗಿಯರ ಮೇಲೆ ಧರ್ಮದ ಹೆಸರಲ್ಲಿ ದಾಳಿ ಮಾಡುವುದನ್ನು ಇಸ್ಲಾಂ ಧರ್ಮ ಎಂದೂ ಒಪ್ಪುವುದಿಲ್ಲ. ಆದರೆ ತಮ್ಮ ಧರ್ಮವನ್ನು ಸರಿಯಾಗಿ ಅರ್ಥ ಮಾಡಿಕೊಳ್ಳದಿರುವವರು ಆಕೆಯ ಪ್ರಾಣಕ್ಕೆ ಅಪಾಯ ತಂದಿಟ್ಟಿದ್ದಾರೆ.

ಸದ್ಯ ಮಲಾಲಳನ್ನು ಪಾಕಿಸ್ತಾನದ ಸರ್ಕಾರ ಹೆಚ್ಚಿನ ಚಿಕಿತ್ಸೆಗೆಂದು ವಿದೇಶಕ್ಕೆ ಕಳುಹಿಸಿದೆ. ಆ ಮೂಲಕ ಆಕೆಯನ್ನು ಉಗ್ರರ ಅಪಾಯದಿಂದ ದೂರ ಸರಿಸಿದೆ. ಆದರೆ ಇದೆಷ್ಟು ದಿನ ಸಾಧ್ಯ?


- ನಿರಂಜನ್ ಪಟೇಲ್, ಹುನಸೆನಹಳ್ಳಿ

ಎರಡು ವಾರಗಳ ಹಿಂದೆ ಬಲ್‌ಪ್ರೀತ್ ಎಂಬ ಯುವತಿಯ ಬಗ್ಗೆ ಗೌರಿ ಬರೆದದ್ದು ಮತ್ತು ಕಳೆದ ವಾರ ಅದೇ ಯುವತಿಯ ಬಗ್ಗೆ ಬಾನುಮುಷ್ತಾಕ್ ಅವರು ಬರೆದ ಲೇಖನ – ಎರಡೂ ಅದ್ಭುತವಾಗಿದ್ದವು, ಮಾತ್ರವಲ್ಲ ಸೌಂದರ್ಯ ಪ್ರಜ್ಞೆಯ ಬಗ್ಗೆ ನಮ್ಮ ಕಣ್ಣುಗಳನ್ನು ತೆರೆಸುವಂತಿದ್ದವು. ಬಲ್‌ಪ್ರೀತ್ ನಿಜವಾಗಲೂ ಧೈರ್ಯದ ಹುಡುಗಿ.

ಹಿಂದುಳಿದವರನ್ನು ಹಿಂದೂಕರಣಗೊಳಿಸುವುದೆಂದರೆ...

ಹಿಂದೂಕರಣ ಅಥವಾ ಹಿಂದೂ ಧರ್ಮಕ್ಕೆ ಎಳೆದುಕೊಳ್ಳುವುದು ಬಹುಶಃ ಕಳೆದ ಒಂದು ಶತಮಾನದಿಂದೀಚೆಗೆ ಪ್ರಾರಂಭವಾದ ಪ್ರಕ್ರಿಯೆ. ಬ್ರಹ್ಮ ಸಮಾಜ, ಆರ್ಯ ಸಮಾಜ, ಪ್ರಾರ್ಥನಾ ಸಮಾಜ ಎಂಬ ಬ್ರಾಹ್ಮಣ ಸಮಾಜಗಳು ಇಂಥ ಪ್ರಕ್ರಿಯೆ ಪ್ರಾರಂಭಿಸಿದವೆನ್ನಬಹುದು. ಇಂಥ ಸಮಾಜಗಳ ವಿರುದ್ಧ ಹಿಂದುಳಿದ ವರ್ಗದವರೇ ಆದ, ಫೂಲ್‌ಮಾಲಿ (ಹೂವಾಡಿಗ) ಜಾತಿಗೆ ಸೇರಿದ ಮಹಾತ್ಮ ಜ್ಯೋತಿಬಾ ಫುಲೆಯವರು ಸತ್ಯಶೋಧಕ ಸಮಾಜ ಎಂಬ ಹಿಂದೂ ಧರ್ಮದ ಪೊಳ್ಳುಗಳನ್ನು ಜಾಲಾಡುವ ಸಂಘಟನೆಯನ್ನು ಹುಟ್ಟುಹಾಕಿದ್ದರಾದರೂ ಅದರ ಪ್ರಭಾವ ಮಹಾರಾಷ್ಟ್ರಕ್ಕಷ್ಟೆ ಸೀಮಿತವಾಗಿತ್ತು, ಅಲ್ಲದೆ ಹಿಂದುಳಿದ ವರ್ಗದ ಜನ ಜ್ಯೋತಿಬಾ ಫುಲೆಯವರನ್ನು ಅರ್ಥಮಾಡಿಕೊಳ್ಳುವಷ್ಟು ಸಶಕ್ತರಾಗದಿದ್ದದ್ದೂ ಸತ್ಯಶೋಧಕ ಸಮಾಜದ ಸೀಮಿತತೆಗೆ ಕಾರಣವಾಯಿತು. ಆದರೆ ಆರ್ಯ ಸಮಾಜ, ಬ್ರಹ್ಮ ಸಮಾಜ, ಪ್ರಾರ್ಥನಾ ಸಮಾಜ ಇತ್ಯಾದಿ ಸಮಾಜಗಳು ಹಿಂದೂ ಪುರಾಣಗಳನ್ನು, ಪುರಾಣ ಕಥೆಗಳನ್ನು ಮಾಧ್ಯಮಗಳ ಮೂಲಕ ಬಿತ್ತರಿಸಿ, ಪುರಾಣಗಳ ಒಬ್ಬೊಬ್ಬ ಋಷಿ/ಸಂತ/ರಾಜರುಗಳನ್ನು ಒಂದೊಂದು ಜಾತಿಗೆ ಸೇರಿಸಿ, ಯಾವ ಜಾತಿಗೆ ಯಾವ ರಾಜ ಬೇಕು, ಯಾವ ಸಂತ ಬೇಕು ಎಂಬಂತೆ ಜಾತಿ ಎಂಬ ಸಂತೆಯಲ್ಲಿ ಎಲ್ಲರನ್ನು ಹರಾಜಿಗಿಟ್ಟರು. ಯಾವ ಯಾವ ಜಾತಿ ತಮಗೆ ಯಾರ್‍ಯಾರು ಬೇಕೋ ಅವರನ್ನು ತಮ್ಮವರೆಂದು ಆರಿಸಿಕೊಳ್ಳಲೆಂಬಂತೆ!

ಉದಾಹರಣೆಗೆ ಒಂದು ಪುರಾಣದ ಕಥೆಯಲ್ಲಿ ನಿರ್ಮಾಣ ಕಾರ್ಯದಲ್ಲಿ ತೊಡಗಿದ್ದ ವಿಶ್ವಕರ್ಮ ಎಂಬ ಪಾತ್ರ ತಮ್ಮಂತೆ ಚಿನ್ನ, ಕಬ್ಬಿಣ, ಮರಗೆಲಸ ಮಾಡುತ್ತಿದ್ದರಿಂದ ಆಚಾರಿಗಳು ಆತನನ್ನು ತಮ್ಮವ ಎಂದು ಕರೆದುಕೊಂಡರು. ರಾಮಾಯಣ ಬರೆದ ವಾಲ್ಮೀಕಿ ಬೇಡ ಸಮುದಾಯದವ[illegible] ಎಂದಾಕ್ಷಣ ಬೇಡರು, ನಾಯಕರು, ಇತ[illegible] ಸಮುದಾಯದವರು ವಾಲ್ಮೀಕಿ ತಮ್ಮ ಆರಾಧ್ಯದೈವ ಎ[illegible] ಸ್ವೀಕರಿಸಿದರು. ಉಪ್ಪನ್ನು ತಯಾರಿಸಿದ ಎಂಬ ಕಾರಣ[illegible] ಉಪ್ಪಾರರು ಭಗೀರಥ ಮುನಿ ತಮ್ಮವ ಎಂದುಕೊಂಡ[illegible]




ಹೀಗೆ ಮಾದಿಗ ಸಮುದಾಯದವರು ಮಾತ[illegible] ಮುನಿಯನ್ನು, ಮಡಿವಾಳ ಸಮುದಾಯದವರು ಮ[illegible] ದೇವನನ್ನು, ಕುರುಬರು ಕನಕದಾಸರನ್ನು ಪಡೆದುಕೊಂಡ[illegible] ಒಟ್ಟಾರೆ ಈ ಪ್ರಕ್ರಿಯೆ ವರ್ಣಾಶ್ರಮ ಧರ್ಮದ ಕ[illegible] ಸಿದ್ಧಾಂತದ ಚೌಕಟ್ಟಿನಲ್ಲಿ, ಅಂದರೆ ಯಾವ ಜಾತಿ ಯ[illegible] ಕೆಲಸ ಮಾಡುತ್ತಿತ್ತೋ ಅದೇ ಕೆಲಸ ಮಾಡುತ್ತಿದ್ದ ಋ[illegible] ಮುನಿ, ರಾಜರುಗಳನ್ನೇ ತಮ್ಮವರಾಗಿಸಿಕೊಂಡರು. ಎಲ್ಲಾ ಸಮುದಾಯಗಳು ಆಗ ಅನಕ್ಷರಸ್ಥ ಮ[illegible] ಇತಿಹಾಸರಹಿತ ಸಮುದಾಯಗಳಾಗಿದ್ದವು. ಪುರಾಣ[illegible] ಸಿಕ್ಕ ಒಂದು ಸಣ್ಣ ಎಳೆಯನ್ನೆ ತಮ್ಮದೆಂದುಕೊಂಡು ತ[illegible] ತಾವೇ ಹೆಮ್ಮೆಪಟ್ಟುಕೊಳ್ಳತೊಡಗಿದರು.

ಆದರೆ ಇದೆಲ್ಲ ಎಷ್ಟು ವಾಸ್ತವ? ಉದಾಹರ[illegible] ನಮ್ಮ ರಾಜ್ಯದ ಬೇಡ-ನಾಯಕ-ಪರಿವಾರ ಸಮುದಾ[illegible] ದವರು ವಾಲ್ಮೀಕಿ ಮಹರ್ಷಿಯನ್ನು ತಮ್ಮವರೆ[illegible]

...ಾರನ್ನೂ ಡಿಸ್ಟರ್ಬ್ ...ಾಡದ 'ಕಾಲಾಯ...'


...ಂದ್ರಶೇಖರ್ ಶ್ರೀವಾತ್ಸವ್ ಎಂಬ ಯುವಕ ನಿರ್ದೇಶಿಸಿರುವ 'ಕಾಲಾಯ ತಸ್ಮೈ ನಮಃ' ...ಸಿನಿಮಾ ಕಳೆದ ವಾರ ಬಿಡುಗಡೆಯಾಯಿತು. ಯೋಗೇಶ್ ನಾಯಕನಾಗಿ ನಟಿಸಿರುವ ಈ ... ಬಗ್ಗೆ ಗಾಂಧಿನಗರದಲ್ಲಿ ಬಹಳ ನಿರೀಕ್ಷೆಯಿತ್ತು, ನಿರ್ದೇಶಕ ಚಂದ್ರಶೇಖರ್ ಬಗ್ಗೆಯೂ ಉದ್ಯಮದಲ್ಲಿ ಒಳ್ಳೆಯ ಮಾತುಗಳು ಕೇಳಿಬಂದಿದ್ದವು.




ಈ ಚಿತ್ರ ಬಿಡುಗಡೆ ಆಗುವ ಮುನ್ನ ಚಂದ್ರಶೇಖರ್ "ನನ್ನ ಈ ಚಿತ್ರ ಇಡೀ ಉದ್ಯಮವನ್ನು ಡಿಸ್ಟರ್ಬ್ ಮಾಡುತ್ತೆ, ಉದ್ಯಮ ನನ್ನ ಕಡೆ ನೋಡುವಂತೆ ಈ ಚಿತ್ರವನ್ನು ಮಾಡಿದ್ದೇನೆ" ಎಂದು ತನ್ನ ಬೆನ್ನನ್ನು ತಾನೇ ತಟ್ಟಿಕೊಂಡಿದ್ದರು. ಅವರ ಈ ಮಾತು ಹೆಮ್ಮೆಯ ಮಾತಿನಂತೆ ಕೇಳಿಸಿರಲಿಲ್ಲ, ಬದಲಾಗಿ ಅಹಂಕಾರದ ಮಾತಿನಂತೆ ಕೇಳಿಸಿತ್ತು. ಅಷ್ಟೇ ...ಟಿ.ವಿ.ಗಳಲ್ಲಿ, ಪತ್ರಿಕೆಗಳಲ್ಲಿ, ಆಕರ್ಷಣೀಯವಾಗಿದ್ದ ವಾಲ್‌ಪೋಸ್ಟರ್‌ಗಳಲ್ಲೂ 'ಈ ...ಉದ್ಯಮವನ್ನು ಡಿಸ್ಟರ್ಬ್ ಮಾಡುತ್ತದೆ' ಎಂದೇ ಪ್ರಚಾರ ಮಾಡಲಾಗಿತ್ತು.


...ದರೆ ಚಿತ್ರ ಬಿಡುಗಡೆಯಾದ ನಂತರ ನಡೆದದ್ದೇ ಬೇರೆ. ಈ ಚಿತ್ರವನ್ನು ಖರೀದಿಸಿದ ...ದಾರರು "ಇಷ್ಟು ಸುದೀರ್ಘವಾದ ಚಿತ್ರವನ್ನು ಕನಿಷ್ಠ ಅರ್ಧ ಗಂಟೆಯಾದರೂ ...ರೀಬೇಕು. ಇಲ್ಲದಿದ್ದರೆ ಇದನ್ನು ನೋಡಲು ಸಾಧ್ಯವೇ ಇಲ್ಲ" ಎಂದು ತಮ್ಮ ...ಸಮಾಧಾನವನ್ನು ವ್ಯಕ್ತಪಡಿಸಿದರಂತೆ. ಚಿತ್ರ ಬಿಡುಗಡೆಯಾದ ಎರಡು ದಿನಗಳ ನಂತರ ...ಶೇಖರ್ 'ತಮ್ಮ ಸಿನಿಮಾದ ಸಾಕಷ್ಟು ಭಾಗವನ್ನು ಕತ್ತರಿಸಿದರು. ಆದರೂ ಪ್ರೇಕ್ಷಕ ...ಪ್ರಭು ಈ ಚಿತ್ರವನ್ನು ನೋಡಲು ಥಿಯೇಟರ್ ಕಡೆಗೆ ಹೋಗುತ್ತಿಲ್ಲವಂತೆ. ಅಲ್ಲಿಗೆ ಈ ...ಯ......' ಚಿತ್ರ ಕಾಲಕೋಶದಲ್ಲಿ ಮುದುಡಿಹೋದಂತಾಗಿದೆ.

...ತ್ತೀಚಿನ ಯುವ ನಿರ್ದೇಶಕರು ತಮ್ಮ ಚಿತ್ರದ ಬಗ್ಗೆ ತಾವೇ ಅಹಂಕಾರದಿಂದ ಮಾತನಾಡುವುದನ್ನು ...ಹವ್ಯಾಸವಾಗಿ ಬೆಳೆಸಿಕೊಂಡಿದ್ದಾರೆ. ಹಾಗೆ ನೋಡಿದರೆ ಈ ಚಿತ್ರವನ್ನು ಸಂಪೂರ್ಣವಾಗಿ ತಳ್ಳಿಹಾಕುವಂತಿಲ್ಲ. ಕೆಲವು ಒಳ್ಳೆಯ ಅಂಶಗಳೂ ಇದರಲ್ಲಿವೆ. ಮೊದಲನೆಯದಾಗಿ ನಿರ್ದೇಶಕ ಒಳ್ಳೊಳ್ಳೆಯ ಲೊಕೇಶನ್‌ಗಳನ್ನು ಆರಿಸಿಕೊಂಡಿದ್ದಾರೆ. ಜೊತೆಗೆ ಕ್ಯಾಮರಾಮೆನ್ ಸಿನಿಟೆಕ್ ಸೂರಿ ಅವರಿಂದ ಒಳ್ಳೆಯ ಕೆಲಸ ಪಡೆದಿದ್ದಾರೆ. ಹಾಗೆಯೇ ಚಿತ್ರದ ಕಥಾವಸ್ತು ವಿಭಿನ್ನವಾಗಿದೆ. ಚಿತ್ರಕಥೆಯ ಮೇಲೆ ನಿರ್ದೇಶಕರಿಗೆ ಬಿಗಿಯಾದ ಹಿಡಿತ ಇದ್ದಿದ್ದರೆ ಸ್ವಲ್ಪ ಒಳ್ಳೆಯದಾಗುತ್ತಿತ್ತೊ ಏನೊ?



ಇಷ್ಟೆಲ್ಲ ಹೇಳಿದ ನಂತರ ನಿರ್ದೇಶಕ ಚಂದ್ರಶೇಖರನ ಮೊದಲ ಚಿತ್ರ 'ಸೈಕೊ' ಮತ್ತು ಎರಡನೇ ಚಿತ್ರ 'ಕಾಲಾಯ...' ನಡುವೆ ಅಂತಹ ವಿಶೇಷವಾದ ವ್ಯತ್ಯಾಸವೇನೂ ಕಾಣಿಸದಿರುವುದು ಇದರ ದೊಡ್ಡ ಮೈನಸ್ ಪಾಯಿಂಟ್ ಎಂದೇ ಹೇಳಬಹುದು. ●





'ನೀರುದೋಸೆ' ರಮ್ಯಾ

ಕನ್ನಡ ಚಿತ್ರರಂಗದಲ್ಲಿ ಅನೇಕ ಹೊಸ ಪ್ರಯೋಗಾತ್ಮಕ ಕಾಂಬಿನೇಶನ್‌ನ ಚಿತ್ರಗಳು ಇತ್ತೀಚೆಗೆ ನಿರ್ಮಾಣವಾಗುತ್ತಿರುವುದು ಅತ್ಯಂತ ಸಂತೋಷದ ವಿಷಯ. ಅದರಲ್ಲೂ ಇತ್ತೀಚೆಗೆ ಕೇಳಿಬಂದ ಸುದ್ದಿಯ ಪ್ರಕಾರ ನವರಸ ನಾಯಕ ಜಗ್ಗೇಶ್ ಮತ್ತು ಕನ್ನಡ ಚಿತ್ರರಂಗದ ನಂಬರ್ 1 ನಾಯಕಿ ರಮ್ಯಾ ಜೋಡಿಯಾಗಿ ಚಿತ್ರವೊಂದರಲ್ಲಿ ಕಾಣಿಸಿಕೊಳ್ಳಲಿದ್ದಾರೆ. 'ಸಿದ್ಲಿಂಗು' ಚಿತ್ರವನ್ನು ನಿರ್ದೇಶಿಸಿದ್ದ ವಿಜಯಪ್ರಸಾದ್ ಇದನ್ನು ನಿರ್ದೇಶಿಸಲಿದ್ದಾರಂತೆ. ಚಿತ್ರದ ಹೆಸರು 'ನೀರುದೋಸೆ'. ಈ ಚಿತ್ರದ ಶೀರ್ಷಿಕೆಯನ್ನು ನೋಡಿದರೆ ಇದೊಂದು ಅಪ್ಪಟ ಹಾಸ್ಯಚಿತ್ರ ಎಂಬ ನಿರ್ಧಾರಕ್ಕೆ ಬರಬಹುದು.

ಜಗ್ಗೇಶ್ ಅವರಿಗೆ ಮೊದಲಿನಿಂದಲೂ ಒಂದು ಕೊರಗಿತ್ತು, ಅದೇನೆಂದರೆ ಅವರೊಂದಿಗೆ ನಟಿಸಲು ಕನ್ನಡದ ನಟಿಯರು ಒಪ್ಪದೇ ಇರುವುದು. ಒಮ್ಮೆ ಪತ್ರಕರ್ತರು "ನೀವು ಕನ್ನಡ ಹೋರಾಟಗಾರರು, ಕನ್ನಡದ ಬಗ್ಗೆ ಭಾಷಣ ಮಾಡುತ್ತೀರಿ. ಆದರೆ ನಿಮ್ಮ ಚಿತ್ರಗಳಲ್ಲಿ ಕನ್ನಡದ ನಾಯಕಿಯರಿಗೆ ಯಾಕೆ ಅವಕಾಶ ನೀಡುವುದಿಲ್ಲ?" ಎಂದು ಪ್ರಶ್ನಿಸಿದಾಗ ಜಗ್ಗೇಶ್ ತಮ್ಮ ಹತಾಶೆ, ನೋವು ಮತ್ತು ಅಸಮಾಧಾನವನ್ನು ವ್ಯಕ್ತಪಡಿಸಿದ್ದರು. ಅವತ್ತು ಅವರು ಹೇಳಿದ್ದಿಷ್ಟು: "ಪ್ರತಿ ಬಾರಿ ನಮ್ಮ ಕನ್ನಡದ ನಾಯಕಿಯರಿಗೆ ನನ್ನ ಸಿನಿಮಾದಲ್ಲಿ ನಟಿಸಬೇಕೆಂದು ನಾನು ಅವರನ್ನು ಕೇಳಿದಾಗ ಅವರು ನನ್ನನ್ನು ತಿರಸ್ಕರಿಸಿದ್ದರು. ಪ್ರೇಮ, ಸುಧಾರಾಣಿ ಮೊದಲಾದವರು ತಮ್ಮ ವೃತ್ತಿಜೀವನದ ಉತ್ತುಂಗದಲ್ಲಿದ್ದಾಗ ನನ್ನ ಜೊತೆ ನಟಿಸಲು ನಿರಾಕರಿಸಿದ್ದರು. ಅದಕ್ಕಾಗಿಯೇ ನಾನು ಮುಂಬೈಯಿಂದ ಅವರಿಗಿಂತ ಸುಂದರಿಯಾಗಿರುವ, ಬೆಳ್ಳಗಿರುವ ನಾಯಕಿಯರನ್ನು ಕರೆದು ತರುತ್ತೇನೆ."

ಅದೇನೇ ಇರಲಿ, ಜಗ್ಗೇಶ್ ಮತ್ತು ರಮ್ಯಾ ಜೊತೆಯಾಗಿ ಒಂದು ಚಿತ್ರದಲ್ಲಿ ಕಾಣಿಸಿಕೊಳ್ಳುತ್ತಾರೆಂಬ ಕಲ್ಪನೆಯೂ ಚಿತ್ರರಂಗದಲ್ಲಿ ಯಾರಿಗೂ ಇರಲಿಲ್ಲ, ಆದರೀಗ ರಮ್ಯಾ ಒಪ್ಪಿಕೊಳ್ಳುವ ಮೂಲಕ ಅಚ್ಚರಿ ಮೂಡಿಸಿರುವುದಂತೂ ಸತ್ಯ. ರಮ್ಯಾ ಜಗ್ಗೇಶ್‌ಜೊತೆ ನಟಿಸುತ್ತಿರುವುದರಿಂದ ಜಗ್ಗೇಶ್ ಅವರ ಬಹಳದಿನದ ನೋವು ಮಾಯವಾಗಬಹುದೊ ಏನೊ? ಸದ್ಯಕ್ಕೆ ಕನ್ನಡ ಚಿತ್ರರಂಗದಲ್ಲಿ ನಂಬರ್ ಒನ್ ನಾಯಕಿಯಾಗಿರುವ ರಮ್ಯಾ ಈ ಹಿಂದಿನ ನಾಯಕಿಯರಂತೆ ಯಾವುದೇ ಹಮ್ಮು ಬಿಮ್ಮು ತೋರಿಸದೇ ಜಗ್ಗೇಶ್ ಜೊತೆ ನಟಿಸಲು ಒಪ್ಪಿರುವುದೇ ಒಂದು ವಿಶೇಷ. ● ಶೆಣೈ

...ಕೊಳ್ಳುತ್ತಾರೆ. ಅದೇ ಉತ್ತರ ಭಾರತದ – ಅಂದರೆ ...ಬ್, ಹರ್ಯಾಣ, ದೆಹಲಿ, ಉತ್ತರ ಪ್ರದೇಶ, ರಾಜಸ್ಥಾನ ...ಲ್ಲಿ ಜಾಡಮಾಲಿ ಕೆಲಸ ಮಾಡುವ ದಲಿತ ಭಂಗಿ ...ಾಯದವರೂ ತಮ್ಮನ್ನು ವಾಲ್ಮೀಕಿಗಳೆಂದುಕೊಳ್ಳು... ...ಜನಗಣತಿಯಲ್ಲೂ ಆ ಸಮುದಾಯಗಳು ತಮ್ಮನ್ನು ...ರೆದುಕೊಂಡಿರುವುದು ವಾಲ್ಮೀಕಿ/ಬಾಲ್ಮೀಕಿ ಎಂದೇ! ...ನ್ನೂ ನಮ್ಮ ರಾಜ್ಯದ ಉಪ್ಪಾರರು ಭಗೀರಥ ...ಯನ್ನು ತಮ್ಮವ ಎಂದು ವಾದಿಸಿದ್ದಾರೆ. ಪುರಾಣದ ...ಭಗೀರಥ ಮಹರ್ಷಿ ಉತ್ತರ ಭಾರತದ ಹಿಮಾಲಯ ...ದದಲ್ಲಿದ್ದವರು. ಆದ್ದರಿಂದ ಉತ್ತರ ಭಾರತದಲ್ಲಿ ...ರು ಇರಬೇಕಿತ್ತು, ಆದರೆ ವಾಸ್ತವವಾಗಿ ಕರ್ನಾಟಕ ...ಬೇರೆ ಕಡೆ ಉಪ್ಪಾರರು ಎಲ್ಲಿದ್ದಾರೆ? ಅಂದಹಾಗೆ ...ನ್ನಿ ಬ್ರಾಹ್ಮಣ ಎಂಬ ಅಂಶ ಕೂಡ ಇಂತಹ ...ಲಗಳಲ್ಲೊಂದು ! ಯಾಕೆಂದರೆ ಬಸವಣ್ಣನ ತಂದೆ ...ರಸ, ತಾಯಿ ಮಾದಲಾಂಬಿಕೆ. ಈ ಎರಡೂ ...ಗಳು ಹೋಲುವುದು ದಲಿತ ಜನಾಂಗವಾದ ಮಾದಿಗ ...ಾಯಕ್ಕೆ! ಅದೇನೇ ಇರಲಿ, ಹಿಂದುಳಿದ ವರ್ಗಗಳನ್ನು ...ನ್ನು ಹಿಂದೂಕರಣಗೊಳಿಸಲಷ್ಟೆ ಈ ರೀತಿ ಋಷಿ, ... ರಾಜರನ್ನು ಆಯಾ ಜಾತಿಗಳಿಗೆ ಲಿಂಕ್ ಮಾಡಿದ್ದು ...ಸತ್ಯ ಈಗ ಗುಟ್ಟಾಗೇನು ಉಳಿದಿಲ್ಲ.

...ಿಂದುಳಿದ ಮತ್ತು ದಲಿತ ಸಮುದಾಯಗಳನ್ನು ... ಪುರಾಣಗಳ ಋಷಿ, ಮುನಿ, ರಾಜರೊಂದಿಗೆ ... ಮಾಡಿದ್ದರಿಂದ ಆಯಾ ಸಮುದಾಯಗಳಿಗೆ ...ದರೂ ಏನು? ಉತ್ತರ, ಸೊನ್ನೆ! ಯಾಕೆಂದರೆ ವಾಲ್ಮೀಕಿ ...ಯಣ ಬರೆದರು ಎಂದಾಕ್ಷಣ ಅವರ ಸಮುದಾಯಕ್ಕೆ ... (?) ಭಂಗಿ/ನಾಯಕ ಇತ್ಯಾದಿ ಸಮುದಾಯದವರನ್ನು ...ರಾಣ ಪ್ರವಚನ ಮಾಡುವ ಬ್ರಾಹ್ಮಣರು ತಮ್ಮ ...ಗೆ ಸೇರಿಸಿಕೊಂಡರೆ? ಭಗೀರಥ ಮಹರ್ಷಿಯ ...ಾಯಕ್ಕೆ ಸೇರಿದವರು (?) ಎಂಬ ಕಾರಣಕ್ಕೆ ...ರರನ್ನು ಆ ಮಹರ್ಷಿಯನ್ನು ಪೂಜಿಸುವ ...ತ್ತಿಯವರು ತಮ್ಮ ಮನೆಗಳಿಗೆ /ಬೀದಿಗೆ ...ಕೊಂಡರೆ? ಅಥವಾ ಮದುವೆ, ಮುಂಜಿ ಇತ್ಯಾದಿ ...ಧ ಬೆಳೆಸಿದರೆ? ಖಂಡಿತ ಇಲ್ಲ, ಹಾಗೆ

ಹೇಳುವುದಾದರೆ ಮಾತಂಗ ಮುನಿಯ ವಂಶಕ್ಕೆ ಸೇರಿದ್ದರೂ ಮಾದಿಗರು ಇನ್ನೂ ಅಸ್ಪೃಶ್ಯರಲ್ಲಿ ಅಸ್ಪೃಶ್ಯರಾಗಿಯೇ ಉಳಿದಿದ್ದಾರೆ. ಮಾಚಿದೇವ ಮುನಿಯ ಪಂಥಕ್ಕೆ ಸೇರಿದ್ದರೂ ಮಡಿವಾಳರು ತಮ್ಮ ಬಟ್ಟೆ ಒಗೆಯುವ ಕಾಯಕದಿಂದ ಮುಕ್ತರಾಗಿ ಗೌರವಾನ್ವಿತ ಸ್ಥಾನ ಪಡೆದಿಲ್ಲ.

ವರ್ಣಾಶ್ರಮ ಧರ್ಮದ ಬೇರುಗಳನ್ನು ಗಟ್ಟಿಗೊಳಿಸಲೆಂದೇ ಋಷಿ, ಮುನಿ, ರಾಜರನ್ನು ತಳಸಮುದಾಯಗಳೊಂದಿಗೆ ಬೆಸೆಯಲಾಗಿದೆ. ಮಾತ್ರವಲ್ಲ, ಈ ಸಮುದಾಯಗಳ ಇತಿಹಾಸವನ್ನು ಮರು ಸಂಶೋಧನೆಗೆ ಅವಕಾಶವಿಲ್ಲದಂತೆ ಸೀಲ್ ಮಾಡಿಬಿಡುವ ಅಪಾಯವಿದೆ. ಅದಕ್ಕಿಂತ ಅಪಾಯಕಾರಿಯಾದದ್ದು ಆಯಾ ಸಮುದಾಯಗಳ ವೃತ್ತಿಯನ್ನು ಆಯಾ ಮುನಿ-ಋಷಿಯ ವೃತ್ತಿಯೊಂದಿಗೆ ಲಿಂಕ್ ಮಾಡುವ ಮೂಲಕ ಶೂದ್ರರನ್ನು ಶೂದ್ರರಾಗಿಯೇ ಉಳಿಸುವ ಹುನ್ನಾರ ಅಡಗಿದೆ. ಯಾಕೆಂದರೆ ವರ್ಣಾಶ್ರಮದ ಸಿದ್ಧಾಂತದ ಪ್ರಕಾರ ಬ್ರಾಹ್ಮಣರು ಶಿಕ್ಷಣ ಪಡೆದು ಉನ್ನತ ಹುದ್ದೆಗಳನ್ನು ಅಲಂಕರಿಸುತ್ತಿರುವಾಗ, ಕ್ಷತ್ರಿಯರು ಮಿಲಿಟರಿ ಸೇರಿ ದೇಶ ಕಾಯುತ್ತಾ ವೈಶ್ಯರು ಅಂಗಡಿ ಮುಂಗಟ್ಟುಗಳನ್ನು ತೆರೆದು ವ್ಯಾಪಾರ ಮಾಡುತ್ತಾ, ಶೂದ್ರರು ತಮ್ಮ (?) ಋಷಿ, ಮುನಿಗಳ ಹಾದಿಯಲ್ಲೇ ಮುಂದುವರೆದು ಉಳಿದವರ ಸೇವೆ ಮಾಡುತ್ತಾ ಕಾಲ ಕಳೆಯಬೇಕು ಎಂಬುದೇ ಆಗಿದೆ.

ವರ್ಣಾಶ್ರಮದ ಸಿದ್ಧಾಂತ ರೂಪಿಸಿರುವ ಇಂತಹ ಹಿಂದೂ ಧರ್ಮದ ಖೆಡ್ಡಾಕ್ಕೆ ಹಿಂದುಳಿದ ಮತ್ತು ದಲಿತ ವರ್ಗಗಳು ಬಲಿಯಾಗುವುದು ಸರಿಯೇ? ಆ ಸಮುದಾಯಗಳು ತಮ್ಮ ಸ್ವಾಭಿಮಾನವನ್ನು ಕಳೆದುಕೊಂಡು ಬದುಕುವುದು ನ್ಯಾಯವೇ? ಈ ದಿಸೆಯಲ್ಲಿ ಹಿಂದುಳಿದ ಮತ್ತು ದಲಿತ ವರ್ಗಗಳು ಜಾಗೃತಗೊಳ್ಳಬೇಕಿದೆ. ತಮ್ಮ ಜಾತಿ ಅಥವಾ ಕಸುಬುಗಳಿಗೆ ಹೋಲುವ ಪುರಾಣದ ಋಷಿಮುನಿಗಳನ್ನು ತಮ್ಮವರೆಂದುಕೊಳ್ಳುವ ಆಧಾರರಹಿತ ನಂಬಿಕೆಗಳಿಂದ ಅವರು ಹೊರಬರಬೇಕಿದೆ.

- ಪುರುಷೋತ್ತಮ ಹೊ.ಬ. ಚಾಮರಾಜನಗರ

ಅಂದಹಾಗೆ, ಆಕೆಯ ಬಗೆಗಿನ ಲೇಖನಗಳನ್ನು ಓದಿದನಂತರ ನನಗೆ ಒಂದು ಅನುಭವವಾಯಿತು. ನನಗೆ ಪರಿಚಿತರಾದ ಮಹಿಳೆಯೊಬ್ಬರು ನಮ್ಮ ಮನೆಗೆ ಬಂದಿದ್ದರು. ಅವರ ಮುಖದ ಮೇಲೆ ಒಂದು ಮಚ್ಚೆ ಇದ್ದು ಆ ಮಚ್ಚೆಯ ಮೇಲೆ ನಾಲ್ಕೈದು ಕೂದಲುಗಳು ಬೆಳೆದಿದ್ದವು. ಅದನ್ನು ನೋಡಿ ನಾನು "ಯಾಕೆ ಆ ಕೂದಲುಗಳನ್ನು ಕಿತ್ತುಹಾಕಿಲ್ಲ" ಎಂದು ಆಕೆಯನ್ನು ಕೇಳಬೇಕೆಂದುಕೊಂಡೆ. ತಕ್ಷಣವೇ ನನಗೆ ಬಲ್‌ಪ್ರೀತ್ ನೆನಪಾದಳು. ನನ್ನ ಬಗ್ಗೆ ನನಗೇ ಬೇಸರವಾಗಿ ನಾನು ಅವರನ್ನು ಕೇಳಬೇಕೆಂದಿದ್ದ ಪ್ರಶ್ನೆಯನ್ನು ಕೇಳದೆ ಸುಮ್ಮನಾದೆ.



ಬಲ್‌ಪ್ರೀತ್ ಎಲ್ಲೆಡೆ ತಂದಿರುವ ಬದಲಾವಣೆ ಇದು ಎಂದು ಆಶಿಸುವೆ.

- ಶಶಿಕಲಾ, ಶಿವಮೊಗ್ಗ

ಕಳೆದ ವಾರದ ಸಂಚಿಕೆಯಲ್ಲಿ ಶಿವಸುಂದರ್ ಅಂಕಲ್ ಅವರ 'ಚಾರ್ವಾಕ' ಅಂಕಣ ಇಲ್ಲವಲ್ಲ ಯಾಕೆ? ಬದಲಾಗಿ ಮಿತ್ರ ಡಾ. ವಾಸು ಎಚ್.ವಿ ಅವರ ಅಂಕಣ ಇದೆಯಲ್ಲಾ ಹೇಗೆ? ಅದೇನೇ ಇದ್ದರೂ 'ಚಾರ್ವಾಕ' ಅಂಕಣ ಇಲ್ಲ ಎಂಬ ನೋವಿನಲ್ಲೂ 'ಅಂಚಿನಿಂದ' ಅಂಕಣವನ್ನು ಓದಿದೆ.

- ಯೋಗೀಶ್ ಸೂರಪ್ಪ, ತುಮಕೂರು

ಕಾವೇರಿ ವಿವಾದ ಕುರಿತ ವರದಿಯಲ್ಲಿ 'ಅವಿವೇಕಿ ಶೆಟ್ಟರ್' ಎಂದು ಕರೆದದ್ದು ಸರಿಯಾಗಿದೆ. ಈ ಶೆಟ್ಟರ್ ಎಂತಹ ಅವಿವೇಕಿ ಎಂದರೆ ಹಲವಾರು ತಿಂಗಳುಗಳ ಹಿಂದೆಯೇ ರಾಜ್ಯಕ್ಕೆ ಬರಗಾಲ ಕಾಲಿಡಲಿದೆ ಎಂದು ಗೊತ್ತಿದ್ದರೂ, ಅದರಿಂದಾಗಿ ಕಾವೇರಿ ನದಿಯಲ್ಲಿ ನೀರು ಕಡಿಮೆ ಆಗಲಿದೆ ಎಂದು ಗೊತ್ತಿದ್ದರೂ ಈ ಕುರಿತು ಮುಂಚಿತವಾಗಿಯೇ ಕೇಂದ್ರ ಸರ್ಕಾರಕ್ಕೆ ಮನವಿ ಮಾಡಿಕೊಂಡು ಕರ್ನಾಟಕಕ್ಕೆ ಅನ್ಯಾಯ ಆಗದಂತೆ ತಡೆಯಲಿಲ್ಲ. ಪಾಪ, ಅದಕ್ಕೆಂದು ಶೆಟ್ಟರ್‌ಗಾಗಲೀ, ನೀರಾವರಿ ಮಂತ್ರಿ ಬಸವರಾಜು ಬೊಮ್ಮಾಯಿಗಾಗಲಿ ಪುರುಸೊತ್ತು ಎಲ್ಲಿತ್ತು? ಇತ್ತ ಶೆಟ್ಟರ್‌ಗೆ ಯಡ್ಡಿ ಎಂಬ ಶನಿ ಕಾಟ ಕೊಡುತ್ತಿದ್ದರೆ ಅತ್ತ ಬೊಮ್ಮಾಯಿ, ಅದೇ ಯಡ್ಡಿಯ ಆಸ್ಥಾನದ ಸೇವೆಯಲ್ಲೇ ಬ್ಯುಸಿ ಆಗಿದ್ದರು. ಇಂತಹವರಿಗೆ ರಾಜ್ಯದ ಸಮಸ್ಯೆಗಳತ್ತ ಗಮನ ಹರಿಸಲು ಸಮಯ ಎಲ್ಲಿರುತ್ತದೆ?

ಅಷ್ಟು ಮಾತ್ರವಲ್ಲ, ಈ ಸಮಸ್ಯೆ ಕುರಿತು ಪ್ರಧಾನಿ ಮನಮೋಹನ್ ಸಿಂಗ್ ಅವರು ಕರೆದಿದ್ದ ಸಭೆಯಲ್ಲಿ ರಾಜ್ಯದ ಅಗತ್ಯತೆಯನ್ನು ಅವರಿಗೆ ಮನದಟ್ಟು ಮಾಡುವ ಬದಲು ಮಹಾನುಭಾವ ಶೆಟ್ಟರ್ ಆ ಸಭೆಗೆ ಧಿಕ್ಕಾರ ಹೇಳಿ ಎದ್ದು ಬಂದರು. ಶೆಟ್ಟರ್ ಅವರು ಆ ಪ್ರಮುಖ ಸಭೆಯೂ ವಿಧಾನಸಭೆಯ ನಡಾವಳಿಯೂ ಒಂದೇ ಎಂದು ಭಾವಿಸಿರುವಂತಿದೆ. ಯಾಕೆಂದರೆ ಇಲ್ಲಿ ಹೇಗೆ ವಿರೋಧ ಪಕ್ಷದವರು ಸಭಾತ್ಯಾಗ ಮಾಡುತ್ತಾರೋ ಹಾಗೆಯೇ ಶೆಟ್ಟರ್ ಸಿಂಗ್ ಕರೆದಿದ್ದ ಸಭೆಗೆ 'ಧಿಕ್ಕಾರ' ಹೇಳಿಬಂದರು. ಅವರು ಮಾಡಿದ ಎಡವಟ್ಟಿನಿಂದ ರಾಜ್ಯದ ರೈತರು ಮತ್ತು ಸಾಮಾನ್ಯ ಜನರು ಕಷ್ಟ ಅನುಭವಿಸುವಂತಾಯಿತು.

- ಸಂತೋಷ್, ಅಫ್ಜಲಪುರ

ವಿ.ಸೂ. : ನಿಮ್ಮ ಅನಿಸಿಕೆಗಳನ್ನು lankesh70@rediffmail.com ಗೆ ನುಡಿ ಅಥವಾ ಬರಹ ತಂತ್ರಾಂಶದಲ್ಲಿ ಕಳುಹಿಸಬಹುದು. ನಿಮ್ಮ ಪ್ರತಿಕ್ರಿಯೆಗಳನ್ನು 9980331427 ನಂಬರ್‌ಗೂ ಚಿಕ್ಕದಾಗಿ ಮತ್ತು ಚೊಕ್ಕದಾಗಿ ಕಳುಹಿಸಬಹುದು.

Registered No.KA/RNP/BGS/2036/2011-13 Posted at : GPO, Bangalore-01. Fri/Saturday R B P LANKESH, Kannada Weekly Price Rs. 14/- 31-10-2012 RNI No. KARKAN20

'ತಾಯಿ' ತಾರಾ



ತಾರಾ ಆಗಾಗ್ಗೆ ಪತ್ರಕರ್ತರಿಗೆ ತಮ್ಮ ಮನೆಯಲ್ಲಿ ಊಟ ಹಾಕುವ ಹವ್ಯಾಸವನ್ನು ಇಟ್ಟುಕೊಂಡಿರುವವರು. ಯಾವುದಾದರೊಂದು ಸಣ್ಣಪುಟ್ಟ ನೆಪ ಸಿಕ್ಕರೂ ಸಾಕು ತಾರಾ ಆತ್ಮೀಯರನ್ನು, ಪತ್ರಕರ್ತರನ್ನು ತಮ್ಮ ಮನೆಗೆ ಊಟಕ್ಕೆ ಕರೆಯುತ್ತಾರೆ. ಆದರೆ ಅವರು ಚಲನಚಿತ್ರ ಅಕಾಡೆಮಿಯ ಅಧ್ಯಕ್ಷೆ ಮತ್ತು ವಿಧಾನಪರಿಷತ್‌ನ ಸದಸ್ಯೆಯಾದ ನಂತರ ಅದ್ಯಾಕೋ ಯಾರನ್ನೂ ತನ್ನ ಮನೆಗೆ ಕರೆದಿರಲಿಲ್ಲ, ಇದರ ಬಗ್ಗೆ ಅನೇಕರು ಆಕೆಯನ್ನು ತಮಾಷೆಗಾಗಿ ಪ್ರಶ್ನಿಸಿದ್ದೂ ಉಂಟು.

ಇಂತಹ ತಾರಾ ಬರುವ ಭಾನುವಾರ ತನ್ನ ಆತ್ಮೀಯರೆಲ್ಲರಿಗೂ ಊಟ ಹಾಕಿಸಲು ಮನಸ್ಸು ಮಾಡಿದ್ದಾರೆ. ಆದರೆ ಒಂದು ವ್ಯತ್ಯಾಸ ಯಾವುದೆಂದರೆ ಈ ಬಾರಿ ಅವರು ಜನರನ್ನು ತಮ್ಮ ಮನೆಗೆ ಕರೆಯುತ್ತಿಲ್ಲ, ಬದಲಾಗಿ ಪಂಚತಾರಾ ವಿಂಡ್ಸರ್ ಮ್ಯಾನರ್ ಹೋಟೆಲ್‌ನಲ್ಲಿ ತಾರಾ ಸಂತೋಷಕೂಟವನ್ನು ಏರ್ಪಡಿಸಿದ್ದಾರೆ.

ಆದರೆ, ಈ ಭೋಜನಕೂಟ ಆಕೆ ಅಕಾಡೆಮಿ ಅಧ್ಯಕ್ಷೆ ಆಗಿದ್ದಕ್ಕೆ ಅಥವಾ ವಿಧಾನ ಪರಿಷತ್ ಸದಸ್ಯೆ ಆಗಿದ್ದಕ್ಕೆ ಎಂದು ಭಾವಿಸಿದವರಿಗೆ ಅಲ್ಲೊಂದು ಆಶ್ಚರ್ಯ ಕಾದಿರುವ ಸಾಧ್ಯತೆಯಿದೆ. ಅದೇನೆಂದರೆ, ಶ್ರೀಮತಿ ತಾರಾ ಈಗ ಐದು ತಿಂಗಳಿನ ತುಂಬು ಗರ್ಭಿಣಿಯಂತೆ.

ಖ್ಯಾತ ಕ್ಯಾಮರಾಮೆನ್ ವೇಣು ಅವರನ್ನು ತಾರಾ ವಿವಾಹವಾಗಿ ಅನೇಕ ವರ್ಷಗಳು ಸಂದಿದ್ದರೂ ತಾರಾಗೆ ತಾಯಿ ಆಗುವ ಭಾಗ್ಯ ಬಂದಿರಲಿಲ್ಲ, ಆ ಬಗ್ಗೆ ಅವರಿಗೆ ಮಾತ್ರವಲ್ಲ, ಆಕೆಯ ಅಭಿಮಾನಿಗಳಿಗೂ, ಕುಟುಂಬವರ್ಗದವರಿಗೂ ಒಂದು ಸಣ್ಣ ಆತಂಕವಿತ್ತು. ಈಗ ಆ ಬಗ್ಗೆ ತಾರಾ-ವೇಣು ದಂಪತಿಯಿಂದ ಸಿಹಿಸುದ್ದಿ ಬಂದಂತಾಗಿದೆ.

ಅಂದರೆ ತಾರಾ ಪಾಲಿಗೆ 2012ನೇ ವರ್ಷ ಎಲ್ಲ ರೀತಿಯಲ್ಲೂ ಲಕ್ಕಿ ವರ್ಷ ಆಗುವಂತಿದೆ. ಒಂದೆಡೆ ಅಧ್ಯಕ್ಷೆ ಸ್ಥಾನ, ಇನ್ನೊಂದೆಡೆ ಶಾಸಕಿ, ಮತ್ತೊಂದೆಡೆ ತಾಯ್ತನದ ಭಾಗ್ಯ...! ಇದೆಲ್ಲದರ ಮಧ್ಯೆ ಅದ್ಯಾವನೋ ಜ್ಯೋತಿಷಿ ಆಕೆಗೆ 'ನೀವು ಈ ವರ್ಷವೇ ಮಂತ್ರಿ ಕೂಡ ಆಗುತ್ತೀರಿ" ಎಂದಿದ್ದಾನಂತೆ. ಈಗಿನ ರಾಜಕೀಯ ಪರಿಸ್ಥಿತಿ ನೋಡಿದರೆ ತಾರಾ ಸದ್ಯದಲ್ಲೇ ಮಂತ್ರಿಯಾದರೂ ಆಶ್ಚರ್ಯಪಡಬೇಕಾಗಿಲ್ಲ!!

ಮಾಲಾಶ್ರೀಗಾಗಿ ಒಟ್ಟಾದ ಇಬ್ಬರು ನಿರ್ಮಾಪಕರ



ಮಾಲಾಶ್ರೀ ನಾಯಕಿಯಾಗಿ ನಟಿಸುತ್ತಿರುವ 'ಘರ್ಷಣೆ' ಎಂಬ ಚಿತ್ರದ ಮುಹೂರ್ತ ಗುರುವಾರ ನಡೆಯಿತು. ಮಾಲಾಶ್ರೀ ನಾಯಕಿಯಾಗಿ ನಟಿಸುತ್ತಿರುವುದು ವಿಶೇಷ ಸುದ್ದಿ ಅಲ್ಲ, ಏಕೆಂದರೆ ಅವರ ಚಿತ್ರದಲ್ಲಿ ಅವರೇ ನಾಯಕಿ ಮತ್ತು ನಾಯಕ ಎಂಬುದು ಎಲ್ಲರಿಗೂ ಗೊತ್ತು, ಅಷ್ಟೇ ಅಲ್ಲ, ಅವರ ಪತಿ ನಿರ್ಮಾಪಕ ರಾಮು ಮಾತ್ರ ಅವರನ್ನು ನಾಯಕಿಯಾಗಿ ಚಿತ್ರ ಮಾಡುತ್ತಾರೆಯೇ ವಿನಃ ಬೇರೆ ಯಾರೂ ಅವರ ಕಡೆ ತಿರುಗಿಯೂ ನೋಡಲ್ಲ ಎನ್ನುವ ಮಾತೂ ಇದೆ.

ಆದರೀಗ ಈ ಮಾತುಗಳಿಗೆ ತದ್ವಿರುದ್ಧವಾಗಿ ಮಾಲಾಶ್ರೀ ಬೇರೆ ನಿರ್ಮಾಪಕರ ಚಿತ್ರದಲ್ಲಿ ನಟಿಸುತ್ತಿದ್ದಾರೆ. ವಿಶೇಷವೆಂದರೆ ಈ ಚಿತ್ರದ ನಿರ್ಮಾಪಕರು ಶಂಕರ್ ರೆಡ್ಡಿ ಮತ್ತು ಶಂಕರೇಗೌಡರು. ಶಂಕರ್ ರೆಡ್ಡಿ ಇತ್ತೀಚೆಗಷ್ಟೇ ಬಾಕ್ಸ್ ಆಫೀಸ್‌ನಲ್ಲಿ ಗೆದ್ದ 'ಅದ್ದೂರಿ' ಚಿತ್ರದ ನಿರ್ಮಾಪಕರು. ಶಂಕ್ರೇಗೌಡರು ಸುದೀಪ್ ಅವರನ್ನು ಹಾಕಿಕೊಂಡು ಅನೇಕ ಯಶಸ್ವೀ ಚಿತ್ರಗಳನ್ನು ನಿರ್ಮಿಸಿರುವವರು.

ಸಾಧಾರಣವಾಗಿ ಇಬ್ಬರು ಯಶಸ್ವಿ ನಿರ್ಮಾಪಕರು ಒಟ್ಟು ಸೇರಿ ಒಂದು ಚಿತ್ರವನ್ನು ನಿರ್ಮಿಸುವುದು ಅಪರೂಪ. ಅದರಲ್ಲೂ ಇವರಿಬ್ಬರು ತಮ್ಮ ಸ್ವಂತ ಬ್ಯಾನರ್‌ನಲ್ಲೇ ಕನಿಷ್ಟವೆಂದರೂ ಏಳೆಂಟು ಕೋಟಿ ರೂಪಾಯಿ ವೆಚ್ಚದ ಚಿತ್ರವನ್ನು ತೆಗೆಯುವ ತಾಕತ್ತು ಅಂತಹವರು ಈಗ ಮಾಲಾಶ್ರೀ ನಟನೆಯ 'ಘರ್ಷಣೆ' ಚಿತ್ರವನ್ನು ಜೊ ನಿರ್ಮಿಸುತ್ತಿರುವುದು ವಿಚಿತ್ರವಾಗಿ ಕಾಣಿಸುತ್ತಿದೆ.

ಹೋಗಲಿ, ಇವರಿಬ್ಬರು ನಿರ್ಮಿಸುತ್ತಿರುವ ಈ 'ಘರ್ಷಣೆ' ಸಿನಿಮಾದ ಸಿಕ್ಕಾಪಟ್ಟೆ ಇರಬೇಕೆಂದು ನೋಡಿದರೆ ಅದೂ ಇಲ್ಲ, ಯಾಕೆಂದರೆ ಇದು ಬಜೆಟ್‌ನ ಚಿತ್ರವಲ್ಲ, ಆದರೂ ಮಾಲಾಶ್ರೀಗಾಗಿ ಈ ದೊಡ್ಡ ಕುಳಗಳು ಸೇರಿರುವ ಮರ್ಮದ ಬಗ್ಗೆ ಗಾಂಧಿನಗರದ ಉಳಿದ ನಿರ್ಮಾಪಕರ ಕೆದಿಸಿಕೊಳ್ಳುತ್ತಿದ್ದಾರೆ. ಅಂದಹಾಗೆ, ಈ ಚಿತ್ರವನ್ನು ದಯಾಳ್ ಪ ನಿರ್ದೇಶಿಸುತ್ತಿದ್ದಾರೆ.



'ಸ್ವೀಟ್' ಅಂಡ್ 'ಸೆಕ್ಸಿ' ರಾಧಿಕ

ಎಂಟು ವರ್ಷಗಳ ಹಿಂದೆ ನಾಯಕಿಯಾಗಿ ರಮ್ಯಾ ಮತ್ತು ರಕ್ಷಿ ತೀವ್ರವಾದ ಪೈಪೋಟಿ ನೀಡುತ್ತ ಅತ್ಯಂತ ಹೆಚ್ಚು ಬೇಡಿಕೆಯಲ್ಲಿದ್ದ ರಾಧಿಕಾ ದಿಢೀರನೆ ಅಜ್ಞಾತವಾಸಕ್ಕೆ ಸರಿದಿದ್ದರು. ಆನಂ ಕುಮಾರಸ್ವಾಮಿಯವರನ್ನು ಮದುವೆಯಾಗಿ, ಗೃಹಿಣಿಯಾಗಿ, ತಾ ತುಂಬುಜೀವನ ನಡೆಸುತ್ತಿದ್ದುದು ನಿಮಗೆ ಗೊತ್ತಿರುವ ವಿಚಾರ. ಆ ಕಾ ರಾಧಿಕಾ ಸಾರ್ವಜನಿಕವಾಗಿ ಎಲ್ಲೂ ಕಾಣಿಸಿಕೊಂಡಿದ್ದೇ ಇಲ್ಲ. ಯಾವುದೇ ಸಭೆ-ಸಮಾರಂಭಗಳಲ್ಲಿ ಭಾಗವಹಿಸದಿದ್ದ ರಾಧಿಕಾ ನಾಯಕ-ನಾಯಕಿಯ ಜೊತೆಯೂ ನಿಕಟವಾದ ಸಂಪರ್ಕವನ್ನು ಹೊ ಓರ್ವ ನಿರ್ದೇಶಕ ಆಕೆಯೊಂದಿಗೆ ಫೋನ್‌ನಲ್ಲಿ ಮಾತನಾಡಲು ಬಿದ್ದಾಗಲೂ ಆಕೆ ಅವರನ್ನು ಮಾತನಾಡಿಸಿರಲಿಲ್ಲ, ಆಗ ಆ "ನಾನೇ ಬೆಳೆಸಿದ ನಾಯಕಿ ಇಂದು ನನ್ನ ಜೊತೆ ಫೋನಿನ ಮಾತನಾಡುತ್ತಿಲ್ಲವಲ್ಲ" ಎಂದು ಪತ್ರಕರ್ತರ ಮುಂದೆ ಕಣ್ಣೀರಿ

ಆಗ ಈ ಮಂಗಳೂರಿನ ಹುಡುಗಿ ಮತ್ತೊಮ್ಮೆ ಎಂ ಮುಖಕ್ಕೆ ಬಣ್ಣ ಹಚ್ಚಿ ನಟಿಸುವ ಸಾಧ್ಯತೆ ಇಲ್ಲವೇ ಇಲ್ಲ ಎಂದು ಅನ್ನಿಸಿತ್ತು, ಇದೆಲ್ಲ ಆದನಂತರ ಕಳೆದ ವರ್ಷ ದಿಢೀರನೆ ಚಿತ್ರನಿರ್ಮಾಣಕ್ಕೆ ಇಳಿದಾಗಲೂ ಆಕೆ "ಇನ್ನು ಮುಂದೆ ನಾನು ಜೊತೆಗೆ ಒಳ್ಳೆಯ ಸಂಬಂಧ ಇಟ್ಟುಕೊಳ್ಳುತ್ತೇನೆ. ಆದರೆ ನಾ ಅಲ್ಲ, ನಿರ್ಮಾಪಕಿಯಾಗಿ" ಎಂದು ಘೋಷಿಸಿದ್ದರು. ಆಕೆಯ ಮೊದಲ ನಿರ್ಮಾಣದ 'ಲಕ್ಕಿ' ಚಿತ್ರಕ್ಕೆ ರಮ ಯಶ್ ಜೋಡಿಯನ್ನು ಆಯ್ಕೆ ಮಾಡಿದ್ದರು.

ಅಂತಹ ರಾಧಿಕಾ ಈಗ ಮತ್ತೊಮ್ಮೆ ತನ್ನ ಬಣ್ಣ ಹಚ್ಚಲು ಮನಸ್ಸು ಮಾಡಿ ಒಂದು ಸಿ ನಟಿಸುತ್ತಿದ್ದಾಳೆ. ಆಕೆ ತನ್ನ ನಿರ್ಧಾರವನ್ನು ಬ ಏನು ಕಾರಣ ಎಂಬುದು ಗೊತ್ತಿಲ್ಲ. ಮೊ 'ಸ್ವೀಟಿ' ಸಿನಿಮಾದ ಮುಹೂರ್ತಕ್ಕೆ ರಾಧಿ . ನಾಯಕಿಯರನ್ನು ನಾಚಿಸುವ ರೀತಿಯಲ್ಲಿ ಆಗಿ ಬಂದಿದ್ದರು. ವಿಜಯಲಕ್ಷ್ಮಿ ನಿರ್ದೇಶಿಸುತ್ತಿರುವ ಈ ಚಿತ್ರದಲ್ಲಿ ನಾ ನಟಿಸುತ್ತಿರುವ ರಾಧಿಕಾ ನೋಡಲು ನಿಜಕೂ ಆಗಿ ಕಾಣಿಸುತ್ತಿದ್ದರು.

ತನ್ನ ವೃತ್ತಿಜೀವನದ ಎರಡನೇ ಇನ್ನಿ ಪ್ರಾರಂಭಿಸಿರುವ ರಾಧಿಕಾ ಬರುವ ತನಗಿಂತ ಕಿರಿಯ ನಾಯಕಿಯ ಹವಾ ಎಬ್ಬಿಸುತ್ತಾಳಾ ನೋ

'ಭಾಗೀರಥಿ' ತಂಡದಿಂದ 'ಅಂಗೂಲಿಮಾಲಾ'

ನಿನ್ನೆ-ಮೊನ್ನೆಯಷ್ಟೇ 'ಭಾಗೀರಥಿ' ಚಿತ್ರದ ಶತದಿನೋತ್ಸವವನ್ನು ಅದ್ದೂರಿಯಾಗಿ ಆಚರಿಸಿದ ನಿರ್ದೇಶಕ ಬರಗೂರು ರಾಮಚಂದ್ರಪ್ಪ ಮತ್ತು ನಿರ್ಮಾಪಕ ಶ್ರೀನಿವಾಸ್ ಮತ್ತೊಂದು ಚಿತ್ರವನ್ನು ಸದ್ದುಗದ್ದಲವಿಲ್ಲದೇ ಆರಂಭಿಸಿದ್ದಾರೆ. ಈ ಚಿತ್ರದ ಹೆಸರು 'ಅಂಗೂಲಿಮಾಲಾ'. ಇದರಲ್ಲಿ ಸಾಯಿ ಕುಮಾರ್ ಮುಖ್ಯ ಪಾತ್ರದಲ್ಲಿ ನಟಿಸುತ್ತಿದ್ದಾರೆ.



'ಅಂಗೂಲಿಮಾಲಾ' ಚಿತ್ರದ ಮುಹೂರ್ತವನ್ನು ನವರಾತ್ರಿ ಹಬ್ಬದ ಸಂದರ್ಭದಲ್ಲಿ ಉದ್ಯಮದವರನ್ನೆಲ್ಲ ಕರೆಸಿ, ಅತ್ಯಂತ ಅದ್ದೂರಿಯಾಗಿ ಮಾಡಬೇಕೆಂಬುದು ಶ್ರೀನಿವಾಸ್‌ರವರ ಅಭಿಲಾಷೆಯಾಗಿತ್ತು. ಆದರೆ, ಇಂತಹ ಅದ್ದೂರಿತನ ಮತ್ತು ಪ್ರಚಾರದಿಂದ ಸದಾ ದೂರವಿರುವ ಬರಗೂರು ರಾಮಚಂದ್ರಪ್ಪ ಎಂದಿನಂತೆ ತೆರೆಮರೆಯಲ್ಲಿ ಮೌನವಾಗಿ ಈ ಚಿತ್ರವನ್ನು ಆರಂಭಿಸಿದ್ದಾರೆ.

ಅದೇನೇ ಇರಲಿ, 'ಭಾರೀರಥಿ'ಯ ಶತದಿನೋತ್ಸವದ ನಂತರ ಕೊಟ್ಟ ಮಾತಿನಂತೆ ಈ ಜೋಡಿ ಹೊಸ ಚಿತ್ರವನ್ನು ಆರಂಭಿಸಿರುವುದು ಸ್ವಾಗತಾರ್ಹ.

PRINTER, PUBLISHER, PROPRIETOR AND EDITOR : GAURI LANKESH, No. 9, E.A.T.Street, Basavanagudi, Bangalore -4, Phone : 26676427, Fax : 26604536, E-mail :lankesh70@rediffmail.com